ಭಾನುವಾರ, ಅಕ್ಟೋಬರ್ 31, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಾಂಪ್ರದಾಯಿಕ ದಿರಿಸು
ಹಿಮಾಚಲ ಪ್ರದೇಶದ ಶಿಮ್ಲಾ ಜಿಲ್ಲೆಯ ಕೋಟ್‌ಖಾಯಿ ಕ್ಷೇತ್ರದ ಉಪಚುನಾವಣೆಯಲ್ಲಿ ಮತದಾನದ ಬಳಿಕ ಮಹಿಳೆಯರು ಸಾಂಪ್ರದಾಯಿಕ ದಿರಿಸಿನಲ್ಲಿ ಬೆರಳಿನ ಗುರುತು ಪ್ರದರ್ಶಿಸಿದರು

ಭಾನುವಾರ, ಅಕ್ಟೋಬರ್ 31, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 302 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಬಯಲುಸೀಮೆ ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ... ಅಬ್ಬಬ್ಬಾ, ನಮ್ಮ ಕನ್ನಡದೊಡಲಲ್ಲಿ ಅದೆಷ್ಟೊಂದು ಕನ್ನಡಗಳು!



ಪರಮ್ ಬೀರ್ ಸಿಂಗ್‌ಗೆ ಎರಡನೇ ವಾರಂಟ್ ಜಾರಿ 8
‘ಅಪ್ಪು ಇನ್ನಿಲ್ಲ ಅಂದರೆ ನಂಬಕ್ಕಾಗಲ್ಲ’ 6
ಸ್ವಸಹಾಯ ಸಂಘದ ಸದಸ್ಯೆಯರಿಗೆ ನೆರವು 8
ಪುನೀತ್ ಅಂತ್ಯಕ್ರಿಯೆ ಇಂದು 6

ಒಳ ಪುಟಗಳು

ದೀಪಾವಳಿಗೆ ಚಿನ್ನದ ಮಾರಾಟ ಹೆಚ್ಚಳ ನಿರೀಕ್ಷೆ 8

'ಶತಮಾನೋತ್ಸವ ಸಂದರ್ಭದಲ್ಲಿ ಆರ್‌ಎಸ್‌ಎಸ್ ಇನ್ನಷ್ಟು ವಿಸ್ತಾರ' 4

ಶಿಕ್ಷಣ ಹಕ್ಕು ರಕ್ಷಣೆಗೆ ಕ್ರಮ: ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿರ್ಣಯ ಅಂಗೀಕಾರ 9

ಟೇಬಲ್ ಟೆನಿಸ್ ಟೂರ್ನಿ: ಸತ್ಯನ್–ಹರ್ಮೀತ್‌ಗೆ ಪ್ರಶಸ್ತಿ 14

ಚಿನಕುರಳಿ

ಪ್ರಕಾಶ್ ಶೆಟ್ಟಿ

ನಾಡಿನಗಲ ಕೋಮುಕಿಡಿ

ಒಳನೋಟ

'ಮತಾಸ್ತ್ರ'ದ ಮಮಕಾರ

ಪ್ರತಿಕ್ರಿಯಿಸಿ: 9606038256
feedback@prajavani.co.in

• ಅಕ್ರಂ ಮೊಹಮ್ಮದ್/ ಪ್ರಜ್ವಲ್ ಸುವರ್ಣ

ಕರ್ನಾಟಕದಲ್ಲಿ ನಾವು ಈಚೆಗೆ ಅಸಾಂವಿಧಾನಿಕ ರಾಜಕೀಯ ಬೆಳವಣಿಗೆಯನ್ನು ಕಾಣುತ್ತಿದ್ದೇವೆ. ಇದು ರಾಜಕೀಯಕ್ಕೆ ಒಳ್ಳೆಯದಲ್ಲ

ಕೆ.ಫಣಿರಾಜ್, ಚಿಂತಕ

ಕೋಮು ಶಕ್ತಿಗಳು ಹಿಂಸಾಚಾರವನ್ನು ಪ್ರಚೋದಿಸಲು ಯಾರೂ ಅವಕಾಶ ನೀಡಬಾರದು. ಈ ನೆಲದ ಕಾನೂನುಗಳನ್ನು ಎಲ್ಲರೂ ಪಾಲಿಸಲೇಬೇಕು

ಆರಗ ಜ್ಞಾನೇಂದ್ರ, ಗೃಹ ಸಚಿವ





ಒಂದು ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟಾದಾಗ ಪ್ರತಿಕ್ರಿಯೆ ವ್ಯಕ್ತವಾಗುವುದು ಸಹಜ. ಆದರೆ ನೈತಿಕ ಪೊಲೀಸ್‌ಗಿರಿ ಮಾಡುವ ಅಧಿಕಾರ ಯಾರಿಗೂ ಇಲ್ಲ

ದತ್ತಾತ್ರೇಯ ಹೊಸಬಾಳೆ, ಆರ್‌ಎಸ್‌ಎಸ್ ಸರಕಾರ್ಯವಾಹ

‘ಕರ್ನಾಟಕದಲ್ಲಿ ಈಗಿನ ವಾತಾವರಣವನ್ನು ಗಮನಿಸಿದರೆ, ಚುನಾವಣೆ ಹತ್ತಿರ ಬರುತ್ತಿರುವಂತೆ ಕಾಣುತ್ತಿದೆ’– 1990ರ ದಶಕದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಜರಂಗ ದಳವನ್ನು ಕಟ್ಟಲು ಶ್ರಮಿಸಿದ್ದ ಪ್ರವೀಣ್ ವಾಲ್ಕೆ ಅವರು ತಿಂಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ಮಾಡಿದ್ದ ಪೋಸ್ಟ್ ಇದು. ಬಜರಂಗ ದಳವನ್ನು ತೊರೆದಿದ್ದ ಅವರು,ನಂತರದ ದಿನಗಳಲ್ಲಿ ಶ್ರೀ ರಾಮ ಸೇನೆಯನ್ನು ಸೇರಿದ್ದರು. ಈಗ ಈ ಎಲ್ಲಾ ಗುಂಪುಗಳಿಂದ ದೂರ ಉಳಿದಿದ್ದಾರೆ. ‘ನಾನೀಗ ಬದಲಾಗಿದ್ದೇನೆ’ ಎಂಬುದು ಅವರ ಮಾತು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಈಗ ಹೆಚ್ಚಾಗುತ್ತಿರುವ ಮತೀಯ ಗೂಂಡಾಗಿರಿ ಮತ್ತು ಕೋಮು ಸಂಬಂಧಿತ ಘಟನೆಗಳಿಗೆ ಮುಂಬರಲಿರುವ ರಾಜ್ಯ ವಿಧಾನಸಭಾ ಚುನಾವಣೆಯೇ ಕಾರಣ ಎಂದು, ವಾಲ್ಕೆ ಅವರ ರೀತಿಯಲ್ಲಿಯೇ ರಾಜ್ಯದ ಕರಾವಳಿಯಲ್ಲಿ ಬಲಪಂಥೀಯ ಸಂಘಟನೆಗಳ ಜತೆಗಿನ ಸಖ್ಯ ಕಡಿದುಕೊಂಡ ಹಲವರು ಹೇಳುತ್ತಾರೆ.

‘ಸರ್ಕಾರವು ತನ್ನ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು, ಗಮನ ಬೇರೆಡೆ ಸೆಳೆಯಲು ಬಳಸುವ ತಂತ್ರವಿದು’ ಎನ್ನುತ್ತಾರೆ ಬಜರಂಗ ದಳದ ಮತ್ತೊಬ್ಬ ಮಾಜಿ ನಾಯಕರಾದ ಸುನಿಲ್ ಬಜಿಲಕೇರಿ. ಚುನಾವಣೆಯ ಹಿನ್ನೆಲೆಯಲ್ಲಿ ಕೋಮು ಹಿಂಸಾಚಾರ ನಡೆಸುವ ಈ ತಂತ್ರವನ್ನು, ಕರಾವಳಿಯ ಹಿಂದುತ್ವದ ಪ್ರಯೋಗಾಲಯದಲ್ಲಿ ಸಂಘಪರಿವಾರವು ನಡೆಸುತ್ತಾ ಬಂದಿತ್ತು. ಆದರೆ ಈಗ ಈ ತಂತ್ರವು ರಾಜ್ಯದ ಬೇರೆಲ್ಲಾ ಜಿಲ್ಲೆಗಳಿಗೂ ಹರಡಿದೆ ಎನ್ನುತ್ತಾರೆ ಅವರು.

ಈಚಿನ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಸಂಬಂಧಿ ಘಟನೆಗಳ ಸಂಖ್ಯೆ ಕಡಿಮೆ ಇತ್ತು. ಆದರೆ 2020ರಲ್ಲಿ ಇಂತಹ 110 ಘಟನೆಗಳು ವರದಿಯಾಗಿವೆ.

5ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 5

ಸಿಂದಗಿ, ಹಾನಗಲ್: ಶಾಂತಿಯುತ ಮತದಾನ

ವಿಜಯಪುರ/ ಹಾವೇರಿ: ವಿಜಯಪುರ ಜಿಲ್ಲೆಯ ಸಿಂದಗಿ ಹಾಗೂ ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಉಪಚುನಾವಣೆಗೆ ಶನಿವಾರ ಶಾಂತಿಯುತ ಮತದಾನ ನಡೆಯಿತು. 7

ಆರ್ಯನ್ ಖಾನ್ ಬಿಡುಗಡೆ

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಮಾದಕ ವಸ್ತು ಪತ್ತೆ ಪ್ರಕರಣದಲ್ಲಿ ಆರೋಪಿಯಾಗಿರುವ, ಬಾಲಿವುಡ್ ನಟ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್, 22 ದಿನಗಳ ನ್ಯಾಯಾಂಗ ಬಂಧನದ ನಂತರ ಶನಿವಾರ ಮನೆಗೆ ಮರಳಿದರು. 7

ಬಡ ರಾಷ್ಟ್ರಗಳಿಗೆ ಹೆಚ್ಚು ಲಸಿಕೆ: ಜಿ–20 ಕರೆ

ರೋಮ್ (ಎಪಿ): ಜಗತ್ತಿನ ಬಡರಾಷ್ಟ್ರಗಳು, ಕೋವಿಡ್ ಲಸಿಕೆ ಪಡೆದುಕೊಳ್ಳುವ ವೇಗವನ್ನು ವೃದ್ಧಿಸಬೇಕಿದೆ ಎಂದು ಇಟಲಿ ಪ್ರಧಾನಿ ಮಾರಿಯೋ ಡ್ರಾಗ್ಗಿ ಕರೆ ನೀಡಿದ್ದಾರೆ. 8

ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರಕ್ಕೆ ಶನಿವಾರ ಅಂತಿಮ ನಮನ ಸಲ್ಲಿಸಿದ ಪುತ್ರಿ ಧೃತಿ ಅವರನ್ನು ದೊಡ್ಡಪ್ಪ ಶಿವರಾಜ್ ಕುಮಾರ್ ಸಂತೈಸಿದರು. ಪುನೀತ್ ಅವರ ಪತ್ನಿ ಅಶ್ವಿನಿ ಮತ್ತು ಕಿರಿಯ ಪುತ್ರಿ ವಂದಿತಾ ಇದ್ದಾರೆ ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ಅಳುವ ಕಡಲೊಳು ತೇಲಿಬಂದ ‘ಪುನೀತ’ ಧ್ಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯ ಸದಸ್ಯನನ್ನೇ ಕಳೆದುಕೊಂಡ ಅನಾಥ ಭಾವ, ನೆಚ್ಚಿನ ‘ಅಪ್ಪು’ವನ್ನು ಹೇಗಾದರೂ ಕಾಣಲೇಬೇಕೆಂಬ ತಹತಹ, ಮುಗಿಲು ಮುಟ್ಟಿದ ಅಪ್ಪು... ಅಪ್ಪು... ಎಂಬ ಮಾರ್ಮೊರೆತದ ಅನುರಣನ. . .

ಇದು ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ಕಂಡು ಬಂದ ಮನಕಲಕುವ ಭಾವನೋಟ. ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ರಾಜ್ಯದ ದಶದಿಕ್ಕುಗಳಿಂದ ಅಭಿಮಾನದ ನದಿಗಳೇ ನುಗ್ಗಿಬಂದಂತೆ ಭಾಸವಾಗುವಂತಿತ್ತು. ಕುಟುಂಬವೇ ಕುಳಿತು ನೋಡಲೇಬೇಕಾದ ಸಿನಿಮಾಗಳನ್ನು ಕೊಟ್ಟ ಪುನೀತ್ ನೋಡಲು ಕಣ್ಣೀರಿಳಿಸಿಕೊಳ್ಳುತ್ತಲೇ ಮಕ್ಕಳು ಮರಿಗಳನ್ನು ಕಟ್ಟಿಕೊಂಡ ಜನ ಕ್ರೀಡಾಂಗಣದತ್ತ ದೌಡಾಯಿಸಿದ್ದರು. ಅಳುವ ಕಡಲಿನಲಿ ತೇಲಿಬಂದ ಪುನೀತ ಧ್ಯಾನ ಆವರಣವನ್ನೇ ತುಂಬಿತ್ತು.

ಬೆಳಿಗ್ಗೆಯಿಂದಲೂ ಮೌನಕ್ಕೆ ಜಾರಿದ್ದ ಪುನೀತ್ ಅವರ ಪತ್ನಿ ಅಶ್ವಿನಿ, ಕಿರಿಯ ಪುತ್ರಿ ವಂದಿತಾರನ್ನು ಸಂತೈಸುತ್ತಲೇ ಉಮ್ಮಳಿಸಿ ಬಂದ ದುಃಖವನ್ನು ತಡೆಯಲಾಗದೆ ಕಣ್ಣೀರು ಹಾಕುತ್ತಲೇ ಇದ್ದರು. ಸಹೋದರ ಶಿವರಾಜ್ ಕುಮಾರ್ ಅವರು ಗಾಜಿನ ಪೆಟ್ಟಿಗೆಗೆ ತಲೆಯೊಡ್ಡಿ, ಬಿಕ್ಕಿ ಬಿಕ್ಕಿ ಅತ್ತರು.

6ನೇ ಪುಟ ನೋಡಿ

ವಿಶೇಷ ಪುಟಗಳು 2, 3A,6, 7

Remembering

Hari Yajaman

Our Torchbearer and Visionary Leader
who took the Khoday Group
to great heights single-handedly

Srihari Khoday

Family, Staff and Friends

The House of Khodays

ನಟ ಪುನೀತ್ ಪಾರ್ಥಿವ ಶರೀರದ ಅಂತಿಮ ಯಾತ್ರೆ ● ಡಿಸಿಪಿಗಳಿಗೆ ಭದ್ರತೆಯ ಉಸ್ತುವಾರಿ

ಯಾತ್ರೆಗೆ ಭದ್ರತೆ, ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಪುನೀತ್ ರಾಜ್‌ಕುಮಾರ್ ಪಾರ್ಥಿವ ಶರೀರದ ಅಂತಿಮ ಯಾತ್ರೆ ಸಾಗುವ ಮಾರ್ಗದಲ್ಲಿ ಬಿಗಿ ಭದ್ರತೆ ಕೈಗೊಳ್ಳಲು ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ. ಯಾತ್ರೆ ಸಾಗುವ ಪ್ರತಿ ರಸ್ತೆಯಲ್ಲೂ ಭದ್ರತೆ ಉಸ್ತುವಾರಿಯನ್ನು ಒಬ್ಬೊಬ್ಬ ಡಿಸಿಪಿಗೆ ವಹಿಸಲಾಗಿದೆ.

ಕಂಠೀರವ ಕ್ರೀಡಾಂಗಣದಿಂದ ಕಂಠೀರವ ಸ್ಟುಡಿಯೊ ಬಳಿ ಇರುವ ಡಾ. ರಾಜ್‌ಕುಮಾರ್ ಸ್ಮಾರಕದವರೆಗೆ ಯಾತ್ರೆ ಸಾಗಲಿದೆ. ಇದಕ್ಕಾಗಿ ಭಾನುವಾರ ಬೆಳಿಗ್ಗೆ 5 ಗಂಟೆಯಿಂದಲೇ ಪ್ರತಿಯೊಂದು ರಸ್ತೆಯನ್ನು ಪೊಲೀಸರು ತಮ್ಮ ಸುಪರ್ದಿಗೆ ಪಡೆಯಲಿದ್ದಾರೆ. 12 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗುತ್ತಿದೆ.

‘ಪಾರ್ಥಿವ ಶರೀರವನ್ನು ತೆರೆದ ವಾಹನದಲ್ಲಿ ಕೊಂಡೊಯ್ಯಲಾಗುವುದು. ಮೆರವಣಿಗೆ ಸಾಗುವ ರಸ್ತೆಗಳನ್ನು ವಲಯಗಳಾಗಿ ವಿಂಗಡಿಸಲಾಗಿದೆ. ಪ್ರತಿ ವಲಯದ ಭದ್ರತೆ ಜವಾಬ್ದಾರಿಯನ್ನು ಡಿಸಿಪಿಗಳಿಗೆ ವಹಿಸಲಾಗಿದೆ. ಅವರ ಮುಂದಾಳತ್ವದಲ್ಲಿ ಸಿಬ್ಬಂದಿ ಕರ್ತವ್ಯ ನಿರ್ವಹಿಸಲಿದ್ದಾರೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.



ಯಾತ್ರೆಗೆ ಪೊಲೀಸ್ ಬಲ	
ಕಾನೂನು ಸುವ್ಯವಸ್ಥೆ ಪೊಲೀಸರು	8,000
ಸಂಚಾರ ಪೊಲೀಸರು	3,000
ಕೆಎಸ್‌ಆರ್‌ಪಿ ತುಕಡಿಗಳು	60
ಸಿಎಆರ್/ಡಿಎಆರ್ ತುಕಡಿಗಳು	35
ಆರ್‌ಎಎಫ್ ಕಂಪನಿ	2
ಡಿಸಿಪಿ/ಎಸ್ಪಿಗಳು	19

‘ಯಾತ್ರೆ ಸಾಗುವ ಸಂದರ್ಭದಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗುವುದು. ಇದರಿಂದ ದಟ್ಟಣೆ ಉಂಟಾಗುವ ಸಾಧ್ಯತೆ ಇದ್ದು, ಸಾರ್ವಜನಿಕರು ಸಹಕರಿಸಬೇಕು’ ಎಂದೂ ಕೋರಿದ್ದಾರೆ.

ಸ್ಟುಡಿಯೊದಲ್ಲೂ ಭದ್ರತೆ: ಪುನೀತ್ ಅಂತ್ಯಕ್ರಿಯೆ ನಡೆಯಲಿರುವ ಕಂಠೀರವ ಸ್ಟುಡಿಯೊ ಬಳಿಯೂ ಭದ್ರತೆ ಬಿಗಿಯಾಗಿದೆ. ಜನರನ್ನು ನಿಯಂತ್ರಿಸಲು ಬ್ಯಾರಿಕೇಡ್‌ಗಳನ್ನು ನಿಲ್ಲಿಸಲಾಗಿದೆ.

ಆತ್ಮೀಯ ಸಂವಾದ; ಆಲಂಗಿಸಿ, ಉಡುಗೊರೆ ಕೊಟ್ಟ ಪ್ರಧಾನಿ

ಭಾರತ ಭೇಟಿ: ಪೋಪ್ ಸಮ್ಮತಿ

ವ್ಯಾಟಿಕನ್ ಸಿಟಿ (ರಾಯಿಟರ್ಸ್, ಪಿಟಿಐ): ಜಿ–20 ಶೃಂಗಸಭೆ ಪ್ರಯುಕ್ತ ಇಟಲಿ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ಕ್ರೈಸ್ತ ಧರ್ಮಗುರು ಪೋಪ್ ಫ್ರಾನ್ಸಿಸ್ ಅವರನ್ನು ಶನಿವಾರ ಭೇಟಿ ಮಾಡಿ, ಮಾತುಕತೆ ನಡೆಸಿದರು.

ಭಾರತಕ್ಕೆ ಭೇಟಿ ನೀಡುವಂತೆ ಪೋಪ್ ಅವರನ್ನು ಆಮಂತ್ರಿಸಿದರು. ಮೋದಿ ಆಹ್ವಾನವನ್ನು ಪೋಪ್ ಒಪ್ಪಿಕೊಂಡಿದ್ದು, ಅವರು ಭಾರತಕ್ಕೆ ಭೇಟಿ ನೀಡುವುದು ಖಚಿತಪಟ್ಟಿದೆ.

ಪೋಪ್ ಅವರನ್ನು ಆತ್ಮೀಯವಾಗಿ ಆಲಂಗಿಸಿಕೊಂಡ ಮೋದಿ, ಬೆಳ್ಳಿಯಿಂದ ತಯಾರಿಸಲಾದ ಮೇಣದಬತ್ತಿ ಸ್ಟ್ಯಾಂಡ್ ಹಾಗೂ ಹವಾಮಾನ ವೈಪರೀತ್ಯ ತಡೆ ಹೋರಾಟದಲ್ಲಿ ಭಾರತದ ನಿಲುವು ಕುರಿತ ಪುಸ್ತಕವೊಂದನ್ನು ಪ್ರಧಾನಿ ಉಡುಗೊರೆಯಾಗಿ ನೀಡಿದರು.

1999ರಲ್ಲಿ ಪೋಪ್ ಜಾನ್ ಪಾಲ್ 2 ಅವರು ಭಾರತಕ್ಕೆ ಬಂದಿದ್ದು, ಅಧಿಕೃತವಾಗಿ ಕೊನೆಯ ಭೇಟಿಯಾಗಿತ್ತು.

‘ಪೋಪ್ ಫ್ರಾನ್ಸಿಸ್ ಅವರೊಂದಿಗೆ ಅತ್ಯಂತ ಆತ್ಮೀಯ ಸಂವಾದ ನಡೆಸಿದ್ದೇನೆ. ಅವರೊಂದಿಗೆ ವ್ಯಾಪಕ ವಿಷಯಗಳ ಬಗ್ಗೆ ಚರ್ಚಿಸಲು ನನಗೆ ಅವಕಾಶ ಸಿಕ್ಕಿತು. ಭಾರತಕ್ಕೆ ಭೇಟಿ ನೀಡುವಂತೆ ಅವರನ್ನು ಆಹ್ವಾನಿಸಿದೆ’ ಎಂದು ಮೋದಿ ಟ್ವೀಟ್ ಮಾಡಿ ತಿಳಿಸಿದ್ದಾರೆ.

‘ನಿಮ್ಮ ಭೇಟಿಗೆ ತುಂಬಾ ಧನ್ಯವಾದಗಳು. ನನಗೆ ತುಂಬಾ ಸಂತೋಷವಾಗಿದೆ’ ಎಂದು ಪೋಪ್ ಹೇಳಿದ್ದಾರೆ. ‘ನಿಮ್ಮನ್ನು ಭಾರತದಲ್ಲಿ ಭೇಟಿಯಾಗಲು ಬಯಸುತ್ತೇನೆ’ ಎಂದು ಪ್ರಧಾನಿ ಪ್ರತಿಕ್ರಿಯಿಸಿದರು.

ಪೋಪ್ ಫ್ರಾನ್ಸಿಸ್ ಅವರನ್ನು ಆಲಂಗಿಸಿಕೊಂಡ ಪ್ರಧಾನಿ ಮೋದಿ –ಪಿಟಿಐ ಚಿತ್ರ

> **ಮೋದಿ, ಸರ್ಕಾರದ ಮುಖ್ಯಸ್ಥರಾಗಿ ಪೋಪ್ ಭೇಟಿ ಮಾಡಿದರೆ ತಪ್ಪೇನು?. ನಾವು ‘ವಸುದೈವ ಕುಟುಂಬಕಂ’ ಪರಿಕಲ್ಪನೆಯಲ್ಲಿ ನಂಬಿಕೆ ಇರಿಸಿದ್ದೇವೆ.**
> **ದತ್ತಾತ್ರೇಯ ಹೊಸಬಾಳೆ**
> ಆರ್‌ಎಸ್‌ಎಸ್ ಸರಕಾರ್ಯವಾಹ

ಫ್ರಾನ್ಸಿಸ್ ಮತ್ತು ಮೋದಿ ನಡುವಿನ ಮೊದಲ ಭೇಟಿಗೆ 20 ನಿಮಿಷ ಸಮಯ ನಿಗದಿಯಾಗಿತ್ತು. ಆದರೆ ಮಾತುಕತೆ ಒಂದು ಗಂಟೆ ಮುಂದುವರಿಯಿತು. ಮಾತುಕತೆ ಆಪ್ತವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವ್ಯಾಟಿಕನ್ ಹೊರಡಿಸಿರುವ ಟಿಪ್ಪಣಿಯಲ್ಲಿ ಇದನ್ನು ‘ಸಂಕ್ಷಿಪ್ತ ಸಂಭಾಷಣೆ’ ಎಂದು ವಿವರಿಸಲಾಗಿದೆ. ಭಾರತದ ನಡುವಿನ ಸೌಹಾರ್ದ ಸಂಬಂಧಗಳನ್ನು ಚರ್ಚಿಸಲಾಗಿದೆ ಎಂದು ಉಲ್ಲೇಖಿಸಿದೆ.

ಹವಾಮಾನ ಬದಲಾವಣೆ ಹಾಗೂ ಬಡತನ ವಿರುದ್ಧದ ಹೋರಾಟದ ಬಗ್ಗೆ ಚರ್ಚಿಸಲಾಗಿದೆ ಎಂದು ಪ್ರಧಾನಿ ಕಚೇರಿ ತಿಳಿಸಿದೆ.

ಪ್ರಧಾನಿ ಜತೆ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೊಭಾಲ್ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಇದ್ದರು. ಪೋಪ್ ಅವರನ್ನು ಆಹ್ವಾನಿಸಿದ ಪ್ರಧಾನಿಯವರ ನಿರ್ಧಾರ ಐತಿಹಾಸಿಕ ಎಂದು ಕೇರಳ ಕ್ಯಾಥೊಲಿಕ್ ಬಿಷಪ್ ಮಂಡಳಿ ಹೇಳಿದೆ.

2017ರಲ್ಲಿ ಬರಬೇಕಿತ್ತು: ವರ್ಷಗಳ ಹಿಂದೆ ಪೋಪ್ ಅವರ ಭಾರತ ಪ್ರವಾಸದ ವೇಳಾಪಟ್ಟಿಯನ್ನು ವ್ಯಾಟಿಕನ್ ಸಿದ್ಧಪಡಿಸಿತ್ತು. ‘ಮುಂದಿನ ವರ್ಷ ಬಾಂಗ್ಲಾದೇಶ ಹಾಗೂ ಭಾರತಕ್ಕೆ ಭೇಟಿ ನೀಡುವುದು ಬಹುತೇಕ ಖಚಿತ’ ಎಂದು 2016ರಲ್ಲಿ ಫ್ರಾನ್ಸಿಸ್ ಹೇಳಿದ್ದರು. ಆದರೆ ಅವರ ಭೇಟಿ ಸಾಧ್ಯವಾಗಿರಲಿಲ್ಲ.

ಕಣ್ಣೀರು ಹಾಕಿದ ಡಾ.ರಾಜ್ ಕುಮಾರ್ ಸ್ಮಾರಕದ ನೌಕರರು

‘ಪ್ರೀತಿಯಿಂದ ಕಾಣುತ್ತಿದ್ದ ಅಪ್ಪು’

ಪ್ರಜಾವಾಣಿ ವಾರ್ತೆ

ಲಲಿತಾ

ಬೆಂಗಳೂರು: ‘ನಮ್ಮನ್ನು ಪ್ರೀತಿಯಿಂದ ಕಾಣುತ್ತಿದ್ದರು. ಪ್ರತಿಯೊಂದು ಕಷ್ಟಕ್ಕೆ ಸ್ಪಂದಿಸುತ್ತಿದ್ದರು. ನನ್ನ ಮಗನ ಶಿಕ್ಷಣದ ಜವಾಬ್ದಾರಿಯನ್ನು ಅವರೇ ವಹಿಸಿಕೊಂಡಿದ್ದರು. ಈಗ ಅವರಿಲ್ಲದಿರುವುದು ಊಹಿಸಿಕೊಳ್ಳುವುದು ಕಷ್ಟ...’

ಇದು ಡಾ. ರಾಜ್ ಕುಮಾರ ಸ್ಮಾರಕದಲ್ಲಿ ಕೆಲಸ ಮಾಡುತ್ತಿರುವ ಲಲಿತಾ ಅವರು, ಪುನೀತ್ ಅವರ ಸಹಾಯವನ್ನು ನೆನಪಿಸಿಕೊಂಡು ಕಣ್ಣೀರಿಟ್ಟರು. 15 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿರುವ ಅವರು, ಸಂಕಷ್ಟದಲ್ಲಿದ್ದಾಗ ಪುನೀತ್ ನೆರವು ನೀಡುತ್ತಿದ್ದುದನ್ನು ಸ್ಮರಿಸಿದರು.

‘ಇಲ್ಲಿ ಬೆಳೆದ ಹಣ್ಣು ಹಂಪಲಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಜಂಬ ಇರಲಿಲ್ಲ. ಸರಳ ವ್ಯಕ್ತಿ. ನಮ್ಮಗಳ ಜತೆ ಸರಿಸಮಾನವಾಗಿ ಇರುತ್ತಿದ್ದರು. ಇಲ್ಲಿಗೆ ಬಂದಾಗ ನಮ್ಮ ಯೋಗ ಕ್ಷೇಮ ವಿಚಾರಿಸುತ್ತಿದ್ದರು. ನಾನು ಸುಮ್ಮನಿದ್ದರೂ, ಅವರೇ ಮಾತನಾಡಿಸಿ ಸಮಸ್ಯೆಗಳನ್ನು ಕೇಳುತ್ತಿದ್ದರು. ನಮ್ಮನ್ನೆಲ್ಲ ಮಕ್ಕಳ ರೀತಿ ಪ್ರೀತಿಯಿಂದ ನೋಡಿಕೊಂಡಿದ್ದರು’ ಎಂದು ಕಣ್ಣೀರು ಹಾಕಿದರು.

‘ನನ್ನ ಮಗ ಚಿಕ್ಕವನಿದ್ದಾಗ ಎತ್ತಿಕೊಂಡು ಮುದ್ದಾಡಿದ್ದರು. ಈಗ ಬೆಳೆದ ದೊಡ್ಡವನಾದ ಮೇಲೆಯೂ ಅಷ್ಟೇ ಪ್ರೀತಿ ಅವನ ಮೇಲೆ ತೋರುತ್ತಿದ್ದರು. ಮಗನ ಶಿಕ್ಷಣ ಜವಾಬ್ದಾರಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು. ಅವನನ್ನು ಚೆನ್ನಾಗಿ ಓದಿಸಬೇಕು. ನಾನು ಓದಿಸುತ್ತೇನೆ. ಚಿಂತೆ ಮಾಡಬೇಡಿ ಎಂದು ನನಗೆ ಧೈರ್ಯ ತುಂಬುತ್ತಿದ್ದರು’ ಎಂದು ಸ್ಮರಿಸಿಕೊಂಡರು.

ಇದೇ ಸ್ಮಾರಕದಲ್ಲಿ ಕೆಲಸ ಮಾಡುತ್ತಿರುವ ಲಕ್ಷ್ಮೀಪತಿ ಅವರು ಸಹ ಪುನೀತ್ ಅವರ ಜತೆಗಿನ ಒಡನಾಟವನ್ನು ನೆನೆದು ಕಣ್ಣೀರಾದರು.

‘ಅಪ್ಪು ಸರ್ ನಮಗೆ ಸ್ನೇಹಿತನಾಗಿ, ಅಣ್ಣನಾಗಿ, ಕುಟುಂಬದ ಸದಸ್ಯರ ರೀತಿ ಇದ್ದರು. ನಮ್ಮನ್ನು ಕಂಡರೆ ಅತಿಯಾದ ಪ್ರೀತಿ ತೋರಿಸುತ್ತಿದ್ದರು. ನಮ್ಮ ಕಷ್ಟ ಎಲ್ಲವೂ ಗೊತ್ತಿತ್ತು. ನನ್ನ ಮುಖ ನೋಡಿಯೇ ಕಷ್ಟ ತಿಳಿದುಕೊಳ್ಳುತ್ತಿದ್ದರು. 16 ವರ್ಷಗಳಿಂದ ನನ್ನ ಕಷ್ಟಗಳಿಗೆ ಸ್ಪಂದಿಸಿದ್ದಾರೆ. ನನಗೆ ಯಾವುದೇ ತೊಂದರೆ ಇಲ್ಲದ ಹಾಗೆಯೇ ನೋಡಿಕೊಳ್ಳುತ್ತಿದ್ದರು’ ಎಂದರು.

‘ಬುಧವಾರ ಇಲ್ಲಿ ಬಂದಿದ್ದರು. ಹಣ ಕೊಟ್ಟು ಹೋಗಿದ್ದರು. ಅವರಿಗೆ ಪರಂಗಿ ಹಣ್ಣು ಅಂದರೆ ತುಂಬಾ ಇಷ್ಟ. ಇಲ್ಲಿ ಬೆಳೆದ ಪರಂಗಿ ಹಣ್ಣು ಹಾಗೂ ಕಬ್ಬು ತೆಗೆದುಕೊಂಡು ಹೋಗುತ್ತಿದ್ದರು. ಹಬ್ಬಗಳ ದಿನ ಮನೆಗೆ ಊಟಕ್ಕೆ ಕರೆಯುತ್ತಿದ್ದರು’ ಎಂದು ನೆನಪಿಸಿಕೊಂಡರು.

‘ಅಪ್ಪು ಅವರು ಬಡವರ ಬಗ್ಗೆ ಅಪಾರ ಪ್ರೀತಿ ತೋರಿಸುತ್ತಿದ್ದರು. ಅವರು ಇದ್ದಿದ್ದರೆ ನಮ್ಮಂತ ಬಡವರಿಗೆ ಬಹಳ ಅನುಕೂಲವಾಗುತ್ತಿತ್ತು. ಎಲ್ಲರಿಗೂ ಸಹಾಯ ಮಾಡುತ್ತಿದ್ದರು. ನಾನೇ ಕಣ್ಣಾರೆ ನೋಡಿದ್ದೇನೆ. ಅವರು ಸಹಾಯ ಮಾಡಿದ್ದು ಯಾರಿಗೂ ಗೊತ್ತಾಗುತ್ತಿರಲಿಲ್ಲ. ಆದರೆ, ದೇವರು ಅವರನ್ನು ಬೇಗ ಕರೆದುಕೊಂಡ’ ಎಂದು ದುಃಖ ತೋಡಿಕೊಂಡರು.

ಪುನೀತ್ ಅವರ ಪಾರ್ಥಿವ ಶರೀರಕ್ಕೆ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸೌಮ್ಯನಾಥ ಸ್ವಾಮೀಜಿ ಅಂತಿಮ ನಮನ ಸಲ್ಲಿಸಿದರು.

ಪುನೀತ್ ರಾಜಕುಮಾರ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದ ತೆಲುಗು ನಟ ಜೂನಿಯರ್ ಎನ್‌ ಟಿ. ಆರ್

ಜಾಗೃತಿ ಅರಿವು ಸಪ್ತಾಹ ಆಚರಣೆ

ಬೆಂಗಳೂರು: ಇಲ್ಲಿನ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಕಚೇರಿಯಲ್ಲಿ ಜಾಗೃತಿ ಅರಿವು ಸಪ್ತಾಹವನ್ನು ಶನಿವಾರ ಆಚರಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಎಲ್. ಪ್ರಮೋದ್, ’ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುವ ಮೂಲಕ ಪ್ರಗತಿ ಸಾಧಿಸಬೇಕು’ ಎಂದು ಹೇಳಿದರು.

ಮುಖ್ಯ ಮಹಾ ಪ್ರಬಂಧಕ ಜಿ.ವಿ. ಹಿಮಾ ರಾವ್, ‘ಪ್ರಕೃತಿ ನಮ್ಮ ಅಗತ್ಯಗಳನ್ನು ಪೂರೈಸಬಹುದು. ಆದರೆ, ದುರಾಸೆಗಳನ್ನಲ್ಲ ಎಂದು ಮಹಾತ್ಮ ಗಾಂಧಿ ಹೇಳಿದ್ದರು. ಮಹಾತ್ಮ ಗಾಂಧಿ ಅವರ ಸಂದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು’ ಎಂದರು.

‘ಕಾಳಿಂಗ ನಾವಡ ಪ್ರಶಸ್ತಿ’ ಪ್ರದಾನ ಇಂದು

ಬೆಂಗಳೂರು: ಕಲಾ ಕದಂಬ ಆರ್ಟ್ ಸೆಂಟರ್ ಭಾನುವಾರ ಸಂಜೆ 4 ಗಂಟೆಗೆ ಚಾಮರಾಜಪೇಟೆಯ ಉದಯಭಾನು ಕಲಾಸಂಘದಲ್ಲಿ ‘ಕಾಳಿಂಗ ನಾವಡ ಪ್ರಶಸ್ತಿ’ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ.

ಈ ಪ್ರಶಸ್ತಿಗೆ ಮದ್ದಳೆ ಕಲಾವಿದ ಶಂಕರ ಭಾಗವತ ಯಲ್ಲಾಪುರ ಆಯ್ಕೆಯಾಗಿದ್ದು, ಪ್ರಶಸ್ತಿಯು ₹ 10 ಸಾವಿರ ನಗದು ಹಾಗೂ ಬೆಳ್ಳಿತಟ್ಟೆ ಒಳಗೊಂಡಿದೆ.

ಸಂಗೀತ ವಿದ್ವಾಂಸ ವಿದ್ಯಾಭೂಷಣ, ಕನ್ನಡಪ್ರಭ ಹಾಗೂ ಸುವರ್ಣ ನ್ಯೂಸ್‌ನ ಪ್ರಧಾನ ಸಂಪಾದಕ ರವಿ ಹೆಗಡೆ, ಯಕ್ಷಗಾನ ಸಂಶೋಧಕ ಆನಂದರಾಮ ಉಪಾಧ್ಯ, ಯಕ್ಷಗಾನ ಪೋಷಕ ಎ. ಪದ್ಮನಾಭ ಕಾರಂತ, ಯುವ ವಿಪ್ರ ವೇದಿಕೆಯ ಸಂಸ್ಥಾಪನಾಧ್ಯಕ್ಷ ಕೃಷ್ಣಮೂರ್ತಿ ಅಡಿಗ, ಕಾಳಿಂಗ ನಾವಡ ಅವರ ಸಹೋದರಿ ಸುಶೀಲ ಉರಾಳ ಹಾಗೂ ಕರಬ ಪ್ರತಿಷ್ಠಾನದ ದೇವರಾಜ ಕರಬ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಲಾ ಕದಂಬ ಆರ್ಟ್ ಸೆಂಟರ್‌ನ ಅಧ್ಯಕ್ಷ ಅಂಬರೀಷ್ ಭಟ್ ಹಾಗೂ ನಿರ್ದೇಶಕ ರಾಧಾಕೃಷ್ಣ ಉರಾಳ ಉಪಸ್ಥಿತರಿರಲಿದ್ದಾರೆ.


ಶಂಕರ ಭಾಗವತ ಯಲ್ಲಾಪುರ

ಕಲಾ ಕದಂಬ ಆರ್ಟ್ ಸೆಂಟರ್‌ನ ಕಲಾವಿದರು ಅಂಬೇಮೂಲೆ ಗೋವಿಂದ ಭಟ್ ರಚಿಸಿದ ‘ಶ್ರೀ ಕೃಷ್ಣ ತುಲಾಭಾರ’ ಯಕ್ಷಗಾನವನ್ನು ಪ್ರದರ್ಶಿಸಲಿದ್ದಾರೆ.

2ರಂದು ಕೆಆರ್‌ಎಸ್‌ಗೆ ಸಿ.ಎಂ. ಬಾಗಿನ

ಶ್ರೀರಂಗಪಟ್ಟಣ: ತಾಲ್ಲೂಕಿನ ಕೆಆರ್‌ಎಸ್ ಜಲಾಶಯ ಭರ್ತಿಯಾಗಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನ.2ರಂದು ಬಾಗಿನ ಅರ್ಪಿಸುವರು. ಅದೇ ದಿನ ಅವರು ಮೈಸೂರು ಜಿಲ್ಲೆಯ ಕಬಿನಿ ಜಲಾಶಯಕ್ಕೂ ಬಾಗಿನ ನೀಡಲಿದ್ದಾರೆ.

ಅಂದು ಮಧ್ಯಾಹ್ನ 1 ಗಂಟೆಗೆ ಬಾಗಿನ ಸಲ್ಲಿಸಿ ಕಾವೇರಿ ಪ್ರತಿಮೆಗೆ ಪೂಜೆ ಸಲ್ಲಿಸುವರು. ಸಿ.ಎಂ ಭೇಟಿ ಹಿನ್ನೆಲೆಯಲ್ಲಿ ಶನಿವಾರ ಜಿಲ್ಲಾಧಿಕಾರಿ ಎಸ್.ಅಶ್ವತಿ ಕೆಆರ್‌ಎಸ್‌ಗೆ ಭೇಟಿ ನೀಡಿ ಪರಿಶೀಲಿಸಿದರು. ಉಪ ವಿಭಾಗಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಇದ್ದರು.

ನಗರದಲ್ಲಿ ಇಂದು

ಶಾ.ಬಾಲೂರಾವ್ ಯುವಬರಹಗಾರ ಪ್ರಶಸ್ತಿ ಹಾಗೂ ಶಾ.ಬಾಲೂರಾವ್ ಅನುವಾದ ಪ್ರಶಸ್ತಿ ಪ್ರದಾನ: ಸಾಹಿತಿ ಜಿ.ಎನ್.ರಂಗನಾಥರಾವ್, ಪುರಸ್ಕೃತರು– ಭಾರತೀಯ ಸಂಸ್ಕೃತಿ ಸಂಶೋಧಕ ಹರೀಶ್ ಹಾಗಲವಾಡಿ, ಪತ್ರಕರ್ತ ಪದ್ಮರಾಜ ದಂಡಾವತಿ, ಅಧ್ಯಕ್ಷತೆ– ಬೈರಮಂಗಲ ರಾಮೇಗೌಡ, ಅತಿಥಿಗಳು– ಎಂ.ಎಸ್.ರಘುನಾಥ್, ಆನಂದರಾಮ ಉಪಾಧ್ಯ, ಆಯೋಜನೆ, ಸ್ಥಳ– ಬಿಎಂಶ್ರೀ ಪ್ರತಿಷ್ಠಾನ, ಎಂವಿಸೀ ಸಭಾಂಗಣ, ಎನ್.ಆರ್.ಕಾಲೊನಿ, ಬೆಳಿಗ್ಗೆ 10.30

ದಕ್ಷಿಣ ವಲಯ ಪೂರ್ವ ಗಣರಾಜ್ಯೋತ್ಸವ ಪರೇಡ್ ಆಯ್ಕೆ ಶಿಬಿರದ ಸಮಾರೋಪ ಸಮಾರಂಭ: ಅಧ್ಯಕ್ಷತೆ–ಕೆ.ಸಿ. ನಾರಾಯಣಸ್ವಾಮಿ, ಸಮಾರೋಪ ಭಾಷಣ–ಬಿ.ವಸಂತ ಶೆಟ್ಟಿ, ಅತಿಥಿಗಳು– ರಾಜೀವ್ ಕುಮಾರ್ ಸಿನ್ಹಾ, ಎಸ್. ವಿ.ಸುರೇಶ, ಎನ್.ಬಿ.ಪ್ರಕಾಶ್, ಆಯೋಜನೆ–ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಘಟಕ, ಸ್ಥಳ–ಕುವೆಂಪು ಕನ್ನಡ ಸಭಾಂಗಣ, ಜಿಕೆವಿಕೆ, ಬೆಳಿಗ್ಗೆ 10.30

ಸಪ್ತಕ ವಾರ್ಷಿಕೋತ್ಸವ ಹಾಗೂ ಸಂಗೀತ ಸಂಭ್ರಮ: ಜಿ.ಎನ್.ಹೆಗಡೆ ಅವರ ‘ಜೀವನ ಪಥ–ನೆನಪಿನ ರಥ’ ಪುಸ್ತಕ ಬಿಡುಗಡೆ–ನಿರ್ದೇಶಕ ಟಿ.ಎನ್. ಸೀತಾರಾಂ, ಅತಿಥಿ–ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥನಾರಾಯಣ, ಅಧ್ಯಕ್ಷತೆ– ಎಂ.ಎಸ್. ಮಹಾಬಲೇಶ್ವರ್, ಸಂಗೀತ ಕಾರ್ಯಕ್ರಮ– ಪ್ರವೀಣ್ ಗೋಡ್ಖಿಂಡಿ, ಜಯತೀರ್ಥ ಮೇವುಂಡಿ, ರವೀಂದ್ರ ಕಾಟೋಟಿ, ರಾಜೇಂದ್ರ ನಾಕೋಡ್, ಸ್ಥಳ–ಚೌಡಯ್ಯ ಸ್ಮಾರಕ ಭವನ, ವೈಯಾಲಿಕಾವಲ್, ಮಲ್ಲೇಶ್ವರ, ಸಂಜೆ 5


ಟಿ.ಎನ್. ಸೀತಾರಾಂ

ಕನ್ನಡಕ್ಕಾಗಿ ನಾವು ವಿಶೇಷ ಅಭಿಯಾನ: ಬೆಳಿಗ್ಗೆ 9ಕ್ಕೆ ಅಶೋಕ್ ಹಾಗೂ ಹರಿಹರನ್ ಮತ್ತು ತಂಡದವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಬೆಳಿಗ್ಗೆ 9.30ಕ್ಕೆ ಅಮೋಘವರ್ಷ ಮತ್ತು ತಂಡದಿಂದ ಡ್ರಮ್ಸ್ ಫ್ಯೂಷನ್, 10 ಗಂಟೆಗೆ ಕುಮಾರ ಕಣವಿ ಮತ್ತು ಮಾಲಾಶ್ರೀ ಕಣವಿ ತಂಡದಿಂದ ವಚನ ಗಾಯನ, 10.30ಕ್ಕೆ ಅಮೃತಾ ನಾಯ್ಡು ಅವರಿಂದ ಕಥಾ ಕೀರ್ತನ, 11 ಗಂಟೆಗೆ ಜನಪದ ಕಲೆಗಳ ಪ್ರದರ್ಶನದಲ್ಲಿ ಶಂಕ್ರಣ್ಣ ಗದಗ ಅವರಿಂದ ಜೋಗತಿ ನೃತ್ಯ ಜೂಲಿಯಾನ್ ಫೆದ್ರು ಫರ್ನಾಂಡಿಸ್ ಅವರಿಂದ ಸಿದ್ದಿ ಡಮಾಮಿ ನೃತ್ಯ, ಆಶಾ ರಾಠೋಡ್ ಅವರಿಂದ ಲಂಬಾಣಿ ನೃತ್ಯ, ಮಧ್ಯಾಹ್ನ 12 ಗಂಟೆಗೆ ಶುಭಾಂಗಿ ಮತ್ತು ತಂಡದಿಂದ ನೃತ್ಯ ವೈಭವ, ಮಧ್ಯಾಹ್ನ 1 ಗಂಟೆಗೆ ಪ್ರವೀಣ್ ಗೋಡ್ಖಿಂಡಿ ಮತ್ತು ತಂಡದಿಂದ ಕೊಳಲು ವಾದನ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 2.30ಕ್ಕೆ ವಿವಿಧ ತಂಡಗಳಿಂದ ಜನಪದ ಗಾಯನ, 3.30ಕ್ಕೆ ಮುನಿಕೆಂಪಯ್ಯ ಮತ್ತು ತಂಡದಿಂದ ಮೂಡಲಪಾಯ, ಸಂಜೆ 4ಕ್ಕೆ ಅಭಿಜಿತ್ ಶೆಣೈ ಅವರಿಂದ ಹಿಂದೂಸ್ತಾನಿ ಸಂಗೀತ, 4.30ಕ್ಕೆ ಎಂ.ಡಿ. ಪಲ್ಲವಿ ಹಾಗೂ ಗಾಯಕರಿಂದ ಸುಗಮ ಸಂಗೀತ, ಆಯೋಜನೆ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ–ರವೀಂದ್ರ ಕಲಾಕ್ಷೇತ್ರ

ಶ್ರೀ ಸಾಯಿ ಮಹಾಗಣಪತಿ ಜ್ಯೋತಿಷ್ಯ ಕೇಂದ್ರ

ಕೇರಳದ ಸರ್ವ ಮಾಂತ್ರಿಕ ಸಿದ್ಧಿಸಾಧಕರು,
ಶ್ರೀ ಭದ್ರಕಾಳಿ ಉಪಾಸಕರು
Famous Astrologer
ದೈವಜ್ಞ ಗುರುಪ್ರಸಾದ ಜೋಶಿ

9449850111

ಫೋನಿನ ಮೂಲಕ ಅಥವಾ ನೇರವಾಗಿ ನಮ್ಮನ್ನು ಭೇಟಿ ಮಾಡಿ ಉತ್ತಮ ಸಲಹೆ ಶಾಶ್ವತ ಪರಿಹಾರ ಶತಃಸಿದ್ಧ

ವಿದ್ಯೆ, ಸಿದ್ಧಿ ಸಾಧಕ, ನುಡಿದಂತೆ ನಡೆಯುತ್ತಾರೆ. ಕೇರಳ ಪದ್ಧತಿಯಲ್ಲಿ ತಾಳಗ್ರಂಥದ ಮೂಲಕ ಪುರಾತನ ಋಷಿ ಮುನಿಗಳಿಂದ ಪರಿಹಾರ ತಿಳಿಸುತ್ತಾರೆ.

ವಾಸ್ತುಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ಸಂಖ್ಯಾ ಶಾಸ್ತ್ರ, ಜಾತಕ, ಭಾವಚಿತ್ರದ ಆಧಾರಿತವಾಗಿ ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ನಿಖರವಾಗಿ ನುಡಿಯುತ್ತಾರೆ.

ಮನೆಯಲ್ಲಿ ಅಶಾಂತಿ, ಮಾನಸಿಕ ಜಿಗುಪ್ಸೆ, ಸ್ತ್ರೀ–ಪುರುಷ ವಶೀಕರಣ, ಪ್ರೇಮ ವಿಚಾರ, ದಾಂಪತ್ಯ ಕಲಹ, ಮದುವೆ, ಸಂತಾನ, ಆರೋಗ್ಯ, ಲೈಂಗಿಕ ತೊಂದರೆ, ಹಣಕಾಸಿನ ಸಮಸ್ಯೆ, ವಿದ್ಯೆ, ಉದ್ಯೋಗ, ವ್ಯಾಪಾರ ನಷ್ಟ, ಶತ್ರುಕಾಟ, ಮಾಟ ಮಂತ್ರ, ಅತ್ತೆ–ಸೊಸೆ ಕಲಹ, ಕೋರ್ಟ್ ಕೇಸ್, ಆಸ್ತಿ ವಿಚಾರ, ಇನ್ನೂ ಯಾವುದೇ ಸಮಸ್ಯೆಗಳಿಂದ ಜೀವನದಲ್ಲಿ ಮಾನಸಿಕವಾಗಿ ನೊಂದಿದ್ದರೆ ಇನ್ನೊಬ್ಬರಲ್ಲಿ ಹೇಳಲಾಗದೆ ಕೊರಗುತ್ತಿದ್ದೀರಾ? ಚಿಂತಿಸಬೇಡಿ,

Any Problems 100% Solutions

ಸ್ಥಳ: ಕಲಾನಿಕೇತನ ಹಿಂದೆ, ಟ್ರೇಂಡ್ಸ್ ಪಕ್ಕದಲ್ಲಿ, ಜಯನಗರ, 4th ಬ್ಲಾಕ್, ಬೆಂಗಳೂರು

ರಾಮನಗರ ಜಿಲ್ಲಾ ಪಂಚಾಯತ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ರಾಮನಗರ ವಿಭಾಗ, ರಾಮನಗರ.

ಸಂಖ್ಯೆ: 18/ಕಾಅ/ಗ್ರಾ.ಕು.ನೀ.&ನೈ.ವಿ/ರಾ/ಟೆಂಡರ್/ಸಂ.ಇ–4/1311–1321/2021–22 ದಿನಾಂಕ: 28.10.2021

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ರಾಮನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿನ ಗ್ರಾಮೀಣ ಪ್ರದೇಶದಲ್ಲಿ **JJM ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ರಾಮನಗರ ಜಿಲ್ಲೆಯ ಕನಕಪುರ ತಾಲ್ಲೂಕಿನ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಲು** ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಅಧಿಕೃತ ಪರಿಶಿಷ್ಠ ಜಾತಿ / ಪರಿಶಿಷ್ಠ ಪಂಗಡ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ವಿವರಗಳು ಕಾಮಗಾರಿಗಳನ್ನು ನಿರ್ವಹಿಸಲು ಈ ಕೆಳಕಂಡಂತಿವೆ.

(1) ಕನಿಷ್ಟ ಟೆಂಡರ್‌ಗಿಟ್ಟ ಮೊತ್ತ: **ರೂ. 9.69 ಲಕ್ಷಗಳು.** ಇ.ಎಂ.ಡಿ: **ಮೊತ್ತ ರೂ. 25000.00.** (2) ಗರಿಷ್ಠ ಟೆಂಡರ್‌ಗಿಟ್ಟ ಮೊತ್ತ: **ರೂ. 35.36 ಲಕ್ಷಗಳು.** ಇ.ಎಂ.ಡಿ: **ಮೊತ್ತ ರೂ. 35360.00.** (3) ಕಾಲಾವಧಿ: **03 ತಿಂಗಳು.**

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 12.11.2021ರ ಸಂಜೆ 5:30 ಗಂಟೆಯವರೆಗೆ.** ಬಿಡ್ ತೆರೆಯುವ **ದಿನಾಂಕ: 15.11.2021ರ ಬೆಳಗ್ಗೆ 11:00 ಗಂಟೆಯ ನಂತರ.**

ಮೇಲ್ಕಾಣಿಸಿದ ದಿನವೇನಾದರೂ ಸಾರ್ವತ್ರಿಕ ರಜಾ ದಿನವಾದಲ್ಲಿ ಮುಂದಿನ ದಿನವನ್ನು ಗಣನೆಗೆ ತೆಗೆದುಕೊಳ್ಳಲಾಗುವುದು. ಟೆಂಡರ್ ಕಾಮಗಾರಿಗಳ ವಿವರ ಹಾಗೂ ನಿಯಮಾವಳಿಗಳನ್ನು ಒಳಗೊಂಡಿರುವ ಮಾಹಿತಿಗೆ ಈ ಕಛೇರಿಯ ಇಲಾಖೆ / ವೆಬ್‌ಸೈಟ್ **www.eproc.karnataka.gov.in** ರಲ್ಲಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು
ಗ್ರಾ.ಕು.ನೀ&ನೈ ಇಲಾಖೆ, ರಾಮನಗರ ವಿಭಾಗ, ರಾಮನಗರ

ವಾಸಾಸಂಇ/ರಾನ/ಬ್ರಾಂಚ್/274/2021–22

VTPC KARNATAKA
ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರ
(ರಾಜ್ಯ ಸರ್ಕಾರದ ರಫ್ತು ಉತ್ತೇಜನಾ ಸಂಸ್ಥೆ)
ವಿಟಿಪಿಸಿ ಕಟ್ಟಡ, ಕಸ್ತೂರಬಾ ರಸ್ತೆ, ಬೆಂಗಳೂರು-560001 ದೂ:080-22860644
ಇ-ಮೇಲ್: vtpc@karnataka.gov.in

ಸಂ:ವಿಟಿಪಿಸಿ/ಡಿಡಿ/ಪ್ರಶಸ್ತಿ–2021 ದಿನಾಂಕ: 30.10.2021

ಪ್ರಕಟಣೆ

ರಾಜ್ಯ ರಫ್ತು ಪ್ರಶಸ್ತಿಗಳಿಗೆ ಬೆಳ್ಳಿ ನೆನಪಿನ ಕಾಣಿಕೆಗಳ ಸರಬರಾಜಿಗೆ ಅಲ್ಪಾವಧಿ ಇ–ಟೆಂಡರ್

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನಾ ಕೇಂದ್ರವು (ವಿಟಿಪಿಸಿ) ಕರ್ನಾಟಕ ಸರ್ಕಾರದ “ಕರ್ನಾಟಕ ರಾಜ್ಯ ರಫ್ತು ಪ್ರಶಸ್ತಿ”ಗಳಿಗೆ ಅನುಕೂಲ ಮಾಡಿಕೊಡುವ ನೋಡಲ್ ಏಜೆನ್ಸಿಯಾಗಿದೆ. ವಿಟಿಪಿಸಿ “ಕರ್ನಾಟಕ ಸರ್ಕಾರದ ರಫ್ತು ಪ್ರಶಸ್ತಿ”ಗಳಿಗಾಗಿ ಬೆಳ್ಳಿ ನೆನಪಿನ ಕಾಣಿಕೆಗಳನ್ನು ಸರಬರಾಜು ಮಾಡುವುದಕ್ಕಾಗಿ ಪೂರೈಕೆದಾರರು/ಡೀಲರ್‌ಗಳು/ಉತ್ಪಾದರಕರನ್ನು ಗುರುತಿಸಲು ಉದ್ದೇಶಿಸಿದೆ.

ಈ ಹಿನ್ನಲೆಯಲ್ಲಿ, ಬಿಡ್‌ದಾರರಿಗೆ ತಿಳಿವಳಿಕೆ, ಅರ್ಹತಾ ಮಾನದಂಡ, ಕೆಲಸದ ವ್ಯಾಪ್ತಿ, ಮೌಲ್ಯ ನಿರ್ಣಯ ಪ್ರಕ್ರಿಯೆ ಹಾಗೂ ಇತರೆ ನಿಯಮ ಮತ್ತು ನಿಬಂಧನೆಗಳನ್ನೊಳಗೊಂಡ ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ (https://www.eproc.karntaka.gov.in)ನಿಂದ ಪಡೆದುಕೊಳ್ಳಬಹುದು.

ಇ–ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **15.11.2021 ಸಂಜೆ 5.00 ಗಂಟೆ.**

ಸಹಿ/–ವ್ಯವಸ್ಥಾಪಕ ನಿರ್ದೇಶಕರು, ವಿಟಿಪಿಸಿ, ಬೆಂಗಳೂರು.

ಪ್ರಜಾವಾಣಿ

ಅಪ್ಪು ಅಮರ

ಭಾನುವಾರ • ಅಕ್ಟೋಬರ್ 31, 2021

ಕಂಠೀರವ ಕ್ರೀಡಾಂಗಣದಲ್ಲಿ ಪುನೀತ್ ರಾಜಕುಮಾರ್ ಅವರ ಪಾರ್ಥಿವ ಶರೀರದ ಬಳಿ ಕಣ್ಣೀರಿಟ್ಟ ಸಹೋದರ ಶಿವರಾಜಕುಮಾರ್ (ಚಿತ್ರ:1) ಪುನೀತ್ ಅವರ ಪತ್ನಿ ಅಶ್ವಿನಿ ಅವರನ್ನು ನಟಿ ಉಮಾಶ್ರೀ ಸಮಾಧಾನಪಡಿಸಿದರು (ಚಿತ್ರ:2) ಅಂತಿಮ ದರ್ಶನ ಪಡೆದ ಸಾಲುಮರದ ತಿಮ್ಮಕ್ಕ (ಚಿತ್ರ:3) —ಪ್ರಜಾವಾಣಿ ಚಿತ್ರಗಳು

‘ಐಟಿಐ ಪ್ರಚಾರ ರಾಯಭಾರಿಯಾಗಿದ್ದ ಪುನೀತ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ (ಐಟಿಐ) ಪ್ರಚಾರ ರಾಯಭಾರಿಯಾಗಿದ್ದ ಪುನೀತ್ ರಾಜ್‌ಕುಮಾರ್, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಕೆಲಸ ಮಾಡಿದ್ದರು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸರ್ಕಾರಿ ಐಟಿಐ ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶ ಪಡೆಯುತ್ತಿರಲಿಲ್ಲ. ಈ ವಿಷಯವನ್ನು ಪುನೀತ್ ಅವರಲ್ಲಿ ಹಂಚಿಕೊಂಡಾಗ ಅವರು ನಮ್ಮ ಬೆಂಬಲಕ್ಕೆ ಬಂದಿದ್ದರು’ ಎಂದರು.

ಗ್ರಾಮೀಣ ಪ್ರದೇಶದ ಮಕ್ಕಳಿಗೆ ಉತ್ತಮ ಶಿಕ್ಷಣ ಸಿಗಬೇಕು ಎಂದು ಸದಾ ಹೇಳುತ್ತಿದ್ದರು. ಈ ಕಾರಣದಿಂದಾಗಿಯೇ ಉದ್ಯೋಗದ ಅವಕಾಶ ಹೆಚ್ಚಿರುವ ಐಟಿಐ ಕೋರ್ಸ್‌ಗಳನ್ನು ಸೇರುವಂತೆ ವಿದ್ಯಾರ್ಥಿಗಳಿಗೆ ಸಂದೇಶ ನೀಡುತ್ತಿದ್ದರು. ಸಮಾಜಮುಖಿ ಪ್ರಜ್ಞೆ ಅವರ ಅಂತರಂಗದಲ್ಲಿ ಮನೆಮಾಡಿತ್ತು. ದೀಪಾವಳಿ ಹಬ್ಬದ ಸಂದರ್ಭದಲ್ಲಿ ಗ್ರಾಮೀಣ ಮಹಿಳಾ ಸ್ವಸಹಾಯ ಗುಂಪುಗಳು ತಯಾರಿಸಿರುವ ಮಣ್ಣಿನ ದೀಪಗಳ ಮಾರಾಟದ ಅಭಿಯಾನಕ್ಕೂ ಸಹಕಾರ ನೀಡಿದ್ದು, ಸಂಬಂಧಿತ ಪ್ರಚಾರ ವಿಡಿಯೊ ಚಿತ್ರೀಕರಣದಲ್ಲಿ ಪಾಲ್ಗೊಂಡಿದ್ದರು ಎಂದು ಹೇಳಿದರು.

ನೈರುತ್ಯ ರೈಲ್ವೆ

Corrigendum-I to E-Tender Notice No. CN/05/2021 Dated: 20.10.2021

ಟೆಂಡರ್ ವೇಳಾಪಟ್ಟಿಯ ಬಿ. ಐಟಂ ವಿವರಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ತಿದ್ದುಪಡಿಯನ್ನು ನೀಡಲಾಗಿದೆ: ಪ್ರತಿ ಐಪಿ ಎಸ್ ಸೆಟ್‌ಗೆ 16 ಚ ಮಿಮೀ ತಾಮ್ರದ ಕೇಬಲ್‌ನ ಉದ್ದ (20 ಮೀ + 30ಮೀ + 50ಮೀ = 100 ಮೀ).

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ನಿರ್ಮಾಣ ಬೆಂಗಳೂರು

PUB/258/AAV/PRB/SWR/2021-22

S.W.Railways SWRRLY SWRRLY

ನಸುಕಿನ 5.30ರಿಂದ 6.30ರ ಒಳಗೆ ಪಾರ್ಥಿವ ಶರೀರದ ಅಂತಿಮ ಯಾತ್ರೆ: ಬೊಮ್ಮಾಯಿ

10 ಗಂಟೆಯೊಳಗೆ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅವರ ಅಂತ್ಯಕ್ರಿಯೆಗೆ ಕಂಠೀರವ ಸ್ಟುಡಿಯೊದ ಆವರಣದಲ್ಲಿರುವ ಡಾ. ರಾಜ್‌ಕುಮಾರ್ ಸ್ಮಾರಕ ಬಳಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಬೆಳಿಗ್ಗೆ 10 ಗಂಟೆಯ ಒಳಗೆ ಸಕಲ ಸರ್ಕಾರಿ ಗೌರವದೊಂದಿಗೆ ಅಂತಿಮ ವಿಧಿವಿಧಾನಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಅಂತಿಮ ವಿಧಿವಿಧಾನಗಳು ನಡೆಯುವ ಸ್ಥಳಕ್ಕೆ ಶನಿವಾರ ರಾತ್ರಿ ಭೇಟಿ ನೀಡಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ‘ಪುನೀತ್ ಅವರ ಕುಟುಂಬ ಸದಸ್ಯರ ಜೊತೆ ಮಾತನಾಡಿದ್ದೇನೆ. ಅವರ ಇಚ್ಛೆಯಂತೆ ನಸುಕಿನ 5.30ರಿಂದ 6.30ರ ಒಳಗೆ ಪಾರ್ಥಿವ ಶರೀರದ ಅಂತಿಮ ಯಾತ್ರೆ ಆರಂಭವಾಗಲಿದೆ’ ಎಂದರು.

‘ಪಾರ್ಥಿವ ಶರೀರದ ಅಂತಿಮ ಯಾತ್ರೆಯ ವಾಹನವನ್ನು ಸಿದ್ಧಪಡಿಸಲಾಗಿದೆ. ಅಂತ್ಯಕ್ರಿಯೆ ನಡೆಯುವ ಜಾಗ ಇಕ್ಕಟ್ಟಾಗಿದ್ದು, ಅಲ್ಲಿ ಕುಟುಂಬಸ್ಥರಿಗೆ ಮತ್ತು ಕೆಲವೇ ಗಣ್ಯರಿಗೆ ಮಾತ್ರ ಅವಕಾಶ ನೀಡಲಾಗುವುದು. ಸಾರ್ವಜನಿಕರಿಗೆ ಅವಕಾಶ ಇರುವುದಿಲ್ಲ. ಸ್ಟುಡಿಯೊದ ಹೊರಭಾಗದಲ್ಲಿ 12 ಕಡೆಗಳಲ್ಲಿ ಬೃಹತ್ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುವುದು. ಅದರಲ್ಲಿ ಅಂತಿಮ ವಿಧಿವಿಧಾನಗಳನ್ನು ವೀಕ್ಷಿಸುವ ಮೂಲಕ ಅಭಿಮಾನಿಗಳು ಸಹಕರಿಸಬೇಕು’ ಎಂದೂ ಮನವಿ ಮಾಡಿದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದ ಯುವಕರು —ಪ್ರಜಾವಾಣಿ ಚಿತ್ರ

‘ಪುನೀತ್ ನಿಧನರಾಗಿ ಭಾನುವಾರಕ್ಕೆ ಮೂರನೇ ದಿನ. ಹೀಗಾಗಿ, ಅಂತ್ಯಕ್ರಿಯೆಯನ್ನು ಶಾಸ್ತ್ರೋಕ್ತವಾಗಿ ಆದಷ್ಟು ಬೇಗ ಮುಗಿಸಬೇಕಿದೆ. ಬಳಿಕ ಕುಟುಂಬಸ್ಥರು ಮನೆಗೆ ಹೋಗಿ, ಮರಳಿ ಆ ಸ್ಥಳಕ್ಕೆ ಬಂದು ಹಾಲು ತುಪ್ಪ ಬಿಡಬೇಕಿದೆ. ಹೀಗಾಗಿ, ಅಂತ್ಯಕ್ರಿಯೆ ನಡೆಯಲಿರುವ ಸ್ಥಳದಲ್ಲಿ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ’ ಎಂದರು.

ಕಂಠೀರವ ಸ್ಟುಡಿಯೊದತ್ತ ಅಭಿಮಾನಿಗಳು: ಶನಿವಾರ ಬೆಳಿಗ್ಗೆ ಮಾತನಾಡಿದ್ದ ಮುಖ್ಯಮಂತ್ರಿ, ಸಂಜೆಯೇ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಲಾಗಿದೆ ಎಂದಿದ್ದರು. ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಕೂಡಾ, ‘ಸಂಜೆಯೇ ಪುನೀತ್ ಅಂತ್ಯಕ್ರಿಯೆ ನಡೆಯಲಿದೆ. ಮಧ್ಯಾಹ್ನ 3 ಗಂಟೆಗೆ ಪಾರ್ಥಿವ ಶರೀರದ ಮೆರವಣಿಗೆ ಆರಂಭವಾಗಲಿದ್ದು, 5ರಿಂದ 5.30ರ ವೇಳೆಗೆ ಕಂಠೀರವ ಸ್ಟುಡಿಯೊ ತಲುಪಲಿದೆ’ ಎಂದಿದ್ದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಈ ಸುದ್ದಿ ಹರಡುತ್ತಿದ್ದಂತೆ ಪುನೀತ್ ಅಭಿಮಾನಿಗಳು ಕಂಠೀರವ ಸ್ಟುಡಿಯೊದತ್ತ ಸಾಗರೋಪಾದಿಯಲ್ಲಿ ಮುಖ ಮಾಡಿದ್ದರು. ಆದರೆ, ಅದಾಗಲೇ ಇಡೀ ಪರಿಸರವನ್ನು ಆವರಿಸಿಕೊಂಡಿದ್ದ ಪೊಲೀಸ್ ಪಡೆ, ಸ್ಟುಡಿಯೊ ಒಳಗಡೆ ಸಾರ್ವಜನಿಕರು ಪ್ರವೇಶಿಸದಂತೆ ಬ್ಯಾರಿಕೇಡ್‌ಗಳನ್ನು ಅಳವಡಿಸಿತ್ತು. ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಗೊರಗುಂಟೆಪಾಳ್ಯ ಜಂಕ್ಷನ್‌ನಿಂದ ಕಂಠೀರವ ಸ್ಟುಡಿಯೊ ಕಡೆಗಿನ ರಸ್ತೆಯುದ್ದಕ್ಕೂ ಪುನೀತ್ ಅಭಿಮಾನಿಗಳು ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಅನೇಕರು ಸ್ಟುಡಿಯೊದ ಆವರಣ ಗೋಡೆ, ಅಕ್ಕಪಕ್ಕದ ಕಟ್ಟಡಗಳು, ಮರಗಳನ್ನು ಹತ್ತಿ ನಿಂತಿದ್ದರು. ಅಂಥವರನ್ನು ನಿಭಾಯಿಸಲು ಪೊಲೀಸರು ಹರಸಾಹಸಪಟ್ಟರು.

ಶನಿವಾರದ ಸಂಜೆಯ ಬದಲು ಭಾನುವಾರ ಬೆಳಿಗ್ಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಮುಖ್ಯಮಂತ್ರಿ ಪ್ರಕಟಿಸುತ್ತಿದ್ದಂತೆ ಸ್ಟುಡಿಯೊ ಸುತ್ತ ನೆರೆದಿತ್ತ ಜನ ನಿಧಾನವಾಗಿ ನಿರ್ಗಮಿಸಿದರು. ಆದರೆ, ಹೊರ ಜಿಲ್ಲೆಗಳಿಂದ ಬಂದ ಸಾವಿರಾರು ಅಭಿಮಾನಿಗಳು ಸ್ಟುಡಿಯೊ ಸುತ್ತಮುತ್ತವೇ ನೆರೆದಿದ್ದಾರೆ.

ಅಂತ್ಯಕ್ರಿಯೆ ನಡೆಯಲಿರುವ ಸ್ಥಳವನ್ನು ಗೃಹ ಸಚಿವ ಆರಗ ಜ್ಞಾನೇಂದ್ರ ಮತ್ತು ಸ್ಥಳೀಯ ಶಾಸಕರೂ ಆಗಿರುವ ಅಬಕಾರಿ ಸಚಿವ ಕೆ. ಗೋಪಾಲಯ್ಯ ಶನಿವಾರ ವೀಕ್ಷಿಸಿದರು.

ಯಲಹಂಕ ಪತ್ರಿಕಾ ವಿತರಕರ ಸಂಘದ ವತಿಯಿಂದ ನಟ ಪುನೀತ್ ರಾಜಕುಮಾರ್ ಅವರಿಗೆ ಗೌರವ ಸೂಚಿಸಲಾಯಿತು. ಸಂಘದ ಅಧ್ಯಕ್ಷ ಎಂ.ಸತೀಶ್ ಹಾಗೂ ಪತ್ರಿಕಾ ವಿತರಕರು ಇದ್ದರು

ರಾಜ್ಯ ವೃತ್ತಪತ್ರಿಕೆ ವಿತರಕರ ಕ್ಷೇಮಾಭಿವೃದ್ಧಿ ಸಮಿತಿ ವತಿಯಿಂದ ಮೈಸೂರು ಬ್ಯಾಂಕ್ ಕಾಲೊನಿಯಲ್ಲಿ ನಟ ಪುನೀತ್ ರಾಜಕುಮಾರ್ ಅವರಿಗೆ ಗೌರವ ಸಲ್ಲಿಸಲಾಯಿತು. ಸಮಿತಿಯ ರಾಜ್ಯ ಘಟಕದ ಅಧ್ಯಕ್ಷ ಎಲ್‌.ಜೀವನ್, ಉಪಾಧ್ಯಕ್ಷ ಪ್ರಸನ್ನ ಕುಮಾರ್, ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಗೌರವಾಧ್ಯಕ್ಷ ರಾಮಕೃಷ್ಣ, ಸದಸ್ಯರಾದ ಎಂ.ಜೆ.ರಾಜಣ್ಣ ಹಾಗೂ ಪತ್ರಿಕಾ ವಿತರಕರು ಇದ್ದರು

ಕೈದಿಗಳಿಗಾಗಿ ‘ನವಚೇತನ ಸಾಕ್ಷರತೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 50 ಕಾರಾಗೃಹಗಳಲ್ಲಿ ಇರುವ ಅನಕ್ಷರಸ್ಥ ಹಾಗೂ ಅರೆ ಅಕ್ಷರಸ್ಥ ಕೈದಿಗಳಿಗೆ ಅಕ್ಷರ ಕಲಿಸಲು ‘ನವಚೇತನ’ ಯೋಜನೆಯಡಿ ‘ಸಾಕ್ಷರತೆ’ ಕಾರ್ಯಕ್ರಮವು ಕರ್ನಾಟಕ ರಾಜ್ಯೋತ್ಸವದ ದಿನವಾದ ನ. 1ಕ್ಕೆ ಚಾಲನೆ ದೊರೆಯಲಿದೆ.

ಕೈದಿಗಳ ದೈಹಿಕ, ಮಾನಸಿಕ, ಶಿಕ್ಷಣ ಹಾಗೂ ಕೌಶಲ ಮಟ್ಟವನ್ನು ಸುಧಾರಿಸಿ ಸ್ವಾಭಿಮಾನಿಗಳಾಗಿ ಮಾಡುವ ಗುರಿ ಈ ಕಾರ್ಯಕ್ರಮದ್ದಾಗಿದೆ. ರಾಜ್ಯದ 50 ಕಾರಾಗೃಹಗಳ ಅನಕ್ಷರಸ್ಥ, ಅರೆ ಅಕ್ಷರಸ್ಥ 7,000 ಕೈದಿಗಳಿಗೆ ಇದರ ನೆರವು ಸಿಗಲಿದೆ.

‘ಅನಕ್ಷರಸ್ಥ ಕೈದಿಗಳನ್ನು ಅಕ್ಷರಸ್ಥರನ್ನಾಗಿಸಿದರೆ, ಬಿಡುಗಡೆಯಾದ ಬಳಿಕ ಅವರು ಸುಂದರ ಬದುಕು ಕಟ್ಟಿಕೊಳ್ಳುತ್ತಾರೆ’ ಎಂದು ಕಾರಾಗೃಹ ಇಲಾಖೆ ಅಧಿಕಾರಿಯೊಬ್ಬರು ಹೇಳಿದರು.

‘ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ನವಚೇತನ ಯೋಜನೆಯಡಿ ಆ. 26ರಂದು ‘ಮಾನಸಿಕ ಹಾಗೂ ದೈಹಿಕ ಯೋಗಕ್ಷೇಮ’ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿತ್ತು. ಗೃಹ ಸಚಿವ ಆರಗ ಜ್ಞಾನೇಂದ್ರ ಉದ್ಘಾಟಿಸಿದ್ದರು. 540 ಕೈದಿಗಳು ಯೋಗ ಕಲಿತಿದ್ದರು. ಇದರ ಮುಂದುವರಿದ ಭಾಗವಾಗಿ, ಸಾಕ್ಷರತಾ ಕಾರ್ಯಕ್ರಮ ಆರಂಭಿಸಲಾಗುತ್ತಿದೆ’ ಎಂದೂ ತಿಳಿಸಿದರು.

‘ಜೈಲಿನ ಕೆಲ ಕೈದಿಗಳು, ಸ್ನಾತಕ ಹಾಗೂ ಸ್ನಾತಕೋತ್ತರ ಪದವೀಧರರು. ಅವರನ್ನೇ ಸಂಪನ್ಮೂಲ ವ್ಯಕ್ತಿಗಳನ್ನಾಗಿ ಮಾಡಿಕೊಂಡು, ಅನಕ್ಷರಸ್ಥ ಕೈದಿಗಳಿಗೆ ಪಾಠ ಮಾಡಿಸಲಾಗುವುದು’ ಎಂದೂ ಹೇಳಿದರು.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)

ಹಟ್ಟಿ - 584 115, ಲಿಂಗಸುಗೂರು-ತಾ., ರಾಯಚೂರು ಜಿಲ್ಲೆ, ಕರ್ನಾಟಕ ದೂ.: (08537) 275740/276339/275463, ಇ-ಮೇಲ್: material276339@gmail.com ವೆಬ್‌ಸೈಟ್: www.huttigold.co.in

ಟೆಂಡರ್ ಪ್ರಕಟಣೆ ಸಂಖ್ಯೆ : 43/21-22 ದಿನಾಂಕ: 30.10.2021

(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು) ಇವರಿಂದ ಈ ಕೆಳಗಿನ ಸಾಮಗ್ರಿಗಳ ಪೂರೈಕೆಗಾಗಿ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ತಯಾರಕರು ಮತ್ತು ಪರಿಗಣಿಸಲ್ಪಟ್ಟ ವಿತರಕರಿಂದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಸಾಮಗ್ರಿ ವಿವರ	ಪ್ರಮಾಣ	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)
1	10 mm ದಪ್ಪವುಳ್ಳ ಟ್ರಿಸ್ಕರಾಲ್ ಪ್ಲೇಟ್ ಪೂರೈಕೆ. **HGML/2021-22/IND3194**	30,000 ಕೆ.ಜಿ.	32.40
2	ವಿವಿಧ ಅಳತೆಗಳ MS ಮತ್ತು CS ಪೈಪುಗಳು ಜೊತೆಗೆ ಫಿಟಿಂಗ್ಸ್. **HGML/2021-22/IND3187**	ಪಟ್ಟಿಯ ಪ್ರಕಾರ	53.43
3	ಬ್ಲ್ಯಾಕ್ ಆ್ಯಂಕಲ್ ಬೂಟುಗಳ ಪೂರೈಕೆ. **HGML/2021-22/IND3199**	ಪಟ್ಟಿಯ ಪ್ರಕಾರ	14.54
4	40 ಮೀಟರ್ ಎತ್ತರವುಳ್ಳ ಹೈಮಾಸ್ಟ್ ಟವರನ್ನು ಪೂರೈಸಿ, ಸ್ಥಾಪಿಸಿ ಮತ್ತು ಕಮಿಷನಿಂಗ್ ಮಾಡುವುದು. **HGML/2021-22/PM/WORK_IND340**	–	35.39

1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **15.11.2021 ಸಂಜೆ 4.00 ಗಂಟೆಗೆ.** 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **18.11.2021 ಬೆಳಿಗ್ಗೆ 10.00 ಗಂಟೆಗೆ.**

ಟೆಂಡರ್ ನಮೂನೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://www. eproc. karnataka. gov.in** ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರೋಸೆಸ್ಸಿಂಗ್ ಫೀ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಟೆಂಡರ್ ನಿಯಮದ ಅನುಸಾರ. ಹೆಚ್ಚಿನ ಮಾಹಿತಿಗಾಗಿ ಖರೀದಿ ಕಾರ್ಯಾಲಯದ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪ್ರಭಾರಿ ಉಪ ಪ್ರಧಾನ ವ್ಯವಸ್ಥಾಪಕರು (ಸರಕು)

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿ.

ನೋಂದಾಯಿತ ಕಛೇರಿ: ಹೆಚ್. ನಂ. 123, ಅನಗಪ್ಪ ನಾಯಗನ್ ಸ್ಟ್ರೀಟ್, ಚೆನ್ನೈ-600001.
ಆಡಳಿತ ಕಚೇರಿ, #259/31, 1ನೇ ಮಹಡಿ, ಅಕ್ಷೋದಯ ಕಟ್ಟಡ, ಹೊಂಬೆಗೌಡ ಬಾಯ್ಸ್ ಹೈಸ್ಕೂಲ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು-560027,ದೂ: 080-42451699 / 90717 76501

SHRIRAM City MONEY WHEN YOU NEED IT MOST

ಚಿನ್ನಾಭರಣ ಹರಾಜು ಹಾಗೂ ಆಹ್ವಾನ ಸೂಚನಾ ಪತ್ರ

ಈ ಕೆಳಕಂಡ ಗ್ರಾಹಕರು ತಾವು ಬಾಕಿ ಉಳಿಸಿಕೊಂಡಿರುವ ಚಿನ್ನಾಭರಣಗಳ ಸಾಲದ ಸೌಲಭ್ಯ (ಸೌಲಭ್ಯ) ವನ್ನು ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. (ಎಸ್‌ಸಿಯುಎಫ್) ಯವರು ತೀರಿಸಲು ಸೂಚನಾ ಪತ್ರಗಳನ್ನು ಕಳುಹಿಸಿದ್ದರೂ ಕೂಡ ಬಾಕಿ ತೀರಿಸಲು ವಿಫಲರಾಗಿರುವುದರಿಂದ ಗ್ರಾಹಕರು ಅಡಮಾನ ಮಾಡಿದಂತಹ ಚಿನ್ನಾಭರಣಗಳು ಹರಾಜು ಪ್ರಕ್ರಿಯೆಯಲ್ಲಿ ನಾವು **13-11-2021** (ಹರಾಜು ದಿನಾಂಕ) ದಿನಾಂಕದಂದು ಮಾಡುತ್ತಿದ್ದೇವೆ. ಸದರಿ ಹರಾಜಿನ ಮೂಲಕ ಬಂದ ಹಣವನ್ನು ಒಂದು ವೇಳೆ ನಮಗೆ ಬರಬೇಕಾದ ಎಲ್ಲಾ ಬಾಕಿಗಳನ್ನು ಸರಿದೂಗಿಸಿ ಹೆಚ್ಚಿನ ಹಣ ಉಳಿದಲ್ಲಿ ಸಂಬಂಧಪಟ್ಟ ಗ್ರಾಹಕರಿಗೆ ಹಿಂದಿರುಗಿಸಲಾಗುವುದು ಮತ್ತು ಹರಾಜು/ಮಾರಟವಾದ ನಂತರವೂ ಬಂದ ಹಣ ತಮ್ಮ ಸಾಲದ ಒಟ್ಟು ಮೊತ್ತಕ್ಕಿಂತ ಕಡಿಮೆಯಾದಲ್ಲಿ ಬರಬೇಕಾದ ಬಾಕಿ ಹಣಕ್ಕಾಗಿ ಸೂಕ್ತ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು. **ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ.** ರವರು ಈ ಕೆಳಕಂಡ ಗ್ರಾಹಕ ಖಾತೆಗಳ ಪಟ್ಟಿಯಲ್ಲಿ ಯಾವುದೇ ಒಂದು ಅಥವಾ ಕೆಲವು ಖಾತೆಗಳನ್ನು ಮುನ್ಸೂಚನೆಯಿಲ್ಲದೆ ತೆಗೆದು ಹಾಕುವ ಅಧಿಕಾರ ಹೊಂದಿರುತ್ತಾರೆ. ಮುಂದುವರಿದು ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ. ರವರು ಹರಾಜು ಪ್ರಕ್ರಿಯೆ ದಿನಾಂಕವನ್ನು ನಿರೀಕ್ಷಿಸಲು ಸಾದ್ಯಾವಾಗದ ಸಂದರ್ಭದಲ್ಲಿ ಬದಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ.

ಗಾಂಧಿ ಬಜಾರ್

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಮಹೇಶ್	QGANBPJ2012230001	ಮಹೇಶ್	QGANBPJ2012220001	ಶಶಿಧರ್	QGANBPJ2011300001
ಮಹೇಶ್	QGANBPJ2012230002	ಮಹೇಶ್	QGANBPJ2012220002		

ಜೆ.ಪಿ ನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಸೈಯದ್ ರೆಹಮಾನ್ ಎಂ ಎಸ್	QJPNGPJ2011050005	ಮಂಜುನಾಥ ಎಚ್	QJPNGPJ2012280003	ಹರೀಶ್ ಆರ್	QJPNGPJ2012070002
ದಿನೇಶ್ ದೇವಾಸಿ	QJPNGPJ2102020002	ಶಬಾನಾ	QJPNGPJ2012300001	ಶಾಹೀನ್	QJPNGPJ2012070003
ಹ್ಯಾಪಿ ಟಕ್	QJPNGPJ2102120001	ಶಬಾನಾ	QJPNGPJ2012300002	ರಾಜು	QJPNGPJ2012140001
ಜಗದೀಶ್ ಸೋನಿ	QJPNGPJ2102120002	ಮಂಜುನಾಥ ಎಚ್	QJPNGPJ2012300004	ರಾಜು	QJPNGPJ2012140002
ಹ್ಯಾಪಿ ಟಕ್	QJPNGPJ2101280001	ಹ್ಯಾಪಿ ಟಕ್	QJPNGPJ2101080001	ರಾಬಿಯಾ ಬಸ್ರಿ	QJPNGPJ2012140003
ಹ್ಯಾಪಿ ಟಕ್	QJPNGPJ2102010001	ಶಾಹೀನ್	QJPNGPJ2102230003	ರಾಬಿಯಾ ಬಸ್ರಿ	QJPNGPJ2012140004
ಹ್ಯಾಪಿ ಟಕ್	QJPNGPJ2102010005	ಜಿ ಆರ್ ಸಿದ್ದೇಶ್	QJPNGPJ2009180002	ರಾಬಿಯಾ ಬಸ್ರಿ	QJPNGPJ2012140006
ಹ್ಯಾಪಿ ಟಕ್	QJPNGPJ2102020001	ಚಿಕ್ಕರಾಜು ಟಿ ಸಿ	QJPNGPJ2011100001	ರಾಬಿಯಾ ಬಸ್ರಿ	QJPNGPJ2012170003
ಜಗದೀಶ್ ಸೋನಿ	QJPNGPJ2102160003	ಹ್ಯಾಪಿ ಟಕ್	QJPNGPJ2011280001	ಚಿಕ್ಕರಾಜು ಟಿ ಸಿ	QJPNGPJ2101270002
ಹ್ಯಾಪಿ ಟಕ್	QJPNGPJ2011020001				

ಜಯನಗರ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಸ್ವರೂಪ ಸುಧಾಕರ	QJAYBPJ2011020002	ನವೀನ್ ಕುಮಾರ್	QJAYBPJ2101090001	ನವೀನ್ ಕುಮಾರ್	QJAYBPJ2101090003
ಬಸವರಾಜ್	QJAYBPJ2102100001	ನವೀನ್ ಕುಮಾರ್	QJAYBPJ2101090002	ಸ್ವರೂಪ ಸುಧಾಕರ	QJAYBPJ2011020001
				ಬಸವರಾಜ್	QJAYBPJ2008030001

ರಾಜಾಜಿ ನಗರ

ಹೆಸರು	ಲೋನ್ ನಂಬರ್
ಸುನೀಲ್ ಕುಮಾರ್	QBRNBPJ2012240001

ಟಿ.ದಾಸರಹಳ್ಳಿ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಲಕ್ಷ್ಮೀಕಾಂತ್ ಆರ್.ಕೆ	QDSRLPJ2012090001	ನಟರಾಜ್ ಗೌಡ ಜಿ ಜೆ	QDSRLPJ2101280001	ಉಮಾದೇವಿ	QDSRLPJ2011020006
ಗಣೇಶ್	QDSRLPJ2101150002	ಕಣ್ಣನ್	QDSRLPJ2011090002		

ವಿಲ್ಸನ್ ಗಾರ್ಡನ್ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಪುಷ್ಪ ರಾಜ್	QBANWPJ2012160003	ಗಜೇಂದ್ರ	QBANWPJ2012050002	ಪದ್ಮನಾಭ ರಾವ್	QBANWPJ2102170003
ಸೀಮಾ ಸುಲ್ತಾನಾ	QBANWPJ2012300001	ಪುಷ್ಪ ರಾಜ್	QBANWPJ2012090001	ಪದ್ಮನಾಭ ರಾವ್	QBANWPJ2102170004
ಸೀಮಾ ಸುಲ್ತಾನಾ	QBANWPJ2012300002	ಚನ್ನಪ್ಪಗರಿ ಸಂತೋಷ	QBANWPJ2012150004	ಪದ್ಮನಾಭ ರಾವ್	QBANWPJ2102170005
ಪುಷ್ಪ ರಾಜ್	QBANWPJ2101040001	ಲಕ್ಷ್ಮಿ ದೇವಮ್ಮ	QBANWPJ2101270001	ಸುರೇಶ್ ಎನ್	QBANWPJ2011300001
ಸೈಯದ್ ಅನ್ವರ್	QBANWPJ2101050001	ಲಕ್ಷ್ಮಿ ದೇವಮ್ಮ	QBANWPJ2101270003	ಸುರೇಶ್ ಎನ್	QBANWPJ2011300002
ಅರ್ಜುನ್ ರಾವ್ ಜೆ	QBANWPJ2012020001	ಪದ್ಮನಾಭ ರಾವ್	QBANWPJ2102170002	ಸುರೇಶ್ ಎನ್	QBANWPJ2011190002

ಯಲಹಂಕ ಶಾಖೆ

ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್	ಹೆಸರು	ಲೋನ್ ನಂಬರ್
ಲೀಲಾ ಆರ್	QYELNPJ2010070003	ಲಕ್ಷ್ಮಿ ದೇವಮ್ಮ	QYELNPJ2101220001	ಲೀಲಾ ಆರ್	QYELNPJ2010070001
ಲೀಲಾ ಆರ್	QYELNPJ2010070004	ಲಕ್ಷ್ಮಿ ದೇವಮ್ಮ	QYELNPJ2101250001	ಲೀಲಾ ಆರ್	QYELNPJ2010070002
ವಿನಯ್	QYELNPJ2011280001	ಜಗದೀಶ್	QYELNPJ2101290001	ಲೀಲಾ ಆರ್	QYELNPJ2008310001
ಮುನಿವೆಂಕಟಪ	QYELNPJ2101090001	ಲಕ್ಷ್ಮಿ ದೇವಮ್ಮ	QYELNPJ2102130001	ಲೀಲಾ ಆರ್	QYELNPJ2008310002

ಹರಾಜು ಈ ಕೆಳಕಂಡ ವಿಳಾಸದಲ್ಲಿ ನೆಡೆಸಲಾಗುವುದು: : **ಶ್ರೀ ರಾಮ ಸಿಟಿ ಯುನಿಯನ್ ಫೈನಾನ್ಸ್ ಲಿ., #259/31, 1ನೇ ಮಹಡಿ, ಅಕ್ಷೋದಯ ಕಟ್ಟಡ, ಹೊಂಬೆಗೌಡ ಬಾಯ್ಸ್ ಹೈಸ್ಕೂಲ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು-560027, ದೂ: 9071776501**

ಹರಾಜು ಸಮಯ: **ಬೆಳಿಗ್ಗೆ : 10.30 ಘಂಟೆಗೆ**

ಹೆಚ್ಚಿನ ಮಾಹಿತಿಗಳಿಗಾಗಲಿ, ಷರತ್ತು ಹಾಗೂ ನಿಭಂದನೆಗಳಿಗಾಗಿಯಾಗಲಿ, ಹರಾಜಿನಲ್ಲಿ ಬಾಗವಹಿಸುವುದು ಮತ್ತು ಹೆಸರನ್ನು ನೊಂದಾಯಿಸಿಕೊಳ್ಳಲು ಆಸಕ್ತಿ ಉಳ್ಳವರು **ಮೊಬೈಲ್: 8431166309/9071776580 / 9901066688** ಕರೆ ಮಾಡಿ ಸಂಪರ್ಕಿಸಬಹುದು. ಒಂದು ವೇಳೆ ಹರಾಜು ನಿಗಧಿ ಪಡಿಸುವ ದಿನದಂದು ಸಮಯದ ಅಭಾವದಿಂದ ಮುಗಿಸಿಲಾಗದ ಪಕ್ಷದಲ್ಲಿ ಕಛೇರಿಯ ಕೆಲಸದ ಮುಂದಿನ ದಿನಗಳಲ್ಲಿ ನಿಗದಿತ ಷರತ್ತು ಹಾಗೂ ನಿಭಂದನೆಗಳಿಗನುಗುಣವಾಗಿ ನೆಡೆಸಲಾಗುವುದು. ಒಂದು ವೇಳೆ ಯಾವುದೇ ಗ್ರಾಹಕ ಮೃತ್ಯು ಹೊಂದಿದ್ದಲ್ಲಿ ಅತನ/ಅವಳ ವಾರಸುದಾರರಿಗೆ ಹರಾಜಿನ ಎಲ್ಲಾ ಷರತ್ತು ಹಾಗೂ ನಿಭಂದನೆಗಳು ಅನ್ವಹಿಸುವುದು.

ದಿನಾಂಕ: 31.10.2021
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ಶ್ರೀರಾಮ್ ಸಿಟಿ ಯೂನಿಯನ್ ಫೈನಾನ್ಸ್ ಲಿ. ಪರವಾಗಿ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

NATIONAL URBAN HEALTH MISSION

ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ) ರವರ ಕಛೇರಿ, ಆನೆಕ್ಸ್ ಕಟ್ಟಡ-2, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ, ಎನ್.ಆರ್.ಚೌಕ , ಬೆಂಗಳೂರು-02 .

ಸಂಖ್ಯೆ : ಸಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿ.ಆರ್/23/2021-22 ದಿನಾಂಕ : 30.10.2021

ಪತ್ರಿಕಾ ಪ್ರಕಟಣೆ

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ ಅಡಿಯಲ್ಲಿ, ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ) ದ ವ್ಯಾಪ್ತಿಯಲ್ಲಿ ಖಾಲಿ ಇರುವ ನಗರ ಕಾರ್ಯಕ್ರಮ ವ್ಯವಸ್ಥಾಪಕರು, ನಗರ ಲೆಕ್ಕಪತ್ರ ವ್ಯವಸ್ಥಾಪಕರು, ಮಾಹಿತಿ ತಂತ್ರಜ್ಞರು / ಡೆಟಾ ವ್ಯವಸ್ಥಾಪಕರು ಮತ್ತು ಎಪಿಡೆಮಿಯೋಲಜಿಸ್ಟ್ ಹುದ್ದೆಗಳನ್ನು ಮೆರಿಟ್ ಆಧಾರದ ಮೇಲೆ 01 ವರ್ಷದ ಅವಧಿಗೆ ಸಂಪೂರ್ಣ ಗುತ್ತಿಗೆ ಆಧಾರದ ಮೇಲೆ ವಾಕ್ ಇನ್ ಪ್ರಕ್ರಿಯೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

Sl. No.	Name of the Posts	Educational Qualification	Experience	Consolidated Pay	No. of Posts	Date, Place & Time of Interview
1.	City Programme Manager	Full time Master of Business Administration (MBA) in HR/Finance (Regular On-Campus) with Computer Proficiency	2 Years of Experience of Public-Health in Govt/NGO	40,000/-	01	15-11-2021, at Naukarara Bhavan, BBMP Head Office, Bangalore. From 10:00 a.m. to 2:00 p.m.
2.	City Account Manager	M.Com with Tally	2 Years of Experience of Public-Health in Govt/NGO	30,000/-	01	16-11-2021, at Naukarara Bhavan, BBMP Head Office, Bangalore. From 10:00 a.m. to 2:00 p.m.
3.	IT Consultant / Data Manager	BE (CS & EC) BCA with Computer proficiency & Compulsory Data Science Course Certificate	3 Years of Experience of Public-Health in Govt/NGO	50,000/-	01	15-11-2021, at Naukarara Bhavan, BBMP Head Office, Bangalore. From 10:00 a.m. to 2:00 p.m.
4.	Epidemiologist	Medical Graduate with Post Graduate Degree / Diploma in Preventive and Social Medicine / Public Health or Epidemiology (such as MD, MPH, DPH, MAE) OR M.Sc. in Life Science with 06 months of experience (Desirable) OR M.Sc. in Epidemiology with 06 months of experience (Desirable)		25,000/-	01	16-11-2021, at Naukarara Bhavan, BBMP Head Office, Bangalore. From 10:00 a.m. to 2:00 p.m.

ಅರ್ಹತಾ ಮಾನದಂಡಗಳು: 1) ವಯೋಮಿತಿ : ಅರ್ಜಿ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಕನಿಷ್ಠ 18 ವರ್ಷಗಳು ತುಂಬಿರಬೇಕು ಹಾಗೂ ಈ ಕೆಳಗೆ ನಮೂದಿಸಿರುವ ವಯೋಮಿತಿಯನ್ನು ಮೀರಿರಬಾರದು. (ಎ) ಸಾಮಾನ್ಯ ವರ್ಗ : 35 ವರ್ಷ. (ಬಿ) 2ಎ, 2ಬಿ, 3ಎ, 3ಬಿ : 38 ವರ್ಷ. (ಸಿ) ಪ.ಜಾತಿ, ಪ.ಪಂಗಡ, ವರ್ಗ -1 : 40 ವರ್ಷ. 2) ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನದ ಅವಶ್ಯಕತೆ ಕಡ್ಡಾಯವಾಗಿರುತ್ತದೆ.

ಆಸಕ್ತರು ಸಂಬಂಧಿಸಿದ ಮೂಲ ದಾಖಲೆಗಳೊಂದಿಗೆ ಅಭ್ಯರ್ಥಿಗಳು ಪಟ್ಟಿಯಲ್ಲಿ ಸೂಚಿಸಿರುವ ಸ್ಥಳ ಮತ್ತು ದಿನಾಂಕದಂದು ವಾಕ್ ಇನ್ ಸಂದರ್ಶನಕ್ಕೆ ಹಾಜರಾಗಲು ಸೂಚಿಸಲಾಗಿದೆ. ಮೇಲ್ಕಂಡ ಹುದ್ದೆಯ ಸಂಖ್ಯೆಗಳನ್ನು ಹೆಚ್ಚಿಸುವ ಕಡಿತಗೊಳಿಸುವ ಅಧಿಕಾರವನ್ನು ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ (ರಿ) ತನ್ನಲ್ಲಿ ಹೊಂದಿದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂಖ್ಯೆ: 080-22110445, **E-mail id: cpmobbmp@gmail.com** ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೆಬ್‌ಸೈಟ್ **www.bbmp.gov.in** ನ್ನು ಸಂಪರ್ಕಿಸಲು ಸೂಚಿಸಲಾಗಿದೆ.

ಸಹಿ/- ಮುಖ್ಯ ಆರೋಗ್ಯಾಧಿಕಾರಿಗಳು (ಸಾ.ಆ) ಮತ್ತು ಸದಸ್ಯ ಕಾರ್ಯದರ್ಶಿಗಳು ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ (ರಿ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದಡಿಯಲ್ಲಿನ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತ ವಿಭಾಗ,
ಭಾರತ ಸರ್ಕಾರ.

Azadi Ka Amrit Mahotsav

ಪ್ರವೇಶ ಅಧಿಸೂಚನೆ

ಈ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರಬಯಸುವುದೇನೆಂದರೆ, ಜವಾಹರ ನವೋದಯ ವಿದ್ಯಾಲಯಗಳಲ್ಲಿ 2022–23ನೇ ಅವಧಿಗೆ, ಲ್ಯಾಟರಲ್ ಎಂಟ್ರಿಗೆ ಆಯ್ಕೆ ಪರೀಕ್ಷೆಯ ಮೂಲಕ 9ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕವನ್ನು ಆಡಳಿತಾತ್ಮಕ ಕಾರಣಗಳಿಂದಾಗಿ 2021 ನವಂಬರ್ 15 ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ವೆಬ್‌ಸೈಟ್ **www.navodaya.gov.in** ಅಥವಾ **nvsadmissionclassnine.in** ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಹುದು.

ಪ್ರಕಟಣೆ ನವೋದಯ ವಿದ್ಯಾಲಯ ಸಮಿತಿ

ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿಕೆ

ಶತಮಾನೋತ್ಸವ ಸಂದರ್ಭದಲ್ಲಿ ಆರ್‌ಎಸ್‌ಎಸ್ ಇನ್ನಷ್ಟು ವಿಸ್ತಾರ

ಪ್ರಜಾವಾಣಿ ವಾರ್ತೆ

ಧಾರವಾಡ: 'ರಾಷ್ಟ್ರೀಯ ಸ್ವಯಂಸೇವಕ ಸಂಘ ಸ್ಥಾಪನೆಯಾಗಿ 2025ಕ್ಕೆ ನೂರು ವರ್ಷಗಳು ಪೂರ್ಣಗೊಳ್ಳುತ್ತಿದ್ದು, ಆ ಹೊತ್ತಿಗೆ ದೇಶದ ಪ್ರತಿ ಮಂಡಲಕ್ಕೂ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಲು ನಿರ್ಧರಿಸಲಾಗಿದೆ' ಎಂದು ಸಂಘದ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತೀಯ ಕಾರ್ಯಕಾರಿ ಬೈಠಕ್‌ನ ಕೊನೆಯ ದಿನವಾದ ಶನಿವಾರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಕಾಶ್ಮೀರ, ಪೂರ್ವ ರಾಜ್ಯಗಳು ಸೇರಿದಂತೆ ಕೆಲವೆಡೆ ಸಂಘದ ಕಾರ್ಯಚಟುವಟಿಕೆ ವಿಸ್ತರಿಸುವ ನಿಟ್ಟಿನಲ್ಲಿ ಯೋಜನೆ ಹಾಕಿಕೊಳ್ಳಲು ನಿರ್ಧರಿಸಲಾಗಿದೆ. ದೇಶದಲ್ಲಿರುವ 6483 ಮಂಡಲಗಳ ಪೈಕಿ ಈವರೆಗೂ 5683 ಮಂಡಲಗಳನ್ನು ಆರ್‌ಎಸ್‌ಎಸ್ ತಲುಪಿದೆ. ನಾಗಾಲ್ಯಾಂಡ್, ಲಕ್ಷದ್ವೀಪ, ಜಮ್ಮು ಮತ್ತು ಕಾಶ್ಮೀರದಲ್ಲಿ ಶಾಖೆಗಳನ್ನು ತೆರೆಯಲು ಈವರೆಗೂ ಹಲವು ತೊಡಕುಗಳು ಇದ್ದವು. ಈಗ ಹಂತಹಂತವಾಗಿ ಸಂಘವು ಅಲ್ಲಿಯೂ ತನ್ನ ಕಾರ್ಯವನ್ನು ವಿಸ್ತರಿಸಲಿದೆ' ಎಂದರು.

ದತ್ತಾತ್ರೇಯ ಹೊಸಬಾಳೆ

ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಹೊಸಬಾಳೆ, 'ಪರಿಸರ ಸಂರಕ್ಷಣೆ ನಿತ್ಯದ ಕ್ರಿಯೆ ಆಗಬೇಕು. ಆದರೆ ದೀಪಾವಳಿಯಲ್ಲಿ ಪಟಾಕಿ ಸಿಡಿಸಬಾರದು ಎಂಬುದು ಹಬ್ಬದ ಹೊಸ್ತಿಲಲ್ಲಿ ನಿಂತಿರುವಾಗ ಹೇಳುವುದು ಸರಿಯಲ್ಲ. ಇದರಿಂದ ಈಗಾಗಲೇ ವ್ಯಾಪಾರಕ್ಕೆ ಸಜ್ಜುಗೊಂಡವರಿಗೆ ತೀವ್ರ ನಷ್ಟ ಉಂಟಾಗಲಿದೆ. ಇದನ್ನು ಮೊದಲೇ ನಿರ್ಧರಿಸಿ ಅದಕ್ಕೆ ತಕ್ಕಂತೆ ಪರ್ಯಾಯ ಯೋಜನೆ ರೂಪಿಸುವುದು ಅಗತ್ಯ' ಎಂದು ಹೇಳಿದರು.

ಜನಸಂಖ್ಯೆ ನಿಯಂತ್ರಣ ಹಾಗೂ ಮತಾಂತರ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಜನಸಂಖ್ಯೆ ನಿಯಂತ್ರಣಕ್ಕೆ ಪ್ರತಿ ದೇಶವೂ ಒಂದು ಏಕರೂಪ ನೀತಿಯನ್ನು ಹೊಂದುವುದು ಅನಿವಾರ್ಯ. ವ್ಯಕ್ತಿಕವಾಗಿ ಧರ್ಮ ಬದಲಾಯಿಸಲು ಸಂವಿಧಾನದಲ್ಲಿ ಅವಕಾಶ ಇದ್ದೇ ಇದೆ. ಆದರೆ ಬಲವಂತದ ಮತಾಂತರ ನಿಲ್ಲಬೇಕು. ಒಂದೊಮ್ಮೆ ಈಗಾಗಲೇ ಯಾರಾದರೂ ಮತಾಂತರಗೊಂಡಿದ್ದರೆ ಅವರು ಘೋಷಿಸಿಕೊಳ್ಳಬೇಕು' ಎಂದರು.

'ಬೆಲೆ ಏರಿಕೆ ತಡೆಗೆ ಕೇಂದ್ರ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಿದೆ. ಪೆಟ್ರೋಲಿಯಂ ಬದಲು ಪರ್ಯಾಯ ಇಂಧನಗಳನ್ನು ಇನ್ನಷ್ಟು ವೃದ್ಧಿಸುವ ಕಾರ್ಯ ವೇಗವಾಗಿ ಆಗಬೇಕಿದೆ' ಎಂದರು.

ಸುದ್ದಿಗೋಷ್ಠಿ ಆರಂಭಕ್ಕೂ ಮೊದಲು ಪುನೀತ್ ರಾಜಕುಮಾರ್ ನಿಧನಕ್ಕೆ ಅವರು ಶೋಕ ವ್ಯಕ್ತಪಡಿಸಿದರು.

ಬಹು ಮಾಧ್ಯಮ ಪ್ರಜಾವಾಣಿ LIVE

www.prajavani.net

Prajavani.net Prajavani Prajavani

ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9 **ಪ್ರಚಲಿತ**, ಬೆಳಿಗ್ಗೆ 9.30 **ಸಂಪಾದಕೀಯ**

ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಕ್ಲಬ್ ಹೌಸ್ — ಮುಕ್ತ ಮಾತು...

ರಾಜ್ಯೋತ್ಸವಕ್ಕೆ ಒಂದು ಕನ್ನಡ ಚಿಂತನೆ

ಕನ್ನಡ ಶಾಲೆಗಳ ಸ್ಥಿತಿ - ಗತಿ

ಅಬ್ದುಲ್ ರಹಮಾನ್ ಪಾಷಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯ.
ವಿ.ಪಿ.ನಿರಂಜನಾರಾಧ್ಯ, ಶಿಕ್ಷಣ ತಜ್ಞ, ಅಂಕಣಕಾರ.
ಮಹಾಬಲೇಶ್ವರ ರಾವ್, ಹೊಸ ಶಿಕ್ಷಣ ನೀತಿ ಅನುಷ್ಠಾನ ಸಮಿತಿಯ ಸದಸ್ಯ. **ಶ್ರೀದೇವಿ ಕೆರೆಮನೆ**, ಶಿಕ್ಷಕಿ, ಕವಯಿತ್ರಿ

ಪ್ರಜಾವಾಣಿ ಆಲದಮರ — ಸಂಜೆ 3 ರಿಂದ 5

ರಾಜ್ಯೋತ್ಸವ ವಿಶೇಷ

ಅಮೆರಿಕಾ ಕನ್ನಡತಿಯ ಕರುಳಿನ ಕರೆ

ತಾಯೇ ಬಾರ, ಮೊಗವ ತೋರ, ಕನ್ನಡಿಗರ ಮಾತೆಯೇ

ಬೋಸ್ಟನ್‌ನಿಂದ **ಸೌಮ್ಯಶ್ರೀ ಸಂದೀಪ್**

ಸಂಜೆ 6.30 ರಿಂದ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಮುಖ್ಯ ಇಂಜಿನಿಯರ್ ಕಛೇರಿ, ಗ್ರಾ.ಕುನೀ. & ನೈ.ಇ.,
1ನೇ ಮಹಡಿ, "ಇ" ಬ್ಲಾಕ್, ಕೆಹೆಚ್‌ಬಿ ಕಟ್ಟಡ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು – 560 009. ದೂರವಾಣಿ : 080–22533700 ಇ–ಮೇಲ್ : cerws14@gmail.com

ಸಂ. ಗ್ರಾಕುನೀ&ನೈವಿ/55/2018–19 ದಿನಾಂಕ : 29–10–2021

ಟೆಂಡರ್ ಪ್ರಕಟಣೆ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಕರ್ನಾಟಕ ಸರ್ಕಾರ ಇವರು ಕರ್ನಾಟಕದಾದ್ಯಂತ ನೀರು, ನೈರ್ಮಲ್ಯ ಮತ್ತು ಆರೋಗ್ಯದ ಕುರಿತಾಗಿ ಗೋಡೆಯ ಕ್ಯಾಲೆಂಡರ್, ಬ್ರೋಷರ್, ಡೈರಿ, ಪೋಸ್ಟರ್ ಮತ್ತು ಫ್ಲಿಪ್ ಚಾರ್ಟ್‌ಗಳ ಮುದ್ರಣ, ಸರಬರಾಜು ಮತ್ತು ವಿತರಣೆಗಾಗಿ ಅರ್ಹ ಬಿಡ್ಡುದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದಾರೆ. ಬಿಡ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ : **12–11–2021ರಂದು ಸಂಜೆ 5.30 ಗಂಟೆಗಳೊಳಗಾಗಿ**. ಇಎಂಡಿ ಮೊತ್ತ – **ರೂ.50,000/–**.

ಸಹಿ/– ಮುಖ್ಯ ಅಭಿಯಂತರರು,
ಗ್ರಾ.ಕು.ನೀ.&.ನೈ. ಇಲಾಖೆ, ಬೆಂಗಳೂರು.

ವಾ.ಸಂ.ಇ/ಬೆಂ.ನಗರ/RO. No. 2038/2021–22

ಕೋವಿಡ್–19 ಆತಂಕ ಬೇಡ: ಮುನ್ನೆಚ್ಚರಿಕೆ ಇರಲಿ

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಾಲ ಭವನ ಸೊಸೈಟಿ

ಸರ್ಕಾರದ ಅಪರ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವಾಲಯ,
1ನೇ ಮಹಡಿ, 3ನೇ ಗೇಟ್, ಬಹು ಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀಧಿ, ಬೆಂಗಳೂರು,
ಕಬ್ಬನ್ ಪಾರ್ಕ್, ಬೆಂಗಳೂರು–560 001, ಫೋನ್: 080–22864189/ 22861423
ಫ್ಯಾಕ್ಸ್: 22864189, ಇ–ಮೇಲ್: secybalbhavan.bng@gmail.com
ವೆಬ್‌ಸೈಟ್: www.jawaharbalbhavan.com

ಸಂಖ್ಯೆ: ಬಾಭಸೊ/ವಾಹನ/ಬಾಆವಾ/ಇ-ಟೆಂಡರ್/2021–22 ದಿನಾಂಕ: 29–10–2021

ಮರು ಟೆಂಡರ್ ಪ್ರಕಟಣೆ

ಬಾಲ ಭವನ ಸೊಸೈಟಿಯ ಪುಟಾಣಿ ರೈಲಿನ ಬೋಗಿ ಮತ್ತು ಇಂಜಿನ್‌ನ ದುರಸ್ಥಿ ಹಾಗೂ ವಾರ್ಷಿಕ ನಿರ್ವಹಣೆಯನ್ನು ಒಂದು ವರ್ಷದ ಅವಧಿಗೆ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮದಂತೆ ಅರ್ಹ ಬಿಡ್ಡುದಾರರಿಂದ ಟೆಕ್ನಿಕಲ್ ಮತ್ತು ಆರ್ಥಿಕ ಬಿಡ್ ನೀಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 .ಪ್ರಕಾರ e-procurement ಮೂಲಕ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ವಿಳಾಸ **http://eproc.karnataka/gov.in** ಆನ್ ಲೈನ್ ಮುಖಾಂತರ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ: **13–11–2021** ಸಂಜೆ **4.30** ಗಂಟೆಗೆ, ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ: **16–11–2021** ಸಂಜೆ **04.30** ಗಂಟೆಗೆ, ಹಣಕಾಸಿನ ಲಕೋಟೆಯನ್ನು ದಿನಾಂಕ: **19–11–2021** ರಂದು ಸಂಜೆ **04.30** ಗಂಟೆಗೆ ತೆರೆಯಲಾಗುವುದು ಹೆಚ್ಚಿನ ಮಾಹಿತಿಯನ್ನು ಬಾಲ ಭವನ ಸೊಸೈಟಿ, ಕಬ್ಬನ್ ಪಾರ್ಕ್, ಬೆಂಗಳೂರು ಈ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯದರ್ಶಿಗಳು,
ಬಾಲ ಭವನ ಸೊಸೈಟಿ, ಬೆಂಗಳೂರು

ವಾಸಾಸಂಇ/ಬೆಂ.ನ/ಶಿರಡಿ ಸಾಯಿ/2049/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಗೃಹ ಮಂಡಳಿ

ಜಿಲ್ಲಾ ಯೋಜನಾ ಕಛೇರಿ, ಅರಳೀಮರದಪಾಳ್ಯ, ಶಿರಾಗೇಟ್, ತುಮಕೂರು–572106

ಸಂ:ಕಗೃಮ/ಸಕಾಅ/ತುಜಿಯೋಕ/ಜಮೀನು ಸಂಗ್ರಹಣೆ/218/2021–22 ದಿನಾಂಕ:25.10.2021

(ಉಲ್ಲೇಖ:ಕೇಂದ್ರ ಕಛೇರಿಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭಾ ದಿನಾಂಕ:27.09.2021ರಲ್ಲಿ ನೀಡಲಾದ ಸೂಚನೆಯಂತೆ)

ಭೂಮಾಲೀಕರಿಂದ ನೇರವಾಗಿ ಅನುಪಾತದ ಪಾಲುದಾರಿಕೆಯಲ್ಲಿ ಜಮೀನುಗಳನ್ನು ಸಂಗ್ರಹಿಸಲು ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ರಾಜ್ಯಾದ್ಯಂತ ನಗರ ಮತ್ತು ಪಟ್ಟಣಗಳಲ್ಲಿ ವಸತಿ ಯೋಜನೆಗಳಿಗಾಗಿ ಭೂ–ಸಂಗ್ರಹಣೆ ಮಾಡುವ ಉದ್ದೇಶದಿಂದ, ಈ ಕೆಳಕಂಡ ತಾಲ್ಲೂಕು ಮತ್ತು ಘೋಷಿತ ತಾಲ್ಲೂಕು ಕೇಂದ್ರ/ಕಂದಾಯ ವ್ಯಾಪ್ತಿಗೆ ಬರುವ ಜಮೀನುಗಳ ಮಾಲೀಕರುಗಳಿಗೆ ನಗದು ಪರಿಹಾರದ ಬದಲಾಗಿ ಜಮೀನುಗಳನ್ನು ಅಭಿವೃದ್ಧಿಪಡಿಸಿದ ನಂತರ, ವಸತಿ ನಿವೇಶನಗಳನ್ನು ಜಿಲ್ಲಾ ಕೇಂದ್ರಗಳಲ್ಲಿ 50:50 (ಗೃಹ ಮಂಡಳಿ : ಭೂ–ಮಾಲೀಕರು)ರ ಅನುಪಾತದಲ್ಲಿ ಹಾಗೂ ಇತರೆ ಪ್ರದೇಶಗಳಲ್ಲಿನ ಉತ್ತಮ ರಸ್ತೆ ಸಂಪರ್ಕವಿರುವ ಮತ್ತು ವಸತಿ ಯೋಜನೆಗೆ ಉತ್ತಮ ಬೇಡಿಕೆ ಇರುವ ಜಮೀನುಗಳ ಮಾಲೀಕರುಗಳಿಗೆ 60:40 (ಗೃಹ ಮಂಡಳಿ:ಭೂ–ಮಾಲೀಕರು)ರ ಅನುಪಾತದಲ್ಲಿ ನೀಡುವ ಯೋಜನೆಯನ್ವಯ ಭೂಮಿಯನ್ನು ಪಡೆದು ಭೂ ಸಂಗ್ರಹಣೆ ಮಾಡಲು ಉದ್ದೇಶಿಸಿದೆ.

ಕ್ರ.ಸಂ	ತಾಲ್ಲೂಕುಗಳು	ಅಂದಾಜು ವಿಸ್ತೀರ್ಣ
1	ತುಮಕೂರು	20 ಎಕರೆ ಮೇಲ್ಪಟ್ಟು, 200 ಎಕರೆವರೆಗೆ
2	ಶಿರಾ	10 ಎಕರೆ ಮೇಲ್ಪಟ್ಟು
3	ಗುಬ್ಬಿ	10 ಎಕರೆ ಮೇಲ್ಪಟ್ಟು
4	ತಿಪಟೂರು	10 ಎಕರೆ ಮೇಲ್ಪಟ್ಟು
5	ತುರುವೇಕೆರೆ	10 ಎಕರೆ ಮೇಲ್ಪಟ್ಟು
6	ಕುಣಿಗಲ್	10 ಎಕರೆ ಮೇಲ್ಪಟ್ಟು
7	ಮಧುಗಿರಿ	10 ಎಕರೆ ಮೇಲ್ಪಟ್ಟು
8	ಪಾವಗಡ	10 ಎಕರೆ ಮೇಲ್ಪಟ್ಟು
9	ಕೊರಟಗೆರೆ	10 ಎಕರೆ ಮೇಲ್ಪಟ್ಟು
10	ಚಿಕ್ಕನಾಯಕನಹಳ್ಳಿ	10 ಎಕರೆ ಮೇಲ್ಪಟ್ಟು

ಪ್ರಸ್ತಾವಿತ ಜಮೀನುಗಳು ವಸತಿ ಯೋಜನೆಗೆ ಸೂಕ್ತವಾಗಿರಬೇಕಿದ್ದು, ಈ ಕೆಳಕಂಡ ಅಂಶಗಳನ್ನು ಒಳಗೊಂಡಿರುವುದನ್ನು ಅಪೇಕ್ಷಿಸಲಾಗಿದೆ.

1) ಪ್ರಸ್ತಾವಿತ ಜಮೀನು ರಾಷ್ಟ್ರೀಯ/ರಾಜ್ಯ ಹೆದ್ದಾರಿ/ಜಿಲ್ಲಾ ಮುಖ್ಯ ರಸ್ತೆಗೆ ಹೊಂದಿಕೊಂಡಿರಬೇಕು. 2) ನಗರ ಹಾಗೂ ಪಟ್ಟಣ ಪ್ರದೇಶದ ವ್ಯಾಪ್ತಿಯಿಂದ ಕನಿಷ್ಠ 2 ಕಿ.ಮೀ ರಿಂದ 5 ಕಿ.ಮೀ ಅಂತರದಲ್ಲಿರಬೇಕು. 3) ಜಮೀನು ಆದಷ್ಟು ಸಮತಟ್ಟಾಗಿದ್ದು, ರಾಜ ಕಾಲುವೆ/ ಮುಖ್ಯ ಕಾಲುವೆ ಅಥವಾ ಕೆರೆಗಳಿಂದ ಹೊರತಾಗಿರಬೇಕು. 4) ಪಿ.ಟಿ.ಸಿ.ಎಲ್ ಕಾಯ್ದೆಯಿಂದ ಹೊರತಾಗಿರಬೇಕು. 5) ಜಮೀನು ಸಂಯುಕ್ತ (ಒಂದೇ ಕಾಂಪ್ಯಾಕ್ಟ್) ಆಗಿರಬೇಕು ಹಾಗೂ ವಸತಿ ಯೋಜನೆಗೆ ಯೋಗ್ಯವಾಗಿರಬೇಕು. 6) ಸದರಿ ಜಮೀನುಗಳು ಸರ್ಕಾರವು ನಗರ/ಪಟ್ಟಣಕ್ಕೆ ಅನುಮೋದಿಸಿರುವ ಮಹಾ ಯೋಜನೆಯಲ್ಲಿ ವಸತಿ ವಲಯದಲ್ಲಿ ಇದ್ದಲ್ಲಿ ಆದ್ಯತೆ ಮೇರೆಗೆ ಪರಿಗಣಿಸಲಾಗುವುದು. 7) ಜಮೀನು ಯಾವುದೇ ಋಣಭಾರ ರಹಿತವಾಗಿರಬೇಕು 8) ಪ್ರಸ್ತಾವಿತ ಜಮೀನುಗಳನ್ನು ಅನುಪಾತದ ಪಾಲುದಾರಿಕೆಯಲ್ಲಿ ಕೈಗೊಳ್ಳುವ ಪ್ರಕ್ರಿಯೆ ಕರ್ನಾಟಕ ಗೃಹ ಮಂಡಳಿಯಿಂದ ರಚಿತವಾದ ಏಕ ಗವಾಕ್ಷಿ ಸಮಿತಿಯ ನಿರ್ಣಯಕ್ಕೆ ಒಳಪಟ್ಟಿರುತ್ತದೆ. 9) ನಗರ ಹಾಗೂ ಪಟ್ಟಣ ಪ್ರದೇಶಗಳ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಮೊದಲ ಆದ್ಯತೆ ನೀಡಲಾಗುವುದು ಹಾಗೂ ಆಯಾ ಪ್ರದೇಶಗಳ ಬೇಡಿಕೆ ಸಮೀಕ್ಷೆಯನ್ನು ಆಧರಿಸಿ ವಸತಿ ಯೋಜನೆಗಳನ್ನು ಕೈಗೊಳ್ಳಲಾಗುವುದು. ಪ್ರಸ್ತಾವಿತ ಜಮೀನುಗಳ ಭೂಮಾಲೀಕರು ಮಂಡಳಿಯ ಹೆಸರಿಗೆ M.O.U ನೊಂದಾಯಿಸಿ ಹಸ್ತಾಂತರಿಸಬೇಕು. (ಜಿ.ಪಿ.ಎ ಆಧಾರದ ಮೇಲೆ ಜಮೀನುಗಳನ್ನು ಹಸ್ತಾಂತರಿಸಿಕೊಳ್ಳಲಾಗುವುದಿಲ್ಲ.) 10) ಆಸಕ್ತಿಯುಳ್ಳ ಭೂಮಾಲೀಕರು ತಮ್ಮ ಜಮೀನು ಮೇಲೆ ತಿಳಿಸಲಾದ ಅಂಶಗಳಿಗೆ ಹೊಂದುವಂತೆ ಇದ್ದು, ಮಂಡಳಿಗೆ ಜಮೀನನ್ನು ನೀಡಲು ಆಸಕ್ತಿ ಇದ್ದವರು ಜಮೀನಿಗೆ ಸಂಬಂಧಿಸಿದ ಎಲ್ಲಾ ಪೂರಕ ದಾಖಲೆಗಳೊಂದಿಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಅರಳೀಮರದಪಾಳ್ಯ, ತುಮಕೂರು ಇಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದೆ. 11) ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ : ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ಎ.ಎಂ.ಪಾಳ್ಯ, ಶಿರಾಗೇಟ್, ತುಮಕೂರು. ಮೊಬೈಲ್ : 98456–0099 12) ಕಛೇರಿ ದೂರವಾಣಿ ಸಂಖ್ಯೆ: 0816–2956095, 96321–12740, 99027–76399, 99453–96489.

ಸಹಿ/–ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ತುಮಕೂರು.

DIPR/TUM/363/MCA/2021-22

ಮಾಗನೂರು ಬಸಪ್ಪ ಕೊಡುಗೆ ಸ್ಮರಣೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಆಧುನಿಕ ದಾವಣಗೆರೆಯ ಮಾಗನೂರು ಬಸಪ್ಪ ಅವರ 26ನೇ ಪುಣ್ಯಸ್ಮರಣೆ ಹಾಗೂ ಸರ್ವಮಂಗಳಮ್ಮ ಮಾಗನೂರು ಬಸಪ್ಪ ಅವರ 13ನೇ ಸಂಸ್ಮರಣೆಯಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ, ಅವರ ದಾನ-ದತ್ತಿಗಳನ್ನು ಸ್ಮರಿಸಲಾಯಿತು.

ಇಲ್ಲಿನ ಮಾಗನೂರು ಬಸಪ್ಪ ಶಾಲೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಹೊನ್ನಾಳಿ ಹಿರೇಕಲ್ಮಠದ ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, 'ಮಾಗನೂರು ಬಸಪ್ಪನವರು ಸಾಮಾನ್ಯ ಮನೆತನದಿಂದ ಬಂದರೂ ಅಸಾಧಾರಣವಾದ ಬದುಕು ರೂಪಿಸಿಕೊಂಡಿದ್ದರು. ಕೇವಲ ತನಗಾಗಿ, ಕುಟುಂಬಕ್ಕಾಗಿ ಬದುಕದೇ ಅನ್ಯರ ಬದುಕಿಗೆ ಮಿಡಿಯುತ್ತಿದ್ದರು. 'ವಸುಧೈವ ಕುಟುಂಬಕಂ' ಎನ್ನುವ ಉದಾತ್ತ ಚಿಂತನೆಯನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದರು' ಎಂದು ಸ್ಮರಿಸಿದರು.

ಮಕ್ಕಳ ತಜ್ಞರಾದ ಡಾ.ಸುರೇಶ್ ಬಾಬು, ಡಾ.ಶೋಭಾ ಬಾಣಾಪುರಮಠ, ಆನಗೋಡಿನ ಯೋಧ ಕೆ.ಎಚ್. ಈಶ್ವರಪ್ಪ ಅವರನ್ನು ಸನ್ಮಾನಿಸಲಾಯಿತು. ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್ ಅಧ್ಯಕ್ಷ ಎಂ.ಬಿ. ಚನ್ನಬಸವನಗೌಡರು ಅಧ್ಯಕ್ಷತೆ ವಹಿಸಿದ್ದರು.

ಮಾಗನೂರು ಬಸಪ್ಪ ಅವರ ಮರಿಮೊಮ್ಮಗಳು ಅನ್ನಪೂರ್ಣ ವಿ.ಕೊಂಡಜ್ಜಿ ಶಿವತಾಂಡವ ನೃತ್ಯ ಪ್ರದರ್ಶಿಸಿದರು.

7 ಜಿಲ್ಲೆಗಳಲ್ಲಿ ಇಂದು ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಅ.31ರಿಂದ ನ.4ರವರೆಗೆ ಗುಡುಗು, ಸಿಡಿಲು ಸಹಿತ ಹೆಚ್ಚು ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಿವಮೊಗ್ಗ, ರಾಮನಗರ, ಮೈಸೂರು, ಕೊಡಗು, ಹಾಸನ, ಚಿಕ್ಕಮಗಳೂರು, ಚಾಮರಾಜನಗರ ಜಿಲ್ಲೆಗಳಲ್ಲಿ 31ರಂದು ಭಾರಿ ಮಳೆಯಾಗುವ ಸಾಧ್ಯತೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

'ಕರಾವಳಿಯ ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ನ.2ರಿಂದ ಮಳೆ ಹೆಚ್ಚಾಗಲಿದೆ. ಉಳಿದ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಹೆಚ್ಚಾಗಿ ಇರಲಿದ್ದು, ಕೆಲವೆಡೆ ಸಾಧಾರಣ ಮಳೆಯಾಗಬಹುದು. ಉತ್ತರ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಮಳೆ ತಗ್ಗಿದ್ದು, ಒಣಹವೆ ಮುಂದುವರಿಯಲಿದೆ' ಎಂದು ಮಾಹಿತಿ ನೀಡಿದೆ.

ಮಳೆ-ಎಲ್ಲಿ, ಎಷ್ಟು?: ಮೈಸೂರು ಜಿಲ್ಲೆಯ ಸಾಲಿಗ್ರಾಮ, ಚಿತ್ರದುರ್ಗ ಜಿಲ್ಲೆಯ ರಾಮಗಿರಿ, ತುಮಕೂರು ಜಿಲ್ಲೆಯ ಕುಣಿಗಲ್‌ನಲ್ಲಿ ಶನಿವಾರ ತಲಾ 3 ಸೆಂ.ಮೀ ಮಳೆಯಾಗಿದೆ. ಸುಳ್ಯ, ಚಿಂತಾಮಣಿ 2, ಮಡಿಕೇರಿ, ತರೀಕೆರೆ, ಅರಕಲಗೂಡು, ಮಾಲೂರು, ಸಂಡೂರು, ಮೊಳಕಾಲ್ಮೂರು, ಚನ್ನಗಿರಿ, ತಿಪಟೂರಿನಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ಕಾರವಾರದಲ್ಲಿ 35 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಬೀದರ್‌ನಲ್ಲಿ 16 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	6,207	5,950
ಹಾರಂಗಿ	2,859	2,858.02	705	1,025
ಕಬಿನಿ	2284	2,283.93	2,200	700
ಹೇಮಾವತಿ	2,922	2,910.26	1,252	3,516
ಲಿಂಗನಮಕ್ಕಿ	1,819	1,814.95	2,681	-
ಸೂಪಾ (ಮೀ)	564	556.21	1,216	3,862
ವಾಣಿ	594.36	587.96	414	-
ತುಂಗಭದ್ರಾ	1,633	1,632.97	10,326	11,482
ಮಲಪ್ರಭಾ	2079.50	2,078.50	-	1,394
ಘಟಪ್ರಭಾ	2175	2,173.18	-	2,870
ಭದ್ರಾ	186	185.11	3,486	3,787
ಆಲಮಟ್ಟಿ (ಮೀ)	519.60	519.22	-	11,736
ನಾರಾಯಣಪುರ (ಮೀ)	492.25	491.58	8,500	10,850

*ನೆಲಮಟ್ಟದಿಂದ

ಸಿವಿಲ್ ಮಿಸಲೇನಿಯೇಸ್ ನಂ: 9/2020

ಮಾನ್ಯ ಪ್ರಧಾನ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಮಾನ್ಯ ಆಯುಕ್ತರು,
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಿರುದ್ಧ

ಎದುರುಗಾರರು : 1) ಶ್ರೀ ಎಸ್.ಎನ್. ನೂಲ್ವಿ ಮತ್ತು ಇತರರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 (1) (ಎ1) ರ ಅಡಿಯಲ್ಲಿ ಸಮನ್ಸ

ಎದುರುಗಾರ ನಂ : 3) ಶ್ರೀ ಎಚ್.ಎಮ್. ತಿವಾರಿ,
ವಯಾ : ವಯಸ್ಕರು., ಉದ್ಯೋಗ : ನಿವೃತ್ತ ನೌಕರ, ಸಾ॥ ಹುಬ್ಬಳ್ಳಿ

ಎದುರುಗಾರ ನಂ : 8) ಶ್ರೀ ವಾಯ್.ಬಿ. ಯಲಗೊಂಡರ, ಪೋತಿ ವಾರಸುದಾರರು

ಎದುರುಗಾರ ನಂ : 8ಬಿ) ಶ್ರೀಮತಿ ಜಯಶ್ರೀ ಕೋಂ ಶಿವು ಬಳ್ಳೊಳ್ಳಿ,
ವಯಾ : ವಯಸ್ಕರು., ಉದ್ಯೋಗ : ಮನೆಗೆಲಸ, ಸಾ॥ ನವನಗರ, ಹುಬ್ಬಳ್ಳಿ

ಎದುರುಗಾರ ನಂ : 8ಸಿ) ಶ್ರೀ ರವೀಂದ್ರ ತಂದೆ ಈಶ್ವರಪ್ಪ ಯಲಗೊಂಡರ,
ವಯಾ : ವಯಸ್ಕರು, ಉದ್ಯೋಗ : ನೌಕರಿ, ಸಾ॥ ನವನಗರ, ಹುಬ್ಬಳ್ಳಿ

ಎದುರುಗಾರ ನಂ : 8ಡಿ) ಶ್ರೀಮತಿ ತ್ರಿವೇಣಿ ಎಮ್. ಪಟ್ಟೇದ,
ವಯಾ : ವಯಸ್ಕರು, ಉದ್ಯೋಗ : ಮನೆಗೆಲಸ, ಸಾ॥ ನವನಗರ, ಹುಬ್ಬಳ್ಳಿ

ಎದುರುಗಾರ ನಂ : 9) ಆರ್.ಬಿ. ರಾಯ್ಕರ,
ವಯಾ : ವಯಸ್ಕರು, ಉದ್ಯೋಗ : ಪಿ.ಡಿ.ಎ ಅಕೌಂಟ್ಸ, ಸಾ॥ ಹುಬ್ಬಳ್ಳಿ

ಅರ್ಜಿದಾರರು ಎದುರುಗಾರರ ವಿರುದ್ಧ ಇದೇ ಮಾನ್ಯ ನ್ಯಾಯಾಲಯದಲ್ಲಿ ಅಸಲ ದಾವಾ ನಂ : 64/2008 ನೇದ್ದನ್ನು ಎದುರುಗಾರರ ವಿರುದ್ಧ ರೂ. 34,92,563/– ಗಳ ವಸೂಲಿಗಾಗಿ ದಾಖಲಿಸಿದ್ದು ಇರುತ್ತದೆ.

ಮೇಲ್ಕಂಡ ಪ್ರಕರಣವು ದಿನಾಂಕ : 10–11–2021 ರಂದು ಮುಂಜಾನೆ 10–30 ಗಂಟೆಗೆ ನಿಮ್ಮ ಹಾಜರಾತಿಗಾಗಿ ಮುದ್ದತ್ತು ನೇಮಿಸಿರುತ್ತದೆ.

ಅಂದು ಮಾನ್ಯ ನ್ಯಾಯಾಲಯಕ್ಕೆ ನೀವಾಗಲೀ ಅಥವಾ ನಿಮ್ಮ ಪರವಾಗಿ ವಕೀಲರಾಗಲಿ ಹಾಜರಾಗಿ ನಿಮ್ಮ ತಕರಾರು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು ಒಂದು ವೇಳೆ ಯಾರಾರೂ ಹಾಜರಾಗದೇ ಇದ್ದಲ್ಲಿ ನಿಮ್ಮ ವಿರುದ್ಧ ಏಕತರ್ಫಿ ಹುಕುಂ ಮಾಡಲಾಗುವದು ಅಂತಾ ಈ ಮೂಲಕ ತಿಳಿಸಲಾಗಿದೆ.

ಈ ಹೊತ್ತು ದಿನಾಂಕ : 22–10–2021 ರಂದು ನನ್ನ ಸಹಿ ವ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.

ಕೋರ್ಟ ಆಜ್ಞೆಯ ಮೇರೆಗೆ,

ಹುಬ್ಬಳ್ಳಿ
ದಿನಾಂಕ : 22–10–2021

ಶಿರಸ್ತೆದಾರರು,
ಮಾನ್ಯ ಪ್ರಧಾನ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ, ಹುಬ್ಬಳ್ಳಿ

ಶ್ರೀಮತಿ ಎಸ್.ವಿ.ಪೊಲೀಸಗೌಡ್ರ
ಅರ್ಜಿದಾರರ ಪರ ವಕೀಲರು

ಸಿವಿಲ್ ಮಿಸಲೇನಿಯೇಸ್ ನಂ: 10/2020

ಮಾನ್ಯ ಪ್ರಧಾನ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹುಬ್ಬಳ್ಳಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಮಾನ್ಯ ಆಯುಕ್ತರು,
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಹುಬ್ಬಳ್ಳಿ

ವಿರುದ್ಧ

ಎದುರುಗಾರರು : 1) ಶ್ರೀ ಪಿ.ಎ.ಪೋತದಾರ ಮತ್ತು ಇತರರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20 (1) (ಎ1) ರ ಅಡಿಯಲ್ಲಿ ಸಮನ್ಸ

ಎದುರುಗಾರ ನಂ : 1) ಶ್ರೀ ಪಿ.ಎ.ಪೋತದಾರ,
ವಯಾ : ವಯಸ್ಕರು., ಉದ್ಯೋಗ : ನಿವೃತ್ತ ನೌಕರ, ಸಾ॥ ಧಾರವಾಡ

ಎದುರುಗಾರ ನಂ : 7) ಶ್ರೀ ವಾಯ್.ಬಿ. ಯಲಗೊಂಡರ, ಪೋತಿ ವಾರಸುದಾರರು

ಎದುರುಗಾರ ನಂ : 7ಬಿ) ಶ್ರೀಮತಿ ಜಯಶ್ರೀ ಕೋಂ ಶಿವು ಬಳ್ಳೊಳ್ಳಿ,
ವಯಾ : ವಯಸ್ಕರು., ಉದ್ಯೋಗ : ಮನೆಗೆಲಸ, ಸಾ॥ ನವನಗರ, ಹುಬ್ಬಳ್ಳಿ

ಎದುರುಗಾರ ನಂ : 7ಸಿ) ಶ್ರೀ ರವೀಂದ್ರ ತಂದೆ ಈಶ್ವರಪ್ಪ ಯಲಗೊಂಡರ,
ವಯಾ : ವಯಸ್ಕರು, ಉದ್ಯೋಗ : ನೌಕರಿ, ಸಾ॥ ನವನಗರ, ಹುಬ್ಬಳ್ಳಿ

ಎದುರುಗಾರ ನಂ : 7ಡಿ) ಶ್ರೀಮತಿ ತ್ರಿವೇಣಿ ಎಮ್. ಪಟ್ಟೇದ,
ವಯಾ : ವಯಸ್ಕರು, ಉದ್ಯೋಗ : ಮನೆಗೆಲಸ, ಸಾ॥ ನವನಗರ, ಹುಬ್ಬಳ್ಳಿ

ಎದುರುಗಾರ ನಂ : 8) ಆರ್.ಬಿ. ರಾಯ್ಕರ,
ವಯಾ : ವಯಸ್ಕರು, ಉದ್ಯೋಗ : ಪಿ.ಡಿ.ಎ ಅಕೌಂಟ್ಸ, ಸಾ॥ ಹುಬ್ಬಳ್ಳಿ

ಅರ್ಜಿದಾರರು ಎದುರುಗಾರರ ವಿರುದ್ಧ ಇದೇ ಮಾನ್ಯ ನ್ಯಾಯಾಲಯದಲ್ಲಿ ಅಸಲ ದಾವಾ ನಂ : 65/2008 ನೇದ್ದನ್ನು ಎದುರುಗಾರರ ವಿರುದ್ಧ ರೂ. 13,32,708/– ಗಳ ವಸೂಲಿಗಾಗಿ ದಾಖಲಿಸಿದ್ದು ಇರುತ್ತದೆ.

ಮೇಲ್ಕಂಡ ಪ್ರಕರಣವು ದಿನಾಂಕ : 10–11–2021 ರಂದು ಮುಂಜಾನೆ 10–30 ಗಂಟೆಗೆ ನಿಮ್ಮ ಹಾಜರಾತಿಗಾಗಿ ಮುದ್ದತ್ತು ನೇಮಿಸಿರುತ್ತದೆ.

ಅಂದು ಮಾನ್ಯ ನ್ಯಾಯಾಲಯಕ್ಕೆ ನೀವಾಗಲೀ ಅಥವಾ ನಿಮ್ಮ ಪರವಾಗಿ ವಕೀಲರಾಗಲಿ ಹಾಜರಾಗಿ ನಿಮ್ಮ ತಕರಾರು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು ಒಂದು ವೇಳೆ ಯಾರಾರೂ ಹಾಜರಾಗದೇ ಇದ್ದಲ್ಲಿ ನಿಮ್ಮ ವಿರುದ್ಧ ಏಕತರ್ಫಿ ಹುಕುಂ ಮಾಡಲಾಗುವದು ಅಂತಾ ಈ ಮೂಲಕ ತಿಳಿಸಲಾಗಿದೆ.

ಈ ಹೊತ್ತು ದಿನಾಂಕ : 22–10–2021 ರಂದು ನನ್ನ ಸಹಿ ವ ಕೋರ್ಟಿನ ಮೊಹರಿನೊಂದಿಗೆ ಕೊಡಲ್ಪಟ್ಟಿತು.

ಕೋರ್ಟ ಆಜ್ಞೆಯ ಮೇರೆಗೆ,

ಹುಬ್ಬಳ್ಳಿ
ದಿನಾಂಕ : 22–10–2021

ಶಿರಸ್ತೆದಾರರು,
ಮಾನ್ಯ ಪ್ರಧಾನ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ, ಹುಬ್ಬಳ್ಳಿ

ಶ್ರೀಮತಿ ಎಸ್.ವಿ.ಪೊಲೀಸಗೌಡ್ರ
ಅರ್ಜಿದಾರರ ಪರ ವಕೀಲರು

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ಸೆಕ್ಷನ್ 1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್) ಕೆ.ಡಬ್ಲ್ಯೂ–1&4

ಐ.ಎಫ್.ಟಿ. ಸಂ.: **11/2021–22** ದಿನಾಂಕ: **28.10.2021**

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲ್ಯೂ–1&4ರ ಅನ್ವಯ ತರೀಕೆರೆ ಉಪವಿಭಾಗ ವ್ಯಾಪ್ತಿಯ ವಾರ್ಷಿಕ ನಿರ್ವಹಣೆ ಒಳಗೊಂಡಂತೆ 04 ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಕನಿಷ್ಟ ಮೊತ್ತ ರೂ. 6.00 ಲಕ್ಷಗಳು ಹಾಗೂ ಗರಿಷ್ಠ ಮೊತ್ತ ರೂ. 90.00 ಲಕ್ಷಗಳು, ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: http://eproc.karnataka.gov.in ನಲ್ಲಿ ದಿನಾಂಕ 29.10.2021 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ 08.11.2021, ಇನ್ನುಳಿದಂತೆ ವೈಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ
ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ–123/10/ಎಂಸಿಎ/21–22/761

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.

ಕ್ರಸಂ:ಕಾಇಂ:ಲೋಇವಿ:ತುಮ:ಕಿಇಂ–2:ಟೆಂಡರ್–21/2021–22 ದಿನಾಂಕ 26.10.2021

ಟೆಂಡರ್ ಪ್ರಕಟಣೆ ಸಂ.21/2021–22 ದಿನಾಂಕ: 26.10.2021

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 21/2021–22:ದಿನಾಂಕ 26–10–2021ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ: 4059–80–051–0–29–386 ಇಲಾಖಾ ಕಟ್ಟಡಗಳು ಅಡಿಯಲ್ಲಿ ಕುಣಿಗಲ್ ತಾಲ್ಲೂಕು ಕಗ್ಗೆರೆ ತೋಂಟದ ಶ್ರೀ ಸಿದ್ದಲಿಂಗೇಶ್ವರಸ್ವಾಮಿ ದೇವಾಲಯದ ನವೀಕರಣ ಕಾಮಗಾರಿ ಇ–ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ **ರೂ:296.03 ಲಕ್ಷಗಳು,** ಇ.ಎಂ.ಡಿ ಮೊತ್ತ **ರೂ.444100/–ಗಳು,** ಅರ್ಹ ಗುತ್ತಿಗೆದಾರರು: 2 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **29.11.2021**ರ 16.00 ಗಂಟೆಗೆ, ಇ–ಪ್ರೂಕ್ಯೂರ್‌ಮಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **02.11.2021** ರಿಂದ **01.12.2021**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **01.12.2021**ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **02.12.2021** ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **06.12.2021** ಸಂಜೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/378/MCA/2021-22

ಕರ್ನಾಟಕ ಉಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560 001

ಹೆಚ್.ಸಿ.ಸಿ.ಸಂಖ್ಯೆ :56/2021 ದಿನಾಂಕ:29.10.2021

ಸಿಸಿಟಿವಿ ಕ್ಯಾಮರಗಳ ಪೂರೈಕೆಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆಗಾಗಿ ಆಹ್ವಾನ

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇವರು **ರಾಜ್ಯದ 12 ಜಿಲ್ಲಾ ನ್ಯಾಯಾಲಯಗಳು ಮತ್ತು ಅವರ ತಾಲ್ಲೂಕು ನ್ಯಾಯಾಲಯಗಳಿಗೆ ಅನುಮೋದಿತ ತಾಂತ್ರಿಕ ವಿವರಣೆಗಳ ಅನುಸಾರ ಸಿಸಿಟಿವಿ ಕ್ಯಾಮರಗಳ ಸಂಗ್ರಹಣೆಗಾಗಿ** ಇ–ಆಡಳಿತ ಕೇಂದ್ರ, ಬೆಂಗಳೂರು ಇದರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಸಕ್ತಿ ವ್ಯಕ್ತಪಡಿಸುವಿಕೆಯನ್ನು (ಇಒಐ) ಆಹ್ವಾನಿಸಿದೆ. ಆಸಕ್ತಿ ವ್ಯಕ್ತಪಡಿಸುವಿಕೆಯನ್ನು ಅಪ್‌ಲೋಡ್ ಮಾಡುವ ಕಡೆಯ **ದಿನಾಂಕ : 09.11.2021 ರಂದು ಸಂಜೆ 4.00 ಗಂಟೆಗೆ.** ಹೆಚ್ಚಿನ ವಿವರಗಳನ್ನು **https://eproc.karnataka.gov.in** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/- (ಎನ್.ಜಿ.ದಿನೇಶ್)
ರಿಜಿಸ್ಟ್ರಾರ್ (ಗಣಕ) ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕ.ಉ.ನ್ಯಾ. ಬೆಂಗಳೂರು.

ವಾಸಾಸಂಇ/ಉನಿ.ನ/32/ಎಂಸಿಎ/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ಆಸ್ತಿ ಅಧಿಕಾರಿಗಳ ಕಛೇರಿ, ಸೀಮಿಕೇರಿ ಕ್ರಾಸ್ ಹತ್ತಿರ,
ಹುಬ್ಬಳ್ಳಿ ಬೈಪಾಸ್ ರಸ್ತೆ, ಉದ್ಯಾನಗಿರಿ, ಬಾಗಲಕೋಟ – 587104.

ಸಂ:ಆ.ಅ./ತೋವಿವಿಬಾ/ಟೆಂ.ಪ್ರ–200/2021–22 ದಿನಾಂಕ : 30/10/2021

ಟೆಂಡರ ಪ್ರಕಟಣೆ (ಇ–ಪ್ರೊಕ್ಯೂರಮೆಂಟ್ ಮೂಲಕ) 2,3&4ನೇ ಬಾರಿ

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದ ಮುಖ್ಯ ಆವರಣ ಹಾಗೂ ತೋಟಗಾರಿಕೆ ಮಹಾವಿದ್ಯಾಲಯ, ಮೈಸೂರಿನಲ್ಲಿ ವಿವಿಧ , ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಲೋಕೋಪಯೋಗಿ / ಕೇಂದ್ರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು **KW-1 & KW-2** ಷರತ್ತು ನಿಬಂಧನೆಗಳಿಗೆ ಒಳಪಟ್ಟಂತೆ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ **https://eproc.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಸಲ್ಲಿಸುವುದು

ಟೆಂಡರನ ಘಟಣಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟಿಕರಣಕ್ಕಾಗಿ ಕೊನೆಯ ದಿನಾಂಕ	06.11.2021 ರಂದು ಮಧ್ಯಾಹ್ನ16.00 ಘಂಟೆಯವರೆಗೆ
2	ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	19.11.2021 ರಂದು ಮಧ್ಯಾಹ್ನ16.00 ಘಂಟೆಯವರೆಗೆ
3	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	23.11.2021 ರಂದು ಮಧ್ಯಾಹ್ನ 16.00 ಘಂಟೆಗೆ

ಗುತ್ತಿಗೆದಾರರು ಸದರಿ ಟೆಂಡರನಲ್ಲಿ ಭಾಗವಹಿಸಲು ಕರ್ನಾಟಕ ಸರಕಾರದ ಇ–ಪ್ರೊಕ್ಯೂರಮೆಂಟ ಪೋರ್ಟಲ್‌ನಲ್ಲಿ ಖಡ್ಡಾಯವಾಗಿ ನೋಂದಾಯಿಸಿಕೊಳ್ಳಬೇಕು. ಗುತ್ತಿಗೆದಾರರು ಇ–ಪ್ರೊಕ್ಯೂರಮೆಂಟನ **https://eproc.karnataka.gov.in** ಗೆ ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ/Corrigendum/ addendum ಬಗ್ಗೆ ಮಾಹಿತಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ– 9880921476 ಮತ್ತು 08354–230260ಗೆ ಕಛೇರಿ ವೇಳೆಯಲ್ಲಿ ಪಡೆಯಬಹುದು.

ವಾ.ಸಾ.ಇ/ಬಾ/371/2021–22/ದೇಶಪಾಂಡೆಪಬ್ಲಿಸಿಟಿ — ಸಹಿ/– ಆಸ್ತಿ ಅಧಿಕಾರಿಗಳು

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನಗರಸಭಾ ಕಾರ್ಯಾಲಯ, ಚಿತ್ರದುರ್ಗ–577 501.

ಸಂ: ನಸಚಿ:ತಾಂತ್ರಿಕ(1)/ಟೆಂಡರ್:ಕಿ.ಅ:ಸಿಆರ್:14:2021–22 ದಿನಾಂಕ: 27.10.2021

ಇ–ಪ್ರೊಕ್ಯೂರ್‌ಮೆಂಟ್ ಮರು ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1ರ ನಿಬಂಧನೆಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.)

ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ನಗರಸಭೆ ಸಾಮಾನ್ಯ ನಿಧಿ ಅನುದಾನದಲ್ಲಿ ಅನುಮೋದನೆಯಾಗಿರುವ ರೂ.127.27 ಲಕ್ಷಗಳ 35 ಕಾಮಗಾರಿಗಳನ್ನು ಚಿತ್ರದುರ್ಗ ನಗರಸಭಾ ವ್ಯಾಪ್ತಿಯಲ್ಲಿ ಕೈಗೊಳ್ಳಲು ಇ–ಪ್ರೊಕ್ಯೂರ್‌ಮೆಂಟ್ ಏಕಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಅರ್ಹ ದರ್ಜೆ ಗುತ್ತಿಗೆದಾರರು ಐಟಂವಾರು ಟೆಂಡರ್ ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ www.eproc.Karnataka.gov.in ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು, ಟೆಂಡರ್ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. 'ಟೆಂಡರ್‌ದಾರರು ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವಾಗ ಅನವಶ್ಯಕವಾದ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಸಂಬಂಧಿಸಿದ ದಾಖಲಾತಿಯನ್ನು ಸಂಬಂಧಪಟ್ಟ ಕೋಷ್ಟಕದಲ್ಲಿ ಸ್ಪಷ್ಟವಾಗಿ ಕಾಣುವಂತೆ ಅಪ್‌ಲೋಡ್ ಮಾಡತಕ್ಕದ್ದು' ವಿವರ ಈ ಕೆಳಕಂಡಂತೆ ಇರುತ್ತದೆ. ಒಂದು ವೇಳೆ ಮೇಲೆ ಸೂಚಿಸಲಾಗಿರುವ ದಿನಾಂಕಗಳು ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ, ಮುಂದಿನ ದಿನಗಳನ್ನು ಪರಿಗಣಿಸಲಾಗುವುದು, ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ಕಾಮಗಾರಿ ವಿಭಾಗದಲ್ಲಿ ಅಭಿಯಂತರರನ್ನು ವಿಚಾರಿಸಬಹುದು ಅಥವಾ ನಗರಭೆಯ ಅಂತರ್‌ಜಾಲ www.chitradurgacity.mrc.gov.inನಲ್ಲಿ ಪಡೆಯಬಹುದಾಗಿದೆ. **'ಜಿ.ಎಸ್.ಟಿ. ಮೊತ್ತ ಪ್ರತ್ಯೇಕವಾಗಿ ಪಾವತಿಸಲಾಗುವುದು'.**

1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ: 16.11.2021ರ ಸಂಜೆ 05:30 ಗಂಟೆಯವರೆಗೆ. 2) ಟೆಂಡರ್‌ನ್ನು ತೆರೆಯುವ ದಿನಾಂಕ: 17.11.2021ರ ಸಂಜೆ 05:30 ಗಂಟೆಗೆ. 3) ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ): ಇ–ಪ್ರಕ್ಯೂರ್‌ಮೆಂಟ್ ನಿಯಮಾನುಸಾರ.

ಸಹಿ/– ಪೌರಾಯುಕ್ತರು,
ನಗರಸಭೆ, ಚಿತ್ರದುರ್ಗ.

RO No. 555: DIPR/CTA/MCA/2021-22

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ವಿಜಯನಗರ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರ ಕಾರ್ಯಾಲಯ, ಬಳ್ಳಾರಿ/ವಿಜಯನಗರ

ಸಂಖ್ಯೆ:ಇ2/ಕೆಕೆಆರ್‌ಡಿಬಿ/ಸಪ್ರಾಪ್ರೌಶಾ/ಡ್ಯೂಯಲ್‌ಡೆಸ್ಕ್/153/21–22
ದಿನಾಂಕ:29.10.2021

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

2020–21ನೇ ಸಾಲಿನ ಕೆ.ಕೆ.ಆರ್.ಡಿ.ಬಿ., ಮ್ಯಾಕ್ರೋ ಯೋಜನೆಯಡಿಯಲ್ಲಿ ವಿಜಯನಗರ ಜಿಲ್ಲೆಯ ಸರ್ಕಾರಿ ಪ್ರೌಢ ಶಾಲೆಗಳಿಗೆ ಡ್ಯೂಯಲ್ ಡೆಸ್ಕ್‌ಗಳನ್ನು ಖರೀದಿಗಾಗಿ ಅಧಿಕೃತ ನೊಂದಣಿಯಾಗಿರುವ ತಯಾರಕರಿಂದ ಅಥವಾ ಮಾರಾಟಗಾರರಿಂದ, ಕೆ.ಟಿ.ಟಿ.ಪಿ ಕಾಯ್ದೆ 1999 ಶಾಸನ 2000ಅನ್ವಯ 'ಇ'–**ಪ್ರೊಕ್ಯೂರ್‌ಮೆಂಟ್** ತಂತ್ರಾಂಶದ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಬಿಡ್‌ದಾರರು, ಟೆಂಡರ್ ದಾಸ್ತವೇಜುಗಳನ್ನು ಮತ್ತು ಹೆಚ್ಚಿನ ವಿವರಗಳಿಗಾಗಿ ಹಾಗೂ ತಮಗೆ ಬೇಕಾದ ದಾಖಲೆಗಳನ್ನು **https://www.eproc.karnataka.gov.in** ವೆಬ್ ಸೈಟ್ ಮೂಲಕ ಪಡೆದುಕೊಂಡು ಭರ್ತಿ ಮಾಡಿ ಸಲ್ಲಿಸಬಹುದು.

ಇ–ಪ್ರೆಕ್ಯೂಪ್‌ಮೆಂಟ್ ಟೆಂಡರ್ ಇಂಡೆಂಟ್ ನಂಬರ್ **DPI/21-22/IND617**

1. Commencement of download of e-Tender Form from website- https://www.eproc.karnataka.gov.in: **29.10.2021.** 2. Last Date for Uploading of Tender in e-procurement: **15.11.2021as in e-portal.** 3. Opening of Technical Bid: **17.11.2021as in e-portal.** 4. Opening of Commercial Bid: **19.11.2021as in e-portal**

ESTIMATED COST : Rs.127.76 lakhs

ಸಹಿ/– ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಬಳ್ಳಾರಿ/ವಿಜಯನಗರ

ಡಿಐಪಿಆರ್/ಬಳ್ಳಾರಿ/468/ಎಂಸಿಎ/2020–21

ಸರ್ಜಾಪುರ– ದೊಮ್ಮಸಂದ್ರ– ಅತ್ತಿಬೆಲೆ ರಸ್ತೆ ವಿಸ್ತರಣೆಗೆ ಮರಗಳ ಮಾರಣಹೋಮ

ಮರಗಳನ್ನು ಉಳಿಸಿ–ಚಿಣ್ಣರ ಕಳಕಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಜಾಪುರ–ದೊಮ್ಮಸಂದ್ರ– ಅತ್ತಿಬೆಲೆ ರಸ್ತೆ ವಿಸ್ತರಣೆಗಾಗಿ ಪಾರಂಪರಿಕ ಮರಗಳನ್ನು ಬಲಿಕೊಡಬೇಡಿ ಎಂದು ಚಿಣ್ಣರು ಕಳಕಳಿಯಿಂದ ಕೇಳಿಕೊಂಡಿದ್ದಾರೆ.

‘ಮರ ಕಡಿಯಬೇಡಿ– ನಮಗೆ ಉಸಿರಾಡಲು ಬಿಡಿ’ ಎಂಬ ಬರಹಗಳಿದ್ದ ಫಲಕಗಳನ್ನು ಪ್ರದರ್ಶಿಸುವ ಮೂಲಕ ಮಕ್ಕಳು ತಮ್ಮ ಭವಿಷ್ಯವನ್ನು ಕಸಿದುಕೊಳ್ಳಬೇಡಿ ಎಂದು ಸರ್ಕಾರವನ್ನು ವಿನಂತಿಸಿದ್ದಾರೆ.

ದೊಮ್ಮಸಂದ್ರ ವರ್ತೂರು ರಸ್ತೆಯಲ್ಲಿ ಹೆಗ್ಗೊಂಡಹಳ್ಳಿ ಬಳಿ ಭಾರಿ ಗಾತ್ರದ ಆಲದ ಮರವನ್ನು ಕಡಿದಿರುವುದು

ನಗರದ ಹೊರವಲಯದಲ್ಲಿ 155 ಕಿಲೋ ಮೀಟರ್ ಉದ್ದದ ರಸ್ತೆ ಅಭಿವೃದ್ಧಿ ಯೋಜನೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (ಕೆಆರ್‌ಡಿಸಿಎಲ್) ಕೈಗೆತ್ತಿಕೊಂಡಿದೆ. ಈ ಯೋಜನೆಗೆ 8,561 ಮರಗಳನ್ನು ಬಲಿ ಪಡೆಯಲಾಗುತ್ತಿದೆ.

‘ಮರಗಳನ್ನು ಉಳಿಸಿಕೊಳ್ಳುವ ಮಾರ್ಗೋಪಾಯಗಳ ಬಗ್ಗೆ ಅಧಿಕಾರಿಗಳು ಏಕೆ ಯೋಚಿಸುತ್ತಿಲ್ಲ. ಮರಗಳು ನಶಿಸಿದಷ್ಟೂ ವಾತಾವರಣದಲ್ಲಿ ಕಾರ್ಬನ್ ಡೈಆಕ್ಸೈಡ್ ಪ್ರಮಾಣ ಹೆಚ್ಚಲಿದೆ. ಆಮ್ಲಜನಕದ ಪ್ರಮಾಣ ಕುಗ್ಗಲಿದೆ. ರಸ್ತೆ ವಿಸ್ತರಣೆಗೆ ಮರಗಳನ್ನು ಕಡಿಯುವುದರಲ್ಲಿ ಅರ್ಥವಿಲ್ಲ’ ಎನ್ನುತ್ತಾರೆ ಗ್ರೀನ್‌ಹುಡ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ವಿದ್ಯಾರ್ಥಿನಿ ರೈನಾ.

‘ಮರಗಳನ್ನು ಕತ್ತರಿಸಿದರೆ ಭವಿಷ್ಯದ ಪೀಳಿಗೆ ಸಂಕಷ್ಟಕ್ಕೆ ಸಿಲುಕಲಿದೆ. ಇಂತಹ ಭಾರಿ ಗಾತ್ರದ ಮರಗಳನ್ನು ಒಮ್ಮೆ ಕಳೆದುಕೊಂಡರೆ ಮತ್ತೆ ಅವುಗಳನ್ನು ಬೆಳೆಸುವುದು ಕಷ್ಟಸಾಧ್ಯ’ ಎಂದು ಇನ್ನೊಬ್ಬ ವಿದ್ಯಾರ್ಥಿನಿ ಶ್ರುತಿ ಅಭಿಪ್ರಾಯಪಟ್ಟರು.

ರಸ್ತೆ ಅಭಿವೃದ್ಧಿಗೆ 8,561 ಮರಗಳನ್ನು ಬಲಿ ಪಡೆಯುವುದನ್ನು ಪ್ರಶ್ನಿಸಿ ವಾಯ್ಸ್ ಆಫ್ ಸರ್ಜಾಪುರ, ಜಾಟ್ಕಾ ಡಾಟ್ ಆರ್ಗ್ ಮತ್ತು ರಜಿನಿ ಸಂತೋಷ್‌ ಅವರಿಂದ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿತ್ತು. ‘ಪರಿಸರಕ್ಕೆ ಸಂಬಂಧಿಸಿದ ಯಾವುದೇ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕಾಮಗಾರಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ(ಕೆಆರ್‌ಡಿಸಿಎಲ್) ಆರಂಭಿಸಿದೆ’ ಎಂದು ಆರೋಪಿಸಿದ್ದರು.

ಸಲ್ಲಿಕೆಯಾಗಿರುವ ಅರ್ಜಿಗಳನ್ನು ಆಧರಿಸಿ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ 2021ರ ಜನವರಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ (ಕೆಆರ್‌ಡಿಸಿಎಲ್) ನೋಟಿಸ್ ನೀಡಿತ್ತು. ಅನುಮತಿ ಪಡೆಯದೆಯೇ ಮರಗಳನ್ನು ಕಡಿಯದಂತೆ ಸೂಚಿಸಿತ್ತು.

‘ಈ ಸಂಬಂಧಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ವಿಳಂಬವಾಗುತ್ತಿದೆ. ಕೆಆರ್‌ಡಿಸಿಎಲ್‌ನವರು ಮರಗಳನ್ನು ಕಡಿಯುವುದನ್ನು ಮುಂದುವರಿಸಿದ್ದಾರೆ. ಹೊರ ವಲಯದ ಅನೇಕ ಪಾರಂಪರಿಕ ಮರಗಳನ್ನು ಕಳೆದುಕೊಂಡಿದ್ದೇವೆ. ಇನ್ನುಳಿದ ಮರಗಳನ್ನೂ ಕಳೆದುಕೊಳ್ಳಬೇಕಾಗುತ್ತದೆಯೇನೋ’ ಎಂದು ಕಳವಳ ವ್ಯಕ್ತಪಡಿಸುತ್ತಾರೆ ದೊಮ್ಮಸಂದ್ರ ನಿವಾಸಿಗಳು.

‘ಕತ್ತರಿಸಿರುವ ಮರಗಳಿಗೆ ಕೆಂಪುಬಣ್ಣದಿಂದ ಹಾಗೂ ಸ್ಥಳಾಂತರಿಸುವ ಮರಗಳಿಗೆ ಹಳದಿ ಬಣ್ಣದ ಗುರುತುಗಳನ್ನು ಅಧಿಕಾರಿಗಳು ಮಾಡಿದ್ದಾರೆ. ಇವುಗಳನ್ನು ಸ್ಥಳಾಂತರಿಸುವುದು ಅಷ್ಟರಲ್ಲೇ ಇದೆ. ಹಳೆಯ ನೇರಳೆ ಮರ, ಹುಣಸೆ ಮರಗಳು ಧರೆಗುರುಳುವುದನ್ನು ನೋಡುವಾಗ ನೋವಾಗುತ್ತದೆ’ ಎಂದು ವಾಯ್ಸ್ ಆಫ್ ಸರ್ಜಾಪುರದ ಜ್ಯೋತ್ಸ್ನಾ ಹೇಳಿದರು.

‘ನಗರದಲ್ಲಿ ಅಳಿದುಳಿದ ಹಸಿರನ್ನು ಉಳಿಸಿಕೊಳ್ಳಲು ನಾವು ಶಕ್ತಿ ಮೀರಿ ಪ್ರಯತ್ನಿಸಬೇಕು. ಈ ಹೋರಾಟಕ್ಕೆ ಎಲ್ಲರೂ ಕೈಜೋಡಿಸಬೇಕು’ ಎಂದು ಅವರು ಒತ್ತಾಯಿಸಿದರು.

‘ಫಲ ನೀಡದ ಪ್ರತಿಭಟನೆ’

‘ಮರಗಳನ್ನು ಉಳಿಸಿಕೊಳ್ಳುವ ಸಲುವಾಗಿ ನಾವು ಅನೇಕ ಬಾರಿ ಪ್ರತಿಭಟನೆ ನಡೆಸಿದ್ದೇವೆ. ಅಧಿಕಾರಿಗಳಿಗೆ 200ಕ್ಕೂ ಅಧಿಕ ಇ–ಮೇಲ್‌ಗಳನ್ನೂ ಕಳುಹಿಸಿದ್ದೇವೆ. ನಮ್ಮ ಪ್ರಯತ್ನ ಫಲ ನೀಡಿಲ್ಲ. ಜನರ ದನಿಯನ್ನು ಅಧಿಕಾರಿಗಳು ಕಿವಿಗೇ ಹಾಕಿಕೊಂಡಿಲ್ಲ’ ಎಂದು ಜ್ಯೋತ್ಸ್ನಾ ಬೇಸರ ವ್ಯಕ್ತಪಡಿಸಿದರು.

‘ಪ್ರಕರಣ ನ್ಯಾಯಾಲಯದಲ್ಲಿರುವಾಗಲೂ ಮರ ಕಡಿಯುವ ಪ್ರಕ್ರಿಯೆ ಮುಂದುವರಿದಿದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿ ಇತ್ಯರ್ಥವಾಗುವವರೆಗಾದರೂ ಮರ ಕಡಿಯಬಾರದು’ ಎಂದು ಒತ್ತಾಯಿಸಿದರು.

ಉಪ ಲೋಕಾಯುಕ್ತರ ಭೇಟಿ: ಪರಿಶೀಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ‘ಒಳಚರಂಡಿ, ಕುಡಿಯುವ ನೀರು, ರಸ್ತೆ ಸೇರಿದಂತೆ ವಿವಿಧ ಕಾಮಗಾರಿಗಳು ಕಳಪೆ ಆಗದಂತೆ ಪಾಲಿಕೆ ಅಧಿಕಾರಿಗಳು ನಿಗಾ ವಹಿಸಬೇಕು’ ಎಂದು ಕರ್ನಾಟಕ ಉಪ ಲೋಕಾಯುಕ್ತ ಬಿ.ಎಸ್.ಪಾಟೀಲ್ ಸೂಚಿಸಿದರು.

ರಾಜರಾಜೇಶ್ವರಿ ನಗರ ವಲಯದ ಪಾಲಿಕೆ ಕಚೇರಿಗೆ ದಿಢೀರ್ ಭೇಟಿ ನೀಡಿ, ಅಲ್ಲಿನ ಕಾರ್ಯವೈಖರಿಯನ್ನು ಪರಿಶೀಲಿಸಿದರು.

ಉಪ ಲೋಕಾಯುಕ್ತ ಬಿ.ಎಸ್‌.ಪಾಟೀಲ್ ಅವರು ವಿವಿಧ ಇಲಾಖೆಗಳ ಅಧಿಕಾರಿಗಳಿಂದ ಮಾಹಿತಿ ಪಡೆದರು. ಪಾಲಿಕೆ ಜಂಟಿ ಆಯುಕ್ತ ಎಸ್‌.ನಾಗರಾಜು ಹಾಗೂ ಅಧಿಕಾರಿಗಳು ಇದ್ದರು

ಬಳಿಕ ಅವರು, ‘ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲಿ ಕಳಪೆ ಕಾಮಗಾರಿ, ಸ್ವಚ್ಛತೆ, ಕಸದ ಸಮಸ್ಯೆ, ಮಳೆ ಬಂದಾಗ ರಾಜಕಾಲುವೆ ನೀರು ಹಾಗೂ ಒಳಚರಂಡಿ ನೀರು ಬಡಾವಣೆಯ ಮನೆಗಳಿಗೆ ನುಗ್ಗಿ ತೊಂದರೆಯಾಗುತ್ತಿರುವ ಬಗ್ಗೆ ಹೆಚ್ಚು ವರದಿಯಾಗುತ್ತಿವೆ. ಇನ್ನು ಮುಂದೆ ಈ ರೀತಿ ಆಗದಂತೆ ಅಧಿಕಾರಿಗಳು ಚುರುಕಾಗಿ ಕಾರ್ಯನಿರ್ವಹಿಸಬೇಕು’ ಎಂದರು.

‘ಪ್ರತಿ ಮನೆಯಿಂದ ಹಸಿ, ಒಣ ಕಸ ಸಂಗ್ರಹಿಸಬೇಕು. ಈ ಬಗ್ಗೆ ಆಗಾಗ್ಗೆ ಜಾಗೃತಿ ಮೂಡಿಸಬೇಕು. ಕಸ ಸಂಗ್ರಹಣೆ ವಾಹನಕ್ಕೆ ಕಸ ನೀಡದ ಅಪಾರ್ಟ್‌ಮೆಂಟ್ ಸಮುಚ್ಚಯ ಹಾಗೂ ಮನೆಗಳನ್ನು ಗುರುತಿಸಿ, ದಂಡ ವಿಧಿಸಬೇಕು’ ಎಂದು ಸೂಚಿಸಿದರು.

‘ಅನಧಿಕೃತ ಹಾಗೂ ವಾಸಯೋಗ್ಯವಲ್ಲದ ಕಟ್ಟಡಗಳನ್ನು ಗುರುತಿಸಬೇಕು. ಮಾಲೀಕರಿಗೆ ನೋಟಿಸ್ ನೀಡಿ ತೆರವುಗೊಳಿಸುವ ಕೆಲಸ ಮಾಡಬೇಕು’ ಎಂದೂ ಹೇಳಿದರು.

‘ಮಾಗಡಿ ರಸ್ತೆ, ವಿಶ್ವೇಶ್ವರಯ್ಯ ಬಡಾವಣೆ ಮುಖ್ಯರಸ್ತೆ, ಲಗ್ಗೆರೆ, ಪೀಣ್ಯ, ಗೊರಗುಂಟೆ ಪಾಳ್ಯ, ವರ್ತುಲ ರಸ್ತೆ ಸೇರಿದಂತೆ ಜಾಲಹಳ್ಳಿ, ಮತ್ತಿಕೆರೆ ವ್ಯಾಪ್ತಿಯಲ್ಲಿ ಹಾಳಾಗಿರುವ ರಸ್ತೆಗಳನ್ನು ದುರಸ್ತಿಪಡಿಸಿ, ಜನರಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು’ ಎಂದರು.

ಪಾಲಿಕೆ ಉಪ ಆಯುಕ್ತ ಬಿ.ಎಚ್. ಮಲ್ಲಿಕಾರ್ಜುನ್, ಮುಖ್ಯ ಎಂಜಿನಿಯರ್ ನರಸರಾಮರಾವ್ ಸೇರಿದಂತೆ ವಿವಿಧ ವಿಭಾಗಗಳ ಅಧಿಕಾರಿಗಳು ಹಾಜರಿದ್ದರು.

ಸ್ಫೋಟ: ಇಬ್ಬರು ಯೋಧರ ಸಾವು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯಲ್ಲಿ ಶನಿವಾರ ಗಡಿ ನಿಯಂತ್ರಣ ರೇಖೆಯ ಬಳಿ ನೆಲದಡಿ ಹುದುಗಿಸಿದ್ದ ಸ್ಫೋಟಕ ಸಿಡಿದು ಇಬ್ಬರು ಯೋಧರು ಮೃತಪಟ್ಟಿದ್ದು, ಇನ್ನೊಬ್ಬರು ಗಾಯಗೊಂಡಿದ್ದಾರೆ.

ನೌಶೆರಾ ವಲಯದಲ್ಲಿ ಸೇನಾ ಸಿಬ್ಬಂದಿ ಗಸ್ತು ತಿರುಗುವಾಗ ಸ್ಫೋಟ ಸಂಭವಿಸಿತು. ತೀವ್ರ ಗಾಯಗೊಂಡಿದ್ದ ಯೋಧರ ಆಸ್ಪತ್ರೆಗೆ ಒಯ್ದಿದ್ದು, ಅಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ಇಬ್ಬರು ಮೃತಪಟ್ಟರು. ಒಬ್ಬರಿಗೆ ಚಿಕಿತ್ಸೆ ಒದಗಿಸಲಾಗುತ್ತಿದೆ ಎಂದು ರಕ್ಷಣಾ ಇಲಾಖೆ ಸಾರ್ವಜನಿಕ ಸಂಪರ್ಕಾಧಿಕಾರಿ ಲೆಫ್ಟಿನಂಟ್ ಕರ್ನಲ್ ದೇವೇಂದರ್ ಆನಂದ್ ತಿಳಿಸಿದರು.

ಒಳನುಸುಳುವಿಕೆ ತಡೆಗೆ ಸಿಬ್ಬಂದಿ ಗಸ್ತು ತಿರುಗುವಾಗ ಅವಘಡ ಸಂಭವಿಸಿದೆ. ಒಳನುಸುಳುವಿಕೆ ತಡೆ ಕ್ರಮವಾಗಿ ಅಲ್ಲಲ್ಲಿ ಸ್ಫೋಟಕ ಹುದುಗಿಸಿಡಲಾಗಿತ್ತು. ಬಿಹಾರ ಮೂಲದ ಲೆಫ್ಟಿನಂಟ್ ರಿಶಿ ಕುಮಾರ್ ಮತ್ತು ಪಂಜಾಬ್ ಮೂಲದ ಯೋಧ ಮಂಜೀತ್ ಮೃತಪಟ್ಟವರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯಮಿಗಳಿಗೆ ಬೆದರಿಕೆ ಇಬ್ಬರು ಆರೋಪಿಗಳು ಪೊಲೀಸ್ ವಶಕ್ಕೆ

ಶಿವಮೊಗ್ಗ: ಬೆಂಗಳೂರಿನ ಪರಪ್ಪನ ಅಗ್ರಹಾರ ಕಾರಾಗೃಹದಿಂದ ಶಿವಮೊಗ್ಗದ ಉದ್ಯಮಿಗಳಿಗೆ ಬೆದರಿಕೆ ಹಾಕಿ, ಹಣ ವಸೂಲಿ ಮಾಡುತ್ತಿದ್ದ ಪ್ರಕರಣದ ಇಬ್ಬರು ಆರೋಪಿಗಳನ್ನು ಶನಿವಾರ ಶಿವಮೊಗ್ಗಕ್ಕೆ ಕರೆತಂದು ವಿಚಾರಣೆ ನಡೆಸಲಾಯಿತು.

ಭಟ್ಕಳದ ಸದ್ದಾಂ ಹುಸೇನ್, ಭದ್ರಾವತಿಯ ನಾಗೇಂದ್ರ ಅವರನ್ನು ಬಿಗಿ ಭದ್ರತೆಯಲ್ಲಿ ಕರೆತರಲಾಯಿತು.

ಶಿವಮೊಗ್ಗದ ಉದ್ಯಮಿ ಶರತ್ ಎನ್ನುವವರಿಗೆ ಬೆದರಿಕೆ ಕರೆ ಬಂದಿತ್ತು. ಪ್ರಕರಣ ಸೈಬರ್ ಅಪರಾಧ ಠಾಣೆಯಲ್ಲಿ ದಾಖಲಾಗಿತ್ತು. ಆರೋಪಿಗಳು ಕರೆ ಮಾಡಿ ಸೂಚಿಸಿದ್ದ ಖಾತೆಗೆ ಉದ್ಯಮಿ ಹಣ ಹಾಕಿದ್ದ ಜಾಡು ಹಿಡಿದ ಪೊಲೀಸರು ಭಟ್ಕಳದ ಸಾಯಿರಾ ಬಾನು ಅವರನ್ನು ಬಂಧಿಸಿದ್ದರು. ಆರೋಪಿ ಸದ್ದಾಂ ಭದ್ರಾವತಿ ಮೂಲದ ಮತ್ತೊಬ್ಬ ಆರೋಪಿ ನಾಗೇಂದ್ರ ಜತೆ ಸೇರಿಕೊಂಡು ಪರಪ್ಪನ ಅಗ್ರಹಾರ ಕಾರಾಗೃಹದಿಂದ ಶಿವಮೊಗ್ಗದ ಉದ್ಯಮಿಗಳಿಗೆ ಬೆದರಿಕೆ ಕರೆ ಮಾಡಿರುವುದು ದೃಢಪಟ್ಟಿತ್ತು.

ಬೆಂಗಳೂರಿನಲ್ಲಿ ಪತ್ತೆಯಾಗಿರುವ ರೋಹಿಂಗ್ಯಾಗಳು

‘ಸುಪ್ರೀಂ’ ಆದೇಶ ಪಾಲನೆಗೆ ಬದ್ಧ: ರಾಜ್ಯ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ರೋಹಿಂಗ್ಯಾಗಳ ಕುರಿತು ಸುಪ್ರೀಂ ಕೋರ್ಟ್‌ಗೆ ಪರಿಷ್ಕೃತ ಹೇಳಿಕೆ ಸಲ್ಲಿಸಿರುವ ರಾಜ್ಯ ಸರ್ಕಾರ, ಅವರನ್ನು ಗಡಿಪಾರು ಮಾಡುವ ಯೋಚನೆ ಇಲ್ಲ ಎಂಬ ಇತ್ತೀಚಿನ ಹೇಳಿಕೆಯಿಂದ ಹಿಂದೆ ಸರಿದಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಇತರೆಡೆ ಗುರುತಿಸಲಾಗಿರುವ 126 ಜನ ರೋಹಿಂಗ್ಯಾಗಳನ್ನು ಪೊಲೀಸರು ಯಾವುದೇ ನಿರಾಶ್ರಿತರ ಶಿಬಿರದಲ್ಲಿ ಅಥವಾ ಬಂಧನ ಕೇಂದ್ರದಲ್ಲಿ ಇರಿಸಿಲ್ಲ ಎಂದು ಕರ್ನಾಟಕ ಗೃಹ ಇಲಾಖೆಯು ಅಕ್ಟೋಬರ್ 26ರಂದು ಸಲ್ಲಿಸಿರುವ ಪರಿಷ್ಕೃತ ಹೇಳಿಕೆಯಲ್ಲಿ ಹೇಳಿದೆ.

ರಾಜ್ಯದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ರೋಹಿಂಗ್ಯಾಗಳನ್ನು ಗಡಿಪಾರು ಮಾಡಲು ನಿರ್ದೇಶನ ನೀಡುವಂತೆ ಕೋರಿ ಬಿಜೆಪಿ ಮುಖಂಡ, ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು 2017ರಲ್ಲಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್)ಗೆ ಸಂಬಂಧಿಸಿದಂತೆ ಅಕ್ಟೋಬರ್ ಮೊದಲ ವಾರ ನ್ಯಾಯಪೀಠಕ್ಕೆ ಲಿಖಿತ ಹೇಳಿಕೆ ಸಲ್ಲಿಸಿದ್ದ ರಾಜ್ಯ ಸರ್ಕಾರ, ವಿಚಾರಣೆಗೆ ಅರ್ಹವಲ್ಲದ ಹಾಗೂ ಸಮರ್ಥನೀಯವಲ್ಲದ ಈ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಮನವಿ ಮಾಡಿತ್ತು.

ಅರ್ಜಿದಾರರು ರಾಜ್ಯ ಸರ್ಕಾರದ ವಿರುದ್ಧ ಯಾವುದೇ ನಿರ್ದಿಷ್ಟ ಆರೋಪ ಮಾಡಿಲ್ಲ. ಅಲ್ಲದೆ, ಈ ಕುರಿತು ನ್ಯಾಯಪೀಠ ಹೊರಡಿಸುವ ಯಾವುದೇ ಆದೇಶವನ್ನು ಅಕ್ಷರಶಃ ಪಾಲಿಸಲಾಗುವುದು ಎಂದು ಇದೀಗ ಸಲ್ಲಿಸಿರುವ ಹೇಳಿಕೆಯಲ್ಲಿ ಸರ್ಕಾರ ತಿಳಿಸಿದೆ.

72 ಜನ ರೋಹಿಂಗ್ಯಾಗಳು ಬೆಂಗಳೂರಿನ ವಿವಿಧೆಡೆ ಕಾರ್ಯ ನಿರ್ವಹಿಸುತ್ತಿದ್ದು, ಪೊಲೀಸರು ಅವರನ್ನು ಗಡಿಪಾರು ಮಾಡಲು ಬಲವಂತದ ಕ್ರಮ ಕೈಗೊಂಡಿಲ್ಲ ಎಂದು ರಾಜ್ಯ ಸರ್ಕಾರ ಈ ಮೊದಲು ಲಿಖಿತ ಹೇಳಿಕೆಯಲ್ಲಿ ನ್ಯಾಯಪೀಠಕ್ಕೆ ವಿವರಿಸಿತ್ತು.

ಬಾಂಗ್ಲಾದೇಶಿಯರು ಹಾಗೂ ರೊಹಿಂಗ್ಯಾಗಳು ಸೇರಿದಂತೆ ಎಲ್ಲ ಅಕ್ರಮ ವಲಸಿಗರು ಮತ್ತು ನುಸುಳುಕೋರರನ್ನು ಒಂದು ವರ್ಷದೊಳಗೆ ಪತ್ತೆ ಮಾಡಿ, ಬಂಧಿಸುವ ಮೂಲಕ ಗಡಿಪಾರು ಮಾಡುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿರ್ದೇಶನ ನೀಡಬೇಕು ಎಂದು ಅರ್ಜಿ ಮೂಲಕ ಕೋರಿದ್ದ ಉಪಾಧ್ಯಾಯ, ಅಕ್ರಮ ವಲಸೆ ಮತ್ತು ಒಳನುಸುಳುವಿಕೆ ತಡೆಯಲು ಕಾನೂನುಗಳಿಗೆ ಅಗತ್ಯ ತಿದ್ದುಪಡಿ ತರುವಂತೆಯೂ ಸೂಚಿಸಬೇಕು ಎಂದು ಕೋರಿದ್ದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ವಸಂತಕುಮಾರ್

ಪುಸ್ತಕಗಳು ಆಂತರಿಕ ಅಂಧಕಾರ ತೊಲಗಿಸುತ್ತವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಾಹಿತ್ಯ ವ್ಯಕ್ತಿತ್ವವನ್ನು ಬೆಳೆಸುವ ಕೆಲಸ ಮಾಡುತ್ತದೆ. ಪುಸ್ತಕಗಳು ಒಳಗಿನ ಅಂಧಕಾರವನ್ನು ಹೋಗಲಾಡಿಸುತ್ತವೆ’ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಬಿ.ವಿ.ವಸಂತ ಕುಮಾರ್ ಶನಿವಾರ ಅಭಿಪ್ರಾಯಪಟ್ಟರು.

ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ ಸಂಸ್ಥೆಯು ಸ್ವಾತಂತ್ರ್ಯ ಅಮೃತ ಮಹೋತ್ಸವ ಹಾಗೂ ರಾಜ್ಯೋತ್ಸವದ ಅಂಗವಾಗಿ ಆಯೋಜಿಸಿದ್ದ ‘ಕನ್ನಡ ಪುಸ್ತಕ ಹಬ್ಬ’ ಪುಸ್ತಕಗಳ ಮಾರಾಟ ಮತ್ತು ಪ್ರದರ್ಶನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕನ್ನಡ ಪುಸ್ತಕಗಳ ಪ್ರದರ್ಶನವನ್ನು ಬಿ.ವಿ.ವಸಂತಕುಮಾರ್ ಹಾಗೂ ಪತ್ರಕರ್ತ ಜೋಗಿ ವೀಕ್ಷಿಸಿದರು

‘ರಾಷ್ಟ್ರೋತ್ಥಾನ ಸಾಹಿತ್ಯ ಪ್ರಕಾಶನ 55ಕ್ಕೂ ಹೆಚ್ಚು ವರ್ಷಗಳಿಂದ ರಾಷ್ಟ್ರೀಯತೆಯನ್ನು ಬಿತ್ತುವ ಕಾರ್ಯವನ್ನು ಮಾಡುತ್ತಿದೆ. ಹಾಗಾಗಿ, ನವ್ಯ, ನವೋದಯ ಮುಂತಾದ ಕನ್ನಡ ಸಾಹಿತ್ಯದ ವಿವಿಧ ಧಾರೆಗಳಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯದ್ದೂ ಬಹುಮುಖ್ಯವಾದ ಧಾರೆ. ಇದನ್ನು ಗುರುತಿಸಿ, ಚರ್ಚೆ ನಡೆಸುವ ಅಗತ್ಯವಿದೆ’ ಎಂದರು.

ಪತ್ರಕರ್ತ ಜೋಗಿ,‘ಪುಸ್ತಕ ಓದುವುದರಿಂದ ವ್ಯಕ್ತಿಯ ಏಳಿಗೆ ಸಾಧ್ಯ. ಓದು ಬದುಕನ್ನು ವಿಸ್ತರಿಸುತ್ತದೆ. ಹಾಗಾಗಿ, ಓದು ವ್ಯಕ್ತಿತ್ವದ ಭಾಗವಾಗಬೇಕು. ಜಗತ್ತಿನ ನೂರು ಬದುಕುಗಳನ್ನು ಅನುಭವಿಸಲು ಪುಸ್ತಕ ಓದಬೇಕು’ ಎಂದರು.

ರಾಷ್ಟ್ರೋತ್ಥಾನ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ.ದಿನೇಶ್ ಹೆಗ್ಡೆ ಮಾತನಾಡಿದರು.

ನ.28ರವರೆಗೆ ಪುಸ್ತಕ ಹಬ್ಬ:‘ಕನ್ನಡ ಪುಸ್ತಕ ಹಬ್ಬ’ದ ಪ್ರದರ್ಶನ ಮತ್ತು ಮಾರಾಟ ನ.28ರವರೆಗೆ ನಡೆಯಲಿದೆ. ವಾರಾಂತ್ಯದಲ್ಲಿ ವಿಶೇಷ ಉಪನ್ಯಾಸಗಳು, ಪುಸ್ತಕ ಲೋಕಾರ್ಪಣೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಇರಲಿವೆ. ಮೂರು ಸಾವಿರಕ್ಕೂ ಅಧಿಕ ಪುಸ್ತಕಗಳು ಲಭ್ಯವಿದ್ದು, ರಾಷ್ಟ್ರೋತ್ಥಾನ ಸಾಹಿತ್ಯದ ಪುಸ್ತಕಗಳಿಗೆ ಶೇ 40ರಷ್ಟು ರಿಯಾಯಿತಿ ಹಾಗೂ ಇತರ ಪ್ರಕಾಶಕರ ಪುಸ್ತಕಗಳಿಗೆ ಶೇ 20ರಷ್ಟು ರಿಯಾಯಿತಿ ಲಭ್ಯ ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್ ಮಾರ್ಗಸೂಚಿ ಪಾಲನೆ ಕಡ್ಡಾಯ: ರಾಜ್ಯ ಸರ್ಕಾರದ ಆದೇಶ

ರಾಜ್ಯೋತ್ಸವಕ್ಕೆ 500 ಜನರ ಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ರಾಜ್ಯೋತ್ಸವ ಆಚರಣೆಯ ಸಮಾರಂಭಗಳಿಗೆ 500 ಜನರ ಮಿತಿಯನ್ನು ವಿಧಿಸಿ ರಾಜ್ಯ ಸರ್ಕಾರ ಶನಿವಾರ ಆದೇಶ ಹೊರಡಿಸಿದೆ.

'ಧ್ವಜಾರೋಹಣ ಸ್ಥಳದಲ್ಲಿ ಕಡ್ಡಾಯವಾಗಿ ಅಂತರ ಕಾಯ್ದುಕೊಳ್ಳಬೇಕು ಮತ್ತು ಮಾಸ್ಕ್ ಧರಿಸಿರಬೇಕು. ಕನಿಷ್ಠ ಪ್ರಮಾಣದ ಮನರಂಜನಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಸರ್ಕಾರ ಹೊರಡಿಸುವ ಎಲ್ಲ ಮಾರ್ಗಸೂಚಿಗಳನ್ನೂ ಪಾಲಿಸುವುದು ಕಡ್ಡಾಯ' ಎಂದು ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಆದೇಶದಲ್ಲಿ ತಿಳಿಸಿದ್ದಾರೆ.

ಸಂಘ, ಸಂಸ್ಥೆಗಳು ರಾಜ್ಯೋತ್ಸವ ಸಮಾರಂಭಗಳಿಗೂ ಮೊದಲು ಪೊಲೀಸ್ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳು, ವಿದ್ಯುತ್ ಸರಬರಾಜು ಕಂಪನಿಗಳು, ಆರೋಗ್ಯ, ಅಗ್ನಿಶಾಮಕ ಇಲಾಖೆಗಳು, ಮಾಲಿನ್ಯ ನಿಯಂತ್ರಣ ಮಂಡಳಿ ಸೇರಿದಂತೆ ಸಂಬಂಧಿಸಿದ ಇಲಾಖೆಗಳಿಂದ ಪೂರ್ವಾನುಮತಿ ಪಡೆಯಬೇಕು ಎಂದು ಸೂಚಿಸಲಾಗಿದೆ.

ಸಣ್ಣ ಮಕ್ಕಳು, ಹಿರಿಯ ನಾಗರಿಕರು, ಗಂಭೀರ ಸ್ವರೂಪದ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸದಂತೆ ಎಚ್ಚರಿಕೆ ವಹಿಸಬೇಕು ಎಂದು ತಿಳಿಸಲಾಗಿದೆ.

ಕೋವಿಡ್ ಉಸ್ತುವಾರಿಗಳಿಂದ ಧ್ವಜಾರೋಹಣ: ನವೆಂಬರ್ 1ರಂದು ನಡೆಯುವ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಸಮಾರಂಭಗಳಲ್ಲಿ ಕೋವಿಡ್ ನಿಯಂತ್ರಣಕ್ಕೆ ಉಸ್ತುವಾರಿಗಳಾಗಿ ನಿಯೋಜಿಸಿರುವ ಸಚಿವರೇ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬೆಂಗಳೂರಿನಲ್ಲಿ ನಡೆಯುವ ರಾಜ್ಯಮಟ್ಟದ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸುವರು. ಉಳಿದಂತೆ 26 ಜಿಲ್ಲೆಗಳಲ್ಲಿ ಕೋವಿಡ್ ಉಸ್ತುವಾರಿಗಾಗಿ ನಿಯೋಜಿಸಿರುವ ಸಚಿವರು ಧ್ವಜಾರೋಹಣ ಮಾಡುವರು. ಚಾಮರಾಜನಗರ, ರಾಯಚೂರು, ಬಳ್ಳಾರಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳೇ ಧ್ವಜಾರೋಹಣ ನೆರವೇರಿಸಬೇಕು ಎಂದು ಮುಖ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಹಸಿರು ಪಟಾಕಿಗೆ ಮಾತ್ರ ಅವಕಾಶ

ದೀಪಾವಳಿ ಹಬ್ಬದಲ್ಲಿ ಸುಪ್ರೀಂಕೋರ್ಟ್ ಆದೇಶದಂತೆ ಹಸಿರು ಪಟಾಕಿ ಮಾತ್ರ ಬಳಕೆ ಮಾಡಬೇಕು ಎಂದು ನಿರ್ಬಂಧ ವಿಧಿಸಿ ಮುಖ್ಯ ಕಾರ್ಯದರ್ಶಿ ಆದೇಶ ಹೊರಡಿಸಿದ್ದಾರೆ. ನವೆಂಬರ್ 1ರಿಂದ 10ರವರೆಗೆ ಹಸಿರು ಪಟಾಕಿ ಮಾರಾಟದ ಮಳಿಗೆಗಳನ್ನು ಮಾತ್ರ ತೆರೆಯಬಹುದು. ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡಿರುವ ಸ್ಥಳಗಳಲ್ಲಿ ಮಾತ್ರ ತಾತ್ಕಾಲಿಕ ಪಟಾಕಿ ಮಾರಾಟ ಮಳಿಗೆಗಳನ್ನು ತೆರಯಬೇಕು. ಗ್ರಾಹಕರ ದೇಹದ ತಾಪಮಾನ ಪರೀಕ್ಷೆ ಹಾಗೂ ಸ್ಯಾನಿಟೈಸರ್ ಒದಗಿಸುವ ವ್ಯವಸ್ಥೆ ಮಾಡಬೇಕು ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಅದರ ಬೆನ್ನಲ್ಲೇ ಪತ್ರಿಕಾ ಪ್ರಕಟಣೆ ಹೊರಡಿಸಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಪಟಾಕಿ ಹಚ್ಚುವಾಗ ಸುರಕ್ಷತಾ ಕ್ರಮಗಳನ್ನು ಅನುಸರಿಸುವಂತೆ ಸಲಹೆ ನೀಡಿದ್ದಾರೆ.

ಮಕ್ಕಳ ಕ್ಯಾನ್ಸರ್ ಜಾಗೃತಿಗೆ ಸೈಕಲ್ ರ‍್ಯಾಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳ ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸಲು ಹಾಗೂ ನಿಧಿ ಸಂಗ್ರಹಿಸುವ ಸಲುವಾಗಿ ಮಾರತ್ತಹಳ್ಳಿಯ ರೈನ್ ಬೋ ಮಕ್ಕಳ ಆಸ್ಪತ್ರೆಯು ಸೈಕಲ್ ರ‍್ಯಾಲಿಯನ್ನು ಶನಿವಾರ ಆಯೋಜಿಸಿತ್ತು.

ಸೈಕಲ್ ರ‍್ಯಾಲಿಗೆ ಶಾಸಕ ಅರವಿಂದ ಲಿಂಬಾವಳಿ ಚಾಲನೆ ನೀಡಿದರು. ರೈನ್ ಬೋ ಮಕ್ಕಳ ಆಸ್ಪತ್ರೆಯ ಸಿಬ್ಬಂದಿ ಇದ್ದಾರೆ

ಸೈಕಲ್ ರ‍್ಯಾಲಿಗೆ ಚಾಲನೆ ನೀಡಿದ ಮಹದೇವಪುರ ಶಾಸಕ ಅರವಿಂದ ಲಿಂಬಾವಳಿ, 'ರೈನ್ ಬೋ ಮಕ್ಕಳ ಆಸ್ಪತ್ರೆಯ ಸಾಮಾಜಿಕ ಕಳಕಳಿ ಶ್ಲಾಘನೀಯ. ಕ್ಯಾನ್ಸರ್‌ನಿಂದ ಬಳಲುತ್ತಿರುವ ಹಲವು ಮಕ್ಕಳ ಬದುಕಿನಲ್ಲಿ ಆಸ್ಪತ್ರೆಯು ಹೊಸ ಚೈತನ್ಯ ಮೂಡಿಸುತ್ತಿದೆ. ಚಿಕಿತ್ಸೆಯ ವೆಚ್ಚ ಭರಿಸಲು ಅಸಹಾಯಕವಾದ ಬಡ ಕುಟುಂಬಗಳಿಗೆ ಈ ನಿಧಿ ಸಂಗ್ರಹಣೆ ಕಾರ್ಯಕ್ರಮವು ನೆರವಾಗಲಿದೆ' ಎಂದರು.

ರೈನ್ ಬೋ ಮಕ್ಕಳ ಆಸ್ಪತ್ರೆಯ ಮಕ್ಕಳ ತೀವ್ರ ನಿಗಾ ಘಟಕದ ಮುಖ್ಯಸ್ಥ ಡಾ.ರಕ್ಷಯ್ ಶೆಟ್ಟಿ, 'ಕ್ಯಾನ್ಸರ್ ಕಾಣಿಸಿಕೊಳ್ಳುವುದು ವಿರಳವೇನಲ್ಲ. ಪ್ರಾರಂಭದ ಹಂತದಲ್ಲೇ ಅದನ್ನು ಗುರುತಿಸಿದರೆ, ಗುಣಪಡಿಸುವುದು ತುಂಬಾ ಸುಲಭ. ತೀವ್ರತೆ ಗುರುತಿಸಿ ಅದಕ್ಕೆ ತಕ್ಕ ಚಿಕಿತ್ಸೆ ನೀಡಿದರೆ ಮಕ್ಕಳು ಬೇಗನೆ ಗುಣವಾಗುತ್ತಾರೆ' ಎಂದರು.

ಆಸ್ಪತ್ರೆಯ ಕ್ಯಾನ್ಸರ್ ತಜ್ಞೆ ಡಾ.ವಸುಧಾ ಎನ್.ರಾವ್,'ಸೆಪ್ಟೆಂಬರ್ ತಿಂಗಳನ್ನು ಮಕ್ಕಳ ಕ್ಯಾನ್ಸರ್ ಜಾಗೃತಿ ತಿಂಗಳು' ಎಂದು ಆಚರಿಸಲಾಗುತ್ತದೆ. ಬಡ ಮಕ್ಕಳ ಚಿಕಿತ್ಸೆಗೆಂದು ನಿಧಿ ಸಂಗ್ರಹಣೆಯನ್ನೂ ಮಾಡಲಾಗುತ್ತಿದೆ. ಕ್ಯಾನ್ ಕಿಡ್ಸ್ ಎಂಬ ಸಂಸ್ಥೆ ಮಕ್ಕಳಿಗೆ ಚಿಕಿತ್ಸೆ ಕೊಡಿಸಲು ನೆರವಾಗಿದ್ದು, ನಮ್ಮ ಜೊತೆ ಕೈ ಜೋಡಿಸಿದೆ' ಎಂದರು.

ರ‍್ಯಾಲಿಯಲ್ಲಿ ನೂರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು, 25 ಕಿ.ಮೀ. ವರೆಗೆ ಚಲಿಸಿ ಜಾಗೃತಿ ಮೂಡಿಸಿದರು. ಈ ಕಾರ್ಯಕ್ರಮದ ಅತಿಥಿ ಶ್ರುತಿ ಗೌಡ ಸೈಕಲ್ ತುಳಿಯುವ ಮೂಲಕ ಸಹಸವಾರರಲ್ಲಿ ಉತ್ಸಾಹ ತುಂಬಿದರು.

ಕೋವಿಡ್: 17 ಜಿಲ್ಲೆಯಲ್ಲಿ 50ಕ್ಕಿಂತ ಕಡಿಮೆ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 17 ಜಿಲ್ಲೆಗಳಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿದ್ದು, ಸದ್ಯ 8,708 ಸೋಂಕಿತರು ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಗದಗ ಹಾಗೂ ಬೀದರ್ ಜಿಲ್ಲೆಯು ಕೋವಿಡ್ ಮುಕ್ತವಾಗಿದೆ. ಒಂದು ದಿನದ ಅವಧಿಯಲ್ಲಿ 1.08 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 347 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.31 ರಷ್ಟು ವರದಿಯಾಗಿದೆ. 6 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್ ಸೇರಿದಂತೆ 8 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು ವರದಿಯಾಗಿಲ್ಲ.

ಬೆಂಗಳೂರಿನಲ್ಲಿ 166 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.88 ಲಕ್ಷ ದಾಟಿದೆ.

ಸೋಂಕಿತರಲ್ಲಿ 255 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.41 ಲಕ್ಷ ದಾಟಿದೆ.

10 ಮರಣ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬೆಂಗಳೂರಿನಲ್ಲಿ ನಾಲ್ವರು, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ದಾವಣಗೆರೆ, ಗದಗ, ಹಾಸನ ಹಾಗೂ ಮೈಸೂರಿನಲ್ಲಿ ತಲಾ ಒಬ್ಬರು ಸಾವಿಗೀಡಾಗಿದ್ದಾರೆ. ಮರಣ ಪ್ರಮಾಣ ದರವು ಶೇ 1.31 ರಷ್ಟು ದೃಢಪಟ್ಟಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 38,071ಕ್ಕೆ ಏರಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ
ಕೋವಿಡ್ ಅಂಕಿ–ಅಂಶ

12,51,735 ▲ ಒಟ್ಟು ಸೋಂಕಿತರು
12,51,569 ನಿನ್ನೆಯ ವಿವರ

6,605 ▲	12,28,855 ▲	16,274 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	166 ▼
ಗುಣಮುಖ	100 ▼
ಸಾವು	04 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್



ಯುಜಿಸಿ ಮಾಜಿ ಅಧ್ಯಕ್ಷ ಪ್ರೊ. ಸುಖದೇವ್ ಥೋರಟ್

ಎನ್‌ಇಪಿ: ಬಡವರಿಗೆ ಉನ್ನತ ಶಿಕ್ಷಣ ದೂರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಹೆಸರಿನಲ್ಲಿ ದೇಶದ ಬಡವರು ಮತ್ತು ಮಧ್ಯಮ ವರ್ಗದಲ್ಲಿನ ದೊಡ್ಡ ಸಂಖ್ಯೆಯ ಜನರನ್ನು ಉನ್ನತ ಶಿಕ್ಷಣದಿಂದ ದೂರ ಮಾಡುವ ಕೆಲಸ ನಡೆಯುತ್ತಿದೆ ಎಂದು ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಮಾಜಿ ಅಧ್ಯಕ್ಷ ಪ್ರೊ. ಸುಖದೇವ್ ಥೋರಟ್ ಹೇಳಿದರು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯು 'ಎನ್‌ಇಪಿಯ ವಿನಾಶಕಾರಿ ಪರಿಣಾಮಗಳು' ಕುರಿತು ಶನಿವಾರ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು,'ಎನ್‌ಇಪಿ ರೂಪಿಸಿದ ಸಮಿತಿ ಭಾರತದ ಶಿಕ್ಷಣ ವ್ಯವಸ್ಥೆಯನ್ನು ಸರಿಯಾಗಿ ಅಧ್ಯಯನ ಮಾಡಿಲ್ಲ. ಗುಣಮಟ್ಟದ ಶಿಕ್ಷಣದ ಹೆಸರಿನಲ್ಲಿ ನಗರ ಮತ್ತು ಪಟ್ಟಣಗಳಲ್ಲೇ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಸ್ತಾವವಿದೆ. ಇದರಿಂದ ಗ್ರಾಮೀಣ ಪ್ರದೇಶದ ಯುವಜನರು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಾರೆ' ಎಂದರು.

2016ರಿಂದಲೇ ದೇಶದಲ್ಲಿ ಶಿಕ್ಷಣದ ಖಾಸಗೀಕರಣ ವ್ಯಾಪಕವಾಗಿ ನಡೆಯುತ್ತಿದೆ. 100 ವಿದೇಶಿ ವಿಶ್ವವಿದ್ಯಾಲಯಗಳ ಆರಂಭಕ್ಕೆ ಅವಕಾಶ ನೀಡುವ ಕಾರ್ಯಕ್ರಮವೂ ಇದರ ಭಾಗ. ಇತ್ತೀಚಿನ ವರ್ಷಗಳಲ್ಲಿ ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳ ಜಾತಿವಾರು ಸಂಖ್ಯೆಯನ್ನು ಪರಿಶೀಲಿಸಿದರೆ ವಾಸ್ತವ ಗೊತ್ತಾಗುತ್ತದೆ ಎಂದು ಹೇಳಿದರು.

ಇತಿಹಾಸ ತಜ್ಞೆ ಪ್ರೊ. ರೋಮಿಲಾ ಥಾಪರ್ ಮಾತನಾಡಿ, 'ಶಿಕ್ಷಣದ ಹೆಸರಿನಲ್ಲಿ ಉತ್ಪ್ರೇಕ್ಷೆ ಮತ್ತು ಪುರಾಣದಂತಹ ವಿಚಾರಗಳನ್ನು ಇತಿಹಾಸ ಎಂದು ಬೋಧಿಸಬಾರದು. ವೈಜ್ಞಾನಿಕ ವಿಧಾನದಲ್ಲೇ ಚರಿತ್ರೆಯ ಮರುಶೋಧ ನಡೆಯಬೇಕು. ಖಚಿತವಲ್ಲದ ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು ಹೇಳುವ ಯಾವ ಸಂಗತಿಯನ್ನೂ ಇತಿಹಾಸ ಎನ್ನಲಾಗದು' ಎಂದರು.

ಇತಿಹಾಸ ತಜ್ಞ ಪ್ರೊ. ಕರ್ಣಾನಂದನ್, ಶಿಕ್ಷಣ ತಜ್ಞರಾದ ಪ್ರೊ.ಎಲ್. ಜವಾಹರ್ ನೇತನ್, ಪ್ರೊ ಸಚ್ಚಿದಾನಂದ ಸಿನ್ಹ, ಪ್ರೊ. ಚಂದ್ರಶೇಖರ ಚಕ್ರವರ್ತಿ, ಸಮಿತಿಯ ಪ್ರಧಾನ ಕಾರ್ಯದರ್ಶಿ ಪ್ರೊ. ಅನೀಶ್ ಕುಮಾರ್ ರೇ ಉಪಸ್ಥಿತರಿದ್ದರು.

'ಇತಿಹಾಸ ತಿರುಚುವ ಯತ್ನ ನಡೆದಿದೆ'

'ಎನ್‌ಇಪಿ ಭಾಗವಾಗಿ ರಾಷ್ಟ್ರೀಯವಾದದ ಹೆಸರಿನಲ್ಲಿ ಇತಿಹಾಸ ಪಠ್ಯಗಳನ್ನೇ ತಿರುಚುವ ಪ್ರಯತ್ನ ನಡೆದಿದೆ. ಇತಿಹಾಸದ ಹೆಸರಿನಲ್ಲಿ ಅಭಿಪ್ರಾಯಗಳನ್ನು ಹೇರಲಾಗುತ್ತಿದೆ. ನಾಝಿ ಆಡಳಿತ ಕಾಲದ ಜರ್ಮನಿಯಂತೆ ಎಲ್ಲವೂ ನಡೆಯುತ್ತಿದೆ' ಎಂದು ಇತಿಹಾಸ ತಜ್ಞ ಪ್ರೊ. ಇರ್ಫಾನ್ ಹಬೀಬ್ ಹೇಳಿದರು.

ಸಂಕುಚಿತ ಮತ್ತು ಕೋಮು ಪ್ರೇರಿತ ಅಭಿಪ್ರಾಯಗಳಿಗೆ ಮಹತ್ವ ನೀಡಲಾಗುತ್ತಿದೆ. ಭಾರತದಲ್ಲಿ ಬೆಳೆದುಬಂದ ಜ್ಞಾನವನ್ನು 'ರಾಷ್ಟ್ರೀಯವಾದ'ದ ಹೆಸರಿನಲ್ಲಿ ಮೂಲೆಗುಂಪು ಮಾಡುವ ಯತ್ನ ನೀತಿಯಲ್ಲಿದೆ. ಇತಿಹಾಸ ಕೇವಲ ರಾಜಕೀಯ, ಧರ್ಮ ಮತ್ತು ರಾಷ್ಟ್ರೀಯವಾದದ ಆಧಾರದಲ್ಲಿ ರಚನೆಯಾಗಿಲ್ಲ. ಈ ಬಗ್ಗೆ ಗೊಂದಲ ಸೃಷ್ಟಿಸಿ, ಮಿಥ್ಯೆಗಳನ್ನೇ ಚರಿತ್ರೆ ಎಂದು ಬಿಂಬಿಸಲು ಯತ್ನಿಸಲಾಗುತ್ತಿದೆ ಎಂದು ಹೇಳಿದರು.

ಎನ್‌ಇಪಿ ಹೆಸರಿನಲ್ಲಿ ದೇಶದ ಇತಿಹಾಸದ ಅಪವ್ಯಾಖ್ಯಾನ ಮಾಡಲಾಗುತ್ತಿದೆ. ಸಾಂಸ್ಕೃತಿಕ ಇತಿಹಾಸವನ್ನು ಶಿಕ್ಷಣದಿಂದ ಸಂಪೂರ್ಣ ಹೊರಗಿಡಲಾಗುತ್ತಿದೆ ಇದು ಖಂಡನೀಯ ಎಂದರು.

ವಾರ್ಡ್ ಮರುವಿಂಗಡಣೆ: ಸಮಿತಿ ಅವಧಿ ವಿಸ್ತರಣೆ

ಬೆಂಗಳೂರು: ಬಿಬಿಎಂಪಿ ವಾರ್ಡ್‌ಗಳ ಮರುವಿಂಗಡಣೆ ಸಲುವಾಗಿ ಬಿಬಿಎಂಪಿ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಅವಧಿಯನ್ನು ನಗರಾಭಿವೃದ್ಧಿ ಇಲಾಖೆಯು 2021ರ ಜುಲೈ 28ರಿಂದ ಆರು ತಿಂಗಳವರೆಗೆ ವಿಸ್ತರಿಸಿದೆ.

ಸಮಿತಿ 2022ರ ಜ. 28ರವರೆಗೆ ಅಸ್ತಿತ್ವದಲ್ಲಿರಲಿದ್ದು, ಅಷ್ಟರೊಳಗೆ ಬಿಬಿಎಂಪಿ ವ್ಯಾಪ್ತಿಗೆ ಗಡಿಯಂಚಿನ ಗ್ರಾಮಗಳ ಸೇರ್ಪಡೆ ಹಾಗೂ ವಾರ್ಡ್‌ಗಳ ಮರುವಿಂಗಡಣೆ ಬಗ್ಗೆ ಸರ್ಕಾರಕ್ಕೆ ಶಿಫಾರಸು ಮಾಡಬೇಕಿದೆ.

'ಬಿಬಿಎಂಪಿ ಗಡಿ ಪ್ರದೇಶದ ಗ್ರಾಮಗಳನ್ನು ಸೇರ್ಪಡೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಕರಡು ಬಹುತೇಕ ಸಿದ್ಧವಾಗಿದೆ. ಆದರೆ, ಅದನ್ನು ಅಂತಿಮಗೊಳಿಸುವುದಕ್ಕೆ ಮುನ್ನ ಕೆಲವೊಂದು ವಿಚಾರಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ನಿರ್ದೇಶನ ಕೋರಿದ್ದೇವೆ' ಎಂದು ಗೌರವ ಗುಪ್ತ 'ಪ್ರಜಾವಾಣಿ'ಗೆ ತಿಳಿಸಿದರು.

ವಾರ್ಡ್‌ಗಳ ಸಂಖ್ಯೆಯನ್ನು 243ಕ್ಕೆ ಹೆಚ್ಚಿಸುವ ಬಗ್ಗೆ ನಗರಾಭಿವೃದ್ಧಿ ಇಲಾಖೆಯು 2020ರ ಅ. 14ರಂದು ಅಧಿಸೂಚನೆಯನ್ನೂ ಹೊರಡಿಸಿತ್ತು. ಹೊಸತಾಗಿ ಸೇರ್ಪಡೆ ಮಾಡಬೇಕಾದ ಗ್ರಾಮಗಳ ಬಗ್ಗೆ ಶಿಫಾರಸು ಮಾಡಲು ಬಿಬಿಎಂಪಿ ಆಯುಕ್ತರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗಿದ್ದು, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತರು, ಬಿಬಿಎಂಪಿಯ ವಿಶೇಷ ಆಯುಕ್ತರು (ಕಂದಾಯ) ಇದರ ಸದಸ್ಯರಾಗಿದ್ದಾರೆ. 2020ರ ಬಿಬಿಎಂಪಿ ಕಾಯ್ದೆ ಜಾರಿಗೊಂಡ ಬಳಿಕ ಇಲಾಖೆಯು ವಾರ್ಡ್‌ಗಳ ಪುನರ್ ವಿಂಗಡಣಾ ಸಮಿತಿ ರಚನೆ ಬಗ್ಗೆ 2021ರ ಜ 29ರಂದು ಪರಿಷ್ಕೃತ ಆದೇಶ ಮಾಡಿತ್ತು. ಅದರ ಪ್ರಕರ ಸಮಿತಿಯ ಅವಧಿ 2021ರ ಜು 28ಕ್ಕೆ ಕೊನೆಗೊಂಡಿತ್ತು. ಆದರೆ, ಅದರ ಅವಧಿಯನ್ನು ಸರ್ಕಾರ ವಿಸ್ತರಿಸಿರಲಿಲ್ಲ. ಸಮಿತಿಯು ತನ್ನ ಅಧಿಕಾರದ ಅವಧಿ ಮುಗಿಯುವ ಮುನ್ನ ಒಮ್ಮೆ ಮಾತ್ರ ಸಭೆ ನಡೆಸಿತ್ತು.

ಗಡಿ ಪ್ರದೇಶದಲ್ಲಿ 1 ಕಿ.ಮೀ ವ್ಯಾಪ್ತಿಯ ಗ್ರಾಮಗಳನ್ನು ತೆಕ್ಕೆಗೆ ಸೇರಿಸಿಕೊಂಡು ಬಿಬಿಎಂಪಿಯ ಪರಿಧಿ ವಿಸ್ತರಿಸುವಂತೆ ಸರ್ಕಾರವು ಸಮಿತಿಗೆ ಸೂಚನೆ ನೀಡಿದೆ. 2020ರ ಬಿಬಿಎಂಪಿ ಕಾಯ್ದೆಯಲ್ಲೂ ಪಾಲಿಕೆಯ ಒಟ್ಟು ಸದಸ್ಯರ ಸಂಖ್ಯೆ 243 ಮೀರುವಂತಿಲ್ಲ ಎಂದು ಮಿತಿ ನಿಗದಿಪಡಿಸಲಾಗಿದೆ. ಈ ಕಾಯ್ದೆಯ ಸೆಕ್ಷನ್ 365 ಪಂಚಾಯಿತಿ ಪ್ರದೇಶಗಳನ್ನು ಪಾಲಿಕೆಗೆ ಸೇರ್ಪಡೆಗೊಳಿಸುವ ಬಗ್ಗೆ ವಿವರಿಸುತ್ತದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರನ್ವಯ ಆಡಳಿತ ವ್ಯವಸ್ಥೆ ಹೊಂದಿರುವ ಪ್ರದೇಶಗಳನ್ನು ಸರ್ಕಾರ ಬಿಬಿಎಂಪಿ ಕಾಯ್ದೆಯ ಸೆಕ್ಷನ್ 4ಎ ಉಪವಿಧಿ 1ರಡಿ ಅಧಿಸೂಚನೆ ಹೊರಡಿಸಿ ಪಾಲಿಕೆಗೆ ಸೇರ್ಪಡೆಗೊಳಿಸಬಹುದು.

'ವೀರಶೈವ–ಲಿಂಗಾಯತ ಜನಗಣತಿ ಒಟ್ಟಿಗೆ ಆಗಲಿ'

ಪ್ರಜಾವಾಣಿ ವಾರ್ತೆ

ಬಳ್ಳಾರಿ: 'ವೀರಶೈವ- ಲಿಂಗಾಯತ ಸಮಾಜ ಬೇರೆ ಬೇರೆ ಅಲ್ಲ; ಇನ್ನುಮುಂದೆ ವೀರಶೈವ- ಲಿಂಗಾಯತ ಸಮಾಜದ ಜಾತಿ ಜನಗಣತಿಯನ್ನು ಪ್ರತ್ಯೇಕವಾಗಿ ನಡೆಸದೆ, ಒಟ್ಟಾಗಿ ಮಾಡಬೇಕು' ಎಂದು ವೀರಶೈವ ಮಹಾಸಭಾ ಸದಸ್ಯ ಹಾಗೂ ವಿಧಾನ ಪರಿಷತ್ ಸದಸ್ಯ ಅಲ್ಲಂ ವೀರಭದ್ರಪ್ಪ ಒತ್ತಾಯಿಸಿದರು.

ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕ ಶನಿವಾರ ಇಲ್ಲಿ ಆಯೋಜಿಸಿದ್ದ ರಾಜ್ಯ ಕಾರ್ಯಕಾರಿಣಿ ಹಾಗೂ ಲಿಂಗೈಕ್ಯ ಹಾನಗಲ್ ಕುಮಾರೇಶ್ವರ ಮಹಾಶಿವಯೋಗಿಗಳ 154ನೇ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

ಪ್ರತಿಕ್ರಿಯೆಗಳು

ಬೇರೆ ಅಸ್ತ್ರ ಉಳಿದಿಲ್ಲ

ಸರ್ಕಾರದ ವಿರುದ್ಧ ಎಂದೂ ಕೇಳರಿಯದ ಆಡಳಿತ ವಿರೋಧಿ ಅಲೆ ಇದೆ. ಚುನಾವಣೆ ಬರುತ್ತಿರುವ ಸಂದರ್ಭದಲ್ಲಿ ಅವರ ಬಳಿ ಬೇರೆ ಅಸ್ತ್ರ ಉಳಿದಿಲ್ಲ. ಜನರ ಗಮನ ಬೇರೆಡೆ ಸೆಳೆಯಲು ಮತ ಧ್ರುವೀಕರಣ ಮಾಡುತ್ತಿದ್ದಾರೆ. ಕರಾವಳಿ–ಮಲೆನಾಡು ಮಾದರಿಯನ್ನು ಎಲ್ಲೆಡೆ ವಿಸ್ತರಿಸಲು ಯತ್ನಿಸುತ್ತಿದ್ದಾರೆ. ಅದಕ್ಕಾಗಿ ಅಂತಿಮವಾಗಿ ಉಳಿದಿರುವ (ಕೋಮುವಾದ) ಒಂದಂಶದ ಕಾರ್ಯಸೂಚಿಯ ಮೊರೆ ಹೋಗಿದ್ದಾರೆ.

ಮುನೀರ್ ಕಾಟಿಪಳ್ಳ
ಡಿವೈಎಫ್ಐ ರಾಜ್ಯ ಘಟಕದ ಅಧ್ಯಕ್ಷ

‘ಸಂಸ್ಕೃತಿ ಉಳಿಸುವ ಉದ್ದೇಶ’

ಸಂಸ್ಕೃತಿ, ಧರ್ಮ, ಗೋವಿನ ವಿಚಾರದಲ್ಲಿ ತೊಂದರೆ ಆದಾಗ ಸಹಜವಾಗಿ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ. ಅದನ್ನು ಮಾಧ್ಯಮಗಳು ಅನೈತಿಕ ಪೊಲೀಸ್ ಗಿರಿ/ಗೂಂಡಾಗಿರಿ ಎಂದು ಹೇಳುವುದು ಸರಿಯಲ್ಲ. ನಮ್ಮ ಸಂಸ್ಕೃತಿ ಉಳಿಸುವ ಉದ್ದೇಶದಿಂದ ನಾವು ಕಾನೂನಿನ ಚೌಕಟ್ಟಿನಲ್ಲೇ ಜಾಗೃತಿ ಮೂಡಿಸುತ್ತಿದ್ದೇವೆ. ಒಂದೆರಡು ಕಡೆ ಹೊಡೆದಾಟದಂಥ ಘಟನೆ ನಡೆದಿರಬಹುದು. ಇದನ್ನೇ ದೊಡ್ಡ ದುಷ್ಕೃತ್ಯ ಎಂದು ಬಿಂಬಿಸುವುದು ಸರಿಯಲ್ಲ.

ಶರಣ್ ಪಂಪ್‌ವೆಲ್
ವಿಎಚ್‌ಪಿ ವಿಭಾಗ ಕಾರ್ಯದರ್ಶಿ

ಹಿಂಸಾತ್ಮಕ ಸ್ವರೂಪ: ಎಚ್ಚರಿಕೆ ಅಗತ್ಯ

ಒಂದು ಸಮುದಾಯದ ಭಾವನೆಗಳಿಗೆ ಧಕ್ಕೆ ಉಂಟಾದಾಗ ಪ್ರತಿಕ್ರಿಯೆ ವ್ಯಕ್ತವಾಗುವುದು ಸಹಜ. ಆದರೆ ಸಮುದಾಯದ ನಾಯಕತ್ವ ವಹಿಸಿಕೊಂಡವರು ಅದು ಹಿಂಸಾತ್ಮಕ ಸ್ವರೂಪ ಪಡೆಯದಂತೆ ಎಚ್ಚರ ವಹಿಸಬೇಕು.

ಕ್ರಿಯೆಗೆ ಪ್ರತಿಕ್ರಿಯೆ ಕುರಿತು, ಮುಖ್ಯಮಂತ್ರಿ ಯಾವ ಉದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ. ಆದರೆ ಸಮಾಜದಲ್ಲಿ ಜನರ ಭಾವನೆಗಳಿಗೆ ಧಕ್ಕೆ ಉಂಟಾದಾಗ ಕ್ರಿಯೆ ಹಾಗೂ ಪ್ರತಿಕ್ರಿಯೆಗಳು ಉಂಟಾಗುವುದು ಸಹಜ. ಆದರೆ ನೈತಿಕ ಪೊಲೀಸ್ ಗಿರಿ ಮಾಡುವ ಅಧಿಕಾರ ಯಾರಿಗೂ ಇಲ್ಲ.

ದತ್ತಾತ್ರೇಯ ಹೊಸಬಾಳೆ
ಆರ್‌ಎಸ್‌ಎಸ್ ಸರಕಾರ್ಯವಾಹ

ಅಸಾಂವಿಧಾನಿಕ ಬೆಳವಣಿಗೆ

ಈಚೆಗೆ ಮುಖ್ಯಮಂತ್ರಿಯವರು ನೀಡಿದ ಹೇಳಿಕೆಯು (ನೈತಿಕ ಪೊಲೀಸ್‌ಗಿರಿ ಕುರಿತು) ಪ್ರಜಾಪ್ರಭುತ್ವ ಅಥವಾ ಸಂವಿಧಾನವನ್ನು ಕೊನೆಗೊಳಿಸುವಂಥದ್ದು. ಜನರ ಸಾಂವಿಧಾನಿಕ ಸ್ವಾತಂತ್ರ್ಯವನ್ನು ರಕ್ಷಣೆ ಮಾಡಬೇಕಾದ ಮುಖ್ಯಮಂತ್ರಿಯೇ, ಅದನ್ನು ಉಲ್ಲಂಘಿಸುವವರ ಪರ ಹೇಳಿಕೆ ಕೊಟ್ಟಿದ್ದಾರೆ. ಅದು, ಅವರ ಪಕ್ಷದ ರಾಜಕೀಯವನ್ನು ತೋರಿಸಬಹುದು. ಆದರೆ, ಸಂವಿಧಾನಕ್ಕೆ ವಿರುದ್ಧವಾಗಿದೆ.

ಕೆ.ಫಣಿರಾಜ್, ಚಿಂತಕ

ಕಾನೂನು ಕ್ರಮ ನಿಶ್ಚಿತ

ಸ್ವಾತಂತ್ರ್ಯಾ ನಂತರದಲ್ಲಿ ಕೇವಲ ಸೈದ್ಧಾಂತಿಕ ಬಲದ ಮೇಲೆ ಬೆಳೆಯಲು ವಿಫಲವಾದ ಕೆಲವು ರಾಜಕೀಯ ಪಕ್ಷಗಳು ಮತೀಯ ಗೂಂಡಾಗಿರಿ, ಹಿಂಸೆಯನ್ನು ಬೆಂಬಲಿಸುತ್ತಾ ಬಂದಿವೆ. ಆ ಮೂಲಕವೇ ರಾಜಕೀಯವಾಗಿ ಬೆಳೆಯಲು ಪ್ರಯತ್ನಿಸುತ್ತಿವೆ.

ನಾನು ಯಾವತ್ತೂ ಮತೀಯ ಹಿಂಸೆಯನ್ನು ಬೆಂಬಲಿಸಿಲ್ಲ. ಯಾವುದೇ ವ್ಯಕ್ತಿ ಮತೀಯ ಹಿಂಸಾಚಾರ, ಗೂಂಡಾಗಿರಿಯಲ್ಲಿ ಭಾಗಿಯಾದರೂ ನೆಲದ ಕಾನೂನಿನ ಅನುಸಾರ ಕಠಿಣ ಕ್ರಮ ಜರುಗಿಸುವುದು ನಿಶ್ಚಿತ.

ಆರಗ ಜ್ಞಾನೇಂದ್ರ, ಗೃಹ ಸಚಿವ

ಕ್ರಿಮಿನಲ್ ಮೊಕದ್ದಮೆ ಹಿಂಪಡೆಯುವಲ್ಲೂ ‘ಕ್ರಿಯೆ–ಪ್ರತಿಕ್ರಿಯೆ’

ಪ್ರಕರಣ ಹಿಂಪಡೆಯಲು ಪೈಪೋಟಿ!

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದ ಸಂದರ್ಭಗಳೆಲ್ಲ ಮಸೀದಿ– ಭಗವಾಧ್ವಜ ವಿವಾದ, ಕೋಮು ಸಂಘರ್ಷ, ಮತೀಯ ಗೂಂಡಾಗಿರಿ, ಗುಂಪು ಘರ್ಷಣೆ, ದೌರ್ಜನ್ಯಗಳಲ್ಲಿ ಭಾಗಿಯಾದವರ ಮೇಲಿನ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ಕಾಂಗ್ರೆಸ್ ಮತ್ತು ಬಿಜೆಪಿ ಸರ್ಕಾರ ಪೈಪೋಟಿ ನಡೆಸುತ್ತಲೇ ಬಂದಿವೆ!

ಗಂಭೀರ ಪ್ರಕರಣಗಳನ್ನು ವಾಪಸ್ ಪಡೆಯುವಲ್ಲಿ ಈ ‘ಕ್ರಿಯೆ–ಪ್ರತಿಕ್ರಿಯೆ’, ದಂಗೆ– ದುಷ್ಕೃತ್ಯಗಳಿಗೆ ಕುಮ್ಮಕ್ಕು ನೀಡುತ್ತಿದೆ. ಜಾತಿ–ಧರ್ಮ ರಕ್ಷಣೆಯ ಹೆಸರಿನಲ್ಲಿ ದ್ವೇಷದ ವಿಷಬೀಜ ಬಿತ್ತುವ ಕೋಮು ಕ್ರಿಮಿಗಳನ್ನು ಮಟ್ಟ ಹಾಕಬೇಕಾದವರೇ ಗಂಭೀರ ಸ್ವರೂಪದ ಕ್ರಿಮಿನಲ್ ಪ್ರಕರಣಗಳನ್ನು ವಾಪಸ್ ಪಡೆಯುತ್ತಾರೆ. ಆ ಮೂಲಕ, ಹಿಂಸೆಗೆ ಬೇಕಾದ ‘ಅಸ್ತ್ರ’ವನ್ನು ಕೈಗೆ ಕೊಡುವ ಈ ‘ಸಂಪ್ರದಾಯ’ ಪ್ರಜಾತಂತ್ರಕ್ಕೆ ಅಪಾಯಕಾರಿಯಾಗಿದೆ ಎನ್ನುವ ಅಭಿಪ್ರಾಯವೂ ಇದೆ.

ಜಲಪರ, ಜನಪರ, ರೈತಪರ, ಕನ್ನಡಪರ ಹೋರಾಟಗಾರರ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು, ಅದರ ಸದುದ್ದೇಶದ ಆಧಾರದ ಮೇಲೆ ಕೈಬಿಡುವ ಅಧಿಕಾರ ಸರ್ಕಾರಕ್ಕಿದೆ. ಅಷ್ಟಕ್ಕೆ ಸೀಮಿತವಾಗಬೇಕಿದ್ದ ಈ ಪ್ರಕ್ರಿಯೆ ಪಕ್ಷದವರನ್ನು, ಸಂಘಟನೆಗಳ ಕಾರ್ಯಕರ್ತರನ್ನು ರಕ್ಷಿಸುವ ಉದ್ದೇಶಕ್ಕೆ ಬಳಕೆಯಾಗುತ್ತಿರುವುದು ಕಳವಳಕಾರಿ. ನಿರ್ದಿಷ್ಟ ಸಮುದಾಯದ ವಿರುದ್ಧ ದಾಖಲಾಗಿರುವ ಪ್ರಕರಣಗಳನ್ನು ರದ್ದುಪಡಿಸುವುದರಿಂದ ಕೋಮು ದ್ವೇಷಕ್ಕೆ ತುಪ್ಪ ಸುರಿದಂತಾಗುತ್ತಿದೆ.

ಚಿಕ್ಕಮಗಳೂರಿನ ಬಾಬಾ ಬುಡನ್‌ಗಿರಿ, ಹುಬ್ಬಳ್ಳಿ ಈದ್ಗಾ ವಿವಾದ, ಗಣಪತಿ ವಿಗ್ರಹ ವಿಸರ್ಜನೆ ಗಲಾಟೆ, ಕೋಮು ದ್ವೇಷದ ರಾಜಕಾರಣ 2008ರಲ್ಲಿ ರಾಜ್ಯದ ಚುಕ್ಕಾಣಿ ಹಿಡಿಯಲು ಬಿಜೆಪಿಗೆ ನೆರವಾಗಿತ್ತು. ಆ ಋಣ ತೀರಿಸಲು, ರೈತ ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಕೈಬಿಡುವ ನೆಪದಲ್ಲಿ ಕೋಮು, ರಾಜಕೀಯ ಗಲಭೆಗಳೂ ಸೇರಿ 369 ಪ್ರಕರಣಗಳನ್ನು ಅಂದಿನ ಬಿ.ಎಸ್. ಯಡಿಯೂರಪ್ಪ ಸರ್ಕಾರ ವಾಪಸು ಪಡೆದಿತ್ತು. ಕೆ.ಎಸ್. ಈಶ್ವರಪ್ಪ, ಸಿ.ಟಿ. ರವಿ, ಅನಂತಕುಮಾರ್ ಹೆಗಡೆ, ಬಿ. ಶ್ರೀರಾಮುಲು, ಜಗದೀಶ ಕಾರಂತ ಸೇರಿದಂತೆ ಹಿಂದೂ ಜಾಗರಣ ವೇದಿಕೆಯ ಮುಖಂಡರ ಮೇಲಿನ ಪ್ರಕರಣಗಳೂ ಅದರಲ್ಲಿದ್ದುವು.

ಸಿದ್ದರಾಮಯ್ಯ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ (2013– 2018) ಮೈಸೂರು, ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ 2009-10ರ ಅವಧಿಯಲ್ಲಿ ನಡೆದ ಗಲಭೆಗಳಿಗೆ ಸಂಬಂಧಿಸಿದ 175 ಪ್ರಕರಣಗಳನ್ನು (2015ರಲ್ಲಿ) ಹಿಂಪಡೆದಿತ್ತು. ಮೈಸೂರು ಜಿಲ್ಲೆ ಕ್ಯಾತಮಾರನಹಳ್ಳಿಯಲ್ಲಿ 2009ರ ಏಪ್ರಿಲ್‌ನಲ್ಲಿ ನಡೆದ ಕೋಮು ಗಲಭೆಯ 40 ಪ್ರಕರಣಗಳು, ಪತ್ರಿಕೆಯೊಂದರಲ್ಲಿ ಮುಸ್ಲಿಂ ಲೇಖಕಿ ತಸ್ಲಿಮಾ ನಸ್ರೀನ್ ಅವರ ಲೇಖನ ಪ್ರಕಟಗೊಂಡ ಹಿನ್ನೆಲೆಯಲ್ಲಿ (2010ರಲ್ಲಿ) ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ 114 ಮತ್ತು ಹಾಸನದಲ್ಲಿ ನಡೆದ 21 ಕೋಮು ಗಲಭೆ ಪ್ರಕರಣಗಳು ಸೇರಿ 175 ಪ್ರಕರಣಗಳಲ್ಲಿ 1,600 ಮಂದಿಯ ವಿರುದ್ದದ ಪ್ರಕರಣಗಳನ್ನು ವಾಪಸ್ ಪಡೆಯಲಾಗಿತ್ತು. ಪಿಎಫ್‌ಐ, ಕೆಎಫ್‌ಡಿ, ಶ್ರೀರಾಮಸೇನೆ, ಬಜರಂಗದಳ ಕಾರ್ಯಕರ್ತರ ಮೇಲಿನ ಪ್ರಕರಣಗಳೂ ಅದರಲ್ಲಿದ್ದವು. ಶಿವಮೊಗ್ಗ ಮತ್ತು ಹಾಸನದಲ್ಲಿ ನಡೆದ ಗಲಭೆ ವೇಳೆ ಗೋಲಿಬಾರ್‌ನಲ್ಲಿ ಇಬ್ಬರು ಮೃತಪಟ್ಟಿದ್ದರು. ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿ ನಷ್ಟವಾಗಿತ್ತು.

ತಮ್ಮ ಅಧಿಕಾರಾವಧಿಯ ಕೊನೆಯಲ್ಲಿ (2018ರ ಮಾರ್ಚ್) ಸಿದ್ದರಾಮಯ್ಯ, ಕೂಡಗಿ ಉಷ್ಣ ವಿದ್ಯುತ್ ಸ್ಥಾವರ ವಿರೋಧಿ ಹೋರಾಟ ಹಾಗೂ ನರಗುಂದ– ನವಲಗುಂದ ಚಳವಳಿಗಳಲ್ಲಿ ಭಾಗವಹಿಸಿದ ಮತ್ತು ತಮಿಳುನಾಡಿಗೆ ಕಾವೇರಿ ನೀರು ಹರಿಸುವುದನ್ನು ಪ್ರತಿಭಟಿಸಿದ ರೈತರ ವಿರುದ್ಧ ದಾಖಲಾಗಿದ್ದ 60, ಕೋಮು ಗಲಭೆಗೆ ಸಂಬಂಧಿಸಿದ 29 ಪ್ರಕರಣಗಳು ಸೇರಿ ಒಟ್ಟು 127 ಮೊಕದ್ದಮೆಗಳನ್ನು ಹಿಂಪಡೆದಿದ್ದರು.

ಮತ್ತೆ ಬಿಎಸ್‌ವೈ ಸರದಿ: ಜೆಡಿಎಸ್– ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನದ ಬಳಿಕ ಮತ್ತೊಮ್ಮೆ ಆಡಳಿತ ಚುಕ್ಕಾಣಿ ಹಿಡಿದ ಯಡಿಯೂರಪ್ಪ ನೇತೃತ್ವದ ಸರ್ಕಾರ ಕಾವೇರಿ, ಎತ್ತಿನಹೊಳೆ, ಕಳಸಾ ಬಂಡೂರಿ ಯೋಜನೆ ಸೇರಿದಂತೆ ಜಲಪರ ಹೋರಾಟಗಳಲ್ಲಿ ಭಾಗಿಯಾಗಿದ್ದ ಸ್ವಾಮೀಜಿಗಳು ಮತ್ತು ರೈತರ ವಿರುದ್ಧ ದಾಖಲಾಗಿದ್ದ 51 ಪ್ರಕರಣಗಳನ್ನು 2020ರ ಫೆಬ್ರುವರಿಯಲ್ಲಿ ವಾಪಸ್ ಪಡೆದಿದೆ. ಕಾನೂನು ಇಲಾಖೆ, ರಾಜ್ಯ ಪೊಲೀಸ್ ಮಹಾ ನಿರ್ದೇಶಕರು, ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಅಭಿಪ್ರಾಯ ಕಡೆಗಣಿಸಿ ಅದೇ ವರ್ಷ ಆಗಸ್ಟ್‌ನಲ್ಲಿ ಪ್ರತಾಪ್ ಸಿಂಹ, ಎಂ.ಪಿ. ರೇಣುಕಾಚಾರ್ಯ, ಬಿ.ಸಿ. ಪಾಟೀಲ, ಅಮೃತ್ ದೇಸಾಯಿ ಸೇರಿದಂತೆ ಬಿಜೆಪಿ ನಾಯಕರು ಮತ್ತು ಬೆಂಬಲಿಗರ ಮೇಲಿನ ಗಂಭೀರ ಸ್ವರೂಪದ ಮೊಕದ್ದಮೆಗಳೂ ಸೇರಿ 62 ಪ್ರಕರಣಗಳನ್ನು ಹಿಂಪಡೆದಿದೆ.

ಪೊಲೀಸರು ಹಾಕಿದ್ದ ಬ್ಯಾರಿಕೇಡ್ ಮೇಲೆ ಕಾರು ನುಗ್ಗಿಸಿದ ಆರೋಪದಲ್ಲಿ ಸಂಸದ ಪ್ರತಾಪ್ ಸಿಂಹ ವಿರುದ್ಧ 2017ರಲ್ಲಿ ಬಿಳಿಕೆರೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ, ಹುಣಸೂರಿನಲ್ಲಿ ಹನುಮ ಜಯಂತಿ ಮೆರವಣಿಗೆ ವೇಳೆ ನಡೆದ ದಾಂಧಲೆ, ಕೋಮು ಗಲಭೆ ಆರೋಪದಲ್ಲಿ ಹಿಂದೂ ಕಾರ್ಯಕರ್ತರ ಮೇಲಿನ ಪ್ರಕರಣಗಳು, ಹೊನ್ನಾಳಿ ಠಾಣೆಯಲ್ಲಿ ಎಂ.ಪಿ. ರೇಣುಕಾಚಾರ್ಯ ಬೆಂಬಲಿಗರ ವಿರುದ್ಧ 2019ರಲ್ಲಿ ದಾಖಲಾಗಿದ್ದ ಪ್ರಕರಣ, ಗಣೇಶ ವಿಸರ್ಜನೆ ವೇಳೆ ನಡೆದ ದೊಂಬಿ ಪ್ರಕರಣಕ್ಕೆ ಸಂಬಂಧಿಸಿ ಶಾಸಕ ಬಿ.ಸಿ. ಪಾಟೀಲ ಬೆಂಬಲಿಗರ ಮೇಲೆ ರಟ್ಟಿಹಳ್ಳಿ ಠಾಣೆಯಲ್ಲಿ ದಾಖಲಾದ ಪ್ರಕರಣ, 2015ರಲ್ಲಿ ಧಾರವಾಡದಲ್ಲಿ ಬಿಜೆಪಿ ಬೆಂಬಲಿಗರಿಂದ ಗಣೇಶ ವಿಗ್ರಹ ವಿಸರ್ಜನೆ ವೇಳೆ ಮಸೀದಿಗಳಿಗೆ ಕಲ್ಲು ತೂರಿ, ಜೀವಬೆದರಿಕೆ ಹಾಕಿದ ಪ್ರಕರಣಗಳೂ ಅದರಲ್ಲಿವೆ.

‘ಕಾಂಗ್ರೆಸ್ ಸರ್ಕಾರ ಕೋಮು ಗಲಭೆಗಳಲ್ಲಿ ಭಾಗಿಯಾದ ಅಲ್ಪಸಂಖ್ಯಾತರ ಮೇಲಿನ 175 ಪ್ರಕರಣಗಳನ್ನು ಕೈ ಬಿಟ್ಟಿದೆ. ಪಿಎಫ್‌ಐಯಂಥ ಸಂಘಟನೆಯ ವಿರುದ್ಧದ ಪ್ರಕರಣಗಳನ್ನೂ ಹಿಂಪಡೆಯಲಾಗಿದೆ’ ಎಂದು ಆರೋಪಿಸುವ ಬಿಜೆಪಿ ನಾಯಕರು, ‘ನಾವು ಅಂಥ ಪ್ರಕರಣ ಹಿಂಪಡೆದಿಲ್ಲ. ಹೋರಾಟಗಾರರ ಮೇಲಿನ ಪ್ರಕರಣ ಮಾತ್ರ ವಾಪಸ್ ಪಡೆದಿದ್ದೇವೆ. ವೈಯಕ್ತಿಕ ಮೊಕದ್ದಮೆಗಳನ್ನು ಹಿಂಪಡೆದಿಲ್ಲ’ ಎಂದು ಸಮರ್ಥಿಸುತ್ತಾರೆ!

ಸುಳ್ಳು ಪ್ರಕರಣ ಕೈಬಿಡಲು ಪತ್ರ

‘ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳೂ ಸೇರಿದಂತೆ ವಿವಿಧೆಡೆ ಬಿಜೆಪಿ ಮತ್ತು ಸಂಘ ಪರಿವಾರದ ಕಾರ್ಯಕರ್ತರ ವಿರುದ್ಧ ದುರುದ್ದೇಶಪೂರ್ವಕವಾಗಿ ದಾಖಲಿಸಲಾಗಿರುವ ಮೊಕದ್ದಮೆಗಳನ್ನು ಹಿಂಪಡೆಯಬೇಕು‘ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಅವರು ಗೃಹ ಸಚಿವ ಆರಗ ಜ್ಞಾನೇಂದ್ರ ಅವರಿಗೆ ಇತ್ತೀಚೆಗೆ ಮನವಿ ಸಲ್ಲಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನಿರ್ದೇಶನಗಳಂತೆ ರಾಜ್ಯ ಸರ್ಕಾರ ಕ್ರಮ ತೆಗೆದುಕೊಳ್ಳಲಿದೆ’ ಎಂದಿದ್ದಾರೆ.

ಚರ್ಚ್ ದಾಳಿ– ತಾರ್ಕಿಕ ಅಂತ್ಯ ಕಾಣದ ಪ್ರಕರಣ: ಮಂಗಳೂರಿನ ಮಿಲಾಗ್ರಿಸ್ ಬಳಿಯ ಎಡೋರೇಶನ್ ಮಾನೆಸ್ಟ್ರಿಯಲ್ಲಿ 2008 ಸೆ. 14ರಂದು ಧರ್ಮ ಭಗಿನಿಯರು ಪ್ರಾರ್ಥನೆ ಸಲ್ಲಿಸುತ್ತಿದ್ದಾಗ ನಡೆದಿದ್ದ ದಾಳಿಗೆ ಸಂಬಂಧಿಸಿದ ಪ್ರಕರಣವು ಇಂದಿಗೂ ತಾರ್ಕಿಕ ಅಂತ್ಯಕಂಡಿಲ್ಲ.

ಬಿಜೆಪಿ ಅವಧಿ– 2008 ಹಾಗೂ 2020ರಲ್ಲಿ ಕ್ರಮವಾಗಿ 369, 113 ಕ್ರಿಮಿನಲ್ ಪ್ರಕರಣ ವಾಪಸ್
ಕಾಂಗ್ರೆಸ್ ಅವಧಿ– 2015 ಹಾಗೂ 2018ರಲ್ಲಿ ಅನುಕ್ರಮವಾಗಿ 175, 127 ಕ್ರಿಮಿನಲ್ ಪ್ರಕರಣ ವಾಪಸ್

ಆಗಿದ್ದೇನು? ಎಲ್ಲಿ?

ಸೆ.3, 2021
ಶೇರ್ ಚಾಟ್ ಮೂಲಕ ಪರಿಚಯವಾದ ಮುಸ್ಲಿಂ ಯುವತಿಯೊಬ್ಬಳ ಆಹ್ವಾನದ ಮೇರೆಗೆ ಪುತ್ತೂರಿಗೆ ಬಂದು, ಆಕೆಯನ್ನು ಭೇಟಿಯಾಗಿದ್ದ ರಾಯಚೂರಿನ ಯುವಕ ಮತ್ತು ಆತನ ಸ್ನೇಹಿತನ ಮೇಲೆ ಮುಸ್ಲಿಂ ಯುವಕರ ತಂಡವೊಂದು ಹಲ್ಲೆ ಮಾಡಿ, ಜೀವ ಬೆದರಿಕೆಯೊಡ್ಡಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳ ಬಂಧನ

ಸೆ.16, 2021
ನಂಜನಗೂಡಿನಲ್ಲಿ ದೇವಸ್ಥಾನ ತೆರವು ಮಾಡಿದ್ದನ್ನು ಖಂಡಿಸಿ ಹಿಂದೂ ಜಾಗರಣ ವೇದಿಕೆಯವರು ಆಯೋಜಿಸಿದ್ದ ಪ್ರತಿಭಟನಾ ಸಭೆಯ ವರದಿ ಮಾಡಲು ಹೋಗಿದ್ದ ಉರ್ದು ದೈನಿಕದ ವರದಿಗಾರ ಮೊಹಮ್ಮದ್ ಸಫ್ದಾರ್ ಕೈಸರ್ ಮೇಲೆ ಹಲ್ಲೆ

ಸೆ.18, 2021
ಬೆಂಗಳೂರಿನಲ್ಲಿ ಮುಸ್ಲಿಂ ಮಹಿಳೆಯನ್ನು ಹಿಂದೆ ಕೂರಿಸಿಕೊಂಡು ಹೋಗುತ್ತಿದ್ದ ಹಿಂದೂ ವ್ಯಕ್ತಿಯ ಬೈಕ್ ಅನ್ನು ಅಡ್ಡಗಟ್ಟಿದ ಇಬ್ಬರು ಮುಸ್ಲಿಂ ವ್ಯಕ್ತಿಗಳು, ಮಹಿಳೆಯನ್ನು ಅವಾಚ್ಯವಾಗಿ ನಿಂದಿಸಿ ಕಿರುಕುಳ ನೀಡಿದ ವಿಡಿಯೊ ವೈರಲ್ ಆಯಿತು. ಮರುದಿನವೇ ಇಬ್ಬರು ಆರೋಪಿಗಳ ಬಂಧನ

ಸೆ.19, 2021
ಆರೋಪಿಗಳ ವಿರುದ್ಧ ಕೈಗೊಂಡ ಕ್ರಮಗಳನ್ನು ಉಲ್ಲೇಖಿಸಿ ಟ್ವೀಟ್ ಮಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ನನ್ನ ಸರ್ಕಾರವು ಇಂಥ ಕೃತ್ಯಗಳನ್ನು ಉಕ್ಕಿನ ಕೈಗಳಿಂದ ನಿಯಂತ್ರಿಸುವುದು’ ಎಂದಿದ್ದರು

ಸೆ.22, 2021
ಜೊತೆಯಲ್ಲಿ ಹೋಗುತ್ತಿದ್ದ ಇಬ್ಬರು ಪುರುಷರು ಮತ್ತು ಒಬ್ಬ ಮಹಿಳೆಯ ಮೇಲೆ ಹಲ್ಲೆ ನಡೆಸಿದ ಆರೋಪದ ಮೇಲೆ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು, ಹಿಂದೂ ಜಾಗರಣ ವೇದಿಕೆಯ ಇಬ್ಬರು ಕಾರ್ಯಕರ್ತರನ್ನು ಬಂಧಿಸಿದರು. ಹಲ್ಲೆಗೊಳಗಾದ ಪುರುಷರಲ್ಲಿ ಒಬ್ಬರು ಮುಸ್ಲಿಂ ಆಗಿದ್ದರು. ಮಹಿಳೆಯು ಮುಸ್ಲಿಂ ಪುರುಷರ ಜತೆಗೆ ಓಡಾಡಿದ್ದ ಕಾರಣಕ್ಕೆ ಹಲ್ಲೆ ನಡೆಸಲಾಗಿತ್ತು

ಸೆ.26, 2021
ಕೆ.ಎಸ್. ಹೆಗ್ಡೆ ವೈದ್ಯಕೀಯ ಕಾಲೇಜಿನ, ಬೇರೆ ಬೇರೆ ಧರ್ಮಗಳ ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದ ವಾಹನವನ್ನು ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನಲ್ಲಿ ತಡೆದ ಬಜರಂಗ ದಳದ ಕಾರ್ಯಕರ್ತರು, ವಿದ್ಯಾರ್ಥಿಗಳ ಮೇಲೆ ಹಲ್ಲೆಗೆ ಪ್ರಯತ್ನಿಸಿದರು. ಘಟನೆಗೆ ಸಂಬಂಧಿಸಿದಂತೆ ಆ ನಂತರ ಐವರನ್ನು ಬಂಧಿಸಲಾಯಿತು

ಸೆ.28, 2021
ಬೆಳಗಾವಿಯಲ್ಲಿ ಅರ್ಬಾಜ್ ಮುಲ್ಲಾ ಎಂಬ 24 ವರ್ಷದ ಯುವಕನ ಹತ್ಯೆ. ಆತ ಹಿಂದೂ ಮಹಿಳೆಯೊಬ್ಬರ ಜತೆಗೆ ಸಂಬಂಧ ಇಟ್ಟುಕೊಂಡಿದ್ದ ಎಂಬ ಕಾರಣಕ್ಕೆ ಹತ್ಯೆ ನಡೆದಿತ್ತು. ಶ್ರೀರಾಮ ಸೇನಾ ಹಿಂದೂಸ್ತಾನ ಸಂಘಟನೆಯ ಕಾರ್ಯಕರ್ತರು ಈ ಹತ್ಯೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಅ.8, 2021
ಬೆಳಗಾವಿಯಲ್ಲಿ ಮುಸ್ಲಿಂ ದಂಪತಿ ನಡೆಸುತ್ತಿದ್ದ ಮಾಂಸದ ಅಂಗಡಿಯ ಮೇಲೆ ಹಿಂದೂ ಸಂಘಟನೆಯವರು ಎಂದು ಹೇಳಲಾದ ಕೆಲವರು ದಾಳಿ ನಡೆಸಿ, ಅಂಗಡಿ ಧ್ವಂಸ ಮಾಡಿದರು.

ಅ.9, 2021
ಮೂಡುಬಿದಿರೆ ಪಟ್ಟಣದಲ್ಲಿ ಹಿಂದೂ ಮಹಿಳೆಯ ಜತೆಗೆ ಹೋಗುತ್ತಿದ್ದ ಮುಸ್ಲಿಂ ದಂಪತಿಯನ್ನು ತಡೆದ ಕೆಲವರು ಅವರನ್ನು ನಿಂದಿಸಿ, ಹಲ್ಲೆ ನಡೆಸಿದರು. ಘಟನೆಗೆ ಸಂಬಂಧಿಸಿದಂತೆ ಸ್ಥಳೀಯ ಇಬ್ಬರನ್ನು ಬಂಧಿಸಿದ ಪೊಲೀಸರು ಅದೇ ದಿನ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಅ.14,2021
ಹೆಚ್ಚುತ್ತಿರುವ ಅನೈತಿಕ ಪೊಲೀಸ್‌ಗಿರಿಯ ಬಗ್ಗೆ ಮಂಗಳೂರಿನಲ್ಲಿ ಮಾಧ್ಯಮದವರಿಗೆ ಹೇಳಿಕೆ ನೀಡಿದ ಮುಖ್ಯಮಂತ್ರಿ ಬೊಮ್ಮಾಯಿ, ‘... ಪರಸ್ಪರರ ಭಾವನೆಗಳಿಗೆ ಧಕ್ಕೆ ಉಂಟಾದಾಗ ಸಹಜವಾಗಿ ಕ್ರಿಯೆ-ಪ್ರತಿಕ್ರಿಯೆಗಳು ಇದ್ದೇ ಇರುತ್ತವೆ’ ಎಂದರು.

ಅ.17, 2021
‘ಬಾಬರಿ ಮಸೀದಿಯಂತೆ, ಗದಗಿನಲ್ಲಿರುವ ಜಾಮಾ ಮಸೀದಿಯನ್ನೂ ಕೆಡವಲು ಅಭಿಯಾನ ಆರಂಭಿಸಬೇಕು’ ಎಂದು ಶ್ರೀರಾಮಸೇನಾದ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹೇಳಿಕೆ

ಅ.18, 2021
ಹುಬ್ಬಳ್ಳಿಯ ಚರ್ಚ್ ಒಂದರೊಳಗೆ ನುಗ್ಗಿದ ಬಜರಂಗದಳ ಹಾಗೂ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಭಜನೆಗಳನ್ನು ಹಾಡುವ ಮೂಲಕ ಪ್ರತಿಭಟನೆ ನಡೆಸಿದರು. ಚರ್ಚ್‌ನಲ್ಲಿ ಒತ್ತಾಯದ ಮತಾಂತರ ನಡೆಸಲಾಗುತ್ತದೆ ಎಂಬುದು ಕಾರ್ಯಕರ್ತರ ಆರೋಪವಾಗಿತ್ತು. ನೆರೆಯ ಬೆಳಗಾವಿ ಜಿಲ್ಲೆಯಲ್ಲೂ ಇಂಥ ಹಲವು ಘಟನೆಗಳು ವರದಿಯಾದವು

ಅ.20, 2021
ಅನೈತಿಕ ಪೊಲೀಸ್‌ಗಿರಿ ಘಟನೆಯ ಬಗ್ಗೆ ಪ್ರತಿಕ್ರಿಯೆ ನೀಡಲು ಮುಖ್ಯಮಂತ್ರಿ ಬೊಮ್ಮಾಯಿ ನಿರಾಕರಿಸಿದರು.

ಬೊಮ್ಮಾಯಿಗೆ ಯೋಗಿ ಮಾದರಿಯ ಹಂಗೇಕೆ?

• ರವಿ ಜೋಶಿ

ಬಿಜೆಪಿಯ ಹಲವು ಸಚಿವರು ಮತ್ತು ಮುಖ್ಯಮಂತ್ರಿಗಳಿಗೆ ಶಿಕ್ಷಣದ ಕೊರತೆ ಇದೆ ಮಾತ್ರವಲ್ಲ, ಅವರು ಬಾಯಿ ತೆರೆದಾಗಲೆಲ್ಲ ಅದರ ನಿರ್ಲಜ್ಜ ಪ್ರದರ್ಶನವನ್ನೂ ಮಾಡುತ್ತಾರೆ. ಅವರಿಗೆಲ್ಲ ಹೋಲಿಸಿದರೆ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಬಹುದೊಡ್ಡ ಚಿಂತಕ ಎಂದೇ ಪರಿಗಣಿಸಬೇಕಾಗುತ್ತದೆ. ತಂದೆ ಎಸ್.ಆರ್. ಬೊಮ್ಮಾಯಿ, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್ ಮತ್ತು ಜನತಾ ಪರಿವಾರದ ಇತರರ ಗರಡಿಯಲ್ಲಿ ಪಳಗಿದವರು ಬಸವರಾಜ ಬೊಮ್ಮಾಯಿ. ಸಾಮಾಜಿಕ ವಿದ್ಯಮಾನವನ್ನು ‘ಮಾನವೀಯ’ ಮತ್ತು ‘ಪ್ರಗತಿಪರ’ವಾಗಿ ವಿಶ್ಲೇಷಿಸಿ ಅದಕ್ಕೆ ತಾರ್ಕಿಕ ವಿವರಣೆ ಕೊಡುವುದು ಎಂಜಿನಿಯರಿಂಗ್ ವಿದ್ಯಾಭ್ಯಾಸವೂ ಇರುವ ಬೊಮ್ಮಾಯಿ ಅವರಿಗೆ ಸಾಧ್ಯವಾಗಬೇಕು. ಆದರೆ, ರಾಜಕೀಯ ಉದ್ದೇಶಕ್ಕಾಗಿ ಧರ್ಮವನ್ನು ವಿಷವಾಗಿ ಬಳಸಿಕೊಳ್ಳುವ ಅತಾರ್ಕಿಕತೆಯನ್ನು ಅವರು ಒಪ್ಪುವುದು ಹೇಗೆ ಸಾಧ್ಯವಾಯಿತು ಎಂಬುದೇ ಬಿಡಿಸಲಾಗದ ಒಗಟು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿರುವ ಮತೀಯ ಗೂಂಡಾಗಿರಿಯನ್ನು ಸಮರ್ಥನೆ ಮಾಡಿಕೊಳ್ಳಲು ಬೊಮ್ಮಾಯಿ ಅವರು ನೀಡಿರುವ ಹೇಳಿಕೆ ವಿಚಿತ್ರವಾಗಿದೆ– ‘ಸಮಾಜದಲ್ಲಿ ನೈತಿಕ ಮೌಲ್ಯದ ಕುಸಿತ’ ಆದಾಗ ಮತೀಯ ಗೂಂಡಾಗಿರಿ ನಡೆಯುತ್ತದೆ ಎಂದಿದ್ದಾರೆ. ಅವರ ಪ್ರಕಾರ, ಸ್ಥಳೀಯ ಯುವಜನರನ್ನು ಬೆದರಿಸುವವರು ಮತ್ತು ಥಳಿಸುವವರು ನೈತಿಕತೆಯ ಸಂರಕ್ಷಕರು. ಹೀಗೆ ಥಳಿತಕ್ಕೆ ಒಳಗಾಗುವವರಲ್ಲಿ ನೈತಿಕತೆಯ ಕೊರತೆ ಇದೆ, ಅವರು ಬೆದರಿಕೆಗೆ, ಥಳಿತಕ್ಕೆ ಒಳಗಾಗಲು ಅರ್ಹರೇ ಆಗಿದ್ದಾರೆ. ಇದು ಅತ್ಯಂತ ಚಿಂತಾಜನಕವಾದ ಮನಸ್ಥಿತಿಯಾಗಿದೆ.

ವಿವಿಧ ಧರ್ಮಗಳ ಯುವಜನರು ಒಟ್ಟಾಗಿ ಪ್ರಯಾಣಿಸುತ್ತಿದ್ದಾಗ ಅಥವಾ ಜತೆಗಿದ್ದಾಗ ಅವರ ಮೇಲೆ ಬಲಪಂಥೀಯ ಸಂಘಟನೆಗಳ ಕಾರ್ಯಕರ್ತರು ಹಲ್ಲೆ ನಡೆಸಿದ್ದು ದಕ್ಷಿಣ ಕನ್ನಡದಲ್ಲಿ ಇತ್ತೀಚೆಗೆ ಹಲವು ಬಾರಿ ವರದಿಯಾಗಿದೆ. ಈ ಹಿನ್ನೆಲೆಯಲ್ಲಿ ಬೊಮ್ಮಾಯಿ ಅವರ ಹೇಳಿಕೆಯನ್ನು ಗಮನಿಸಬೇಕು. ಇಂಥ ಘಟನೆಗಳನ್ನು ‘ಕ್ರಿಯೆಗೆ ತಕ್ಕ ಪ್ರತಿಕ್ರಿಯೆ’ ಆಗಿ ನೋಡಬೇಕು ಎಂದು ಬೊಮ್ಮಾಯಿ ಹೇಳಿದ್ದಾರೆ.

ವಿವಿಧ ಧರ್ಮಗಳ ಯುವ ಜನರು ಜತೆಗೂಡುವುದನ್ನು ಇಲ್ಲಿ ‘ಕ್ರಿಯೆ’ ಎಂದು ಪರಿಗಣಿಸಲಾಗಿದೆ. ಇದು ಯಾವುದೇ ಕಾನೂನಿನ ದೃಷ್ಟಿಯಲ್ಲಿ ಅಪರಾಧ ಅಲ್ಲ. ‘ಪ್ರತಿಕ್ರಿಯೆ’ ಎಂಬುದು ಬಲಪಂಥೀಯ ಸಂಘಟನೆಗಳ ಕಾರ್ಯಕರ್ತರು ನಡೆಸುವ ಹಲ್ಲೆ. ಇದು ಭಾರತೀಯ ದಂಡ ಸಂಹಿತೆಯ ಸೆಕ್ಷನ್ 319, 324, 504, 506 ಮತ್ತು 509ರ ಅಡಿಯಲ್ಲಿ ಅಪರಾಧ. ಆದರೆ, ಈ ಅಪರಾಧ ಎಸಗುವವರನ್ನು ‘ಧರ್ಮರಕ್ಷಕರು’ ಎಂದು ಮುಖ್ಯಮಂತ್ರಿ ಬಣ್ಣಿಸಿದ್ದಾರೆ.

ಮೊದಲನೆಯದಾಗಿ, ಸರ್ಕಾರ ಅಥವಾ ರಾಜಕೀಯ ಪಕ್ಷ ಅಥವಾ ಗೂಂಡಾಗಳು ನಮ್ಮ ನೈತಿಕತೆಯ ಸಂರಕ್ಷಕರಾದದ್ದು ಯಾವಾಗಿನಿಂದ? ನಾವು ಒಂದು ಪಕ್ಷವನ್ನು ಅಧಿಕಾರಕ್ಕೆ ತರುವಾಗ, ನಮ್ಮ ಹೆಣ್ಣು ಮಕ್ಕಳನ್ನು ಯಾರು ಮದುವೆ ಆಗಬೇಕು ಅಥವಾ ನಮ್ಮ ಮಕ್ಕಳು ಯಾರ ಜತೆ ಸೇರಬಹುದು ಎಂಬುದನ್ನು ನಿರ್ಧರಿಸುವ ಶಾಸನ ರಚನೆಯ ಅಧಿಕಾರವನ್ನು ನೀಡುವುದಿಲ್ಲ. ನಮ್ಮ ಖಾಸಗಿ ಅಥವಾ ಸಾಮಾಜಿಕ ಬದುಕಿನ ಮೇಲಿನ ಈ ಉಲ್ಲಂಘನೆಯನ್ನು ನಿರಂಕುಶಾಧಿಪತ್ಯ ಎಂದೇ ಹೇಳಬೇಕಾಗುತ್ತದೆ. ಆದರೆ, ನಮ್ಮದು ನಿರಂಕುಶಾಧಿಪತ್ಯ ಅಲ್ಲ.

ಎರಡನೆಯದಾಗಿ, ನಮ್ಮ ನೈತಿಕ ಮೌಲ್ಯಗಳು ಕುಸಿದಿವೆ ಎಂದು ಸರ್ಕಾರ ನಿರ್ಧರಿಸುವುದು ಹೇಗೆ? ಕುಸಿದಿದೆ ಎನ್ನಲು ಮಾನದಂಡ ಏನು ಮತ್ತು ಅದನ್ನು ನಿರ್ಧರಿಸುವವರು ಯಾರು? ಮೂರನೆಯದಾಗಿ, ‘ನೈತಿಕ ಮೌಲ್ಯ’ಗಳನ್ನು ಎತ್ತಿ ಹಿಡಿಯುವ ಹೊಣೆಯನ್ನು ಸರ್ಕಾರವು ಹೊರಗುತ್ತಿಗೆ ನೀಡಿದೆಯೇ?

ಮತಾಂತರದ ವಿರುದ್ಧ ಕಾನೂನು ರಚಿಸುವ ಬಗ್ಗೆ ಚಿಂತನೆ ನಡೆದಿದೆ ಎಂದು ಮುಖ್ಯಮಂತ್ರಿ ಇತ್ತೀಚೆಗೆ ಹೇಳಿದ್ದರು. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಮಾದರಿಯನ್ನು ಬೊಮ್ಮಾಯಿ ಅನುಸರಿಸುತ್ತಿದ್ದಾರೆ ಎಂಬುದು ಸ್ಪಷ್ಟ. ಯೋಗಿ ಮತ್ತು ಅಮಿತ್ ಶಾ ಅವರು ಕರ್ನಾಟಕದಲ್ಲಿ ನಡೆಸಿದ ಪ್ರಚಾರವನ್ನು ಇಲ್ಲಿನ ಜನರು ಇಷ್ಟಪಟ್ಟಿಲ್ಲ ಎಂಬುದನ್ನು ಬೊಮ್ಮಾಯಿ ಅವರು ನೆನಪಿನಲ್ಲಿ ಇರಿಸಿಕೊಳ್ಳುವುದು ಒಳ್ಳೆಯದು. 2018ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಗೆ ಬಹುಮತ ಬಾರದಿರಲು ಇದುವೇ ಕಾರಣ.

ಒಡೆಯರ್ ಮತ್ತು ಟಿಪ್ಪು ಸುಲ್ತಾನ್ ಆಳಿದ ನಾಡು ಇದು; ಬಸವಣ್ಣ ಮತ್ತು ಶಿಶುನಾಳ ಷರೀಫರು ಈ ನಾಡಿನ ಸಿದ್ಧಾಂತವನ್ನು ರೂಪಿಸಿದವರು ಎಂಬುದನ್ನು ಬೊಮ್ಮಾಯಿ ಮರೆಯಬಾರದು.

ನಾಗಪುರವಷ್ಟೇ ಅಲ್ಲ, ಲಖನೌ ಅಥವಾ ಗುಜರಾತ್ ಯಾವುದೂ ಕರ್ನಾಟಕದ ಶಾಸನ ರೂಪಿಸುವಿಕೆಗೆ ಮಾದರಿ ಆಗಬಾರದು. ಧಾರ್ಮಿಕ ಧ್ರುವೀಕರಣದ ವಿಷವಲ್ಲದೆ ಬೇರೇನೂ ಈ ಮಾದರಿಗಳಲ್ಲಿ ಇಲ್ಲ. ನಮ್ಮದೇ ಇತಿಹಾಸ, ಸಂಸ್ಕೃತಿ ಮತ್ತು ವಿವೇಕಕ್ಕೆ ಬದ್ಧರಾಗೋಣ. ಸಂವಿಧಾನವೇ ನಮಗೆ ಮಾರ್ಗದರ್ಶಕವಾಗಲಿ.

ಲೇಖಕ: ಸಚಿವಾಲಯದ ನಿವೃತ್ತ ಅಧಿಕಾರಿ, ಭಾರತ ಸರ್ಕಾರ

ನಾಡಿನಗಲ ಕೋಮುಕಿಡಿ

ಒಂದನೇ ಪುಟದಿಂದ...

ಈ ವರ್ಷ ಅಕ್ಟೋಬರ್‌ವರೆಗೂ ಇಂತಹ 87 ಘಟನೆಗಳು ವರದಿಯಾಗಿವೆ. ಬಸವರಾಜ ಬೊಮ್ಮಾಯಿ ಅವರು ಮುಖ್ಯ-ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ನಂತರವೇ ರಾಜ್ಯದಲ್ಲಿ ಕೋಮು ಸಂಬಂಧಿ ಘಟನೆಗಳ ಸಂಖ್ಯೆ ಏರಿಕೆಯಾಗುತ್ತಿದೆ. ಈ ಅವಧಿಯಲ್ಲಿ ಕೆಲವು ಘಟನೆಗಳು ರಾಜ್ಯದಾದ್ಯಂತ ದೊಡ್ಡ ಸುದ್ದಿಯೂ ಆಗಿವೆ.

ಬೆಳಗಾವಿಯಲ್ಲಿ ಹಿಂದೂ ಯುವತಿಯ ಜೊತೆಗೆ ಸಂಬಂಧ ಹೊಂದಿದ್ದ ಕಾರಣಕ್ಕೆ ಮುಸ್ಲಿಂ ಯುವಕ ಅರ್ಬಾಜ್‌ನ ತಲೆ ಕಡಿಯಲಾಯಿತು. ಬೆಂಗಳೂರು–ಬೆಳಗಾವಿಯಲ್ಲಿ ಮುಸ್ಲಿಂ ಗುಂಪುಗಳು ಹಾಗೂ ದಕ್ಷಿಣ ಕನ್ನಡದ ಸುರತ್ಕಲ್ ಮತ್ತು ಮೂಡುಬಿದಿರೆಯಲ್ಲಿ ಹಿಂದೂ ಗುಂಪುಗಳು ಮತೀಯ ಗೂಂಡಾಗಿರಿ ನಡೆಸಿದವು. ಗದಗದಲ್ಲಿ ಬಾಬರಿ ಮಸೀದಿ ಧ್ವಂಸದಂತಹ ಚಳವಳಿ ನಡೆಸುವ ಬೆದರಿಕೆಯನ್ನು ಶ್ರೀ ರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಹಾಕಿದರು. ವಾರದ ಹಿಂದಷ್ಟೇ ವಿಜಯಪುರ ಜಿಲ್ಲೆಯ ಆಲಮೇಲದಲ್ಲಿ ಮುಸ್ಲಿಂ ಯುವತಿ ಜತೆ ಸಂಬಂಧ ಹೊಂದಿದ್ದ ಕಾರಣಕ್ಕೆ ಯುವಕನೊಬ್ಬನ ಹತ್ಯೆ ಮಾಡಲಾಯಿತು. ಬಜರಂಗ ದಳದ ಕಾರ್ಯಕರ್ತರ ಮೇಲೆ ಯುವಕರ ಗುಂಪು ಹಲ್ಲೆ ನಡೆಸಿದ್ದನ್ನು ವಿರೋಧಿಸಿ, ಕಳೆದ ಶುಕ್ರವಾರವಷ್ಟೇ ತುಮಕೂರಿನಲ್ಲಿ ಬಂದ್ ಆಚರಿಸಲಾಯಿತು.

2017ರಲ್ಲಿ ಯಾದಗಿರಿಯಲ್ಲಿ ಶ್ರೀರಾಮ ಸೇನೆಯು ಆಯೋಜಿಸಿದ್ದ ರ್‍ಯಾಲಿಯಲ್ಲಿ ಭಾಗಿಯಾಗಿದ್ದ ತೆಲಂಗಾಣ ಬಿಜೆಪಿ ಶಾಸಕ ಟಿ.ರಾಜಾ ಸಿಂಗ್, ‘ಪ್ರತಿಯೊಬ್ಬ ಹಿಂದೂ ಸಹ ತನ್ನ ಮನೆಯಲ್ಲಿ ಕತ್ತಿ ಇಟ್ಟುಕೊಳ್ಳಬೇಕು. ಆಗ ಮಾತ್ರ ಇಂಡಿಯಾವನ್ನು ಹಿಂದೂ ರಾಷ್ಟ್ರವನ್ನಾಗಿ ಮಾಡಲು ಸಾಧ್ಯ’ ಎಂದು ಕರೆ ನೀಡಿದ್ದರು. ಅವರ ಈ ಪ್ರಚೋದನಕಾರಿ ಕರೆಗೆ ಸಭಿಕರು ಜೋರಾಗಿ ಚಪ್ಪಾಳೆ ತಟ್ಟಿದ್ದರು. ದ್ವೇಷ ಹರಡಲು ಮತ್ತು ತೆರೆಮರೆಯ ಇಂತಹ ವಿಚಾರಧಾರೆಗಳನ್ನು ಮುಖ್ಯವಾಹಿನಿಗೆ ತರಲು, ಪ್ರಚೋದನಕಾರಿ ಸಂದೇಶವಿರುವ ಇಂತಹ ರ್‍ಯಾಲಿಗಳು ಕಾರಣವಾಗುತ್ತವೆ. ದಕ್ಷಿಣ ಕನ್ನಡದಲ್ಲಿ ಆದ ರೀತಿಯಲ್ಲಿಯೇ ಬೇರೆ ಜಿಲ್ಲೆಗಳಲ್ಲೂ ಆಗುತ್ತಿದೆ ಎಂದು ಬಜರಂಗ ದಳದ ಮಾಜಿ ನಾಯಕರು ಮತ್ತು ಸಾಮಾಜಿಕ ವಿಶ್ಲೇಷಕರು ಕಳವಳ ವ್ಯಕ್ತಪಡಿಸುತ್ತಾರೆ.

ಗುಂಡಣ್ಣ



25 ವರ್ಷಗಳ ಹಿಂದೆ

ಭಾನುವಾರ, 31-10-1996

● **ಗದಗ: ಹಿಂಸೆ, ಗೋಲಿಬಾರ್ ಆತ್ಮಾಹುತಿ ಯತ್ನ, ಕರ್ಫ್ಯೂ**

ಹುಬ್ಬಳ್ಳಿ, ಅ.30– ಪೊಲೀಸ್ ಗೋಲಿಬಾರ್, ಅಶ್ರುವಾಯು ಸಿಡಿತ, ಲಾಠಿ ಪ್ರಹಾರ, 15 ಸರಕಾರಿ ಕಚೇರಿಗಳಿಗೆ ಬೆಂಕಿ, ಯುವಕರ ಆತ್ಮಾಹುತಿ ಯತ್ನ ಇತ್ಯಾದಿ ಘಟನೆಗಳೊಂದಿಗೆ ಗದಗ ಜಿಲ್ಲೆ ರಚನೆಗಾಗಿ ಕಳೆದ ಎರಡು ದಿನಗಳಿಂದ ನಡೆದ ಚಳವಳಿ ಇಂದು ಉಗ್ರ ಸ್ವರೂಪ ತಾಳಿದ್ದು ಹಿಂಸಾಚಾರ ನಿಯಂತ್ರಣಕ್ಕಾಗಿ ಕರ್ಫ್ಯೂ ವಿಧಿಸಲಾಗಿದೆ.

ಗದಗ, ಬೆಟಗೇರಿಗಳಲ್ಲಿ ಹಿಂಸಾನಿರತರನ್ನು ಚದುರಿಸಲು ನಡೆದ ಪೊಲೀಸ್ ಗೋಲಿಬಾರ್‌ನಲ್ಲಿ ಗಾಯಗೊಂಡ ನಾಲ್ವರಲ್ಲಿ ಒಬ್ಬರು ಮತ್ತು ಆತ್ಮಾಹುತಿಗೆ ಯತ್ನಿಸಿದ ಇಬ್ಬರಲ್ಲಿ ಒಬ್ಬರು ಜೀವನ್ಮರಣ ಹೋರಾಟ ನಡೆಸುತ್ತಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 31-10-1971

● **ಪಾಕ್ ಪ್ರದೇಶದ ಮೇಲೆ ಹಾರಲು ರಷ್ಯಾ ಸೇನಾನಿಗೆ ಅನುಮತಿ ನಿರಾಕರಣೆ**

ನವದೆಹಲಿ, ಅ.30– ಸೋವಿಯತ್ ವಿಮಾನಬಲದ ದಂಡನಾಯಕ ಏರ್ ಮಾರ್ಷಲ್ ಪಿ.ಎಸ್. ಕೌಟಕೊಫ್‌ರವರಿದ್ದ ವಿಮಾನವು ಪಾಕಿಸ್ತಾನ ಪ್ರದೇಶದ ಮೇಲೆ ಹಾರುವುದಕ್ಕೆ ಪಾಕಿಸ್ತಾನ ಸರ್ಕಾರ ಅನುಮತಿ ನಿರಾಕರಿಸಿದ್ದರಿಂದ ಅವರು ಮೊದಲು ಗೊತ್ತು ಮಾಡಿದ್ದಕ್ಕಿಂತ ಒಂದು ದಿನ ತಡವಾಗಿ ಇಂದು ಇಲ್ಲಿಗೆ ಆಗಮಿಸಿದರು.

ತನ್ನ ಪ್ರದೇಶದ ಮೇಲೆ ಸೋವಿಯತ್ ವಿಮಾನಗಳು ಹಾರುವುದಕ್ಕೆ ಪಾಕಿಸ್ತಾನವು ಅನುಮತಿ ನಿರಾಕರಿಸಿರುವುದು ಇದೇ ಮೊದಲು.

ದಿನ ಭವಿಷ್ಯ

ಭಾನುವಾರ ಅಕ್ಟೋಬರ್ 31, 2021

ಶ್ರೀಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಶರದೃತು ಆಶ್ವಯುಜ ಮಾಸ ಕೃಷ್ಣಪಕ್ಷ ಮಳೆ ನಕ್ಷತ್ರ ಸ್ವಾತಿ ದಶಮೀ ಗಂ. 7-50 (ಬೆ. 9-27) ಭಾನುವಾರ ನಿತ್ಯ ನಕ್ಷತ್ರ ಮಖೆ ಗಂ. 8-11 (ಬೆ. 9-35) ಬ್ರಹ್ಮ ನಾಮ ಯೋಗ ಗಂ. 36-34 ಭದ್ರೆ ಕರಣ ಗಂ. 7-50 ವಿಷ ಗಂ. 28-19 ಅಮೃತ ಗಂ. 0-48 ಪುನರಮೃತ ಗಂ. 52-30 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-16 ಸೂರ್ಯಾಸ್ತ: 5-50 ಅದೃಷ್ಟ ಸಂಖ್ಯೆ 3

ಮೇಷ: ಉತ್ತಮ ಕಾರ್ಯವೊಂದನ್ನು ಹಮ್ಮಿಕೊಂಡಿದ್ದಲ್ಲಿ ಹಿರಿಯರ ಆಶೀರ್ವಾದದಿಂದ ಯಶಸ್ವಿಯಾಗುವಿರಿ. ದೂರದ ಬಂಧುಗಳ ಆಗಮನ ಸಾಧ್ಯತೆ. ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆ ಇರಲಿ.

ವೃಷಭ: ನಿಮ್ಮ ಮಾತುಗಳಿಂದಾಗಿಯೇ ವೃಥಾ ಆರೋಪ ಎದುರಿಸುವ ಸಾಧ್ಯತೆ. ಮಾತಿನ ಮೇಲೆ ಹಿಡಿತವಿರಲಿ. ನಿಷ್ಕಲ್ಮಷ ಮನಸ್ಸಿನಿಂದ ವ್ಯವಹರಿಸಿದಲ್ಲಿ ಜನಮನ್ನಣೆಗೆ ಪಾತ್ರರಾಗುವಿರಿ.

ಮಿಥುನ: ನಿಮ್ಮ ಯೋಜನೆಗಳಿಂದ ಇತರರಿಗೆ ಹೆಚ್ಚಿನ ಅನುಕೂಲತೆಯನ್ನು ತರುವುದರ ಜೊತೆಗೆ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡುವವು. ನಿಮ್ಮ ಅನುಕರಣೀಯ ನಡೆ ಇತರರಿಗೆ ಮಾದರಿಯಾಗಲಿದೆ.

ಕರ್ಕಾಟಕ: ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ ದೊರೆತು ಆತ್ಮವಿಶ್ವಾಸಕ್ಕೆ ನಾಂದಿಯಾಗಲಿದೆ. ನಿಮ್ಮ ಯೋಜನೆಗಳನ್ನು ಕೈಬಿಡದೇ ಮುನ್ನಡೆಸಲು ಸಕಾಲ. ಎಲ್ಲ ಅನುಕೂಲತೆಗಳು ಒದಗಿಬರಲಿವೆ.

ಸಿಂಹ: ನಿಮ್ಮ ಒರಟುತನದಿಂದಾಗಿ ಇತರರ ತಿರಸ್ಕಾರಕ್ಕೆ ಒಳಗಾಗುವ ಸಾಧ್ಯತೆ ಇದೆ. ಕೌಟುಂಬಿಕ ವಿಷಯದಲ್ಲಿ ಅತ್ಯಂತ ಜಾಗರೂಕರಾಗಿರಿ. ಸಂಗಾತಿಯ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಿ.

ಕನ್ಯಾ: ಗೃಹಾಲಂಕಾರ ವಸ್ತುಗಳ ಖರೀದಿ ಸಾಧ್ಯತೆ. ಇಂಜಿನಿಯರ್ ಮತ್ತು ಒಳಾಂಗಣ ವಿನ್ಯಾಸಕಾರರಿಗೆ ವ್ಯವಹಾರದಲ್ಲಿ ಹೆಚ್ಚಿನ ಲಾಭ ನಿರೀಕ್ಷೆ. ಸಂಗಾತಿಯ ಮೆಚ್ಚುಗೆಗೆ ಪಾತ್ರರಾಗುವಿರಿ.

ತುಲಾ: ಷೇರು ವ್ಯವಹಾರದಲ್ಲಿ ಹಾನಿಯ ಸಾಧ್ಯತೆ ಇದ್ದು ಸರಿಯಾದ ಮಾರ್ಗದರ್ಶನ ಪಡೆದು ವ್ಯವಹರಿಸುವುದು ಉತ್ತಮ. ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಉತ್ತಮ ಫಲಿತಾಂಶ.

ವೃಶ್ಚಿಕ: ಗೃಹಿಣಿಯರ ಅಭಿಲಾಷೆಗಳನ್ನು ಪೂರೈಸುವುದು ಉತ್ತಮ. ಮನೆಯವರ ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಉದ್ವೇಗಕ್ಕೊಳಗಾಗದೆ ಶಾಂತ ಮನಸ್ಸಿನಿಂದ ಎಲ್ಲದಕ್ಕೂ ಪರಿಹಾರ.

ಧನು: ನಿಮ್ಮ ಕಾರ್ಯಚಟುವಟಿಕೆಗಳು ಇತರರ ಅಪಹಾಸ್ಯಕ್ಕೆ ವಸ್ತುವಾಗುವ ಸಾಧ್ಯತೆ ಇದ್ದು ಇದರಿಂದ ಧೃತಿಗೆಡುವ ಅವಶ್ಯಕತೆ ಇಲ್ಲ. ನಿಮ್ಮ ದೃಢ ಸಂಕಲ್ಪದಿಂದ ಯಶಸ್ಸು.

ಮಕರ: ಮೇಲಾಧಿಕಾರಿಗಳ ಅವಕೃಪೆಗೆ ಪಾತ್ರರಾಗುವ ಸಾಧ್ಯತೆ. ಕೆಲಸ ಕಾರ್ಯಗಳಲ್ಲಿ ಅಸಡ್ಡೆ ತೋರುವುದು ಸಲ್ಲ. ಸಂಗಾತಿಯ ಸಕಾಲಿಕ ನೆರವು ದೊರೆಯಲಿದೆ. ಗುರುವಿನ ಆರಾಧನೆ ಮಾಡಿ.

ಕುಂಭ: ರಾಜಕಾರಣಿಗಳು ಶ್ರೇಯಸ್ಸನ್ನು ನಿರೀಕ್ಷಿಸಬಹುದು. ಉತ್ತಮ ಹುದ್ದೆ ದೊರಕುವ ಸಾಧ್ಯತೆ. ಸ್ನೇಹಿತರ ಸಹಾಯ ದೊರೆಯಲಿದೆ. ಮಾಧ್ಯಮ ಮತ್ತು ಪ್ರಚಾರ ವ್ಯವಹಾರಗಳಲ್ಲಿರುವವರಿಗೆ ಉತ್ತಮ ಪ್ರಗತಿ.

ಮೀನ: ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯವಿದ್ದು ಪ್ರಶಸ್ತಿ ಪುರಸ್ಕಾರಗಳು ನಿಮ್ಮದಾಗಲಿವೆ. ಉತ್ತಮ ಅವಕಾಶಗಳು ಒದಗಿ ಬರಲಿದೆ. ಉದರ ನೋವಿನ ಸಮಸ್ಯೆ ತಲೆದೋರಬಹುದು. ಸಾತ್ವಿಕ ಆಹಾರ ಉತ್ತಮ.

ನಿಮ್ಮ ಜನ್ಮದಿನ 31-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಈ ವರ್ಷವು ಮಿಶ್ರ ಫಲಗಳಿಂದ ಕೂಡಿದೆ. ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಏರು ಪೇರು ಕಂಡುಬಂದರೂ, ಅಪಾಯರಹಿತವಾಗಿರುವುದು. ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸದಲ್ಲಿ ಉತ್ತಮ ಪ್ರಗತಿ. ಮಹಿಳೆಯರಿಗೆ ವಿಶೇಷ ಸ್ಥಾನ ಮಾನಗಳು ಲಭ್ಯವಾಗಲಿವೆ.

ಪದಬಂಧ 4764 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಭ್ರೂಣವನ್ನು ಆವರಿಸಿರುವ ಪೊರೆ (3)
4. ಇದು ಮುಖ್ಯವಾದುದು! (3)
5.ಒತ್ತಾಯವನ್ನು ಹೀಗೂ ಹೇಳುವರು (4)
6.ನಾಮ ಹಚ್ಚಿಕೊಂಡವನ ಹೆಸರು (4)
7.ಕಮ್ಮಾರನ ಕೈ (2)
9.ಪುಢಾರಿಯ ಹತ್ತಿರ ಶತ್ರು ಇದ್ದಾನಲ್ಲಾ? (2)
13.ನಡುವೆ ಹೋರಿ ತಿರುಗಿದಾಗ ಪ್ರಯಾಣಿಕ ಕಾಣಿಸಿದನೇ? (4)
14.ಇತರರಿಗೆ ಸಹಾಯ ಮಾಡುವವನು (4)
15.ವಿರಾಟರಾಜನ ಸೇನಾಪತಿ (3)
16.ಕರದಲ್ಲಿ ಹಿಡಿದಿರುವ ಚಿಪ್ಪು (3)

ಮೇಲಿಂದ ಕೆಳಕ್ಕೆ
1.ಸಂದರ್ಭಕ್ಕೆ ಸರಿಯಲ್ಲದ್ದು (4)
2.ಈತ ಮಂದಿಗೆಲ್ಲಾ ಯಜಮಾನ (5)
3.ಮನದೊಳಗೆ ನೀವುವಿಕೆ (3)
5.ಗೆಲುವಿನ ಭೇರಿಯಿದು (4)
8.ಅಪ್ಪಣೆ ಚೀಟಿಯಿದು (4)
10.ಹೊತ್ತಿಗೆ ಜೊತೆಯಿರುವ ಹುಳು! (5)
11.ಹೆಣ್ಣು ದುಂಬಿಯಿದು (4)
12.ತೊಂದರೆ ಹೀಗೆ ಬಂದಿದೆ (3)



4763ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅರ್ಬುದ 4.ಗಬ್ಬುನಾತ 6.ಮನಸಿಜ 8.ಜಿಬರು 11.ಮುದುಕ 13.ಹಸುಗೂಸು 17.ತಡಗುಣಿ 18.ಕಶ್ಮಲ

ಮೇಲಿಂದ ಕೆಳಕ್ಕೆ: 1.ಅಲಗು 2.ದಗಲ್ಬಾಜಿ 3.ಆಲಸಿ 5.ತಮ 7.ಜಯಂತಿ 9.ರುಸುಮು 10.ಸಂದೇಹ 12.ಕರಣಿಕ 14.ಸುರಭಿ 15.ಸುತ 16.ಸಫಲ

ಸುಡೊಕು 5150

		4		7	1	2		3
						6		
5	2		8		9		4	7
		5	4			3		
	6			9			7	
3		7			8	5		9
4	1			8			3	
		2	7		4	9		1
7		9		3			2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5149 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

'ಪುನೀತ್ ರಾಜ್‌ಕುಮಾರ್: ಮರೆಯಲಾಗದ ಯುವರತ್ನ' ಸಂವಾದದಲ್ಲಿ ಚಿತ್ರರಂಗದ ಕಂಬನಿ

ಅಪ್ಪು ಇನ್ನಿಲ್ಲ ಅಂದರೆ ನಂಬಕ್ಕಾಗಲ್ಲ

ಪ್ರಜಾವಾಣಿ ಸಂವಾದ

ಬೆಂಗಳೂರು: 'ಬದುಕು, ಸಾವು ಯಾರ ಕೈಯಲ್ಲೂ ಇಲ್ಲ ಎಂಬ ಮಾತಿಗೆ ಅಪ್ಪು ಸಾವು ಸಾಕ್ಷಿ. ಆರೋಗ್ಯದ ಬಗ್ಗೆ, ಆಹಾರದ ಬಗ್ಗೆ ಶಿಸ್ತು ಇದ್ದ ಪುನೀತ್ ರಾಜ್‌ಕುಮಾರ್‌ಗೇ ಹೀಗೆ ಆಯಿತು ಎನ್ನುವುದನ್ನು ನಂಬಕ್ಕಾಗುತ್ತಿಲ್ಲ. ಇದು ದೊಡ್ಡ ಶಾಕ್' ಎಂದು ಬರಹಗಾರ, ಚಿತ್ರ ನಿರ್ದೇಶಕ ಎನ್.ಎಸ್. ಶಂಕರ್ ಅಚ್ಚರಿ ವ್ಯಕ್ತಪಡಿಸಿದರು.

'ಹಿಂದಿನ ದಿನ ಅಂದರೆ ಗುರುವಾರ ಬರ್ತ್‌ಡೇ ಪಾರ್ಟಿಯಲ್ಲಿ ನನ್ನ ಜತೆಗೆ ಲವಲವಿಕೆಯಿಂದ ಇದ್ದರು.. ಕೇಕ್ ತಿನ್ನದೇ, ಗುರುವಾರ ಆಗಿದ್ದರಿಂದ ನಾನ್‌ವೆಜ್ ಕೂಡ ತಿನ್ನದೇ ರಾತ್ರಿ 11.30ಕ್ಕೆ ಹೋಗಿದ್ದರು. ಮರುದಿನ ಈ ರೀತಿ ಆಗಿದೆ ಎಂಬುದು ನಂಬಲಾರದ ವಿಧಿಯಾಟ' ಎಂದು ಅಪ್ಪು ಗೆಳೆಯ, ಸಂಗೀತ ನಿರ್ದೇಶಕ ಗುರುಕಿರಣ್ ಆಘಾತ ತೋಡಿಕೊಂಡರು.

'ಜೀವನ ನೀರಿನ ಮೇಲಣ ಗುಳ್ಳೆ. ಗುಳ್ಳೆಯಂತೆಯೇ ಲವಲವಿಕೆಯಿಂದ, ಸಂತೋಷದಿಂದ ಬದುಕಿ ಗುಳ್ಳೆ ಒಡೆದಂತೆ ಹೋಗಿಬಿಟ್ಟ. ಶಂಕರ್‌ನಾಗ್ ಮೃತಪಟ್ಟಾಗ ಆದ ಶಾಕ್‌ನಿಂದ ನಾನು ಇನ್ನೂ ಹೊರಬಂದಿಲ್ಲ. ಅಪ್ಪು ಸಾವು ಅದರ ಎರಡು ಪಟ್ಟು ಶಾಕ್ ನೀಡಿದೆ' ಎಂದು ಅಪ್ಪು ಮಗುವಾಗಿದ್ದಾಗಲೇ ಎತ್ತಿ ಆಡಿಸಿದ್ದ ನಟಿ ಜಯಮಾಲ ಕಣ್ಣೀರಿಟ್ಟರು.

'ಎಲ್ಲರನ್ನೂ ಪ್ರೀತಿಸುತ್ತಿದ್ದ ಪುನೀತ್ ಪ್ರತಿಭಾವಂತ ನಟ. ಅಷ್ಟೇ ಅಲ್ಲ, ಹೊಸ ಪ್ರತಿಭಾವಂತರನ್ನು ಪ್ರೋತ್ಸಾಹಿಸುವ, ಹೊಸ ನಿರ್ದೇಶಕರಿಗೆ ಅವಕಾಶ ನೀಡುವ ವ್ಯಕ್ತಿ. ಇಂಥ ಕೆಲಸ ಮಾಡುವ ಮತ್ತೊಬ್ಬ ನಾಯಕ ಸಿಗಲಾರ. ಇದು ದೊಡ್ಡ ಹೊಡೆತ' ಎಂದು ಅಪ್ಪು ಒಡನಾಡಿ, ಸಂಗೀತ ನಿರ್ದೇಶಕ ವಿ. ಮನೋಹರ್ ನೆನಪು ಮಾಡಿಕೊಂಡರು.

'ಪ್ರಜಾವಾಣಿ' ಶನಿವಾರ ಏರ್ಪಡಿಸಿದ್ದ 'ಪುನೀತ್ ರಾಜ್‌ಕುಮಾರ್: ಮರೆಯಲಾಗದ ಯುವರತ್ನ' ಸಂವಾದ ಕಾರ್ಯಕ್ರಮದಲ್ಲಿ ಈ ನಾಲ್ವರು ಒಡನಾಟದ ಮೆಲುಕುಗಳನ್ನು ಹಂಚಿಕೊಂಡರು.

'ಅಪ್ಪು ಉಸಿರಾಟವೇ ಸಿನಿಮಾ ಆಗಿತ್ತು'

ಅತ್ಯಂತ ಜಾಣನಾಗಿದ್ದ ಪುನೀತ್ ಯಾವುದೇ ವಿಶ್ವವಿದ್ಯಾಲಯದಿಂದ ಡಿಗ್ರಿ ಪಡೆದುಕೊಳ್ಳದೇ ಇದ್ದರೂ ಜಗತ್ತಿನ ಎಲ್ಲ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದರು. ಎಡಿಟಿಂಗ್‌ನಿಂದ ಹಿಡಿದು ಸಿನಿಮಾ ರಂಗದ ಎಲ್ಲ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ಅಪ್ಪು ಉಸಿರಾಟವೇ ಸಿನಿಮಾ ಆಗಿತ್ತು.

ಪಾರ್ವತಮ್ಮನ ಹೊಟ್ಟೆಯಲ್ಲಿ ಅಪ್ಪು ಇರುವಾಗಲೇ ನಾನು ರಾಜ್‌ಕುಮಾರ್ ಜತೆಗೆ ಮೊದಲ ಚಿತ್ರದಲ್ಲಿ ನಟಿಸಿದ್ದೆ. ಪುನೀತ್ ಪುಟ್ಟ ಮಗುವಾಗಿದ್ದಾಗ ಪಾರ್ವತಮ್ಮ ನನ್ನ ರೂಮಿಗೆ ಬಂದು ಮಗುವಿಗೆ ಹಾಲು ಕುಡಿಸಿ ನನ್ನ ಪಕ್ಕದಲ್ಲಿ ಮಲಗಿಸಿ ಹೋಗುತ್ತಿದ್ದರು. ಸ್ನಾನ ಮಾಡಿಸೋದು, ಪೌಡರ್ ಹಚ್ಚೋದು, ಕಕ್ಕ ತೊಳೆಯೋದ್ರಿಂದ ಹಿಡಿದು ಎಲ್ಲವನ್ನೂ ಮಾಡಿದ್ದೆ. ಅಪ್ಪು ದೊಡ್ಡವನಾದ ಮೇಲೆ ಅದನ್ನು ಹೇಳಿದ್ರೆ 'ಆಂಟಿ' ಎಂದು ಅಪ್ಪಿಕೊಳ್ಳುತ್ತಿದ್ದ. ಸಹೋದರರಾದ ಶಿವಣ್ಣ, ರಾಘು, ಸಹೋದರಿಯರಾದ ಲಕ್ಷ್ಮೀ, ಪೂರ್ಣಿಮಾ, ಪತ್ನಿ ಅಶ್ವಿನಿ, ಮಕ್ಕಳಾದ ವಂದಿತಾ, ಧೃತಿ ಅವರು ಪುನೀತ್‌ನನ್ನು ಕಳೆದುಕೊಂಡಿದ್ದಲ್ಲ. ಅವರನ್ನೇ ಅವರು ಕಳೆದುಕೊಂಡಿದ್ದಾರೆ. ಅವರಿಗೆ ಧೈರ್ಯ ತುಂಬುವ ಕೆಲಸ ನಾವು ಮಾಡಬೇಕು. ಈ ಆಘಾತದಿಂದ ಮೊದಲು ಅವರನ್ನು ಹೊರಗೆ ತರಬೇಕು.

– **ಜಯಮಾಲ,** ರಾಜ್ ಕುಟುಂಬದ ಆಪ್ತ ನಟಿ

'ಮಾತು ಕಡಿಮೆ, ಕೆಲಸ ಜಾಸ್ತಿ'

ಎಲ್ಲರನ್ನೂ ಗೌರವದಿಂದ ನೋಡುತ್ತಿದ್ದ ಪುನೀತ್ ಮಾತನಾಡುತ್ತಿದ್ದುದು ಕಡಿಮೆ. 'ಸ್ವಸ್ತಿಕ್' ಚಿತ್ರ ಮಾಡುತ್ತಿದ್ದಾಗ ಕೆಲವು ಕ್ಯಾಸೆಟ್‌ಗಳನ್ನು ತಂದು ಕೊಟ್ಟು ಇದರಲ್ಲಿ ಇರುವ ಸಂಗೀತ ಕೇಳಿಸಿಕೊಳ್ಳಿ ಎಂದಿದ್ದರು. ಹಲವು ಹಾಡುಗಳಿಗೆ ಅವರು ಕೊಟ್ಟಿದ್ದನ್ನು ಬಳಸಿಕೊಂಡಿದ್ದೆವು.

'ಅಣ್ಣಾಬಾಂಡ್', 'ಅಂಜನಿ ಪುತ್ರ' ಚಿತ್ರಗಳಲ್ಲಿ ಅಪ್ಪು ಜತೆ ನಟಿಸಿದ್ದೆ. ಆಗಲೂ ಮಾತು ಕಡಿಮೆ. ಬೇರೆ ಬೇರೆ ಕ್ಯಾಸೆಟ್ ತಂದು ಕೊಟ್ಟು ನೋಡಿ ಎಂದು ಪ್ರೋತ್ಸಾಹಿಸುತ್ತಿದ್ದರು. ಪಾರ್ವತಮ್ಮ ಅವರ ಬಗ್ಗೆ ಒಂದು ಹಾಡು ರಚಿಸಿದ್ದೆ. ಅದನ್ನು ನೋಡಿ ಅಪ್ಪು ಕಣ್ಣೀರಿಟ್ಟಿದ್ದರು. ನನ್ನನ್ನು ಅಪ್ಪಿಕೊಂಡಿದ್ದರು.

– **ವಿ. ಮನೋಹರ್,** ಸಂಗೀತ ನಿರ್ದೇಶಕ

'ಸದಭಿರುಚಿಯ ಚಿತ್ರಗಳನ್ನಷ್ಟೇ ನೀಡುತ್ತಿದ್ದರು'

ಪುನೀತ್ ಹೀರೊ ಆಗಿದ್ದರೂ ಹೀರೋಯಿಸಂನಲ್ಲಿ ಮುಳುಗಿಹೋದವರಲ್ಲ. ಫಿಲ್ಮ್ ಇಂಡಸ್ಟ್ರಿಯ ಗ್ರಾಮರ್ ಬದಲಾಗುತ್ತಿದೆ. ಕನ್ನಡ ಸಿನಿಮಾ ಕವಲು ದಾರಿಯಲ್ಲಿ, ಗೊಂದಲದ ಸ್ಥಿತಿಯಲ್ಲಿ ಇದೆ. ಇಂಥ ಸ್ಥಿತಿಯಲ್ಲಿ ಕನ್ನಡ ಚಿತ್ರರಂಗದ ಆಧಾರ ಸ್ತಂಭದಂತೆ ಇದ್ದವರು ಅಪ್ಪು. ಹೊಸತನವನ್ನು ಕೊಡಲು, ಹೊಸಪ್ರತಿಭೆಗಳಿಗೆ ಆಶ್ರಯತಾಣವಾಗಲು ಸದಾ ಮುಂದಿದ್ದರು. ಪುನೀತ್ ಅವರನ್ನು ಕಳೆದುಕೊಂಡಿರುವುದು ಕನ್ನಡ ಸಿನಿಮಾರಂಗಕ್ಕೆ ದೊಡ್ಡ ನಷ್ಟ. ಈ ನಿರ್ವಾತವನ್ನು ತುಂಬಿಸುವುದು ಕಷ್ಟ.

2,500 ಹೆಣ್ಣುಮಕ್ಕಳಿಗೆ, ಹಲವಾರು ಶಾಲೆಗಳಿಗೆ, ಗೋಶಾಲೆಗೆ, ಶಿಕ್ಷಣಕ್ಕೆ, ಶಕ್ತಿಧಾಮಕ್ಕೆ ಹೀಗೆ ಹಲವು ಸಂಸ್ಥೆಗಳಿಗೆ ನೆರವು ನೀಡುತ್ತಿದ್ದರೂ ಅದನ್ನೆಂದೂ ಪ್ರಚಾರಕ್ಕೆ ಬಳಸಿಕೊಂಡವರಲ್ಲ. ನೆರವು ನೀಡಿ ಸಂತೋಷವಾಗಿ ಇರುತ್ತಿದ್ದರು. ತನ್ನ ಮೇಲೆ ಯಾವುದೇ ಹೊರೆ ಇಲ್ಲ ಎಂದು ನಗುನಗುತ್ತಾ ಇರುತ್ತಿದ್ದರು.

ರಾಜ್‌ಕುಮಾರ್ ಅವರು ನಟಿಸುವ ಕಾಲದಲ್ಲಿಯೂ ಇಂಥದ್ದೇ ಫಾರ್ಮುಲ ಎಂಬುದಿರಲಿಲ್ಲ. ಸದಭಿರುಚಿಯ ಚಿತ್ರಗಳೇ ಆಗಬೇಕು ಎಂದು ಹುಡುಕಿ ಮಾಡುತ್ತಿದ್ದರು. ಈ ಬಳುವಳಿ ಅವರ ಮಕ್ಕಳಿಗೂ ಬಂದಿದೆ. ಪುನೀತ್ ಸದಭಿರುಚಿಯ ಚಿತ್ರ ಬಿಟ್ಟು ಬೇರೆ ನಟಿಸಿಲ್ಲ.

- **ಎನ್.ಎಸ್. ಶಂಕರ್,** ಸಿನಿಮಾ ನಿರ್ದೇಶಕ

ವಿನಯವಂತ, ನಿಜವಾದ ಫಿಲ್ಮ್‌ಮೇಕರ್

ಅವರ ಚಿತ್ರಗಳಿಗೆ ಅಥವಾ ಬೇರೆ ಚಿತ್ರಗಳಿಗೆ ಹಾಡು ತಯಾರು ಮಾಡಿ, ಪುನೀತ್‌ಗೆ ಹಾಡಿ ಅಂದರೆ ಅವರು ಎಂದಿಗೂ ಆಯ್ತು ಅಥವಾ ಇಲ್ಲ ಎಂದು ಹೇಳಿದವರಲ್ಲ. ನನ್ನಿಂದ ಸಾಧ್ಯನಾ ಎಂದು ವಿನಯ ತೋರಿಸುತ್ತಿದ್ದರು. ಆಮೇಲೆ ಹಾಡಿ ಬಿಡುತ್ತಿದ್ದರು.

ಬೇರೆ ಬೇರೆ ಭಾಷೆಗಳ ಚಿತ್ರಗಳನ್ನು ನೋಡುತ್ತಿದ್ದರು. ವಿದೇಶೀ ಚಿತ್ರಗಳನ್ನೂ ವೀಕ್ಷಿಸುತ್ತಿದ್ದರು. ಅದರಲ್ಲಿರುವ ಪಾತ್ರ, ಟ್ವಿಸ್ಟ್‌ಗಳ ಬಗ್ಗೆ ಚರ್ಚೆ ಮಾಡುತ್ತಿದ್ದರು. ಯಾಕೆ ಹಿಟ್ ಆಯಿತು ಎಂದು ನೋಡುತ್ತಿದ್ದರು. ಲೆನ್ಸ್, ಲೈಟಿಂಗ್ಸ್, ಎಡಿಟಿಂಗ್ ಸಹಿತ ಎಲ್ಲವೂ ಗೊತ್ತಿದ್ದ ಪುನೀತ್ ನಿಜವಾದ ಫಿಲ್ಮ್ ಮೇಕರ್ ಆಗಿದ್ದರು. ಆತ ಬರೀ ನಟ ಅಲ್ಲ; ನಿರ್ಮಾಪಕ. ಸಿನಿಮಾದ ಕಥೆ ಕೇಳಲು ಅವರೇ ಕುಳಿತುಕೊಳ್ಳುತ್ತಿದ್ದರು. ಅವರ ನಿರ್ಮಾಣದಲ್ಲಿ ನಿರ್ದೇಶಕರಿಗೆ ಪೂರ್ಣ ಸ್ವಾತಂತ್ರ್ಯ ಇರುತ್ತಿತ್ತು. ಅವರು ಒಮ್ಮೆ ನಟನೆಗೆ ಒಪ್ಪಿಕೊಂಡರೆ ಆಮೇಲೆ ನಿರ್ದೇಶಕರು ಹೇಳಿದ್ದನ್ನು ಚಾಚೂ ತಪ್ಪದೇ ಕೇಳುತ್ತಿದ್ದರು.

ದೊಡ್ಡವರ ಮಕ್ಕಳು ಅಂದರೆ ಅವರಲ್ಲಿ ಏಕಾಗ್ರತೆ ಕಡಿಮೆ ಇರುತ್ತದೆ. ಅಹಂ ಜಾಸ್ತಿ ಇರುತ್ತದೆ. ಎಲ್ಲಾದರೂ ಹೋಗಬೇಕಿದ್ದರೆ ಗನ್‌ಮ್ಯಾನ್‌ಗಳು ಎಲ್ಲ ಇರಬೇಕು ಎನ್ನುವವರು ಜಾಸ್ತಿ. ಪುನೀತ್ ಇದೆಲ್ಲದಕ್ಕಿಂತ ಭಿನ್ನವಾಗಿದ್ದರು. ರಾಜ್‌ಕುಮಾರ್ ಊಟಕ್ಕೆ ಕುಳಿತರೆ ಚೆನ್ನಾಗಿಯೇ ತಿನ್ನುತ್ತಿದ್ದರು. ಪುನೀತ್ ಎಲ್ಲದರಲ್ಲೂ ಹಿತಮಿತ.

- **ಗುರುಕಿರಣ್,** ಸಂಗೀತ ನಿರ್ದೇಶಕ

ಸುದೀಪ್ ಟ್ವಿಟರ್ ಖಾತೆಯ ಚಿತ್ರ

ಡಿಪಿ ಬದಲಿಸಿ ಪುನೀತ್ ಚಿತ್ರ ಹಾಕಿದ ಸುದೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅಗಲಿಕೆಯು ಇಡೀ ಭಾರತೀಯ ಚಿತ್ರರಂಗಕ್ಕೆ ಭರಿಸಲಾಗದ ನೋವು ನೀಡಿದೆ. ಅದರಲ್ಲೂ ಪುನೀತ್ ಅವರನ್ನು ಹತ್ತಿರದಿಂದ ನೋಡಿದ್ದ ಕನ್ನಡದ ನಟ, ನಟಿಯರಿಗೆ ಅದನ್ನು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ.

ಪುನೀತ್ ನಿಧನದ ಬಗ್ಗೆ ಅತೀವ ನೋವನ್ನು ವ್ಯಕ್ತಪಡಿಸಿರುವ ನಟ ಕಿಚ್ಚ ಸುದೀಪ್ ಅವರು, 13 ವರ್ಷಗಳ ಬಳಿಕ ತಮ್ಮ ಟ್ವಿಟರ್ ಡಿಪಿ ಬದಲಿಸಿ ಪುನೀತ್ ರಾಜ್‌ಕುಮಾರ್ ಚಿತ್ರವನ್ನು ಹಾಕುವ ಮೂಲಕ ಅತ್ಯುನ್ನತ ಗೌರವ ಸಲ್ಲಿಸಿದ್ದಾರೆ.

ಅಪ್ಪು ಕುರಿತು ಟ್ವಿಟರ್‌ನಲ್ಲಿ ಸುದೀರ್ಘ ಬರಹವೊಂದನ್ನು ಹಂಚಿಕೊಂಡಿರುವ ಅವರು, 'ಇದು ಭರಿಸಲಾಗದ ಶೂನ್ಯ' ಎಂದು ತಿಳಿಸಿದ್ದಾರೆ.

'A Born Star' ಎಂಬ ಶೀರ್ಷಿಕೆ ನೀಡಿ ಪುನೀತ್ ಅವರ ಮೊದಲ ಭೇಟಿಯಿಂದ ಅವರ ಜೊತೆ ಕಳೆದ ಕ್ಷಣಗಳನ್ನು ಸುದೀಪ್ ಮೆಲುಕು ಹಾಕಿದ್ದಾರೆ

'ಇದು ಬಾಲ್ಯದಿಂದ ಶುರುವಾದ ಪಯಣವಾಗಿದೆ. ಅಪ್ಪು ಅವರನ್ನು ಶಿವಮೊಗ್ಗದಲ್ಲಿ ಮೊದಲು ಭೇಟಿಯಾದಾಗ ಅವರಾಗಲೇ ಸ್ಟಾರ್ ಆಗಿದ್ದರು. ಅವರ ನಟನೆಯ ಭಾಗ್ಯವಂತರು ಚಿತ್ರವು ಹಿಟ್ ಆಗಿತ್ತು. ಪುನೀತ್ ಅವರು ಚಿತ್ರಮಂದಿರ ಭೇಟಿ ಬಳಿಕ ಊಟಕ್ಕೆಂದು ನಮ್ಮ ಮನೆಗೆ ಬಂದಿದ್ದರು. ನಾನು ಮೊದಲ ಬಾರಿ ಅವರನ್ನು ಭೇಟಿಯಾಗಿದ್ದೆ. ನಾವು ಸಮಾನ ವಯಸ್ಸಿನವರಾಗಿದ್ದರಿಂದ ಬೇಗ ಹತ್ತಿರವಾದೆವು. ನಮ್ಮ ಮನೆಯ ಊಟಕ್ಕಿಂತ ನನ್ನ ಗೊಂಬೆಗಳ ಮೇಲೆ ಅಪ್ಪು ಹೆಚ್ಚು ಆಕರ್ಷಿತರಾಗಿದ್ದರು ಎಂದು ಚಿಕ್ಕಂದಿನ ಚಿತ್ರವನ್ನು ಹಂಚಿಕೊಂಡಿದ್ದಾರೆ.

ಸಂಭಾವನೆ ಪಡೆಯದೇ ಆರ್‌ಟಿಇ ಪ್ರಚಾರ: ಪುನೀತ್ ಸ್ಮರಿಸಿದ ಕಿಮ್ಮನೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಶಿಕ್ಷಣ ಇಲಾಖೆಯ ರಾಯಭಾರಿಯಾಗಿ ನಟ ಪುನೀತ್ ರಾಜ್‌ಕುಮಾರ್ ಅವರು ಶಿಕ್ಷಣ ಹಕ್ಕು (ಆರ್‌ಟಿಇ) ಕಾಯ್ದೆಯ ಜಾಗೃತಿ ಅಭಿಯಾನದಲ್ಲಿ ತೊಡಗಿಸಿಕೊಂಡಿದ್ದರು. ಹಣ ಪಡೆಯದೇ ದೊಡ್ಡತನ ಮೆರೆದಿದ್ದರು' ಎಂದು ಮಾಜಿ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ ಸ್ಮರಿಸಿದ್ದಾರೆ.

'2015ರಲ್ಲಿ ಶಿಕ್ಷಣ ಮಂತ್ರಿಯಾಗಿದ್ದಾಗ ಕಾರ್ಯಕ್ರಮದಲ್ಲಿ ಸಿಕ್ಕ ಪುನೀತ್‌ಗೆ ಇಲಾಖೆಯ ರಾಯಭಾರಿಯಾಗಿ ಆರ್‌ಟಿಇ ಪ್ರಚಾರಕ್ಕೆ ಕೈಜೋಡಿಸುವಂತೆ ಮನವಿ ಮಾಡಿದ್ದೆವು. ಭೂಮಿ ತೂಕದ ಸದ್ಗುಣಗಳ ಮನುಷ್ಯ. ಒಂದು ನಗೆಯ ಜತೆಗೆ ಒಪ್ಪಿಗೆ ಸೂಚಿಸಿದ್ದರು. ಒಂದು ರೂಪಾಯಿ ಸಂಭಾವನೆಯನ್ನೂ ಪಡೆಯಲಿಲ್ಲ. ಶಿಕ್ಷಣ ಇಲಾಖೆ ರೂಪಿಸಿದ ಹಾಡು ಮನೆಮನೆಗೆ ತಲುಪಿಸುವ ಮೂಲಕ ಆರ್‌ಟಿಇ ಯಶಸ್ವಿ ಅನುಷ್ಠಾನದಲ್ಲಿ ಸಹಕರಿಸಿದ್ದರು. ಅಂದು ಕೃತಜ್ಞತಾಪೂರ್ವಕವಾಗಿ ನೀವು ರಾಜ್‌ಕುಮಾರನ ಮಗನೇ ಸೈ. ಹೆಸರಿಗೆ ಮಾತ್ರವಲ್ಲ, ಗುಣದಲ್ಲೂ ಅಷ್ಟೇ ಎಂದಾಗ ಅಪ್ಪಾಜಿಯ ಆಶೀರ್ವಾದ ಎಂದು ನಿಷ್ಕಲ್ಮಷ ನಗೆ ಬೀರಿದ್ದರು' ಎಂದು ನೆನಪು ಮಾಡಿಕೊಂಡಿದ್ದಾರೆ.

ಕಿಮ್ಮನೆ ರತ್ನಾಕರ

ಬಿಬಿಸಿಯಲ್ಲೂ ನಿಧನದ ಸುದ್ದಿ ಪ್ರಸಾರ

ಬೆಂಗಳೂರು: ಕನ್ನಡದ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಿಧನದ ಸುದ್ದಿ ದೇಶ ವಿದೇಶಗಳ ಸುದ್ದಿ ವಾಹಿನಿಗಳಲ್ಲೂ ಪ್ರಸಾರವಾಗಿದೆ. ಬಿಬಿಸಿ ನ್ಯೂಸ್‌ನಲ್ಲಿ ಪುನೀತ್ ಸಾವು ಮತ್ತು ಅಭಿಮಾನಿಗಳ ಆಕ್ರಂದನದ ಬಗ್ಗೆ ವರದಿಯಾಗಿದೆ.

ಪುನೀತ್ ರಾಜ್‌ಕುಮಾರ್ ನಿಧನದ ಸುದ್ದಿ ಓದಿದ ನಿರೂಪಕಿ, ಈ ದುಃಖವನ್ನು ಅವರ ಕುಟುಂಬ ಹೇಗೆ ಭರಿಸುತ್ತಿದೆ ಎಂದು ಲಂಡನ್ನಿನ ಸಿನಿಮಾ ವಿಮರ್ಶಕರನ್ನು ಕೇಳುತ್ತಾರೆ.

'ನಾನು ಅವರ ಅಣ್ಣ ಖ್ಯಾತ ನಟ ಶಿವರಾಜ್ ಕುಮಾರ್ ಅವರನ್ನು ಭೇಟಿಯಾಗಿದ್ದೆ. ಅವರ ಕುಟುಂಬ, ನಾನು ಸೇರಿದಂತೆ ಎಲ್ಲರೂ ಆಘಾತಕ್ಕೊಳಗಾಗಿದ್ದೇವೆ. ನಿನ್ನೆಯಷ್ಟೇ ಅಣ್ಣ ಮತ್ತು ಯಶ್ ಜೊತೆ ವೇದಿಕೆ ಮೇಲೆ ಕಾಣಿಸಿಕೊಂಡಿದ್ದರು. ಬೆಳಗ್ಗೆ(ಅ.29) ಪುನೀತ್ ಅವರು ಇನ್ನಿಲ್ಲ ಎಂಬ ಸುದ್ದಿ ಎಲ್ಲರಿಗೂ ದಿಗ್ಭ್ರಮೆ ಹುಟ್ಟಿಸಿದೆ. ಅವರಿಗಿನ್ನೂ ಕೇವಲ 46 ವರ್ಷ ವಯಸ್ಸಾಗಿತ್ತು. ಪ್ರತಿಭಾನ್ವಿತ ನಟರಾಗಿದ್ದ ಅವರು 29 ಚಿತ್ರಗಳಲ್ಲಿ ನಟಿಸಿದ್ದಾರೆ. ಹಲವು ಚಿತ್ರಗಳು ನಿರ್ಮಾಣ ಹಂತದಲ್ಲಿವೆ. ಸಾವಿರಾರು ಸಂಖ್ಯೆಯ ಅಭಿಮಾನಿಗಳು ಶೋಕಸಾಗರದಲ್ಲಿ ಮುಳುಗಿದ್ದಾರೆ" ಎಂದು ವಿವರಿಸಿದರು.

ಹೌದು, ಆಸ್ಪತ್ರೆಗಳ ಮುಂದೆ ಜಮಾಯಿಸಿರುವ ಜನರನ್ನು ನೋಡಿದರೆ ಅವರ ಪ್ರಭಾವ ಹೇಗಿತ್ತು ಎಂಬುದು ಗೊತ್ತಾಗುತ್ತದೆ ಎಂದು ನಿರೂಪಕಿ ಹೇಳುತ್ತಾರೆ.

ಅದಕ್ಕೆ ಪ್ರತಿಕ್ರಿಯಿಸಿದ ವಿಮರ್ಶಕಿ, ಅವರು ಚಿಕ್ಕಂದಿನಿಂದಲೂ ಚಿತ್ರಗಳಲ್ಲಿ ನಟಿಸಿದ್ದಾರೆ. ಅಭಿಮಾನಿಗಳ ಜೊತೆಯೇ ಬೆಳೆದಿದ್ದಾರೆ. ಗಾಯಕರಾಗಿ ಗಮನ ಸೆಳೆದಿದ್ದಾರೆ. ಅವರ ತಂದೆ ಡಾ. ರಾಜ್‌ಕುಮಾರ್ ಎಲ್ಲರ ಪ್ರೀತಿಯ ನಟರಾಗಿದ್ದರು. ಅವರ ಜೊತೆಯೂ ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಕೇವಲ ನಟರಾಗಿ ಅಲ್ಲ. ಸಮಾಜ ಸೇವೆಯಿಂದಲೂ ಜನರಿಗೆ ಹತ್ತಿರವಾಗಿದ್ದರು. ಅವರ ಸಾವಿನ ಸುದ್ದಿ ನನಗೆ ಈಗಲೂ ನಂಬಲಾಗುತ್ತಿಲ್ಲ ಎಂದು ಅವರು ದುಃಖ ವ್ಯಕ್ತಪಡಿಸಿದ್ದಾರೆ.

ಕಂಠೀರವ ಕ್ರೀಡಾಂಗಣದಲ್ಲಿ ನಟ ಪುನೀತ್ ರಾಜಕುಮಾರ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಬಂದ ಸಾವಿರಾರು ಅಭಿಮಾನಿಗಳು ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ನಟನ ಮೃತದೇಹ ವೀಕ್ಷಿಸಬೇಕೆಂದು ಕೈಕುಯ್ದುಕೊಂಡ ಅಭಿಮಾನಿ

ಹಲವೆಡೆ ಸ್ವಯಂಪ್ರೇರಿತ ಬಂದ್

ಪ್ರಜಾವಾಣಿ ವಾರ್ತೆ

ಮೈಸೂರು/ಚಾಮರಾಜನಗರ: ಪುನೀತ್ ರಾಜ್‌ಕುಮಾರ್ ನಿಧನಕ್ಕೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ವಿವಿಧೆಡೆ ಶನಿವಾರ ಅಂಗಡಿಗಳನ್ನು ಸ್ವಯಂಪ್ರೇರಿತವಾಗಿ ಮುಚ್ಚಿ ಬಂದ್ ಆಚರಿಸಲಾಯಿತು.

ಮೈಸೂರು ಜಿಲ್ಲೆ ಸರಗೂರು ಪಟ್ಟಣ ಸ್ತಬ್ಧಗೊಂಡಿತ್ತು. ಆರ್ಯ ಈಡಿಗ ಸಮಾಜ ಆಯೋಜಿಸಿದ್ದ ಮೆರವಣಿಗೆಯಲ್ಲಿ ಸಾವಿರಾರು ಜನ ಭಾಗಿಯಾಗಿದ್ದರು. ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿಯಲ್ಲಿ ಕಾರು, ಆಟೊ ಚಾಲಕರು, ವರ್ತಕರು ವಹಿವಾಟು ಸ್ಥಗಿತಗೊಳಿಸಿದರು.

ಚಾಮರಾಜನಗರದಲ್ಲಿ ಸ್ವಯಂಪ್ರೇರಿತ ಬಂದ್ ನಡೆಯಿತು. ಜಿಲ್ಲೆಯ ವಿವಿಧ ಕಡೆಗಳಲ್ಲಿ ಅಭಿಮಾನಿಗಳು ಹಾಗೂ ವಿವಿಧ ಸಂಘಟನೆಗಳು ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಿದರು.

ಪುನೀತ್ ರಾಜ್‌ಕುಮಾರ್ ಅವರಿಗೆ ಗೌರವ ಸಲ್ಲಿಸಲು ನಂಜನಗೂಡು ತಾಲ್ಲೂಕಿನ ಹುಲ್ಲಹಳ್ಳಿ ಗ್ರಾಮದಲ್ಲಿ ಸ್ವಯಂ ಪ್ರೇರಿತರಾಗಿ ಅಂಗಡಿ ಬಂದ್ ಮಾಡಿದ್ದ ವರ್ತಕರು

ಕೈ ಕುಯ್ದುಕೊಂಡ ಅಭಿಮಾನಿ: ಯಳಂದೂರು ತಾಲ್ಲೂಕಿನ ಹೊನ್ನೂರು ಗ್ರಾಮದಲ್ಲಿ ಪುನೀತ್ ಅವರ ಅಂತಿಮದರ್ಶನ ಮಾಡಬೇಕೆಂದು ಗಣೇಶ್ ಎಂಬುವವರು ಹಟ ಹಿಡಿದು ಬ್ಲೇಡ್‌ನಿಂದ ಕೈ, ಮೈಗೆ ಗಾಯಮಾಡಿಕೊಂಡರು. ಪೋಷಕರು ಮತ್ತು ಸ್ನೇಹಿತರು ಪಟ್ಟಣದ ಆಸ್ಪತ್ರೆಗೆ ದಾಖಲಿಸಿದ ನಂತರೂ ಹಟ ಹಿಡಿದಿದ್ದರಿಂದ ಅವರನ್ನು ಪೋಷಕರು ಬೆಂಗಳೂರಿಗೆ ಕಳುಹಿಸಿಕೊಟ್ಟರು.

ಅಭಿಮಾನಿ ನೇಣು ಬಿಗಿದು ಆತ್ಮಹತ್ಯೆ

ಚಿಕ್ಕಮಗಳೂರು: ನಗರದ ಹೊರವಲಯದಲ್ಲಿನ ರಾಂಪುರದ ಶ್ರೀನಿವಾಸನಗರ ನಿವಾಸಿ ಕೂಲಿಕಾರ ಪಿ.ಆರ್. ಶರತ್‌ಕುಮಾರ್ (30) ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಟ ಪುನೀತ್ ರಾಜ್‌ಕುಮಾರ್ ಸಾವಿನಿಂದ ಮನನೊಂದು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ತಿಳಿದುಬಂದಿದೆ.

ಶರತ್ ಅವರು ಮನೆಯ ಬೆಡ್ ರೂಂನಲ್ಲಿ ಫ್ಯಾನಿಗೆ ಸೀರೆ ಬಿಗಿದು ನೇಣು ಹಾಕಿಕೊಂಡಿದ್ದಾರೆ. ಮಧ್ಯಾಹ್ನ 3 ಗಂಟೆ ಹೊತ್ತಿನಲ್ಲಿ ಅವಘಡ ನಡೆದಿದೆ.

ಶರತ್ ಅವರಿಗೆ ಒಬ್ಬ ಪುತ್ರಿ ಇದ್ದಾರೆ. ಪತ್ನಿ ಎಂಟು ತಿಂಗಳ ಗರ್ಭಿಣಿ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಯ ಮಾಡಿಕೊಂಡ ಅಭಿಮಾನಿ ಸಾಲಿಗ್ರಾಮ (ಬ್ರಹ್ಮಾವರ): ಪುನೀತ್ ನಿಧನದಿಂದ ನೊಂದ ಅವರ ಅಭಿಮಾನಿ, ಉಡುಪಿ ಜಿಲ್ಲೆ ಸಾಲಿಗ್ರಾಮದ ಆಟೊ ಚಾಲಕ ಸತೀಶ್ ಪುನೀತ್, ತನ್ನ ಆಟೊ ಗ್ಲಾಸ್‌ನಿಂದ ತಲೆ ಕೈ ಗಳಿಗೆ ಹೊಡೆದುಕೊಂಡು ಗಾಯ ಮಾಡಿಕೊಂಡಿದ್ದಾನೆ. ಬಳಿಕ ರಿಕ್ಷಾ ಚಾಲಕರು ಆತನನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ.

ಅಳುವ ಕಡಲೊಳು ತೇಲಿಬಂದ 'ಪುನೀತ' ಧ್ಯಾನ

ಒಂದನೇ ಪುಟದಿಂದ

ಕನ್ನಡ ಚಿತ್ರರಂಗದ ಪ್ರಮುಖರ ಜೊತೆಗೆ ನಂದಮೂರಿ ಬಾಲಕೃಷ್ಣ, ಜ್ಯೂನಿಯರ್ ಎನ್.ಟಿ.ಆರ್, ಚಿರಂಜೀವಿ, ಪ್ರಭುದೇವ್, ವಿಕ್ಟರಿ ವೆಂಕಟೇಶ್, ಹಾಸ್ಯ ನಟ ಅಲಿ, ಶ್ರೀಕಾಂತ್, ಅರ್ಜುನ್ ಸರ್ಜಾ ಸೇರಿದಂತೆ ತೆಲುಗು–ತಮಿಳಿನ ನಟರೂ ವಿದಾಯದ ಗಳಿಗೆಗೆ ಸಾಕ್ಷಿಯಾದರು.

ಸಂಜೆ 6 ಗಂಟೆಗೆ ಕಂಠೀರವ ಕ್ರೀಡಾಂಗಣ ತಲುಪಿದ ಹಿರಿಯ ಪುತ್ರಿ ಧೃತಿ, ಚಿರನಿದ್ರೆಗೆ ಜಾರಿದ್ದ ಅಪ್ಪನನ್ನು ಕಂಡು, ಮೂಕರಾದರು. ಅಮ್ಮನನ್ನು ಅಪ್ಪಿಕೊಂಡು ಕಣ್ಣೀರು ಹಾಕುತ್ತಿದ್ದರೇ, ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್ ಅವರು ಮಗಳನ್ನು ಸಂತೈಸುವ ಯತ್ನ ಮಾಡಿದರು.

ಅಭಿಮಾನದ ಮಳೆ: ಅಭಿಮಾನಿಗಳ ಹೃದಯಕ್ಕೆ ಕತ್ತಲು ಕವಿದಂತೆ ಬಾನಂಗಳದಲ್ಲೂ ಬೆಳಿಗ್ಗೆಯೇ ಮೋಡ ಆವರಿಸಿತ್ತು. 'ಯುವರತ್ನ'ನ ಅಗಲುವಿಕೆಯನ್ನು ಒಪ್ಪಿಕೊಳ್ಳುವ ಮನಸ್ಥಿತಿ ಅಲ್ಲಿದ್ದವರಿಗೆ ಇರಲಿಲ್ಲ. ಕೊನೆ ನಮಸ್ಕಾರ ಹಾಕಿ ಹೊರ ಬರುತ್ತಿದ್ದಂತೆಯೇ ಕಣ್ಣೀರ ಕಟ್ಟೆ ಒಡೆದು, ಬ್ಯಾರಿಕೇಡ್‌ಗೆ ತಲೆ ಚಚ್ಚಿಕೊಳ್ಳುತ್ತಿರುವ ದೃಶ್ಯ ಮನಕಲಕುವಂತಿತ್ತು.

ಮಧ್ಯಾಹ್ನ ಸೂರ್ಯನೂ ಮರೆಯಾದರೇ, ಅಭಿಮಾನಿಗಳ ಅಭಿಮಾನಕ್ಕೆ ಆಗಸವೂ ಮರುಗಿದಂತಿತ್ತು. ಮಳೆಯ ಜೊತೆಗೆ ನೆರೆದಿದ್ದ ಜನರ ಕಣ್ಣ ಹನಿಗಳಿಂದ ಕಂಠೀರವ ಕ್ರೀಡಾಂಗಣದ ಹುಲುಗಾವಲಿನ ಒಂದೊಂದು ಹಸಿರುಗರಿಯ ಅಂಚೂ ಸಾವಿಗೆ ಮಿಡಿಯಲಿಕ್ಕೆಂಬಂತೆ ಒದ್ದೆಯಾಗಿದ್ದವು.

ಕ್ರೀಡಾಂಗಣವೇ ತುಂಬಿಕೊಂಡ ಜೈಕಾರದ ಜೊತೆಗೇ ಮೃತದೇಹ ಕಂಡು, 'ಅಪ್ಪು... ನಮ್ಮನ್ನು ಬಿಟ್ಟು ಹೋದೆಯಲ್ಲಾ... ಅಪ್ಪು... ಎಂಬ ರೋದನವೂ ಕೇಳಿಸುತ್ತಲೇ ಇತ್ತು. .

ಅಂತ್ಯಕ್ರಿಯೆ ಇಂದು

ಕಂಠೀರವ ಸ್ಟುಡಿಯೋ ಆವರಣದಲ್ಲಿರುವ ಡಾ. ರಾಜ್ ಸ್ಮಾರಕದ ಬಳಿ ಪುನೀತ್ ಅವರ ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆಯೇ ನಡೆಯಲಿದೆ. ಪುನೀತ್ ಮಗಳು ಧೃತಿ ಶನಿವಾರ ಸಂಜೆಯೇ ನಗರಕ್ಕೆ ಬರುವುದು ಖಚಿತವಾಗಿದ್ದರಿಂದ ಆ ಬಳಿಕ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ, ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದ ಅಭಿಮಾನಿಗಳಿಗೆ ಅಂತಿಮ ದರ್ಶನಕ್ಕೆ ಅವಕಾಶ ಮಾಡಿಕೊಡಲು ಮುಂದೂಡಲಾಯಿತು. ಪುನೀತ್ ಕುಟುಂಬಸ್ಥರು ಮತ್ತು ಆಪ್ತರಿಗೆ ಮಾತ್ರ ಅಂತ್ಯಕ್ರಿಯೆ ವೇಳೆ ಅವಕಾಶ ನೀಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪುನೀತ್ ಅಭಿಮಾನಿ ಆತ್ಮಹತ್ಯೆ, ಇನ್ನೊಬ್ಬರಿಗೆ ಹೃದಯಾಘಾತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಚಲನಚಿತ್ರ ನಟ ಪುನೀತ್ ರಾಜ್‌ಕುಮಾರ್ ನಿಧನದಿಂದ ನೊಂದ ಅಭಿಮಾನಿ ಹೃದಯಾಘಾತದಿಂದ ಸಾವಿಗೀಡಾದ ಘಟನೆ ತಾಲ್ಲೂಕಿನ ಶಿಂದೊಳ್ಳಿಯಲ್ಲಿ ನಡೆದಿದೆ.

ಗ್ರಾಮದ ಕನಕದಾಸನಗರದ ಪರಶುರಾಮ ಹನುಮಂತ ದೇಮಣ್ಣವರ (33) ಮೃತ ವ್ಯಕ್ತಿ. ಪುನೀತ್ ಸಾವಿನ ಸುದ್ದಿ ತಿಳಿದು ಅವರು ಆಘಾತಕ್ಕೆ ಒಳಗಾಗಿದ್ದರು. ಕೂಲಿ ಮಾಡುತ್ತಿದ್ದ ಅವರು ಶಿವರಾಜ್‌ಕುಮಾರ್ ಹಾಗೂ ಪುನೀತ್ ಅವರ ಅಪ್ಪಟ ಅಭಿಮಾನಿ ಆಗಿದ್ದರು ಎಂದು ಸ್ಥಳೀಯರು ತಿಳಿಸಿದರು.

ಜಿಲ್ಲೆಯ ಅಥಣಿಯಲ್ಲಿ ಅಭಿಮಾನಿಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಾಹುಲ್ ಗಾಡಿವಡ್ಡರ (26) ಮೃತ ಯುವಕ. ಪುನೀತ್ ಸಾವಿನಿಂದ ನೊಂದಿದ್ದರು. ಅವರ ಫೋಟೊಗೆ ಪೂಜೆ ಸಲ್ಲಿಸಿ ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ತಿಳಿದುಬಂದಿದೆ.

ಹೃದಯಾಘಾತದಿಂದ ಅಭಿಮಾನಿ ಸಾವು (ಕೊಪ್ಪಳ): ನಟ ಪುನೀತ್ ರಾಜ್‌ಕುಮಾರ್ ಅವರ ನಿಧನದಿಂದ ಮನನೊಂದು ಅವರ ಅಭಿಮಾನಿ ತಾಲ್ಲೂಕಿನ ಚಿಕ್ಕಬಗನಾಳ ಗ್ರಾಮದ ಜ್ಞಾನೇಶ ತಿಮ್ಮಣ್ಣ ನಿಂಗಾಪುರ (40) ಶನಿವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ.

'ಪುನೀತ್ ಅವರ ಎಲ್ಲ ಚಿತ್ರಗಳನ್ನು ಪ್ರಥಮ ಪ್ರದರ್ಶನದಲ್ಲಿ ನೋಡಿದ್ದ ಜ್ಞಾನೇಶ, ಗ್ರಾಮದಲ್ಲಿ ಪವರ್ ಸ್ಟಾರ್ ಅಭಿಮಾನಿ ಎಂದೇ ಗುರುತಿಸಿಕೊಂಡಿದ್ದರು. ನೆಚ್ಚಿನ ನಟನ ಸಾವಿನಿಂದ ಶುಕ್ರವಾರದಿಂದಲೇ ಮಂಕಾಗಿದ್ದ ಅವರು ತೀವ್ರ ಹೃದಯಾಘಾತದಿಂದ ನಿಧನರಾಗಿದ್ದಾರೆ' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ನಾಲೆಯಲ್ಲಿ ಕೊಚ್ಚಿಕೊಂಡು ಹೋದ ಪುನೀತ್ ಅಭಿಮಾನಿ (ಕೆ.ಆರ್.ನಗರ): ಪಟ್ಟಣದ ಹೊರ ವಲಯದ ಚಾಮರಾಜ ಎಡದಂಡೆ ನಾಲೆಗೆ ಶನಿವಾರ ಈಜಲು ತೆರಳಿದ್ದ ಪುನೀತ್ ರಾಜ್‌ಕುಮಾರ್ ಅಭಿಮಾನಿ ನೀರು ಪಾಲಾಗಿದ್ದು, ಮೃತದೇಹಕ್ಕೆ ಹುಡುಕಾಟ ನಡೆದಿದೆ.

ಪಟ್ಟಣದ ವಿನಾಯಕ ಬಡಾವಣೆಯ ನಿವಾಸಿ, ಆಟೊ ಚಾಲಕ ಸೀಮೆಎಣ್ಣೆ ಅಶೋಕ್ (40) ನೀರುಪಾಲಾದವರು. ಅವರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ.

ಪುನೀತ್ ನಿಧನದ ಹಿನ್ನೆಲೆಯಲ್ಲಿ ಅಶೋಕ್ ತಲೆ ಬೋಳಿಸಿಕೊಂಡಿದ್ದರು. ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ಸ್ನೇಹಿತರೊಂದಿಗೆ ಈಜಲು ತೆರಳಿದ್ದರು ಎನ್ನಲಾಗಿದೆ. 'ಅಗ್ನಿಶಾಮಕ ತಂಡ ಶೋಧ ನಡೆಸುತ್ತಿದೆ' ಎಂದು ಎಸ್‌ಐ ಚಂದ್ರಹಾಸ ತಿಳಿಸಿದ್ದಾರೆ.

ಅನ್ನ, ಆಹಾರ ತ್ಯಜಿಸಿದ ಅಭಿಮಾನಿ (ಕೂಡ್ಲಿಗಿ): ಪುನೀತ್ ರಾಜಕುಮಾರ್ ನಿಧನ ಸುದ್ದಿ ಕೇಳಿದಾಗಿನಿಂದಲೂ ಊಟ, ನೀರು ಬಿಟ್ಟಿದ್ದ ಪುನೀತ್ ಅಭಿಮಾನಿ, ಪಟ್ಟಣದ ನಿವಾಸಿ ಶಾಂತ ಕುಮಾರ್ ಶನಿವಾರ ತೀವ್ರ ಅಸ್ವಸ್ಥಗೊಂಡಿದ್ದಾರೆ.

ಕಿರುಚಿತ್ರ ನಟ ಸಾವು

ವೈ.ಎಸ್‌.ಸುರೇಶ್

ಭಾರತೀನಗರ (ಮಂಡ್ಯ): ನಟ ಪುನೀತ್ ರಾಜ್‌ಕುಮಾರ್ ಅವರ ನಿಧನದಿಂದ ಆಘಾತಕ್ಕೊಳಗಾಗಿ, ಸಮೀಪದ ಯಲಾದಹಳ್ಳಿ ನಿವಾಸಿ ವೈ.ಎಸ್. ಸುರೇಶ್ (45) ಹೃದಯಾಘಾತದಿಂದ ಶನಿವಾರ ಮೃತಪಟ್ಟರು.

ಅವರು ಸಂಜೆ 4 ಗಂಟೆ ಸುಮಾರಿಗೆ ಮನೆಯಲ್ಲಿ ಪುನೀತ್ ಅಂತಿಮ ದರ್ಶನದ ನೇರ ಪ್ರಸಾರವನ್ನು ನೋಡುತ್ತಿದ್ದಾಗ ಏಕಾಏಕಿ ಕುಸಿದು ಬಿದ್ದರು. ತೀವ್ರವಾಗಿ ಅಸ್ವಸ್ಥಗೊಂಡಿದ್ದ ಅವರನ್ನು ಆಸ್ಪತ್ರೆ ಸಾಗಿಸುವಷ್ಟರಲ್ಲೇ ಮೃತಪಟ್ಟರು.

ಒಂದೆರಡು ಸಿನಿಮಾಗಳಿಗೆ ಚಿತ್ರಕಥೆಯನ್ನೂ ಬರೆದಿದ್ದ ಅವರು ಚಿತ್ರ ನಿರ್ದೇಶನವನ್ನೂ ಮಾಡಿದ್ದರು. ಸಿನಿಮಾ, ಕಿರು ಚಿತ್ರಗಳಲ್ಲಿ ನಟಿಸಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಭಿಮಾನಿ ಹೃದಯಾಘಾತದಿಂದ ಸಾವು

ಕೆ.ಆರ್.ಪೇಟೆ: ಪಟ್ಟಣದ ಲೋಕಿ ಆರ್ಟ್ಸ್ ಅಂಗಡಿ ಮಾಲೀಕ ಲೋಕೇಶ್ (45) ಅವರು, ಪುನೀತ್ ರಾಜಕುಮಾರ್ ಸಾವಿನ ಸುದ್ದಿ ತಿಳಿದು ಹೃದಯಾಘಾತದಿಂದ ಶುಕ್ರವಾರ ಮೃತಪಟ್ಟರು.

ಸಾವಿನ ಸುದ್ದಿಯನ್ನು ಟಿ.ವಿ.ಯಲ್ಲಿ ನೋಡುತ್ತಿದ್ದಾಗಲೇ ಎದೆನೋವು ಕಾಣಿಸಿಕೊಂಡಿದ್ದು, ಅವರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು.

ಕೀಟನಾಶಕ ಸೇವಿಸಿದ ಮೂವರು ಅಭಿಮಾನಿಗಳು

ಸಿಂಧನೂರು (ರಾಯಚೂರು ಜಿಲ್ಲೆ): ಪುನೀತ್ ರಾಜ್‌ಕುಮಾರ್ ಅವರ ಸಾವಿನಿಂದ ದುಃಖಿತರಾದ ಅವರ ಮೂವರು ಅಭಿಮಾನಿಗಳು ಪ್ರತ್ಯೇಕ ಕಡೆಗಳಲ್ಲಿ ಕೀಟನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಸಿಂಧನೂರು ತಾಲ್ಲೂಕಿನ ಹಾರಾಪುರ ಗ್ರಾಮದ ಬಸನಗೌಡ (28), ಯಾಪಲಪರ್ವಿ ಗ್ರಾಮದ ಮೊಹ್ಮದ್ ರಫಿ (28) ಹಾಗೂ ಆರ್.ಎಚ್.ಕ್ಯಾಂಪ್–2 ನಿವಾಸಿ ಅನೂಪ್‌ಕುಮಾರ್ (25) ಅವರು ತಮ್ಮ ಮನೆಗಳಲ್ಲಿಯೇ ಶುಕ್ರವಾರ, ಭತ್ತಕ್ಕೆ ಸಿಂಪಡಿಸಲು ತಂದಿಟ್ಟಿದ್ದ ಕೀಟನಾಶಕ ಸೇವಿಸಿದ್ದರು. ಕೂಡಲೇ ಮನೆಯವರು ಗಮನಿಸಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

'ಅನೂಪ್‌ಕುಮಾರ್ ಸ್ಥಿತಿ ಗಂಭೀರವಾಗಿದ್ದರಿಂದ ಬಳ್ಳಾರಿ ಆಸ್ಪತ್ರೆಗೆ ಕಳಿಸಲಾಗಿದೆ. ಇನ್ನಿಬ್ಬರು ಯುವಕರಿಗೆ ನಮ್ಮ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ನೀಡುತ್ತಿದ್ದೇವೆ' ಎಂದು ಸಿಂಧನೂರು ಸಾರ್ವಜನಿಕ ಆಸ್ಪತ್ರೆಯ ಮುಖ್ಯವೈದ್ಯಾಧಿಕಾರಿ ಡಾ.ಹನುಮಂತರೆಡ್ಡಿ ತಿಳಿಸಿದರು.

ಮಾತ್ರೆ ಸೇವಿಸಿ ಅಭಿಮಾನಿ ಅಸ್ವಸ್ಥ

ದೇವರಹಿಪ್ಪರಗಿ: ಪುನೀತ್ ರಾಜಕುಮಾರ್ ಅಕಾಲಿಕ ನಿಧನಕ್ಕೆ ಮನನೊಂದ ಅಭಿಮಾನಿಯೊಬ್ಬ ಡಯಾಬಿಟಿಸ್ ಮಾತ್ರೆ ಸೇವಿಸಿ ಶನಿವಾರ ಅಸ್ವಸ್ಥಗೊಂಡಿದ್ದಾರೆ.

ಇಲ್ಲಿನ ಶರಣಪ್ಪ ಅಮೋಘಿ ಬಿಸನಾಳ (24) ಡಯಾಬಿಟಿಸ್ ಮಾತ್ರೆ ಸೇವಿಸಿದ ವ್ಯಕ್ತಿ. ಇವರು ತನ್ನ ತಾಯಿಯ ಡಯಾಬಿಟಿಸ್ ಗೆ ಸಂಬಂಧಿಸಿದ 40 ಮಾತ್ರೆಗಳನ್ನು ತೆಗೆದುಕೊಂಡು ಅಸ್ವಸ್ಥರಾಗಿದ್ದರು. ಅವರನ್ನು ವಿಜಯಪುರ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿದೆ. ಯುವಕ ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಭಿಮಾನಿಗಳ 'ಅಪ್ಪು'ಗೆ

ಅಂದಾಜು 10 ಲಕ್ಷ ಅಭಿಮಾನಿಗಳು ಭಾಗಿ; ಜನ ಸಂದಣಿ ನಿಯಂತ್ರಿಸಲು ಪೊಲೀಸರ ಹರಸಾಹಸ

ಮಾತೆಲ್ಲ ಮುಗಿದ ಮೇಲೆ....

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೂರದೂರುಗಳಿಂದ ಲಕ್ಷಾಂತರ ಸಂಖ್ಯೆಯಲ್ಲಿ ಬಂದಿದ್ದ ಅಭಿಮಾನಿಗಳೆಲ್ಲರದ್ದೂ ಒಂದೇ ಬಯಕೆ. ತಾವು ಜೀವಕ್ಕಿಂತ ಮಿಗಿಲಾಗಿ ಪ್ರೀತಿಸುವ 'ಅಪ್ಪು' ತಮ್ಮ ಆಕ್ರಂದನವನ್ನಾದರೂ ಆಲಿಸಿ ಮೇಲೆದ್ದು ಬಿಡಲಿ. ಎಂದಿನಂತೆ ನಿಷ್ಕಲ್ಮಶ ನಗುವಿನೊಂದಿಗೆ ಕೈಬೀಸಿ ತಮ್ಮನ್ನು 'ಪುನೀತ'ರನ್ನಾಗಿಸಿಬಿಡಲಿ ಎಂಬುದು.

'ಅಭಿಮಾನಿ ದೇವರುಗಳ' ಕರತಾಡನ ಮುಗಿಲು ಮುಟ್ಟುತ್ತಿದ್ದರೂ ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರದ 'ದೊಡ್ಮನೆ ಹುಡುಗ' ಮುಗಿಲತ್ತ ಮುಖಮಾಡಿ ತಣ್ಣಗೆ ಮಲಗಿಬಿಟ್ಟಿದ್ದರು.

ಸದಾ ಲವಲವಿಕೆಯಿಂದ ಓಡಾಡುತ್ತಿದ್ದ, ಸರಳತೆಯ ಪ್ರತಿರೂಪದಂತಿದ್ದ 'ಪರಮಾತ್ಮ' ನಿಸ್ತೇಜವಾಗಿ ಮಲಗಿರುವುದನ್ನು ಕಂಡು ಮಳೆರಾಯನಿಗೂ ಮರುಕ ಹುಟ್ಟಿದಂತಿತ್ತು. ಆಗಸದಲ್ಲಿ ತೂಗುತ್ತಿದ್ದ ಕಾರ್ಮೋಡ ಸಂಜೆಯ ವೇಳೆಗೆ ಕರಗಿ ಮಳೆ ಹನಿಗಳು ಧರೆಗೆ ಮುತ್ತಿಕ್ಕಿದವು. ಅಪ್ಪುವಿನ ಅಗಲಿಕೆಯ ನೋವು ತಾಳಲಾರದೆ ವರುಣ ದೇವನೂ ಕಂಬನಿ ಮಿಡಿದನೇನೋ ಎಂಬಂತೆ ಜನ ಭಾವಿಸಿದರು.

ಕಂಠೀರವ ಕ್ರೀಡಾಂಗಣದ ಗಿಡ ಮರಗಳ ಮೇಲಿನ ಮಳೆ ಹನಿಗಳೂ ಗಾಳಿಗೆ ಪಟ ಪಟನೆ ನೆಲಕ್ಕುದುರುವುದನ್ನು ಕಂಡಾಗ ಪ್ರಕೃತಿಯೇ ರೋದಿಸುತ್ತಿದೆಯೇನೊ ಎಂಬಂತೆ ಭಾಸವಾಗುತ್ತಿತ್ತು.

ಬೆಂಗಳೂರು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಪುನೀತ್ ರಾಜಕುಮಾರ್ ಅವರ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಅಭಿಮಾನಿಗಳು ಸರತಿಯಲ್ಲಿ ನಿಂತಿರುವುದು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಕ್ರೀಡಾಂಗಣದ ಸುತ್ತ ಶನಿವಾರವೂ ಜನಸ್ತೋಮ ನೆರೆದಿತ್ತು. ಸೂರ್ಯ ಅಸ್ತಂಗತನಾಗುವ ವೇಳೆ ಹಕ್ಕಿಗಳು ಧಾವಂತದಿಂದ ಗೂಡು ಸೇರುವ ಹಾಗೆ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಅಂತಿಮ ದರ್ಶನ ಪಡೆಯಲು ತಂಡೋಪತಂಡವಾಗಿ ಕ್ರೀಡಾಂಗಣದತ್ತ ಧಾವಿಸುತ್ತಲೇ ಇದ್ದರು.

ಮಕ್ಕಳು, ಮಹಿಳೆಯರು, ವೃದ್ಧರು, ಯುವಕರು ಹೀಗೆ ಎಲ್ಲಾ ವಯೋಮಾನದವರೂ 'ವೀರ ಕನ್ನಡಿಗನ' ಹೆಸರು ಜಪಿಸುತ್ತಿದ್ದರು. ಕೆಲವರು ಪುನೀತ್ ರಾಜ್‌ಕುಮಾರ್ ಅವರ ಬಾಲ್ಯದ ಫೋಟೊ ಹಿಡಿದಿದ್ದರೆ, ಇನ್ನೂ ಹಲವರು 'ರಾಜಕುಮಾರ' ಚಿತ್ರದ ಪೋಸ್ಟರ್ ಹಿಡಿದು ಜೈಕಾರ ಹಾಕುತ್ತಿದ್ದರು.

ಎದೆಯ ಮೇಲೆ ಅಪ್ಪುವಿನ ನಗುಮೊಗದ ಚಿತ್ರ ಅಚ್ಚೆಹಾಕಿಸಿಕೊಂಡಿದ್ದ ಅಭಿಮಾನಿಯೊಬ್ಬ 'ಒಮ್ಮೆ ಅಣ್ಣನನ್ನು ನೋಡಲು ಬಿಡಿ ಸಾರ್' ಎಂದು ಗೋಗರೆಯುತ್ತಿದ್ದ ದೃಶ್ಯ ಮನ ಕಲಕುವಂತಿತ್ತು. ಆತನ ಗೋಳಾಟ ನೋಡಲಾಗದ ಪೊಲೀಸರು ಪಾರ್ಥಿವ ಶರೀರದ ಬಳಿ ಹೋಗಲು ಅವಕಾಶ ನೀಡಿದರು. ಶವದ ಪೆಟ್ಟಿಗೆಯಲ್ಲಿ ತ್ರಿವರ್ಣ ಧ್ವಜ ಹೊದ್ದು ಮಲಗಿದ್ದ ನಟನನ್ನು ಕಂಡೊಡನೆ ಆತನ ದುಃಖದ ಕಟ್ಟೆ ಒಡೆದಂತಿತ್ತು. ಅಯ್ಯೋ.. ಅಪ್ಪು ಬಾಸ್... ಎಂದು ರೋಧಿಸುತ್ತಲೇ ಆತ ನಿರ್ಗಮನ ದ್ವಾರದತ್ತ ಹೆಜ್ಜೆ ಹಾಕಿದ್ದು ಕಂಡುಬಂತು.

ಸಮಯ ಉರುಳಿದಂತೆಲ್ಲಾ ಅಂತಿಮ ದರ್ಶನಕ್ಕೆ ಬರುವ ಅಭಿಮಾನಿಗಳ ಸಂಖ್ಯೆ ದುಪ್ಪಟ್ಟಾಗುತ್ತಲೇ ಇತ್ತು. ಹೀಗಾಗಿ ಪೊಲೀಸರು ಮೂರು ಸಾಲುಗಳ ಮೂಲಕ ಪಾರ್ಥಿವ ಶರೀರ ನೋಡಲು ವ್ಯವಸ್ಥೆ ಮಾಡಿದ್ದರು. ಮೃತ ದೇಹ ಇಟ್ಟಿದ್ದ ಶೆಡ್ ಸಮೀಪಿಸುತ್ತಿದ್ದಂತೆ 'ಅಪ್ಪು ಸರ್ ವಿ ಲವ್ ಯೂ'.. ಪವರ್ ಸ್ಟಾರ್.. ಎಂಬ ಜಯಘೋಷಗಳು ಅನುರಣಿಸುತ್ತಿದ್ದವು. ಪಾರ್ಥಿವ ಶರೀರದ ಫೋಟೊ ಕ್ಲಿಕ್ಕಿಸಿಕೊಳ್ಳಲು, ವಿಡಿಯೊ ಚಿತ್ರೀಕರಿಸಲು ಹಲವರು ಮುಂದಾದರು. ಕೆಲವರು ಬ್ಯಾರಿಕೇಡ್ ಅನ್ನು ಗಟ್ಟಿಯಾಗಿ ಹಿಡಿದು ಕದಲದೇ ನಿಂತು ಬಿಟ್ಟರು. ಅವರನ್ನು ಸಾಗ ಹಾಕಲು ಪೊಲೀಸರು ಪರದಾಡಿದರು.

ಅಭಿಮಾನಿಗಳ ರೋದನ ಕಂಡು ರಾಜ್ ಕುಟುಂಬ ಸದಸ್ಯರ ಕಣ್ಣುಗಳೂ ಆರ್ದ್ರಗೊಳ್ಳುತ್ತಿದ್ದವು. ಪುನೀತ್ ಪತ್ನಿ ಅಶ್ವಿನಿ, ಹಣೆಯ ಮೇಲೆ ಗಾಢ ವಿಭೂತಿ, ಅದರ ಮೇಲೊಂದು ಕುಂಕುಮದ ಬೊಟ್ಟು ಹಚ್ಚಿದ್ದ ಪತಿಯ ಮೊಗವನ್ನೇ ತದೇಕಚಿತ್ತದಿಂದ ನೋಡುತ್ತಾ ಗದ್ಗದಿತರಾಗುತ್ತಿದ್ದರು.

ಕ್ರೀಡಾಂಗಣದ ಸುತ್ತಲಿನ ನಾಲ್ಕು ರಸ್ತೆಗಳಲ್ಲೂ ಅಭಿಮಾನಿಗಳು ಗಿಜಿಗುಡುತ್ತಿದ್ದರು. ಅವರನ್ನು ನಿಯಂತ್ರಿಸಲು ಪೊಲೀಸರು ಆಗಾಗ ಲಾಠಿ ಬೀಸುತ್ತಿದ್ದರು. ಕಾರು, ಬಸ್ಸು, ಲಾರಿಗಳು ಸಂಚರಿಸುತ್ತಿರುವುದನ್ನೂ ಲೆಕ್ಕಿಸದ ಅನೇಕರು ಲಘುಬಗೆಯಲ್ಲಿ ರಸ್ತೆ ದಾಟುತ್ತಿದ್ದರು. ಕೆಲವರು ಪಾದಚಾರಿ ಮೇಲ್ಸೇತುವೆಯ ಮೇಲೆ ನಿಂತು ಕ್ರೀಡಾಂಗಣದೊಳಗಿನ ದೃಶ್ಯ ಕಣ್ತುಂಬಿಕೊಳ್ಳಲು ಪ್ರಯತ್ನಿಸುತ್ತಿದ್ದರು. ದರ್ಶನ ಪಡೆದು ಹೊರ ಬಂದ ಹಲವರು ಪಾದಚಾರಿ ಮಾರ್ಗದ ಮೇಲೆ ಕುಳಿತು ದಣಿವಾರಿಸಿಕೊಳ್ಳುತ್ತಿದ್ದುದೂ ಕಂಡುಬಂತು.

ಕಣ್ಣುಗಳನ್ನು ತೇವಗೊಳಿಸಿದ ಆ ಗಳಿಗೆ

ಅಪ್ಪನ ಕಂಡು ಮರುಗಿದ ಧೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಗಿಲನ್ನೇ ದಿಟ್ಟಿಸುವಂತೆ ಅಂಗಾತ ಮಲಗಿದ್ದ ಅಪ್ಪ ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರವನ್ನು ಕಂಡು ಮಗಳು ಧೃತಿ ಕೆಲಕ್ಷಣ ಸ್ತಬ್ಧರಾದರು. ಉಮ್ಮಳಿಸಿ ಬರುತ್ತಿದ್ದ ದುಃಖವನ್ನು ಅದುಮಿಟ್ಟುಕೊಂಡು ಅಪ್ಪನನ್ನು ಕಣ್ತುಂಬಿ ಕೊಂಡರು. ಬೆನ್ನಹಿಂದಿದ್ದ ಅಮ್ಮ ಅಶ್ವಿನಿ, ತಂಗಿ ವಂದಿತಾ, ದೊಡ್ಡಪ್ಪ ಶಿವರಾಜ್‌ಕುಮಾರ್ ಮೌನವಾಗಿದ್ದರು.

ಅಪ್ಪ ಇನ್ನಿಲ್ಲವೆಂಬ ವಿಷಯ ಗೊತ್ತಿದ್ದರೂ ಪಾರ್ಥಿವ ಶರೀರ ಕಾಣುತ್ತಲೇ ಧೃತಿ ಯಾವ ರೀತಿ ವರ್ತಿಸಬಹುದೆಂದು ಯಾರೂ ಊಹಿಸಿಕೊಳ್ಳಲು ಸಾಧ್ಯ ಇರಲಿಲ್ಲ. ಹೀಗಾಗಿ, ಅಮೆರಿಕದಿಂದ ಹೊರಟು ಶನಿವಾರ ಸಂಜೆ 4.30ಕ್ಕೆ ಬಂದ ಧೃತಿಯನ್ನು ನೇರವಾಗಿ ಸದಾಶಿವನಗರದಲ್ಲಿರುವ ಮನೆಗೆ ಅಮ್ಮ ಕರೆಸಿಕೊಂಡಿದ್ದರು. ಅಲ್ಲಿ ಆಕೆಯನ್ನು ಸಂತೈಸಿ ಬಳಿಕ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇರಿಸಿದ್ದ ಕಂಠೀರವ ಕ್ರೀಡಾಂಗಣಕ್ಕೆ ಕರೆದುಕೊಂಡು ಬಂದಿದ್ದರು.

ಅಪ್ಪನ ಹಣೆ ಮುಟ್ಟಿ ನೇವರಿಸಿದ ಮಗಳನ್ನು ಹಿಂಭಾಗದಿಂದ ಹಿಡಿದುಕೊಂಡು ಅಮ್ಮ ಸಮಾಧಾನಪಡಿಸಿದರು. ಅಮ್ಮನ ಹೆಗಲ ಮೇಲೆ ತಲೆ ಇಟ್ಟ ಧೃತಿ ಗಳಗಳನೆ ಕಣ್ಣೀರಿಟ್ಟರು. ಜೊತೆಗೆ ಅಮ್ಮ, ತಂಗಿಯೂ ಕಣ್ಣೀರಿಟ್ಟರು. ಧೃತಿ ಕೈಹಿಡಿದುಕೊಂಡಿದ್ದ ಶಿವರಾಜ್‌ಕುಮಾರ್ ಅವರ ಕಣ್ಣುಗಳೂ ತೇವವಾದರೂ, ಅದನ್ನು ತೋರಿಸಿಕೊಳ್ಳುವ ಸ್ಥಿತಿಯಲ್ಲಿ ಅವರಿರಲಿಲ್ಲ.

ಮಗಳನ್ನು ಪಕ್ಕಕ್ಕೆ ಸರಿಸಿಕೊಂಡ ಅಮ್ಮ ಧೈರ್ಯ ತುಂಬಿದರು. ಧೃತಿ–ವಂದಿತಾ ಇಬ್ಬರೂ ಅಮ್ಮನ ಹೆಗಲ ಮೇಲೆ ತಲೆ ಇಟ್ಟು ಮತ್ತೆ ಬಿಕ್ಕಿ ಬಿಕ್ಕಿ ಅತ್ತರು. ಅಪ್ಪಿ ಹಿಡಿದುಕೊಂಡರು. ಆ ದೃಶ್ಯ ಕರುಳು ಹಿಂಡುವಂತಿತ್ತು. ಧೃತಿ ಹಣೆಗೆ ಮುತ್ತಿಟ್ಟು ಶಿವರಾಜ್‌ಕುಮಾರ್ ಸಂತೈಸಿದರು. ಈ ವೇಳೆ ಅಲ್ಲಿದ್ದ ಕುಟುಂಬ ಸದಸ್ಯರ, ಆಪ್ತರ ಕಣ್ಣಾಲಿಗಳು ನೋವಿನಿಂದ ಬಾಡಿದವು.

ಶುಕ್ರವಾರ ಮಧ್ಯಾಹ್ನದ ವೇಳೆಗೆ ಅಪ್ಪ ನಿಧನ ಸುದ್ದಿ ಗೊತ್ತಾಗುತ್ತಿದ್ದಂತೆ ಅಮೆರಿಕದಿಂದ ಧೃತಿ ತವರಿಗೆ ಹೊರಟಿದ್ದರು. ಅವರ ಪ್ರಯಾಣಕ್ಕೆ ಅಗತ್ಯವಾದ ಎಲ್ಲ ವ್ಯವಸ್ಥೆಯನ್ನು ರಾಜ್ಯ ಸರ್ಕಾರ ಮಾಡಿತ್ತು. ಮಧ್ಯಾಹ್ನ 1.30ಕ್ಕೆ ದೆಹಲಿಗೆ ವಿಮಾನ ನಿಲ್ದಾಣಕ್ಕೆ ಬಂದ ಅವರು ಅಲ್ಲಿಂದ ವಿಶೇಷ ವಿಮಾನದಲ್ಲಿ ಹೊರಟು ಸಂಜೆ 4.30ಕ್ಕೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲುಪಿದರು. ಅಲ್ಲಿಂದ ಸಿಗ್ನಲ್ ಮುಕ್ತ ವ್ಯವಸ್ಥೆಯಲ್ಲಿ ಕರೆದುಕೊಂಡು ಬರಲಾಯಿತು.

ಕಂಠೀರವ ಕ್ರೀಡಾಂಗಣದಲ್ಲಿ ನಟ ಪುನೀತ್ ರಾಜಕುಮಾರ್ ಅವರ ಹಿರಿಯ ಪುತ್ರಿ ಧೃತಿ ಗೆ ನಟ ಶಿವರಾಜ್ ಕುಮಾರ್ ರವರು ಸಮಾಧಾನ ಹೇಳುತ್ತಿರುವ ದೃಶ್ಯ. ಕಿರಿಯ ಪುತ್ರಿ ವಂದಿತಾ ಮತ್ತು ಅಶ್ವಿನಿ ಪುನೀತ್ ರಾಜಕುಮಾರ್ ಇದ್ದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಪುನೀತ್ ಮಗಳು ನನ್ನನ್ನು ಅಪ್ಪ ಎಂದು ಕರೆಯುತ್ತಾಳೆ. ಪುನೀತ್‌ನನ್ನು ಪಪ್ಪ ಎಂದು ಕರೆಯುತ್ತಾಳೆ. ಅಪ್ಪ... ಪಪ್ಪನನ್ನು ಎಲ್ಲಿಗೆ ಕಳುಹಿಸಿದೆ? ಎಂದು ಕೇಳಿದರೆ ನಾನು ಏನು ಉತ್ತರ ಕೊಡಲಿ

ರಾಘವೇಂದ್ರ ರಾಜ್‌ಕುಮಾರ್, ನಟ

ಪುನೀತ್ ಪಾರ್ಥಿವ ಶರೀರದ ಮುಂದೆ ಮೌನವಾಗಿ ನಿಂತ ರಮ್ಯಾ

ಮೊದಲ ಕ್ಷಣದಿಂದ ರಾಜ್ ಕುಟುಂಬದ ಜತೆ ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ರಾಜ್‌ಕುಮಾರ್ 'ಇನ್ನಿಲ್ಲ'ವಾದ ಕ್ಷಣದಿಂದ ರಾಜ್‌ಕುಮಾರ್ ಕುಟುಂಬದ ಸದಸ್ಯರ ಜೊತೆಗಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಎಲ್ಲವನ್ನೂ ತಾವೇ ಮುಂದೆ ನಿಂತು ನಿಭಾಯಿಸುತ್ತಿದ್ದಾರೆ.

ಅಮೆರಿಕದಲ್ಲಿದ್ದ ಪುನೀತ್ ಪುತ್ರಿ ಧೃತಿ ಅವರನ್ನು ತವರಿಗೆ ಕರೆದುಕೊಂಡು ಬರಲು ತುರ್ತು ಕ್ರಮ ತೆಗೆದುಕೊಳ್ಳುವಂತೆ ವಿದೇಶಾಂಗ ಸಚಿವಾಲಯದ ಅಧಿಕಾರಿಗಳ ಜೊತೆ ಶುಕ್ರವಾರವೇ ಬೊಮ್ಮಾಯಿ ಮಾತುಕತೆ ನಡೆಸಿದ್ದರು. ಅಲ್ಲದೆ, ಶನಿವಾರ ಮಧ್ಯಾಹ್ನ ದೆಹಲಿಗೆ ಬಂದಿಳಿದ ಅವರನ್ನು ಯಾವುದೇ ವಿಳಂಬ ಆಗದಂತೆ ವಿಶೇಷ ವಿಮಾನದಲ್ಲಿ ಕರೆದುಕೊಂಡು ಬರಲೂ ವ್ಯವಸ್ಥೆ ಮಾಡಿದ್ದರು.

ಕಂಠೀರವ ಸ್ಟುಡಿಯೋದ ಆವರಣದಲ್ಲಿ ರಾಜ್‌ಕುಮಾರ್–ಪಾರ್ವತಮ್ಮ ರಾಜ್‌ಕುಮಾರ್ ಸಮಾಧಿಯ ಪಕ್ಕದಲ್ಲಿಯೇ ಪುನೀತ್ ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ ಸಕಲ ಸರ್ಕಾರಿ ಗೌರವದೊಂದಿಗೆ ನಡೆಯಲಿದೆ. ಈ ಬಗ್ಗೆ ಕುಟುಂಬ ಸದಸ್ಯರ ಜೊತೆ ಸಮಾಲೋಚನೆ ನಡೆಸಿರುವ ಬೊಮ್ಮಾಯಿ, ಆ ಹೊಣೆಯನ್ನೂ ತಾವೇ ವಹಿಸಿಕೊಂಡಿದ್ದಾರೆ.

ಪುನೀತ್ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕೆ ಇಟ್ಟಿದ್ದ ಕಂಠೀರವ ಕ್ರೀಡಾಂಗಣದಲ್ಲಿ ಸಂಪುಟದ ಕೆಲವು ಸಹೋದ್ಯೋಗಿಗಳೊಂದಿಗೆ ಶುಕ್ರವಾರ ತಡರಾತ್ರಿವರೆಗೂ ಬೊಮ್ಮಾಯಿ ಇದ್ದರು.

ತಮ್ಮ ನೆಚ್ಚಿನ ನಟನನ್ನು ಕೊನೆಯದಾಗಿ ನೋಡಬೇಕೆಂಬ ಕಾತುರದಿಂದ ರಾಜ್ಯದ ಮೂಲೆ ಮೂಲೆಗಳಿಂದ ಬಂದ ಅಭಿಮಾನಿಗಳು, ಗಣ್ಯರಿಗೆ ಪಾರ್ಥಿವ ಶರೀರದ ದರ್ಶನದ ವ್ಯವಸ್ಥೆ, ಅಂತ್ಯಕ್ರಿಯೆಗೂ ಮೊದಲು ನಡೆಯಲಿರುವ ಮೆರವಣಿಗೆ ಸೇರಿದಂತೆ ಒಟ್ಟು ಪೊಲೀಸ್ ಭದ್ರತೆಗೆ ಸಂಬಂಧಿಸಿದಂತೆ ಅಧಿಕಾರಿಗಳ ಜೊತೆ ಮುಖ್ಯಮಂತ್ರಿಯವರೇ ಸಂಪರ್ಕದಲ್ಲಿದ್ದಾರೆ.

ಶನಿವಾರ ಬೆಳಿಗ್ಗೆ ಕಂಠೀರವ ಕ್ರೀಡಾಂಗಣಕ್ಕೆ ಬಂದ ಬೊಮ್ಮಾಯಿ, ಪುನೀತ್ ಅವರ ಪುತ್ರಿ ಸಂಜೆಯೇ ನಗರಕ್ಕೆ ಬರುವುದು ಖಚಿತವಾಗಿದ್ದರಿಂದ, ಕುಟುಂಬ ಸದಸ್ಯರ ಜೊತೆ ಮತ್ತು ಕಂದಾಯ ಸಚಿವ ಆರ್. ಅಶೋಕ ಜೊತೆ ಚರ್ಚಿಸಿ ಶನಿವಾರವೇ ಅಂತ್ಯಕ್ರಿಯೆ ನಡೆಸಲು ತೀರ್ಮಾನಿಸಿದ್ದರು. ಆದರೆ, ಮಧ್ಯಾಹ್ನವಾದರೂ ಅಭಿಮಾನಿಗಳ ಸಂಖ್ಯೆ ಕಡಿಮೆ ಆಗದ ಕಾರಣ, ಮತ್ತೊಮ್ಮೆ ಚರ್ಚಿಸಿ ಅಂತ್ಯಕ್ರಿಯೆಯನ್ನು ಭಾನುವಾರ ಬೆಳಿಗ್ಗೆ ನಡೆಸಲು ತೀರ್ಮಾನಿಸಿದರು.

ಬಳಿಕ ಈ ವಿಷಯ ಪ್ರಕಟಿಸಿದ ಅವರು, 'ಪುನೀತ್ ಪುತ್ರಿ ಸಂಜೆ 6 ಗಂಟೆಯ ವೇಳೆಗೆ ಬಂದರೂ ಆ ನಂತರ ಅಂತ್ಯಸಂಸ್ಕಾರ ಮಾಡುವುದು ಸವಾಲಿನ ಸಂಗತಿ. ಅಲ್ಲದೆ, ಅಪ್ಪು ಅವರ ಅಂತಿಮ ದರ್ಶನಕ್ಕೆ ಹೆಚ್ಚಿನ ಜನರು ಬರುತ್ತಿದ್ದಾರೆ. ಭಾನುವಾರದವರೆಗೂ ದರ್ಶನಕ್ಕೆ ಅವಕಾಶ ಇರುವುದರಿಂದ ಜನರು ಸಮಾಧಾನದಿಂದ ಬರಬಹುದು. ಪುನೀತ್ ರಾಜ್‌ಕುಮಾರ್ ಅಗಲಿಕೆ ಎಲ್ಲರಿಗೂ ದುಃಖ ತಂದಿದೆ. ಅವರನ್ನು ಗೌರವದಿಂದ ಶಾಂತಿಯುತವಾಗಿ ಬೀಳ್ಕೊಡಬೇಕಿದೆ. ಸಾರ್ವಜನಿಕರ ಅನುಕೂಲಕ್ಕಾಗಿ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿದ್ದು, ಜನರು ಸಹಕರಿಸಬೇಕು' ಎಂದು ಮನವಿ ಮಾಡಿದರು.

'ಈ ಸಮಯ- ಈ ಸಂದರ್ಭದಲ್ಲಿ ಸಂಯಮ, ಜವಾಬ್ದಾರಿಯಿಂದ ವರ್ತಿಸಬೇಕಾಗಿದೆ. ನಮ್ಮ ಜವಾಬ್ದಾರಿಯುತ ನಡವಳಿಕೆ ಡಾ. ರಾಜ್‌ಕುಮಾರ್ ಹಾಗೂ ಪುನೀತ್ ಅವರಿಗೆ ಗೌರವ ಸಲ್ಲಿಸಿದಂತೆ. ಶಾಂತಿ, ಸ್ನೇಹದಿಂದ ಇರುವುದು ಕನ್ನಡಿಗರ ಸಂಸ್ಕೃತಿ' ಎಂದೂ ತಿಳಿಸಿದರು.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ತೆಲಗು ಚಿತ್ರ ನಟ ಚಿರಂಜೀವಿ ಅವರು ಶಿವರಾಜ್ ಕುಮಾರ್ ಅವರಿಗೆ ಸಾಂತ್ವನ ಹೇಳಿದರು. ನಟ ವಿಕ್ಟರಿ ವೆಂಕಟೇಶ್, ಅಲಿ ಇದ್ದಾರೆ –ಪ್ರಜಾವಾಣಿ ಚಿತ್ರ

'ಅಪ್ಪುಗೆ ಜೋಡಿಯಾಗಿಯೇ ಮತ್ತೆ ತೆರೆಗೆ ಎಂದಿದ್ದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಹಾಗೂ ರಮ್ಯಾ ಜೋಡಿ 'ಅಭಿ' ಸಿನಿಮಾ ಮೂಲಕ ಬೆಳ್ಳಿತೆರೆಯ ಮೇಲೆ ಮೋಡಿ ಮಾಡಿತ್ತು. ಇದಾದ ನಂತರ ಈ ಹಿಟ್ ಜೋಡಿ ಚಂದನವನದಲ್ಲಿ ಹಲವು ಹಿಟ್ ಸಿನಿಮಾಗಳನ್ನು ನೀಡಿತ್ತು.

ಶನಿವಾರ ಕಂಠೀರವ ಸ್ಟೇಡಿಯಂಗೆ ಭೇಟಿ ಕೊಟ್ಟು, ಪುನೀತ್ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ರಮ್ಯಾ ಭಾವುಕರಾದರು. 'ಸಿನಿಮಾಗೆ ಮತ್ತೆ ಮರಳುವುದಿದ್ದರೆ ಅಪ್ಪು ಜೋಡಿಯಾಗೇ ಬರುವುದು ಎಂದಿದ್ದೆ' ಎಂದು ರಮ್ಯಾ ಈ ವೇಳೆ ನೆನಪಿಸಿಕೊಂಡರು.

'ನಾನು ಪುನೀತ್ ಅವರು 'ಅಪ್ಪು' ಸಿನಿಮಾಗಾಗಿ ಫೋಟೊಶೂಟ್ ಮಾಡಿಸಿದ್ದೆವು. ಆದರೆ ನನಗೆ ಆ ಸಿನಿಮಾದಲ್ಲಿ ನಟಿಸಲಾಗಲಿಲ್ಲ. ನಂತರದಲ್ಲಿ ನಾನು ಪುನೀತ್ ಜೊತೆ 'ಅಭಿ' ಸಿನಿಮಾ ಮಾಡಿದೆ. ನಂತರದಲ್ಲಿ ಸಾಲುಸಾಲಾಗಿ ಮೂರ್ನಾಲ್ಕು ಸಿನಿಮಾಗಳನ್ನು ಪುನೀತ್ ಅವರ ಜೊತೆ ಮಾಡಿದೆ. ಸೆಟ್‌ನಲ್ಲಿ ಯಾವುತ್ತೂ ಅಪ್ಪು 'ನಾನು ರಾಜ್‌ಕುಮಾರ್ ಅವರ ಮಗ' ಎಂಬ ಹಮ್ಮು ತೆಗೆದುಕೊಂಡು ಬಂದಿರಲಿಲ್ಲ. ಅವರು ಬಹಳ ಸರಳವಾಗಿದ್ದರು. ದೊಡ್ಡವರಾಗಲಿ ಅಥವಾ ಸಣ್ಣವರೇ ಇರಲಿ ಎಲ್ಲರನ್ನೂ ಒಂದೇ ಸಮನಾಗಿ ನೋಡುತ್ತಿದ್ದರು' ಎಂದಿದ್ದಾರೆ ರಮ್ಯಾ.

'ಅಪ್ಪು ಎಂದಾಕ್ಷಣ ನನ್ನ ಕಣ್ಣ ಮುಂದೆ ಬರುವುದು ಆ ನಗು. ಅಪ್ಪು ಅತ್ಯುತ್ತಮ ಸ್ನೇಹಿತ. ಸಿನಿಮಾ ಬಿಟ್ಟು ರಾಜಕೀಯಕ್ಕೆ ಇಳಿದರೂ ಅವರು ನನ್ನ ಜೊತೆ ಸಂಪರ್ಕದಲ್ಲಿದ್ದರು. ಅವರ ಬೆಂಬಲ ನನಗೆ ಸದಾ ಇತ್ತು. 'ಜೇಮ್ಸ್', 'ದ್ವಿತ್ವ'ದಲ್ಲೂ ನಟಿಸಲು ಪುನೀತ್ ಕರೆದಿದ್ದರು. ನೀವು ಸಿದ್ಧರಿದ್ದಾಗ, ಯಾವುದಾದರೂ ಸ್ಕ್ರಿಪ್ಟ್ ಒಪ್ಪಿಗೆಯಾದರೆ ಸಿನಿಮಾ ಮಾಡೋಣ ಎಂದಿದ್ದರು. ಶಿವಣ್ಣನಿಗೆ ಜೋಡಿಯಾಗಿ ನಾನು ಅಭಿನಯಿಸುವ ಸಿನಿಮಾವನ್ನು ನಿರ್ದೇಶಿಸಬೇಕು ಎಂಬ ಕನಸು ಅಪ್ಪುವಿಗಿತ್ತು. ಅವರ ಬ್ಯಾನರ್‌ನಲ್ಲಿ ಯಾವುದೇ ಸಿನಿಮಾ ಮಾಡಿದರೆ ನನಗೆ ಮೊದಲ ಆದ್ಯತೆ ನೀಡುತ್ತಿದ್ದರು. 'ನಾವಿಬ್ಬರೂ ಮತ್ತೆ ಜೊತೆಯಾಗಿ ಸಿನಿಮಾ ಮಾಡುವುದಿದ್ದರೆ ಪ್ರೇಕ್ಷಕರ ನಿರೀಕ್ಷೆ ಬಹಳ ಹೆಚ್ಚಾಗಿರುತ್ತದೆ. ಮತ್ತೆ ಸಿನಿಮಾ ಕ್ಷೇತ್ರಕ್ಕೆ ಮರಳುವುದಿದ್ದರೆ ಅಪ್ಪು ಜೋಡಿಯಾಗಿಯೇ ಎಂದು ನಾನು ಅವರಲ್ಲಿ ಹೇಳಿದ್ದೆ' ಎಂದು ರಮ್ಯಾ ನೆನಪಿಸಿಕೊಂಡರು.

ಅಂತಿಮ ದರ್ಶನಕ್ಕೆ ಗಣ್ಯರು, ತಾರೆಯರ ದಂಡು

ಬೆಂಗಳೂರು: ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಗಣ್ಯರು ಹಾಗೂ ತಾರೆಗಳ ದಂಡು ಕಂಠೀರವ ಕ್ರೀಡಾಂಗಣದಲ್ಲಿ ನೆರೆದಿತ್ತು.

ನಟರಾದ ಗಣೇಶ್, ರಿಷಭ್ ಶೆಟ್ಟಿ, ಡಾಲಿ ಧನಂಜಯ, ಧ್ರುವ ಸರ್ಜಾ, ಅಭಿಷೇಕ್ ಅಂಬರೀಶ್, ಅಜಯ್ ರಾವ್, ರವಿಶಂಕರ್, ಟೆನ್ನಿಸ್ ಕೃಷ್ಣ, ಸೃಜನ್ ಲೋಕೇಶ್, ರಕ್ಷಿತ್ ಶೆಟ್ಟಿ, ರಂಗಾಯಣ ರಘು, ಅವಿನಾಶ್, ದೊಡ್ಡಣ್ಣ, ಶಂಕರ್ ಅಶ್ವತ್ಥ್, ಚೇತನ್, ತಮಿಳು ನಟ ಬಾಬ್ಬಿ ಸಿಂಹ, ತೆಲುಗು ನಟ ಮನೋಜ್ ಮಂಚು, ರಾಣಾ ದಗ್ಗುಬಾಟಿ ಇದ್ದರು.

ತುಮಕೂರಿನ ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಆರ್ಯ ಈಡಿಗ ರಾಷ್ಟ್ರೀಯ ಮಹಾ ಮಂಡಳಿಯ ಅಧ್ಯಕ್ಷ ಪ್ರಣವಾನಂದ ಸ್ವಾಮೀಜಿ, ನಟಿಯರಾದ ರಕ್ಷಿತಾ, ಪ್ರಿಯಾಂಕ ಉಪೇಂದ್ರ, ರಚಿತಾ ರಾಮ್, ಶ್ರುತಿ, ಉಮಾಶ್ರೀ, ರಾಧಿಕಾ ಕುಮಾರಸ್ವಾಮಿ, ನಿರ್ದೇಶಕರಾದ ಸಂತೋಷ್ ಆನಂದ್‌ರಾಮ್, ಜೋಗಿ ಪ್ರೇಮ್, ಎಸ್.ನಾರಾಯಣ್, ಟಿ.ಎಸ್. ನಾಗಾಭರಣ, ಟಿ.ಎನ್. ಸೀತಾರಾಮ್, ಸಂಸದೆ ಸುಮಲತಾ ಅಂಬರೀಶ್, ಸಾಲುಮರದ ತಿಮ್ಮಕ್ಕ, ರಾಜ್ಯಪಾಲ ಥಾವರಚಂದ್ ಗೆಹಲೋತ್, ವಿಧಾಸಭೆ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಸಚಿವರಾದ ಸಿ.ಸಿ. ಪಾಟೀಲ, ಮುನಿರತ್ನ, ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್, ಗೀತ ರಚನೆಕಾರ ನಾಗೇಂದ್ರ ಪ್ರಸಾದ್, ಗಾಯಕ ರಾಜೇಶ್ ಕೃಷ್ಣನ್ ಇದ್ದರು.

ಕಿರಿಯ ಸಹೋದರ ಪುನೀತ್ ಸಾವಿನ ಸುದ್ದಿ ಕೇಳಿ ದಿಗ್ಭ್ರಾಂತನಾಗಿದ್ದೇನೆ. ನಾವೆಲ್ಲಾ ಅಣ್ಣ ತಮ್ಮಂದಿರ ಹಾಗೆ ಇದ್ದೆವು. ದೇವರು ಯಾಕೆ ಇಂತಹ ಅನ್ಯಾಯ ಮಾಡಿದ.

ನಂದಮೂರಿ ಬಾಲಕೃಷ್ಣ, ತೆಲುಗು ನಟ

ಪ್ರೀತಿಯ ಅಪ್ಪುವಿನ ನಿಧನದ ಸುದ್ದಿ ಕೇಳಿ ಆಘಾತವಾಗಿದೆ. ಅವರ ಅಗಲಿಕೆ ಅರಗಿಸಿಕೊಳ್ಳಲಾರದಂತಹದು. ಭಗವಂತ ಬಹಳ ದೊಡ್ಡ ಅನ್ಯಾಯ ಮಾಡಿಬಿಟ್ಟ.

ಚಿರಂಜೀವಿ, ತೆಲುಗು ನಟ



ಪುನೀತ್, ಹೃದಯ ಶ್ರೀಮಂತಿಕೆ ಹೊಂದಿದ್ದವರು. ವಿನಯವಂತ ಹಾಗೂ ಎಲ್ಲರ ಪ್ರೀತಿ ಪಾತ್ರರಾಗಿದ್ದ ನಮ್ಮ ಜೊತೆ ಇಲ್ಲ ಎಂಬುದನ್ನು ಊಹಿಸಿಕೊಳ್ಳುವುಕ್ಕೂ ಸಾಧ್ಯವಿಲ್ಲ.

ವಿಕ್ಟರಿ ವೆಂಕಟೇಶ್, ತೆಲುಗು ನಟ

ಅಪ್ಪು ಒಳ್ಳೆಯ ಮನುಷ್ಯ. ಇಷ್ಟು ಚಿಕ್ಕ ವಯಸ್ಸಿನಲ್ಲಿ ನಿಧನರಾಗಿರುವುದು ಆಘಾತ ತಂದಿದೆ. ಅಪ್ಪು ಸಾವನ್ನು ಜೀರ್ಣಿಸಿಕೊಳ್ಳಲು ಸಾಧ್ಯವೇ ಇಲ್ಲ.

ಅರ್ಜುನ್ ಸರ್ಜಾ, ನಟ

ಭಾವುಕರಾದ ಜ್ಯೂನಿಯರ್ ಎನ್‌ಟಿಆರ್

ಬೆಂಗಳೂರು: ತೆಲುಗು ನಟ ಜ್ಯೂನಿಯರ್ ಎನ್‌ಟಿಆರ್, ತಮ್ಮ ಪ್ರೀತಿಯ ಪುನೀತ್ ರಾಜ್‌ಕುಮಾರ್ ಅವರ ಪಾರ್ಥಿವ ಶರೀರ ಕಂಡು ಭಾವುಕರಾದರು.

ನಿರ್ದೇಶಕ ಪ್ರಶಾಂತ್ ನೀಲ್, ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹಾಗೂ ನಿರ್ಮಾಪಕ ವಿಜಯ್ ಕಿರಗಂದೂರು ಜೊತೆ ಕಂಠೀರವ ಕ್ರೀಡಾಂಗಣಕ್ಕೆ ಬಂದ ಅವರು ಕೆಲ ಕಾಲ ಅಪ್ಪು ಶರೀರವನ್ನು ತದೇಕಚಿತ್ತದಿಂದ ವೀಕ್ಷಿಸಿದರು. ಬಳಿಕ ಕೈಜೋಡಿಸಿ ನಮಿಸಿದರು. ಅಲ್ಲೇ ಇದ್ದ ಶಿವರಾಜ್‌ಕುಮಾರ್ ಅವರನ್ನು ಆಲಂಗಿಸಿಕೊಂಡು ಗದ್ಗದಿತರಾದರು.

ಅಭಿಮಾನಿಯೊಬ್ಬರು ಆರು ತಿಂಗಳ ಮಗುವೊಂದನ್ನು ತಂದು ಪುನೀತ್ ಅವರ ಅಂತಿಮ ದರ್ಶನ ಮಾಡಿಸಿದರು. ತುಮಕೂರಿನಿಂದ ಬಂದಿದ್ದ ಅಜ್ಜಿ ಸುಮಿತ್ರಾ ಬಾಯಿ, ಪುನೀತ್‌ಗಾಗಿ ಕಡಲೆಪುರಿಯ ಹಾರ ಮಾಡಿ ತಂದಿದ್ದರು.

ಬಾಲಿವುಡ್ ನಟ ಶಾರುಕ್ ಖಾನ್ ಅಭಿಮಾನಿಗಳ ಸಂಭ್ರಮ

ಜೈಲಿನಿಂದ ಆರ್ಯನ್ ಖಾನ್ ಬಿಡುಗಡೆ

ಮುಂಬೈ (ಪಿಟಿಐ): ಐಷಾರಾಮಿ ಹಡಗಿನಲ್ಲಿ ಮಾದಕ ವಸ್ತು ಪತ್ತೆ ಪ್ರಕರಣದಲ್ಲಿ ಆರೋಪಿಯಾಗಿರುವ, ಬಾಲಿವುಡ್ ನಟ ಶಾರುಕ್ ಖಾನ್ ಅವರ ಮಗ ಆರ್ಯನ್ ಖಾನ್, 22 ದಿನಗಳ ನ್ಯಾಯಾಂಗ ಬಂಧನದ ನಂತರ ಶನಿವಾರ ಮನೆಗೆ ಮರಳಿದರು.

ಅರ್ಥರ್ ರೋಡ್ ಜೈಲಿನಿಂದ ಅವರು ಹೊರಗೆ ಬರುವ ಮೊದಲೇ, ಶಾರುಕ್ ಖಾನ್ ಅವರ ಭದ್ರತಾ ಸಿಬ್ಬಂದಿ ಜೈಲಿನ ಗೇಟಿನ ಬಳಿ ಬಂದು ಕಾಯುತ್ತಿದ್ದರು.

ಬಾಂಬೆ ಹೈಕೋರ್ಟ್ ಗುರುವಾರ ಜಾಮೀನು ಮಂಜೂರು ಮಾಡಿತ್ತು. ಜಾಮೀನು ಪ್ರಕ್ರಿಯೆ ಪೂರ್ಣಗೊಳಿಸಲು ಸಮಯ ಹಿಡಿದಿದ್ದರಿಂದ ಬಿಡುಗಡೆ ವಿಳಂಬವಾಯಿತು. ಶನಿವಾರ ಬೆಳಿಗ್ಗೆ, ಪೊಲೀಸರು ಬಿಡುಗಡೆಯ ಪ್ರಕ್ರಿಯೆಯನ್ನು ಮುಗಿಸಿದ ಬಳಿಕ, ಸುಮಾರು 11 ಗಂಟೆಗೆ ಆರ್ಯನ್ ಜೈಲಿನಿಂದ ಹೊರ ಬಂದರು.

ಅಲ್ಲಿಂದ, 11.33ಕ್ಕೆ ತಮ್ಮ ಮನೆಗೆ ತೆರಳಿದರು.

ಮುಂಬೈನ ಆರ್ಥರ್ ರೋಡ್ ಜೈಲಿನಿಂದ ಬಿಡುಗಡೆಯಾದ ಆರ್ಯನ್ ಸ್ವಾಗತಕ್ಕಾಗಿ, ಶಾರುಕ್ ಖಾನ್ ನಿವಾಸ 'ಮನ್ನತ್' ಹೊರಭಾಗದಲ್ಲಿ ಶನಿವಾರ ನೆರೆದಿದ್ದ ಅಭಿಮಾನಿಗಳು

ಬೆಳಿಗ್ಗೆಯಿಂದಲೇ ಜೈಲಿನ ಹೊರಗೆ ನೆರೆದಿದ್ದ ನಟನ ಅಭಿಮಾನಿಗಳು, ಶಾರುಕ್ ಮತ್ತು ಆರ್ಯನ್ ಖಾನ್ ಅವರಿಗೆ ಜೈಕಾರ ಹಾಕುತ್ತಿದ್ದರು.

ಶಾರುಕ್ ಕುಟುಂಬದ ಸ್ನೇಹಿತೆಯಾದ ನಟಿ ಜೂಹಿ ಚಾವ್ಲಾ ಅವರು, ಆರ್ಯನ್ ಜಾಮೀನಿಗೆ ಭದ್ರತೆ ಒದಗಿಸಿದ್ದಾರೆ.

'ಮನ್ನತ್' ಎದುರು ಸಂಭ್ರಮಾಚರಣೆ: ಶಾರುಕ್ ನಿವಾಸ 'ಮನ್ನತ್' ಎದುರಿಗೂ ಭಾರಿ ಸಂಖ್ಯೆಯಲ್ಲಿ ಜನರು ನೆರೆದಿದ್ದರು. ಆರ್ಯನ್ ಖಾನ್ ಬಂದ ಕಾರಿನ ಜೊತೆಯೇ ಓಡಿದರು. ಆರ್ಯನ್, ಮನೆ ತಲುಪುತ್ತಿದ್ದಂತೆಯೇ ಡೋಲು ಬಾರಿಸಿ, ಪಟಾಕಿ ಸಿಡಿಸಿ, ನೃತ್ಯ ಮಾಡಿ ಸಂಭ್ರಮಿಸಿದರು.

ಇತರ ಏಳು ಆರೋಪಿಗಳಿಗೆ ಜಾಮೀನು: ಇದೇ ಪ್ರಕರಣದ ಉಳಿದ ಏಳು ಆರೋಪಿಗಳಿಗೆ ಇಲ್ಲಿಯ ವಿಶೇಷ ಕೋರ್ಟ್ ಜಾಮೀನು ನೀಡಿತು. ಬಂಧಿತ 20 ಆರೋಪಿಗಳ ಪೈಕಿ, ಈವರೆಗೆ 12 ಆರೋಪಿಗಳಿಗೆ ಜಾಮೀನು ಸಿಕ್ಕಿದೆ. ಅ.26ರಂದು ಇಬ್ಬರಿಗೆ ಹಾಗೂ ಅ.28ರಂದು ಆರ್ಯನ್ ಖಾನ್ ಮತ್ತು ಅವರ ಸ್ನೇಹಿತರಾದ ಅರ್ಬಾಜ್ ಮರ್ಚೆಂಟ್ ಮತ್ತು ಮುನ್‌ಮುನ್ ಧಮೇಚ ಅವರಿಗೆ ಜಾಮೀನು ನೀಡಲಾಗಿತ್ತು.

ಸಿಂದಗಿ, ಹಾನಗಲ್: ಶಾಂತಿಯುತ ಮತದಾನ

ಪ್ರಜಾವಾಣಿ ವಾರ್ತೆ

ವಿಜಯಪುರ/ ಹಾವೇರಿ: ವಿಜಯಪುರ ಜಿಲ್ಲೆಯ ಸಿಂದಗಿ ಹಾಗೂ ಹಾವೇರಿ ಜಿಲ್ಲೆಯ ಹಾನಗಲ್ ವಿಧಾನಸಭಾ ಉಪಚುನಾವಣೆಗೆ ಶನಿವಾರ ಶಾಂತಿಯುತ ಮತದಾನ ನಡೆಯಿತು. ಪ್ರಾಥಮಿಕ ವರದಿ ಪ್ರಕಾರ, ಸಿಂದಗಿಯಲ್ಲಿ ಶೇ 69.41ರಷ್ಟು ಹಾಗೂ ಹಾನಗಲ್‌ದಲ್ಲಿ ಶೇ 83.44 ರಷ್ಟು ಮತದಾನವಾಗಿದೆ. ನವೆಂಬರ್ 2ರಂದು ಮತ ಎಣಿಕೆ ನಡೆಯಲಿದೆ.

ಸಿಂದಗಿ ಕಣದಲ್ಲಿ 6 ಹಾಗೂ ಹಾನಗಲ್ ಕಣದಲ್ಲಿ 13 ಅಭ್ಯರ್ಥಿಗಳಿದ್ದಾರೆ. ಸಿಂದಗಿ ಕ್ಷೇತ್ರದ ಶಾಸಕ ಎಂ.ಸಿ. ಮನಗೂಳಿ ಹಾಗೂ ಹಾನಗಲ್ ಕ್ಷೇತ್ರದ ಶಾಸಕ ಸಿ.ಎಂ. ಉದಾಸಿ ಅವರ ಸಾವಿನಿಂದ ತೆರವಾಗಿದ್ದ ಕ್ಷೇತ್ರಗಳಿಗೆ ಉಪಚುನಾವಣೆ ನಡೆದಿದೆ.

ಮುಂಜಾನೆಯಿಂದಲೇ ಮತಗಟ್ಟೆಗಳತ್ತ ಮತದಾರರು ಉತ್ಸಾಹದಿಂದ ಹೆಜ್ಜೆ ಹಾಕಿದರು. ಕೋವಿಡ್ ಮಾರ್ಗಸೂಚಿ ಪ್ರಕಾರ ಆಶಾ ಕಾರ್ಯಕರ್ತೆಯರು ಮತ್ತು ವೈದ್ಯಕೀಯ ಸಿಬ್ಬಂದಿ ಥರ್ಮಲ್ ಸ್ಕ್ಯಾನರ್ ಮೂಲಕ ಮತದಾರರ ದೇಹದ ಉಷ್ಣಾಂಶ ಪರೀಕ್ಷಿಸಿ, ಕೈಗಳಿಗೆ ಸ್ಯಾನಿಟೈಸರ್ ಹಾಕಿದ ನಂತರ ಮತಗಟ್ಟೆಗಳಿಗೆ ಪ್ರವೇಶಿಸಲು ಅನುವು ಮಾಡಿಕೊಟ್ಟರು.

ಹಾನಗಲ್ ವ್ಯಾಪ್ತಿಯ ಸಮ್ಮಸಗಿ ಮತಗಟ್ಟೆಗೆ ವೃದ್ಧೆಯೊಬ್ಬರನ್ನು ಗಾಲಿಕುರ್ಚಿಯಲ್ಲಿ ಕರೆತರಲಾಯಿತು (ಎಡ ಚಿತ್ರ) ಸಿಂದಗಿ ಕ್ಷೇತ್ರದ ಗಣಿಹಾರ ಗ್ರಾಮದಲ್ಲಿ ಶನಿವಾರ ಲಂಬಾಣಿ ಮಹಿಳೆಯರು ಸಾಂಪ್ರದಾಯಿಕ ಉಡುಪಿನಲ್ಲಿ ಬಂದು ಮತ ಚಲಾಯಿಸಿದರು –ಪ್ರಜಾವಾಣಿ ಚಿತ್ರಗಳು

ಮತದಾನ ಆರಂಭಕ್ಕೂ ಮುನ್ನಾ ಸಿಂದಗಿ ವ್ಯಾಪ್ತಿಯ ಆಲಮೇಲ ಪಟ್ಟಣದ ವಾರ್ಡ್ 1ರಲ್ಲಿ ಹಿಂದು–ಮುಸ್ಲಿಂ ಮಹಿಳೆಯರು ಮತಗಟ್ಟೆಗೆ ಒಟ್ಟಿಗೆ ಆರತಿ ಬೆಳಗಿ ಪೂಜೆ ಸಲ್ಲಿಸುವ ಮೂಲಕ ಮತದಾನಕ್ಕೆ ಚಾಲನೆ ನೀಡಿರುವುದು ಗಮನ ಸೆಳೆಯಿತು. ವೃದ್ಧರು ತಮ್ಮ ಕುಟುಂಬದವರ ನೆರವಿನೊಂದಿಗೆ ಮತಗಟ್ಟೆಗೆ ಬಂದು ಉತ್ಸಾಹದಿಂದ ಮತ ಚಲಾಯಿಸಿದರು.

ಗಣಿಹಾರದಲ್ಲಿ ವ್ಯಕ್ತಿಯೊಬ್ಬರು ಜೆಡಿಎಸ್ ಅಭ್ಯರ್ಥಿಗೆ ಮತ ಚಲಾಯಿಸಿದ ದೃಶ್ಯವನ್ನು ಚಿತ್ರೀಕರಣ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದು, ಈ ಸಂಬಂಧ ದೂರು ದಾಖಲಿಸಿಕೊಳ್ಳಲಾಗಿದೆ. ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರ ನಡುವೆ ಸಣ್ಣಪುಟ್ಟ ವಾಗ್ವಾದ, ನಾಗಾವಿ ಬಿ.ಕೆ.ಯಲ್ಲಿ ಘರ್ಷಣೆ, ನಾಲ್ಕು ಕಡೆ ಮತಯಂತ್ರಗಳಲ್ಲಿ ತಾಂತ್ರಿಕ ದೋಷ ಹೊರತುಪಡಿಸಿದರೆ ಬಹುತೇಕ ಶಾಂತಿಯುತವಾಗಿ ಮತದಾನ ನಡೆಯಿತು.

ಪೌಷ್ಟಿಕ ಆಹಾರ ಸೇವಿಸಿ
ಪರಸ್ಪರ ಅಂತರ ಕಾಯ್ದುಕೊಳ್ಳಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ
ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

6ನೇ ವರ್ಷದ ಸವಿನೆನಪು



ಶ್ರೀ ಎನ್. ವೆಂಕಟೇಶ್‌ರವರು
(ಜಮೀನ್ದಾರರು)
ನಿಧನ : ತಾ॥ 31–10–2015
ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ ಮತ್ತು ಸ್ಫೂರ್ತಿದಾಯಕ ನಿಮ್ಮ ಸವಿ ನೆನಪುಗಳು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ
ಇಂತಿ - ಶ್ರೀಮತಿ ಎನ್. ನಿರ್ಮಲ, ಮಕ್ಕಳಾದ ವಿ. ಧನಂಜಯ, ವಿ. ಧನಲಕ್ಷ್ಮಿ, ವಿ. ಗಜೇಂದ್ರ, ವಿ. ಪ್ರತಾಪ್ ಹಾಗೂ ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು

ವೈಕುಂಠ ಸಮಾರಾಧನೆ

ಶ್ರೀಮತಿ ರತ್ನಮ್ಮನವರು
W/O ಲೇಟ್ ಗಿರಿರಾಜಗೌಡರು
ದಿನಾಂಕ: 23-10-2021 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ವೈಕುಂಠ ಸಮಾರಾಧನೆಯನ್ನು ದಿ: 02-11-2021, ಮಂಗಳವಾರ, ಬೆಳಿಗ್ಗೆ:10:30ಕ್ಕೆ
ಸ್ಥಳ: ಚನ್ನಸಂದ್ರ, ವೈಟ್‌ಫೀಲ್ಡ್
ರಿಂದ: ಸ್ವರಾಜ್ಯಲಕ್ಷ್ಮಿ, ಚನ್ನಕೇಶವ, ಚಿನ್ನಸ್ವಾಮಿ, ಪುರುಷೋತ್ತಮ್ ಮತ್ತು ಕುಟುಂಬದವರು.
ಮೊಬೈಲ್: 9845034578

9ನೇ ವರ್ಷದ ಪುಣ್ಯಸ್ಮರಣೆ



ಶ್ರೀ. ಜಿ. ಚಂದ್ರಪ್ಪ
ನೀವು ನಮ್ಮನ್ನಗಲಿ ಇಂದಿಗೆ ಒಂಬತ್ತು ವರ್ಷವಾಗಿದೆ. ನಿಮ್ಮ ಸವಿ ನೆನಪು, ನಮ್ಮ ಮನದಂಗಳದಲ್ಲಿ ಸದಾ ಹಸಿರಾಗಿದೆ. ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಕೋರುವ
ದುಃಖತಪ್ತ: ಪತ್ನಿ, ಪ್ರೇಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಅಳಿಯಂದಿರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

2019ರ ಮಟ್ಟಕ್ಕಿಂತ ಶೇ 30ರಷ್ಟು ಏರಿಕೆ: ಜಿಜೆಸಿ

ದೀಪಾವಳಿಗೆ ಚಿನ್ನದ ಮಾರಾಟ ಹೆಚ್ಚಳ ನಿರೀಕ್ಷೆ

ಮುಖ್ಯಾಂಶಗಳು

- ನಿರೀಕ್ಷೆಗಿಂತಲೂ ವೇಗವಾಗಿ ಆರ್ಥಿಕ ಚೇತರಿಕೆ ಪ್ರಭಾವ
- ನವರಾತ್ರಿಯ ಆರಂಭದಿಂದಲೂ ಬೇಡಿಕೆ ಹೆಚ್ಚಳ

ಮುಂಬೈ (ಪಿಟಿಐ): ಈ ಬಾರಿಯ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಚಿನ್ನದ ಮಾರಾಟವು ಕೋವಿಡ್‌ಗೂ ಮುಂಚಿನ ಮಟ್ಟಕ್ಕಿಂತಲೂ ಶೇ 30ರಷ್ಟು ಹೆಚ್ಚಿಗೆ ಇರಲಿದೆ ಎಂದು ಅಖಿಲ ಭಾರತ ರತ್ನ ಮತ್ತು ಚಿನ್ನಾಭರಣ ದೇಶಿ ಮಂಡಳಿ (ಜಿಜೆಸಿ) ಹೇಳಿದೆ.

ದೇಶದ ಆರ್ಥಿಕತೆಯು ನಿರೀಕ್ಷೆಗಿಂತಲೂ ವೇಗವಾಗಿ ಚೇತರಿಕೆ ಕಾಣುತ್ತಿರುವುದು ಮತ್ತು ಬೇಡಿಕೆ ಹೆಚ್ಚಾಗುತ್ತಿರುವ ಕಾರಣಗಳಿಂದಾಗಿ ಚಿನ್ನದ ಮಾರಾಟ ಈ ಪ್ರಮಾಣದಲ್ಲಿ ಏರಿಕೆ ಆಗಲಿದೆ ಎಂದು ತಿಳಿಸಿದೆ.

ಕ್ಯಾಲೆಂಡರ್ ವರ್ಷದ 3ನೇ ತ್ರೈಮಾಸಿಕದಿಂದ ಮಾರಾಟದಲ್ಲಿ ಪ್ರಗತಿ ಕಂಡುಬರುತ್ತಿದೆ. ಆರ್ಥಿಕತೆಯು ಚೇತರಿಕೆ ಹಾದಿಗೆ ಮರಳಿದೆ ಎನ್ನುವುದನ್ನು ಕಳೆದ ಕೆಲವು ತಿಂಗಳುಗಳಲ್ಲಿ ಆಗಿರುವ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹ ಸೂಚಿಸುತ್ತಿದೆ. ಕೋವಿಡ್‌ನಿಂದಾಗಿ ಮುಂದಕ್ಕೆ ಹೋಗಿದ್ದ ಮದುವೆ ಸಮಾರಂಭಗಳು ಈ ವರ್ಷಾಂತ್ಯದ ವೇಳೆಗೆ ನಡೆಯಲಿರುವುದು ರತ್ನ ಮತ್ತು ಚಿನ್ನಾಭರಣಗಳ ಬೇಡಿಕೆ ಹೆಚ್ಚಿಸಲಿವೆ ಎಂದು ಜಿಜೆಸಿ ಅಧ್ಯಕ್ಷ ಆಶಿಶ್ ಪೇಠೆ ಹೇಳಿದ್ದಾರೆ.

ಕೋವಿಡ್ ನಿರ್ಬಂಧಗಳು ನಿಧಾನವಾಗಿ ಹಿಂದಕ್ಕೆ ಪಡೆಯುತ್ತಿರುವುದರಿಂದ ಚಿನ್ನಾಭರಣಗಳ ರಿಟೇಲ್ ಬೇಡಿಕೆಯು ಕೋವಿಡ್‌ಗೂ ಮುಂಚಿನ ಮಟ್ಟಕ್ಕೆ ಮರಳುತ್ತಿದೆ ಎಂದು ವಿಶ್ವ ಚಿನ್ನ ಸಮಿತಿಯ (ಡಬ್ಲ್ಯುಜಿಸಿ) ಭಾರತದ ಪ್ರಾದೇಶಿಕ ಸಿಇಒ ಸೋಮಸುಂದರಂ ಪಿಆರ್ ತಿಳಿಸಿದ್ದಾರೆ.

ನವರಾತ್ರಿಯ ಆರಂಭದಿಂದಲೂ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಕಂಡುಬರುತ್ತಿದೆ ಎಂದು ಪಿಎನ್‌ಜಿ ಜುವೆಲರ್ಸ್‌ನ ಅಧ್ಯಕ್ಷ ಸೌರಭ್ ಗಾಡ್ಗಿಲ್ ಹೇಳಿದ್ದಾರೆ.

ಆರ್ಥಿಕತೆಯು ಚೇತರಿಕೆ ಹಾದಿಯಲ್ಲಿ ಇರುವುದರಿಂದ ದೀಪಾವಳಿಯಲ್ಲಿ ಗ್ರಾಹಕರ ಬೇಡಿಕೆಯು ಸಕಾರಾತ್ಮಕವಾಗಿ ಇರುವ ನಿರೀಕ್ಷೆ ಮಾಡಲಾಗಿದೆ. ಕಳೆದ ವರ್ಷದಲ್ಲಿ ದೀಪಾವಳಿಯ ಮಾರಾಟಕ್ಕೆ ಹೋಲಿಸಿದರೆ ಈ ಬಾರಿಯ ಮಾರಾಟವು ಶೇ 30 ರಿಂದ ಶೇ 40ರಷ್ಟು ಹೆಚ್ಚಾಗುವ ಅಂದಾಜು ಮಾಡಲಾಗಿದೆ ಎಂದು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಅಧ್ಯಕ್ಷ ಎಂ.ಪಿ. ಅಹಮದ್ ಹೇಳಿದ್ದಾರೆ.

ಮುಂಬೈ ಧಾರಣೆ

ಶೇಂಗಾ

30-10-2021

ಜಾವಾ 70/80(ಹೊಸ)	10350-10400
ಜಾವಾ 80/90(ಹೊಸ)	10050-10100
ದಪ್ಪ ಮಧ್ಯಪ್ರದೇಶ(ಹೊಸ)	9900-9950
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1425 (1430)
ಒಂದು ವಾರದ ಡೆಲಿವರಿ	1420 (1425)
ಸೋಯಾ ಕಚ್ಚಾ	1250 (1255)
ಪಾಮ್ ವಾರದ ಡೆಲಿವರಿ	1196 (1196)
ಸೂರ್ಯಕಾಂತಿ ಎಣ್ಣೆ ಕಚ್ಚಾ	1250 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,600 (47,600)
ಬೆಳ್ಳಿ ಕೆ.ಜಿ 64,500 (64,450)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹455

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1415 (1420)
ಸೋಯಾ (ರಿಫೈನ್ಡ್)	₹1300 (1300)
ಸೂರ್ಯಕಾಂತಿ (ರಿಫೈನ್ಡ್)	₹1335 (1335)
ಪಾಮೋಲಿನ್	₹1198 (1198)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	10000-25000
ಹೊಸತು	25000-50000
ಚಿತ್ರದುರ್ಗ	
ಅಪಿ	45819-46229
ಬೆಟ್ಟೆ	39610-40069
ಕೆಂಪುಗೋಟು	30200-30600
ರಾಶಿ	45339-45779
ಪುತ್ತೂರು	
ಕೋಕ	10500-26000
ಹೊಸತು	35500-50000
ಶಿರಸಿ	
ಬೆಟ್ಟೆ	35599-45319
ಬಿಳಿಗೋಟು	22699-41319
ಚಾಲಿ	41599-47629
ರಾಶಿ	39899-48889
ಕಾರ್ಕಳ	
ಹೊಸತು	35000-42500
ಹಳತು	46000-50000
ರಾಮನಗರ ರೇಷ್ಮೆ	
ಮಿಶ್ರತಳಿ	278-491
ದ್ವಿತಳಿ	321-546

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13100	12500	13000	203.95 ಸೆಂಟ್ಸ್
ಎಸಿ	6325	---	5300	
ಆರ್‌ಪಿ	6075	---	6225	
ಆರ್‌ಸಿ	3535	---	3650	2214 ಡಾಲರ್ಸ್

ಹೊರಗೆ ಹೋಗುವಾಗ ಮುಖಗವಸು ಧರಿಸಿ
ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

ಸಚ್ಚಿದಾನಂದ ಸತ್ಯಸಂದೇಶ
ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮಾಸದಲ್ಲೇ ಶ್ರೇಷ್ಠ ಕಾರ್ತಿಕ

ನಮ್ಮ ಶಾಸ್ತ್ರ-ಸಂಪ್ರದಾಯಗಳು ಕೇವಲ ಮನುಷ್ಯನ ಬದುಕಿನ ಸುತ್ತಲ ಪರಿಸರಕ್ಕಷ್ಟೆ ರೂಪುಗೊಂಡಿಲ್ಲ. ವಿಶ್ವದ ಗ್ರಹಗತಿಗಳ ಚಲನಗತಿಯನ್ನಾಧರಿಸಿ ನಮ್ಮ ಸಂಸ್ಕೃತಿ–ಆಚರಣೆಗಳು ಆವಿಷ್ಕಾರಗೊಂಡಿವೆ. ಮನುಷ್ಯನ ಬದುಕಿನೊಂದಿಗೆ ಜೀವರಾಶಿಗಳಲ್ಲದೆ ಸಕಲ ಗ್ರಹಚರಗಳು ಒಳಗೊಂಡಿವೆ ಎಂಬುದನ್ನು ನಮ್ಮ ಋಷಿಗಳು ಗ್ರಹಿಸಿದ್ದಾರೆ. ಮನುಷ್ಯನ ಹುಟ್ಟು ಬೆಳವಣಿಗೆಯೊಂದಿಗೆ ಗ್ರಹಗತಿಗಳ ಚಲನೆಯನ್ನು ಹೊಂದಿಸಿ ವಿಶ್ಲೇಷಿಸಿದ್ದಾರೆ. ಮನ್ವಂತರ-ಸಂವತ್ಸರಗಳ ಜೊತೆ ತಿಂಗಳು-ದಿನಮಾನಗಳು, ಗಂಟೆ-ನಿಮಿಷಗಳ ಎಣಿಕೆಯ ಮಧ್ಯೆ ಬರುವ ರಾಹು-ಯಮಗಂಡ-ಗುಳಿಕ ಕಾಲಗಳ ಗುಣಿತ ಯಾವ ಗಣಿತಶಾಸ್ತ್ರಕ್ಕೂ ಕಡಿಮೆಯದಲ್ಲ. ನಮ್ಮ ದೇಹಚಲನೆಯೊಂದಿಗೆ ಗ್ರಹಚಲನೆಗೂ ಸಂಬಂಧವಿದೆ. ಈ ಬ್ರಹ್ಮಾಂಡದಲ್ಲಿ ಚರಾಚರ ಎಲ್ಲವೂ ಸೃಷ್ಟಿಯೊಂದಿಗೆ ಪರಿಭ್ರಮಣೆಗೊಳಗಾಗಿವೆ ಎಂಬುದನ್ನು ವೈಜ್ಞಾನಿಕವಾಗಿ ರೂಪಿಸಿದ ಭಾರತೀಯ ಶಾಸ್ತ್ರಗಳು ಎಲ್ಲಾ ಕಾಲಕ್ಕೂ ಸಲ್ಲುವಂಥವು.

ಭಾರತೀಯ ಶಾಸ್ತ್ರಸಂಪ್ರದಾಯದಲ್ಲಿ ಪ್ರತಿಯೊಂದಕ್ಕೂ ಅರ್ಥವಿದೆ. ಪ್ರತಿ ಸಮಯಕ್ಕೂ ಆದ್ಯತೆ ಇದೆ. ಪ್ರತಿ ಕ್ಷಣವೂ ಶಾಸ್ತ್ರಕಣದಲ್ಲಿ ಆವಿರ್ಭವಿಸಿ ಬರುತ್ತವೆ. ಹೀಗಾಗಿ ವರ್ಷದ ಪ್ರತಿ ತಿಂಗಳಲ್ಲೂ ವೈವಿಧ್ಯಮಯವಾದ ಆಚರಣೆಗಳು ಚಾಲನೆಯಲ್ಲಿವೆ. ಅವುಗಳನ್ನು ಪಾಲಿಸುವವರ ಮನದಲ್ಲಿ ಸಾರ್ಥಕ್ಯದ ಭಾವವಿರುತ್ತದೆ. ಅವರ ಬದುಕಲ್ಲಿ ನೆಮ್ಮದಿ ಇರುತ್ತದೆ. ಹಿಂದೂ ಪಂಚಾಂಗದ 12 ತಿಂಗಳಲ್ಲಿ ಎಂಟನೇ ತಿಂಗಳಾದ ಕಾರ್ತಿಕ ಮಾಸಕ್ಕೆ ವಿಶೇಷವಾದ ಆದ್ಯತೆ ಇದೆ. ಮಾಸಗಳಲ್ಲೆ ಶ್ರೇಷ್ಠ ಮಾಸ ಕಾರ್ತಿಕಮಾಸ ಅಂತ ಕರೆಯಲಾಗುತ್ತದೆ. ಇದು ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರಿಗೆ ಬಹು ಪ್ರಿಯವಾದ ಮಾಸ. ಆಷಾಡದ ಸುಳಿ-ಗಾಳಿಗೆ ತಣ್ಣಗೆ ಮಲಗಿದ್ದ ಶ್ರೀಮನ್ನಾರಾಯಣ ಕಾರ್ತಿಕದಲ್ಲಿ ಎದ್ದೇಳುತ್ತಾನೆ. ಆಗ ಅವನನ್ನು ದೀಪದಿಂದ ಬರಮಾಡಿಕೊಂಡರೆ ಶ್ರೇಯಸ್ಸು ಎಂಬ ಕಾರಣಕ್ಕೆ ಕಾರ್ತಿಕಮಾಸದಲ್ಲಿ ದೀಪ ಬೆಳಗಿಸುತ್ತೇವೆ. ಶಿವನು ತ್ರಿಪುರಾಸುರರ ನಾಶ ಮಾಡಿದ ತಿಂಗಳು ಕಾರ್ತಿಕಮಾಸವಾಗಿರುವುದರಿಂದ ವಿಪತ್ತಿನ ಅಂಧಕಾರ ಕಳೆದು, ವಿದ್ವತ್ತಿನ ಜ್ಞಾನ ಬೆಳೆದ ಅಂಗವಾಗಿ ದೀಪ ಬೆಳಗಿಸುವ ಸಂಪ್ರದಾಯವಿದೆ. ಭಾರತೀಯ ಸಂಸ್ಕೃತಿಯಲ್ಲಿ ಬೆಳಕು ಜ್ಞಾನದ ಸಂಕೇತವಾಗಿದೆ.

ಶ್ರೀಕೃಷ್ಣ ನರಕಾಸುರನನ್ನು, ಶ್ರೀ ಸುಬ್ರಹ್ಮಣ್ಯ ತಾರಕಾಸುರನನ್ನು, ಶ್ರೀ ವಾಮನನು ಬಲಿಚಕ್ರವರ್ತಿಯ ಹುಟ್ಟಡಗಿಸಿದ ದೀಪಾವಳಿಯೂ ಕಾರ್ತಿಕಮಾಸದಲ್ಲೇ ಬರುತ್ತೆ. ಇದರಿಂದಾಗಿ ಕಾರ್ತಿಕಮಾಸದಲ್ಲಿ ಮಾಡುವ ದೀಪಾರಾಧನೆ, ಪೂಜೆ-ವ್ರತಗಳು ಹೆಚ್ಚು ಫಲಪ್ರದಾಯವಾಗಿರುತ್ತೆ.

ದೇಹ-ಮನಸ್ಸು-ಬುದ್ಧಿಯಾದ ತ್ರಿಕರಣಗಳನ್ನು ಶುದ್ಧಿಯಾಗಿಟ್ಟುಕೊಂಡು ಧರ್ಮಕಾರ್ಯಗಳನ್ನು ಮಾಡಿದರೆ ಶ್ರೇಷ್ಠ ಫಲ ದೊರೆಯುತ್ತದೆ. ಮನೆಯ ಮುಂದೆ ಒಂದು ಸಣ್ಣ ದೀಪ ಬೆಳಗಿಸಿದರೂ, ಬೌದ್ಧಿಕ-ಮಾನಸಿಕ-ಆಧ್ಯಾತ್ಮಿಕ ಬೆಳವಣಿಗೆಯಲ್ಲದೆ, ಭೌತಿಕ ಬೆಳವಣಿಗೆಗೂ ಸಹಾಯಕವಾಗುತ್ತದೆ. ಪುರಾಣಗಳಲ್ಲೆ ಅತಿದೊಡ್ಡದಾದ ಸ್ಕಾಂದಪುರಾಣದಲ್ಲೂ ಕಾರ್ತಿಕಮಾಸಾಚರಣೆ ಶ್ರೇಷ್ಠತೆಯ ವಿವರವಿದೆ.

ಮನುಷ್ಯರಲ್ಲಿ ಹುದುಗಿರಬಹುದಾದ ತಮೋಗುಣಗಳನ್ನು ದಮನಿಸಿ, ರಜೋಗುಣಗಳನ್ನು ಉದ್ದೀಪಿಸುವ ನಮ್ಮ ಶಾಸ್ತ್ರಸಂಪ್ರದಾಯಗಳು ಸದಾ ಸಮಾಜದ ಹಿತ ಕಾಯುವ ಕೆಲಸ ಮಾಡುತ್ತವೆ. ಅದರ ತತ್ವಗುಣಗಳು ಸದಾ ಕಾಲ ಸತ್ವಪೂರ್ಣವಾಗಿರುತ್ತವೆ. ಆಗಾಗ್ಗೆ ಮನುಷ್ಯನಲ್ಲಿ ಪುಟಿದೇಳುವ ದುರಾಸೆ-ಸ್ವಾರ್ಥ ಚಿಂತನೆಗಳು, ದ್ರೋಹ-ವಂಚನೆಗಳ ಮೋಹಗಳನ್ನು ನಿಗ್ರಹಿಸುವ ಶಕ್ತಿ ನಮ್ಮ ಶಾಸ್ತ್ರಸಂಪ್ರದಾಯಗಳಲ್ಲಿದೆ. ಪರರನ್ನು ತನ್ನಂತೆ ಪೋಷಿಸುವ-ಪ್ರೇಮಿಸುವ ಒಳ್ಳೆಯ ಬುದ್ಧಿ ನೀಡುವ ರಜೋಗುಣಗಳನ್ನು ಪ್ರಚೋದಿಸುವ ಶಕ್ತಿ ಸದಾಚರಣೆಗಳಲ್ಲಿವೆ. ಆಚಾರ-ವಿಚಾರಗಳನ್ನು ಪಾಲಿಸದೆ ಮನಸೋ ಇಚ್ಛೆ ವರ್ತಿಸುವವರಲ್ಲಿ ಕೆಟ್ಟ ಗುಣಗಳು ಹುಟ್ಟುತ್ತವೆ. ಇಂಥ ತಮೋಗುಣ ಹೆಚ್ಚಿರುವವರು ಮನುಷ್ಯರಾಗಿರದೆ ದೈತ್ಯರಾಗಿರುತ್ತಾರೆ. ರಾಕ್ಷಸಗುಣಗಳನ್ನು ತೊಡೆದು, ಮಾನವೀಯ ಗುಣಗಳನ್ನು ಪ್ರೇರೇಪಿಸುವ ಆಚರಣೆಗಳು ನಮ್ಮ ಬದುಕಿಗೆ ಪೂರಕ. ಇಂಥ ಸದಾಚಾರದ ಪ್ರತೀಕವಾದ ಕಾರ್ತಿಕಮಾಸವನ್ನು ಶುದ್ಧ ಮನಸ್ಸಿನಿಂದ ಆಚರಿಸಿದರೆ, 'ಸಚ್ಚಿದಾನಂದ'ದ ಒಳ್ಳೆಯ ಮನಸ್ಸು ಪ್ರಾಪ್ತವಾಗುತ್ತದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರೆಂಟಲ್ ಪ್ರಾಪರ್ಟೀಸ್
Accommodation Wanted
Commercial
50K- 1 Lakh Warehouse Required for Rent /lease for limited company urgent contact No- 9316535288/ 9879500763 dhaval.bagade@rcspl.net

ಬಿಲ್ಡರ್ ಎಸೆನ್ಷಿಯಲ್
Water Proofing Materials
ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್
Mysore
GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

ಉದ್ಯೋಗಾವಕಾಶ
Cook
ಬೇಕಾಗಿದ್ದಾರೆ: ಉಡುಪಿ-ಮಂಗಳೂರಿನಲ್ಲಿ ಹೊಸದಾಗಿ ಆರಂಭಗೊಂಡ ಲೇಡೀಸ್ ಪಿಜಿ ನೋಡಿಕೊಳ್ಳಲು / ಅಡುಗೆ ತಿಳಿದಿರುವ ಮಹಿಳೆ. ಅಲ್ಲಿಯೇ ಉಳಿದುಕೊಳ್ಳಲು ಸಂಪರ್ಕಿಸಿರಿ. 9945297677

Domestic Helpers / Housekeeping
ಬೇಕಾಗಿದ್ದಾರೆ ಮನೆ ಕೆಲಸದವರು, ಬೆಂಗಳೂರು ಕ್ಷೇತ್ರ, ವೇತನ 1218 ಸಾವಿರ ಭೋಜನ,ವಸತಿ ಉಚಿತ, 12/24 ಘಂಟೆಯ ಕೆಲಸ ಅಡುಗೆ/ಸ್ವಚ್ಛಗೊಳಿಸುವ ಕೆಲಸ, ಕರೆಮಾಡಿ 8976068574

General
ಉದ್ಯೋಗಾವಕಾಶ
ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ CPC ಪುಸ್ತಕಗಳನ್ನು ಪ್ರೌಢಶಾಲೆ, ಪಿಯುಸಿ ಮತ್ತು ಪದವಿಪೂರ್ವ ಕಾಲೇಜುಗಳಲ್ಲಿ ಹೊಸ NEP Books ಗಳನ್ನು ಮಾರಾಟ ಮಾಡಲು ರಾಜ್ಯಾದ್ಯಂತ ಏಜೆಂಟರ್‌ಗಳು ಬೇಕಾಗಿದ್ದಾರೆ. ಕಡಿಮೆ ಬಂಡವಾಳ ಹೆಚ್ಚು ಆದಾಯ. ಕೂಡಲೇ ಸಂಪರ್ಕಿಸಿ.
ಎ.ಆರ್. ಸ್ವಾಮಿ
+91 98440 99258
+91 63637 47668
cpcbooksindia@gmail.com

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ/ ಆಫೀಸ್ ಕೆಲಸಗಳಿಗೆ ಯುವಕ/ಯುವತಿಯರು ಬೇಕಾಗಿದ್ದಾರೆ (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ Salary+OT 16,800-45000/-.9902839010, 9980295449

Multiple Vacancy
ACCOUNTS/ HR/ IT Executives candidates with 1Yr experience or fresher also apply. Pls send your resume bk@compane.app

ವ್ಯಾಪಾರ
Business Offers
Finance
APERIO FUNDS get from 15CR TO 150CR, Interest @3-6%, Against Viable Projects, LAP, Business, Binding Properties, Institutions, Industries, Sickunits & Takeover, Transparent Process, Solicit Enquiry. Contact 7200418844 Mail: aperiofunds@gmail.com

ಭವಿಷ್ಯ
Astrology
★॥ಸ್ತ್ರೀವಶೀಕರಣ ಸ್ಪೆಷಲಿಸ್ಟ್॥★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದುನಿಜ ನಂಬಿ ಕರೆಮಾಡಿ. ಪಂಡಿತ್.ಜೈದೇವಭಟ್. 9901724082

ಸಾಯಿಅಂಜನ್ ಜ್ಯೋತಿಷ್ಯರು ಸ್ತ್ರೀ-ಪುರುಷ ವಶೀಕರಣ ಸ್ಪೆಷಲಿಸ್ಟ್ ನಿಮ್ಮ ಸಮಸ್ಯೆಗಳು ಏನೇಇರಲಿ 11 ಗಂಟೆಯಲ್ಲಿ ಪರಿಹಾರ ಶತಸಿದ್ಧ.ಪರಿಹಾರ ಆಗದಿದ್ದಲ್ಲಿ ನಿಮ್ಮ ಹಣ ವಾಪಸ್. 9535852216

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

EDUCATION CORNER
ಸ್ಪರ್ಧಾ ಮಿತ್ರ ACADEMY
PSI/ FDA / SDA
Paper-1 & Paper-2
IAS / KAS / IBPS / BANK-PO
ADMISSION OPEN
Online & Offline Classes
Near Attiguppe Metro Station, Service Road, Vijayanagar, Bengaluru - 40.
9535111188 / 9535111199

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

ವಶೀಕರಣ ಸ್ಪೆಷಲಿಸ್ಟ್: ಸ್ತ್ರೀಪುರುಷ ವಶೀಕರಣ, ಲೈಂಗಿಕ ವಶೀಕರಣ, ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು ಶೀಘ್ರದಲ್ಲಿ ಪರಿಹಾರ. ಸ್ತ್ರೀಯರಿಗೆ ಉಚಿತ ಪರಿಹಾರ. 9448687421

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ವೈಯಕ್ತಿಕ
Change of Name
ಸುಧಾಮಣಿ ಆದ ನಾನು ಹಿಂದೂ ಧರ್ಮದಿಂದ ಇಸ್ಲಾಂ ಧರ್ಮಕ್ಕೆ ಪರಿವರ್ತನೆಯಾಗಿ ನನ್ನ ಹೆಸರನ್ನು ಆಫ್ರೀನ್ ತಾಜ್ ಎಂದು ನೋಟರಿ ಬಿ.ಕೆ.ಆರ್. ಕೃಷ್ಣಮೂರ್ತಿಯವರ ಸಮ್ಮುಖದಲ್ಲಿ ದಿನಾಂಕ: 24-08-2001ರ ಅಫಿಡವಿಟ್ ಮೂಲಕ ಬದಲಾಯಿಸಿಕೊಂಡಿದ್ದೇನೆ.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರವಾಸ
Travel
15-11-2021, 7 ದಿನಗಳ ತಮಿಳುನಾಡು, 10-11-2021, 6 ದಿನಗಳ 27 ಸ್ಥಳಗಳ ದಕ್ಷಿಣಕನ್ನಡ ಪ್ರವಾಸ. 28-12-2021, 4ದಿನಗಳ ಗೋವಾ ದುಧ್‌ಸಾಗರ್. 15-12-2021, 7ದಿನಗಳ ಅಸ್ಸಾಂ ಗುವಾಹಟಿ ಕಝಿರಂಗ್ 18-12-2021, 12 ದಿನಗಳ ದೆಹಲಿ,ಮನಾಲಿ, ವೈಷ್ಣೋದೇವಿ. 15-12-2021, 11 ದಿನಗಳು ಸಂಪೂರ್ಣ ಮಧ್ಯಪ್ರದೇಶ. 18-12-2021. 12 ದಿನಗಳ ಸಂಪೂರ್ಣ ರಾಜಸ್ಥಾನ್. ಶ್ರೀಮಲ್ಲಿಕಾರ್ಜುನ ಟ್ರಾವೆಲ್ಸ್, ಬೆಂಗಳೂರು. 9342848791, 9880847001

30.11.2021: 12ದಿವಸಗಳ ಸುಸಜ್ಜಿತ_ಊಟ,ರೂಂ, ವಸತಿಯೊಂದಿಗೆ ಕಾಶಿ,ವೈಷ್ಣವಿದೇವಿ, ಅಮೃತಸರ,ವಾಘಗಡಿ, ಅಲಹಾಬಾದ್, ಹರಿದ್ವಾರ,ಚಂಡಿಗಡ, ಆಗ್ರಾ,ಅಯೋಧ್ಯೆ,ದೆಹಲಿ ಪ್ಯಾಕೇಜ್ ಪ್ರವಾಸ,ವಿಮಾನದರ ಸೇರಿ ರೂ.29500/. "ಜಿ.ಆರ್.ಟ್ರಾವೆಲ್ಸ್". 7204667712

Pilgrimage Tours
ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 18/11/21 ರಾಮೇಶ್ವರಂ, ಶ್ರೀರಂಗಂ, ಕನ್ಯಾಕುಮಾರಿ, ಮಧುರೈ, ನವಗ್ರಹ. 18/11/21 ಶಿರಡಿ ಪ್ರವಾಸ ಪಂಡರಾಪುರ, ಎಲ್ಲೋರ, ಗೃಷ್ಣೇಶ್ವರ. 9964527782

ಸಂಕ್ಷಿಪ್ತ ಸುದ್ದಿ

ನವೆಂಬರ್‌ನಲ್ಲೂ ಕಾಡಲಿದೆ ಚಿಪ್ ಕೊರತೆ: ಮಾರುತಿ

ನವದೆಹಲಿ (ಪಿಟಿಐ): ಸೆಮಿಕಂಡಕ್ಟರ್ ಕೊರತೆಯಿಂದಾಗಿ ನವೆಂಬರ್‌ನಲ್ಲಿಯೂ ವಾಹನ ತಯಾರಿಕೆ ಮೇಲೆ ಪರಿಣಾಮ ಉಂಟಾಗಲಿದೆ ಎಂದು ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಶನಿವಾರ ಹೇಳಿದೆ.

ಸೆಮಿಕಂಡಕ್ಟರ್ ಕೊರತೆಯಿಂದಾಗಿ ಎಲೆಕ್ಟ್ರಾನಿಕ್ ಬಿಡಿಭಾಗಗಳ ಪೂರೈಕೆ ಮೇಲೆ ಪರಿಣಾಮ ಉಂಟಾಗಿದೆ. ಸದ್ಯದ ಪರಿಸ್ಥಿತಿಯನ್ನು ಗಮನಿಸಿದರೆ, ಹರಿಯಾಣ ಮತ್ತು ಗುಜರಾತ್‌ನಲ್ಲಿ ಇರುವ ಘಟಕಗಳಲ್ಲಿನ ಒಟ್ಟಾರೆ ಸಾಮರ್ಥ್ಯದ ಶೇ 85ರಷ್ಟು ಇರುವ ಅಂದಾಜು ಮಾಡಲಾಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಪೆಟ್ರೋಲ್, ಡೀಸೆಲ್ ದರ ಹೆಚ್ಚಳ

ಭೋಪಾಲ್ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಾದ್ಯಂತ ಶನಿವಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. ಬೆಂಗಳೂರಿನಲ್ಲಿ ಶನಿವಾರ ಪೆಟ್ರೋಲ್ ದರ ಲೀಟರಿಗೆ 36 ಪೈಸೆ ಹೆಚ್ಚಾಗಿ ₹112.75ಕ್ಕೆ ಮತ್ತು ಡೀಸೆಲ್ ದರ ಲೀಟರಿಗೆ 37 ಪೈಸೆ ಹೆಚ್ಚಾಗಿ ₹ 103.68ಕ್ಕೆ ಏರಿಕೆ ಆಗಿದೆ.

ಮಧ್ಯಪ್ರದೇಶದ ಗಡಿ ಜಿಲ್ಲೆಗಳಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 121ರ ಗಡಿ ದಾಡಿದ್ದರೆ, ಡೀಸೆಲ್ ದರ ₹ 110.29ರಷ್ಟಕ್ಕೆ ತಲುಪಿದೆ. ಮಧ್ಯ ಪ್ರದೇಶದ ಅನುಪ್ಪುರ್‌ನಲ್ಲಿ ಪೆಟ್ರೋಲ್ ದರ ₹ 121.23ಕ್ಕೆ ಏರಿಕೆ ಆಗಿದ್ದರೆ, ಬಾಲಘಾಟ್‌ನಲ್ಲಿ ಪೆಟ್ರೋಲ್ ದರ ₹ 120.06ಕ್ಕೆ ತಲುಪಿದೆ.

ಐಒಸಿ ಲಾಭ ₹ 6,360 ಕೋಟಿ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 6,360 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 6,227 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಅಲ್ಪ ಏರಿಕೆ ಕಂಡುಬಂದಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಈ ಅವಧಿಯಲ್ಲಿ ವರಮಾನವು ಶೇ 46ರಷ್ಟು ಹೆಚ್ಚಾಗಿ ₹ 1.69 ಲಕ್ಷ ಕೋಟಿಗಳಿಗೆ ತಲಿಪಿದೆ ಎಂದು ಅದು ಹೇಳಿದೆ. ಇಂಧನ ಮಾರಾಟವು 1.77 ಕೋಟಿ ಟನ್‌ಗಳಿಂದ ₹ 1.9 ಕೋಟಿ ಟನ್‌ಗಳಿಗೆ ಏರಿಕೆ ಆಗಿದೆ.

ಇಟಲಿಯಲ್ಲಿ ವಿಶ್ವ ನಾಯಕರ ಶೃಂಗಸಭೆ: ಮೋದಿ ಭಾಗಿ

ಬಡ ರಾಷ್ಟ್ರಗಳಿಗೆ ಹೆಚ್ಚು ಲಸಿಕೆ: ಜಿ–20 ಕರೆ

ರೋಮ್ (ಎಪಿ): ಜಗತ್ತಿನ ಬಡ ರಾಷ್ಟ್ರಗಳು, ಕೋವಿಡ್ ಲಸಿಕೆ ಪಡೆದುಕೊಳ್ಳುವ ವೇಗವನ್ನು ವೃದ್ಧಿಸಬೇಕಿದೆ ಎಂದು ಇಟಲಿ ಪ್ರಧಾನಿ ಮಾರಿಯೋ ಡ್ರಾಗ್ಹಿ ಕರೆ ನೀಡಿದ್ದಾರೆ.

ಶನಿವಾರ ಇಲ್ಲಿ ಜಿ–20 ಶೃಂಗಸಭೆ ಉದ್ದೇಶಿಸಿ ಮಾತನಾಡಿದ ಅವರು, ಜಾಗತಿಕ ಲಸಿಕೆ ಅಂತರವನ್ನು ಪ್ರಸ್ತಾಪಿಸಿದರು. ಜಗತ್ತಿನ ಬಡ ದೇಶಗಳ ಶೇ 3ರಷ್ಟು ಜನರು ಮಾತ್ರ ಲಸಿಕೆ ಹಾಕಿಸಿಕೊಂಡಿದ್ದಾರೆ. ಸಿರಿವಂತ ದೇಶಗಳ ಶೇ 70ರಷ್ಟು ಜನರು ಕನಿಷ್ಠ ಒಂದು ಡೋಸ್ ಪಡೆದಿದ್ದಾರೆ ಎಂದು ಅವರು ವಿವರಿಸಿದರು.

ಕಡಿಮೆ ಆದಾಯದ ದೇಶಗಳಿಗೆ ಹೆಚ್ಚಿನ ಸಾಮೂಹಿಕ ಸಹಾಯಕ್ಕಾಗಿ ಕರೆ ನೀಡಲಾಯಿತು. ಹವಾಮಾನ ಬದಲಾವಣೆ, ಲಸಿಕೆ, ಆರ್ಥಿಕತೆ ಚೇತರಿಕೆ, ಅಂತರರಾಷ್ಟ್ರೀಯ ತೆರಿಗೆ ವಿಷಯಗಳು ಕೋವಿಡ್ ನಂತರ ನಡೆದ ವಿಶ್ವ ನಾಯಕರ ಮೊದಲ ಮುಖತಃ ಶೃಂಗಸಭೆಯಲ್ಲಿ ಚರ್ಚೆಗೆ ಬಂದವು.

ವಿಶ್ವ ನಾಯಕರ ಭೇಟಿ: ಜಿ–20 ಶೃಂಗಸಭೆಯ ಹಿನ್ನೆಲೆಯಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಅಮೆರಿಕ ಅಧ್ಯಕ್ಷ ಜೊ ಬೈಡನ್ ಸೇರಿದಂತೆ ವಿಶ್ವ ನಾಯಕರೊಂದಿಗೆ ಸಂವಾದ ನಡೆಸಿದರು.

ಪ್ರಧಾನಿ ಮೋದಿ ಅವರು ಬೈಡನ್, ಫ್ರಾನ್ಸ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್, ಬ್ರಿಟನ್ ಪ್ರಧಾನಿ ಬೋರಿಸ್ ಜಾನ್ಸನ್ ಮತ್ತು ಕೆನಡಾದ ಪ್ರಧಾನಿ ಜಸ್ಟಿನ್ ಟ್ರುಡೊ ಅವರನ್ನು ಭೇಟಿಯಾಗುತ್ತಿರುವ ಚಿತ್ರಗಳನ್ನು ಪ್ರಧಾನಿ ಕಚೇರಿ ಟ್ವೀಟ್ ಮಾಡಿದೆ. ಬೈಡನ್ ಅವರನ್ನು ಆಲಂಗಿಸಿಕೊಂಡ ಮೋದಿ, ಅವರೊಂದಿಗೆ ಸಂಕ್ಷಿಪ್ತ ಮಾತುಕತೆ ನಡೆಸಿದರು.ಮೋದಿಅವರನ್ನುಬೈಡನ್‌ಸೆ.24 ರಂದು ಶ್ವೇತಭವನಕ್ಕೆ ಆಹ್ವಾನಿಸಿದ್ದರು.

ಜರ್ಮನಿ ಚಾನ್ಸಲರ್ ಅಂಗೆಲಾ ಮರ್ಕೆಲ್, ದಕ್ಷಿಣ ಕೊರಿಯಾದ ಅಧ್ಯಕ್ಷ ಮೂನ್ ಜೇ ಇನ್, ವಿಶ್ವಸಂಸ್ಥೆ ಮಹಾಪ್ರಧಾನ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಮತ್ತು ಸಿಂಗಪುರದ ಪ್ರಧಾನಿ ಲೀ ಸೀನ್ ಲೂಂಗ್ ಸೇರಿದಂತೆ ಇತರ ನಾಯಕರೊಂದಿಗೆ ಪ್ರಧಾನಿ ಮೋದಿ ಸಂವಾದ ನಡೆಸಿದರು.

ಇಂಧನ: ಭಾರತ– ಇಟಲಿ ಸಹಯೋಗ

> ಜಾಗತಿಕ ಕೋವಿಡ್ ವಿರುದ್ಧದ ಹೋರಾಟದ ಭಾಗವಾಗಿ ಭಾರತವು ಮುಂದಿನ ವರ್ಷಾಂತ್ಯಕ್ಕೆ 500 ಕೋಟಿ ಡೋಸ್ ಲಸಿಕೆ ಉತ್ಪಾದಿಸಲಿದೆ
> **ನರೇಂದ್ರ ಮೋದಿ,** ಪ್ರಧಾನಿ

ರೋಮ್/ನವದೆಹಲಿ: ಹಸಿರು ಜಲಜನಕ ಅಭಿವೃದ್ಧಿ, ನವೀಕರಿಸಬಹುದಾದ ಇಂಧನ ಕಾರಿಡಾರ್ ಸ್ಥಾಪನೆ ಮತ್ತು ನೈಸರ್ಗಿಕ ಅನಿಲ ವಲಯದಲ್ಲಿ ಜಂಟಿ ಯೋಜನೆಗಳನ್ನು ಅನ್ವೇಷಿಸಲು ಭಾರತ ಮತ್ತು ಇಟಲಿ ಒಪ್ಪಿಕೊಂಡಿವೆ. ಇಂಧನ ಪರಿವರ್ತನೆ ಕ್ಷೇತ್ರದಲ್ಲಿ ಪಾಲುದಾರಿಕೆಯನ್ನು ಬಲಪಡಿಸಲು, ಭಾರತೀಯ ಮತ್ತು ಇಟಲಿ ಕಂಪನಿಗಳ ಜಂಟಿ ಹೂಡಿಕೆಯನ್ನು ಉತ್ತೇಜಿಸಲು ಉಭಯ ರಾಷ್ಟ್ರಗಳು ಪ್ರಯತ್ನಿಸಿದವು.

ಭಾರತದಲ್ಲಿ ಹಸಿರು ಹೈಡ್ರೋಜನ್ ಮತ್ತು ಸಂಬಂಧಿತ ತಂತ್ರಜ್ಞಾನಗಳ ಅಭಿವೃದ್ಧಿ ಹಾಗೂ 2030ರೊಳಗೆ 450 ಗಿಗಾವಾಟ್ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಭಾರತದಲ್ಲಿ ಬೃಹತ್ ಹಸಿರು ಕಾರಿಡಾರ್ ಯೋಜನೆಗಾಗಿ ಒಟ್ಟಾಗಿ ಕೆಲಸ ಮಾಡಲು ಉಭಯ ದೇಶಗಳು ಒಪ್ಪಂದಕ್ಕೆ ಬಂದಿವೆ.

ನೈಸರ್ಗಿಕ ಅನಿಲ ಕ್ಷೇತ್ರದಲ್ಲಿ ಜಂಟಿ ಯೋಜನೆಗಳನ್ನು ಅಭಿವೃದ್ಧಿಪಡಿಸಲು ಇಟಲಿ ಮತ್ತು ಭಾರತೀಯ ಕಂಪನಿಗಳನ್ನು ಉತ್ತೇಜಿಸಲು ಒಪ್ಪಿಕೊಂಡಿವೆ. ಡಿಕಾರ್ಬೊನೈಸೇಶನ್, ಸ್ಮಾರ್ಟ್ ಸಿಟಿಗಳು ಮತ್ತು ನಗರ ಸಾರ್ವಜನಿಕ ಸಾರಿಗೆಯ ವಿದ್ಯುದ್ದೀಕರಣದಂತಹ ನಿರ್ದಿಷ್ಟ ಕ್ಷೇತ್ರಗಳಲ್ಲಿ ತಾಂತ್ರಿಕ ಆವಿಷ್ಕಾರಗಳನ್ನು ಉತ್ತೇಜಿಸಲು ಉಭಯ ಪ್ರಧಾನಿಗಳು ಒಪ್ಪಿಕೊಂಡಿದ್ದಾರೆ ಎಂದು ಜಂಟಿ ಹೇಳಿಕೆ ತಿಳಿಸಿದೆ.

ಸ್ವಸಹಾಯ ಸಂಘದ ಸದಸ್ಯೆಯರಿಗೆ ನೆರವು

ನವದೆಹಲಿ (ಪಿಟಿಐ): ಸ್ವಸಹಾಯ ಸಂಘಗಳ (ಎಸ್‌ಎಚ್‌ಜಿ) ಸದಸ್ಯರಾಗಿರುವ ಮಹಿಳೆಯರು ವಾರ್ಷಿಕವಾಗಿ ₹ 1 ಲಕ್ಷ ಗಳಿಸಲು ಸಾಧ್ಯವಾಗುವಂತೆ ಮಾಡುವ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರ ಚಾಲನೆ ನೀಡಿದೆ.

ಮಹಿಳಾ ಸ್ವಸಹಾಯ ಗುಂಪುಗಳ ವಿವಿಧ ಮಾದರಿಗಳ ಕಾರ್ಯನಿರ್ವಹಣೆ ಕುರಿತು ನಡೆಸಲಾದ ಅಧ್ಯಯನ ಆಧರಿಸಿ ಈ ನೂತನ ಕಾರ್ಯಕ್ರಮ ಅನುಷ್ಠಾನಕ್ಕೆ ಸಂಬಂಧಿಸಿ ರಾಜ್ಯಗಳಿಗೆ ಸಲಹೆ–ಸೂಚನೆಗಳನ್ನು ನೀಡಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯದ ಪ್ರಕಟಣೆ ತಿಳಿಸಿದೆ.

'ಗ್ರಾಮೀಣ ಭಾಗದ ಸ್ವಸಹಾಯ ಗುಂಪುಗಳ ಸದಸ್ಯರಾಗಿರುವ 2.5 ಕೋಟಿ ಮಹಿಳೆಯರಿಗೆ ಎರಡು ವರ್ಷಗಳ ಅವಧಿಗೆ ಈ ಕಾರ್ಯಕ್ರಮದಡಿ ನೆರವು ನೀಡಲಾಗುವುದು' ಎಂದೂ ತಿಳಿಸಿದೆ.

'ಜೀವನೋಪಾಯಕ್ಕೆ ಅಗತ್ಯವಿರುವ ಚಟುವಟಿಕೆಗಳಿಗೆ ಒತ್ತು ನೀಡಲಾಗುವುದು. ಇಂಥ ಚಟುವಟಿಕೆಗಳನ್ನು ಕೈಗೊಳ್ಳುವವರು ವರ್ಷಕ್ಕೆ ₹ 1 ಲಕ್ಷ ಗಳಿಸುವುದು ಸಾಧ್ಯವಾಗುವಂತೆ ನೆರವು ನೀಡಲಾಗುವುದು' ಎಂದು ತಿಳಿಸಿದೆ.

'ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್' ಯೋಜನೆಯಡಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತಿದೆ. 70 ಲಕ್ಷ ಸ್ವಸಹಾಯ ಗುಂಪುಗಳನ್ನು ಸ್ಥಾಪಿಸಲಾಗಿದ್ದು, 7.7 ಕೋಟಿ ಮಹಿಳೆಯರು ಸದಸ್ಯರಿದ್ದಾರೆ. ಸ್ವಸಹಾಯ ಗುಂಪುಗಳಿಗೆ ನೆರವು ನೀಡುವ ಸಲುವಾಗಿ ವಾರ್ಷಿಕ ₹ 80,000 ಕೋಟಿ ಅನುದಾನ ಒದಗಿಸಲಾಗುವುದು ಎಂದೂ ತಿಳಿಸಿದೆ.

ಪರಮ್ ಬೀರ್ ಸಿಂಗ್‌ಗೆ ಎರಡನೇ ವಾರಂಟ್ ಜಾರಿ

ಮುಂಬೈ (ಪಿಟಿಐ): ಗೋರೆಗಾಂವ್ ಉಪನಗರದಲ್ಲಿ ದಾಖಲಾದ ಸುಲಿಗೆ ಪ್ರಕರಣದಲ್ಲಿ ಮುಂಬೈನ ಮಾಜಿ ಪೊಲೀಸ್ ಆಯುಕ್ತ ಪರಮ್ ಬೀರ್ ಸಿಂಗ್ ವಿರುದ್ಧ ಇಲ್ಲಿನ ಮ್ಯಾಜಿಸ್ಟ್ರೇಟ್ ನ್ಯಾಯಾಲಯವು ಶನಿವಾರ ಜಾಮೀನು ರಹಿತ ವಾರಂಟ್ ಹೊರಡಿಸಿದೆ. ಈ ವಾರ ಜಾರಿಯಾಗಿರುವ ಎರಡನೇ ವಾರಂಟ್ ಇದು.

ಮತ್ತೊಂದು ಸುಲಿಗೆ ಪ್ರಕರಣ ಸಂಬಂಧ ಠಾಣೆಯ ನ್ಯಾಯಾಲಯವು ಮಂಗಳವಾರ ಜಾಮೀನು ರಹಿತ ವಾರಂಟ್ ಹೊರಡಿಸಿತ್ತು. ತನಿಖೆಗೆ ಸಹಕರಿಸುವಂತೆ ನೀಡಿದ್ದ ಸಮನ್ಸ್‌ಗೆ ಸಿಂಗ್ ಪ್ರತಿಕ್ರಿಯಿಸದ ಕಾರಣ ಜಾಮೀನು ರಹಿತ ವಾರಂಟ್ ಹೊರಡಿಸುವಂತೆ ಕೋರಲಾಗಿತ್ತು ನ್ಯಾಯಾಲಯವನ್ನು ಎಂದು ಮುಂಬೈ ಪೊಲೀಸರ ಅಪರಾಧ ವಿಭಾಗ ತಿಳಿಸಿದೆ.

ಭಾರತ–ನ್ಯೂಜಿಲೆಂಡ್ 'ಕ್ವಾರ್ಟರ್‌ಫೈನಲ್' ಪಂದ್ಯ ಇಂದು: ವಿರಾಟ್–ಕೇನ್ ನಾಯಕತ್ವಕ್ಕೆ ಸವಾಲು

'ಮಾಡು ಇಲ್ಲವೇ ಮಡಿ' ಹೋರಾಟ

ದುಬೈ (ಪಿಟಿಐ): ವಿರಾಟ್ ಕೊಹ್ಲಿ ಈಗ ತಮ್ಮ ವೃತ್ತಿ ಜೀವನದ ಅತ್ಯಂತ ಕಠಿಣವಾದ ಸವಾಲಿನ ಎದುರು ನಿಂತಿದ್ದಾರೆ.

ಟ್ವೆಂಟಿ-20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಆತಿಥೇಯ ತಂಡವಾಗಿರುವ ಭಾರತ ತಂಡಕ್ಕೆ ಸೆಮಿಫೈನಲ್ ಪ್ರವೇಶದ ಕನಸು ಜೀವಂತವಾಗಿ ಉಳಿಯಬೇಕಾದರೆ ಭಾನುವಾರ ನ್ಯೂಜಿಲೆಂಡ್ ಎದುರಿನ ಪಂದ್ಯವನ್ನು ಜಯಿಸಲೇಬೇಕು. ಕಿವೀಸ್ ಬಳಗಕ್ಕೂ ಇದು 'ಮಾಡು ಇಲ್ಲವೇ ಮಡಿ' ಪಂದ್ಯವೇ ಆಗಿದೆ. ಸೋತವರಿಗೆ ನಾಲ್ಕರ ಘಟ್ಟದ ಬಾಗಿಲು ಮುಚ್ಚುವ ಸಾಧ್ಯತೆ ಹೆಚ್ಚು.

ಸೂಪರ್ 12ರ ಹಂತದ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ತಂಡದ ಎದುರು ಉಭಯ ತಂಡಗಳೂ ಸೋತಿರುವುದರಿಂದ ಈ ಒತ್ತಡ ಉದ್ಭವಿಸಿದೆ. ಒಂದೊಮ್ಮೆ ಈ ಪಂದ್ಯದಲ್ಲಿ ಸೊತ ತಂಡವು ಮುಂದಿನ ಮೂರು ಪಂದ್ಯಗಳಲ್ಲಿ (ಸ್ಕಾಟ್ಲೆಂಡ್, ನಮಿಬಿಯಾ ಮತ್ತು ಆಫ್ಗಾನಿಸ್ತಾನದ ಎದುರು) ಜಯಿಸಬೇಕು. ಅದೇ ರೀತಿ ಈ ಪಂದ್ಯದಲ್ಲಿ ಗೆದ್ದ ತಂಡವು ಮುಂದಿನ ಮೂರು ಹಣಾಹಣಿಗಳಲ್ಲಿ ಒಂದರಲ್ಲಿ ಸೋಲಬೇಕು. ಆದರೆ ಕ್ರಿಕೆಟ್ ಲೋಕದಲ್ಲಿ ಈಗ ತಮ್ಮ ಅಸ್ತಿತ್ವ ರೂಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ತಂಡಗಳ ಎದುರು ಭಾರತ ಮತ್ತು ನ್ಯೂಜಿಲೆಂಡ್ ತಂಡಗಳು ಗೆಲ್ಲುವ ಸಾಧ್ಯತೆಯೇ ಅತಿ ಹೆಚ್ಚು. ಆದ್ದರಿಂದ ದುಬೈ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಪಂದ್ಯವು ಕುತೂಹಲದ ಗಣಿಯಾಗಿದೆ.

ಆದರೆ ಐಸಿಸಿಯ ವಿಶ್ವಕಪ್ ಟೂರ್ನಿಗಳಲ್ಲಿ ಭಾರತ ತಂಡವು ಮೇಲುಗೈ ಸಾಧಿಸಿಲ್ಲ. 2016ರಲ್ಲಿ ಮಹೇಂದ್ರಸಿಂಗ್ ಧೋನಿ ಬಳಗದೆದುರೂ ಕಿವೀಸ್ ಜಯಿಸಿತ್ತು. 2019ರ ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ಕೇನ್ ವಿಲಿಯಮ್ಸನ್ ಬಳಗವು ಕೊಹ್ಲಿ ಪಡೆಯನ್ನು ಸೋಲಿಸಿತ್ತು. ಕೆಲವು ತಿಂಗಳುಗಳ ಹಿಂದೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿಯೂ ಕಿವೀಸ್ ಗೆದ್ದಿತ್ತು. ಅದರಿಂದಾಗಿ ಕೊಹ್ಲಿ ಎದುರು ಈ ಸೋಲಿನ ಸರಪಣಿ ತುಂಡರಿಸುವ ಸವಾಲು ಕೂಡ ಇದೆ. ಅದಕ್ಕಾಗಿ ಕೆಲವು ಬದಲಾವಣೆಗಳೊಂದಿಗೆ ಕಣಕ್ಕಿಳಿಯುವ ಸಾಧ್ಯತೆ ಇದೆ.

ಪಾಕ್ ಎದುರಿನ ಪಂದ್ಯದಲ್ಲಿ ವಿರಾಟ್ ಅರ್ಧಶತಕ ಹೊಡೆದಿದ್ದರು. ಆದರೆ, ಆರಂಭಿಕ ಜೋಡಿ ರೋಹಿತ್ ಮತ್ತು ರಾಹುಲ್ ವೈಫಲ್ಯ ಅನುಭವಿಸಿದ್ದರು. ಆದರೂ ಅವರಿಬ್ಬರಿಗೆ ಮತ್ತೊಂದು ಅವಕಾಶ ಸಿಗಬಹುದು. ಆದರೆ, ಮಧ್ಯಮ ಕ್ರಮಾಂಕದಲ್ಲಿ ಮತ್ತೊಬ್ಬ ಆಲ್‌ರೌಂಡರ್‌ಗೆ ಸ್ಥಾನ ಕೊಡಬಹುದು.

ಲಯ ಕಂಡುಕೊಳ್ಳಲು ಪರದಾಡುತ್ತಿರುವ ಹಾರ್ದಿಕ್ ಪಾಂಡ್ಯ ಅವರನ್ನು ಕೈಬಿಟ್ಟು ಶಾರ್ದೂಲ್ ಠಾಕೂರ್ ಅಥವಾ ಅನುಭವಿ ಆರ್. ಅಶ್ವಿನ್ ಅವರನ್ನು ಕಣಕ್ಕಿಳಿಸಬಹುದು. ಆರನೇ ಬೌಲರ್ ಅವಶ್ಯಕತೆಯೂ ಇರುವುದರಿಂದ ಈ ಸಾಧ್ಯತೆ ಹೆಚ್ಚಿದೆ. ಪಾಕ್ ಎದುರು ಆಡಿದ ಬೌಲರ್‌ಗಳು ಒಂದೇ ಒಂದು ವಿಕೆಟ್ ಕೂಡ ಗಳಿಸಿರಲಿಲ್ಲ.

ಕೇನ್ ಬಳಗವೂ ಒತ್ತಡದಲ್ಲಿದೆ. ಪಾಕ್ ಎದುರು ಬ್ಯಾಟಿಂಗ್ ಪಡೆಯು ತಡಬಡಾಯಿಸಿತ್ತು. ಆದ್ದರಿಂದ ಭಾರತದ ಬೌಲಿಂಗ್ ಎದುರಿಸಲು ಇನ್ನಷ್ಟು ಸಿದ್ಧತೆ ಮಾಡಿಕೊಂಡು ಕಣಕ್ಕಿಳಿಯುವ ಸಾಧ್ಯತೆ ಇದೆ. ಟಿಮ್ ಸೌಥಿ, ಟ್ರೆಂಟ್ ಬೌಲ್ಟ್ ಅವರ ಅನುಭವವೂ ಪಾಕ್ ಎದುರು ಹೆಚ್ಚು ಪ್ರಯೋಜನವಾಗಿರಲಿಲ್ಲ.

ಕೇನ್ ವಿಲಿಯಮ್ಸನ್ — ವಿರಾಟ್ ಕೊಹ್ಲಿ

ಐಸಿಸಿ ವಿಶ್ವಕಪ್ ಟೂರ್ನಿಗಳಲ್ಲಿ ಬಲಾಬಲ

2016	ಟಿ20 ವಿಶ್ವಕಪ್ ಟೂರ್ನಿಯಲ್ಲಿ ನ್ಯೂಜಿಲೆಂಡ್‌ಗೆ 47 ರನ್ ಜಯ
2019	ಏಕದಿನ ವಿಶ್ವಕಪ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್‌ಗೆ 18 ರನ್ ಜಯ
2021	ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್‌ಗೆ 8 ವಿಕೆಟ್ ಜಯ

ತಂಡಗಳು

ಭಾರತ: ವಿರಾಟ್ ಕೊಹ್ಲಿ (ನಾಯಕ), ರೋಹಿತ್ ಶರ್ಮಾ, ಕೆ.ಎಲ್. ರಾಹುಲ್, ಸೂರ್ಯಕುಮಾರ್ ಯಾದವ್, ರಿಷಭ್ ಪಂತ್ (ವಿಕೆಟ್‌ಕೀಪರ್), ಹಾರ್ದಿಕ್ ಪಾಂಡ್ಯ, ರವೀಂದ್ರ ಜಡೇಜ, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ, ಜಸ್‌ಪ್ರೀತ್ ಬೂಮ್ರಾ, ವರುಣ್ ಚಕ್ರವರ್ತಿ, ಶಾರ್ದೂಲ್ ಠಾಕೂರ್, ಆರ್. ಅಶ್ವಿನ್, ಇಶಾನ್ ಕಿಶನ್, ರಾಹುಲ್ ಚಾಹರ್.

ನ್ಯೂಜಿಲೆಂಡ್: ಕೇನ್ ವಿಲಿಯಮ್ಸನ್ (ನಾಯಕ), ಮಾರ್ಟಿನ್ ಗಪ್ಟಿಲ್, ಡೆರಿಲ್ ಮಿಚೆಲ್, ಡೆವೊನ್ ಕಾನ್ವೆ, ಟಿಮ್ ಸೀಫರ್ಟ್ (ವಿಕೆಟ್‌ಕೀಪರ್), ಜೇಮ್ಸ್ ನಿಶಾಮ್, ಗ್ಲೆನ್ ಫಿಲಿಪ್ಸ್, ಮಿಚೆಲ್ ಸ್ಯಾಂಟನರ್, ಈಶ ಸೋಧಿ, ಟ್ರೆಂಟ್ ಬೌಲ್ಟ್, ಟಿಮ್ ಸೌಥಿ, ಮಾರ್ಕ್ ಚಾಪಮನ್, ಆ್ಯಡಂ ಮಿಲ್ನೆ, ಕೈಲ್ ಜೆಮಿಸನ್, ಟಾಡ್ ಎಸಲ್.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಟಿ20 ಕ್ರಿಕೆಟ್‌ನಲ್ಲಿ ಬಲಾಬಲ

ಪಂದ್ಯ	16	ಟೈ
ತಂಡ	ಜಯ	2
ಭಾರತ	6	
ನ್ಯೂಜಿಲೆಂಡ್	8	

ಹೆಚ್ಚು ರನ್ ಗಳಿಸಿದವರು

ಆಟಗಾರ	ಸ್ಕೋರ್
ಭಾರತ	
ರೋಹಿತ್ ಶರ್ಮಾ	80
ಶಿಖರ್ ಧವನ್	80
ವಿರಾಟ್ ಕೊಹ್ಲಿ	70
ನ್ಯೂಜಿಲೆಂಡ್	
ಕಾಲಿನ್ ಮನ್ರೊ	109*
ಕೇನ್ ವಿಲಿಯಮ್ಸನ್	95
ಬ್ರೆಂಡನ್ ಮೆಕ್ಲಮ್	91

ಇಂಗ್ಲೆಂಡ್ ಜಯಭೇರಿ

ಆಸ್ಟ್ರೇಲಿಯಾ ಎದುರಿನ ಪಂದ್ಯ: ಮಿಂಚಿದ ಜೋರ್ಡಾನ್

ದುಬೈ (ಎಎಫ್‌ಪಿ): ಆಸ್ಟ್ರೇಲಿಯಾವನ್ನು ಎಂಟು ವಿಕೆಟ್‌ಗಳಿಂದ ಮಣಿಸಿದ ಇಂಗ್ಲೆಂಡ್ ತಂಡ ಸೂಪರ್ 12 ಹಂತದಲ್ಲಿ ಗೆಲುವಿನ ಹ್ಯಾಟ್ರಿಕ್ ಸಾಧಿಸಿತು. ಶನಿವಾರ ನಡೆದ ಪಂದ್ಯದಲ್ಲಿ 126 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಇಂಗ್ಲೆಂಡ್ 11.4 ಓವರ್‌ಗಳಲ್ಲಿ ದಡ ಸೇರಿತು.

ಜೇಸನ್ ರಾಯ್ ಮತ್ತು ಜೋಸ್ ಬಟ್ಲರ್ (ಔಟಾಗದೆ 71; 32 ಎಸೆತ, 5 ಬೌಂಡರಿ, 5 ಸಿಕ್ಸರ್) ಅವರ 66 ರನ್‌ಗಳ ಅಮೋಘ ಮೊದಲ ವಿಕೆಟ್ ಜೊತೆಯಾಟ ತಂಡದ ಸುಲಭ ಜಯಕ್ಕೆ ಕಾರಣವಾಯಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿದ ಏಯಾನ್ ಮಾರ್ಗನ್ ಬಳಗದ ವೇಗಿಗಳಾದ ಕ್ರಿಸ್ ವೋಕ್ಸ್ ಮತ್ತು ಕ್ರಿಸ್ ಜೋರ್ಡಾನ್ ದಾಳಿಗೆ ನಲುಗಿದ ಆಸ್ಟ್ರೇಲಿಯಾ ಸಾಧಾರಣ ಮೊತ್ತಕ್ಕೆ ಆಲೌಟಾಯಿತು. ನಾಯಕ ಆ್ಯರನ್ ಫಿಂಚ್ ಅವರ ಏಕಾಂಗಿ ಹೋರಾಟದಿಂದಾಗಿ ತಂಡದ ಮೊತ್ತ ಮೂರಂಕಿ ಗಡಿ ದಾಟಿತ್ತು. ಆದರೆ ಡೇವಿಡ್ ವಾರ್ನರ್, ಸ್ಟೀವ್ ಸ್ಮಿತ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಒಳಗೊಂಡಂತೆ ಪ್ರಮುಖರು ಎರಡಂಕಿ ಕೂಡ ದಾಟಲಾಗದೆ ಮರಳಿದರು.

ಕ್ರಿಸ್ ಜೋರ್ಡಾನ್ –ಎಎಫ್‌ಪಿ ಚಿತ್ರ

ಮ್ಯಾಥ್ಯೂ ವೇಡ್ ಜೊತೆ 30 ರನ್ ಸೇರಿಸಿದ ಆ್ಯರನ್ ಫಿಂಚ್ ಅವರು ಆ್ಯಷ್ಟನ್ ಅಗರ್ ಜೊತೆ 47 ರನ್‌ಗಳ ಜೊತೆಯಾಟ ಆಡಿದರು. ತಂಡದ ಇನಿಂಗ್ಸ್‌ನಲ್ಲಿ ಒಟ್ಟು ಐದು ಸಿಕ್ಸರ್ ಮತ್ತು ಏಳು ಬೌಂಡರಿಗಳು ಮಾತ್ರ ಇದ್ದವು.

ಸಂಕ್ಷಿಪ್ತ ಸ್ಕೋರ್: ಆಸ್ಟ್ರೇಲಿಯಾ: 20 ಓವರ್‌ಗಳಲ್ಲಿ 125 (ಆ್ಯರನ್ ಫಿಂಚ್ 44, ಮ್ಯಾಥ್ಯೂ ವೇಡ್ 18, ಆ್ಯಷ್ಟನ್ ಅಗರ್ 20, ಪ್ಯಾಟ್ ಕಮಿನ್ಸ್ 12, ಮಿಷೆಲ್ ಸ್ಟಾರ್ಕ್ 13; ಆದಿಲ್ ರಶೀದ್ 19ಕ್ಕೆ1, ಕ್ರಿಸ್ ವೋಕ್ಸ್ 23ಕ್ಕೆ2, ಕ್ರಿಸ್ ಜೋರ್ಡಾನ್ 17ಕ್ಕೆ3, ಲಿಯಾಮ್ ಲಿವಿಂಗ್‌ಸ್ಟೋನ್ 15ಕ್ಕೆ1, ಟೈಮಲ್ ಮಿಲ್ಸ್ 45ಕ್ಕೆ2); ಇಂಗ್ಲೆಂಡ್: 11.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 126 (ಜೇಸನ್ ರಾಯ್ 22, ಜೋಸ್ ಬಟ್ಲರ್ ಔಟಾಗದೆ 71, ಜಾನಿ ಬೇಸ್ಟೊ ಔಟಾಗದೆ 16; ಆ್ಯಷ್ಟನ್ ಅಗರ್ 15ಕ್ಕೆ1, ಆ್ಯಡಂ ಜಂಪಾ 37ಕ್ಕೆ1). **ಫಲಿತಾಂಶ:** ಇಂಗ್ಲೆಂಡ್‌ಗೆ 8 ವಿಕೆಟ್‌ಗಳ ಜಯ.

ವೇಗಿ ಮೊಹಮ್ಮದ್ ಶಮಿಗೆ ವಿರಾಟ್ ಕೊಹ್ಲಿ ಬೆಂಬಲ

'ಬೆನ್ನುಮೂಳೆ ಇಲ್ಲದ ಟೀಕಾಕಾರರು'

ದುಬೈ(ಪಿಟಿಐ): ಪಾಕಿಸ್ತಾನ ತಂಡದ ವಿರುದ್ಧ ಸೋತ ಬಳಿಕ ಭಾರತದ ಬೌಲರ್ ಮೊಹಮ್ಮದ್ ಶಮಿ ವಿರುದ್ಧ ಧರ್ಮವನ್ನು ಗುರಿಯಾಗಿಸಿ ಟೀಕೆ ಮಾಡಿರುವವರನ್ನು ನಾಯಕ ವಿರಾಟ್ ಕೊಹ್ಲಿ ತೀವ್ರವಾಗಿ ಖಂಡಿಸಿದ್ದಾರೆ.

'ಧರ್ಮದ ಆಧಾರದಲ್ಲಿ ಯಾರನ್ನಾದರೂ ಆಕ್ರಮಣ ಮಾಡುವುದು ಮಾನವ ಮಾಡಬಹುದಾದ ಅತ್ಯಂತ ಕೀಳುಮಟ್ಟದ ಕೆಲಸವಾಗಿದೆ. ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡುವವರು ಬೆನ್ನುಮೂಳೆ ಇಲ್ಲದವರು. ನಿಜ ಜೀವನದಲ್ಲಿ ಜನರನ್ನು ಎದುರಿಸುವ ಧೈರ್ಯ ಅವರಿಗಿಲ್ಲ' ಎಂದು ಸಿಡಿಮಿಡಿಗೊಂಡಿದ್ದಾರೆ.

'ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯವನ್ನು ಮಂಡಿಸುವ ಹಕ್ಕು ಇದೆ. ಆದರೆ ಧರ್ಮ ತಾರತಮ್ಯ ಮಾಡುವ ಕುರಿತು ನಾವು ಎಂದಿಗೂ ಯೋಚಿಸಿಲ್ಲ. ಅದು ಅತ್ಯಂತ ಪವಿತ್ರ ಹಾಗೂ ವೈಯಕ್ತಿಕ ವಿಷಯವಾಗಿದೆ. ಹಾಗಾಗಿ ಅದನ್ನು ಅಲ್ಲಿಗೆ ಬಿಟ್ಟುಬಿಡಬೇಕು' ಎಂದು ಹೇಳಿದರು.

'ಕಳೆದ ಕೆಲವು ವರ್ಷಗಳಲ್ಲಿ ಮೊಹಮ್ಮದ್ ಶಮಿ ನಮ್ಮ ಪ್ರಮುಖ ಬೌಲರ್ ಆಗಿದ್ದು, ಟೆಸ್ಟ್ ಕ್ರಿಕೆಟ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಜೊತೆಗೆ ಪರಿಣಾಮಕಾರಿ ಎನಿಸಿಕೊಂಡಿದ್ದಾರೆ. ಆದರೆ ಕೆಲವರು ಇದನ್ನು ಕಡೆಗಣಿಸಲು ಬಯಸಿದರೆ ಅಂತವರಿಗಾಗಿ ನನ್ನ ಜೀವನದ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಲು ಬಯಸುವುದಿಲ್ಲ' ಎಂದು ಹೇಳಿದರು. 'ತಂಡದ ಎಲ್ಲ ಆಟಗಾರರು ಶಮಿಯೊಂದಿಗಿದ್ದಾರೆ. ಯಾವುದೇ ಶಕ್ತಿಗೂ ನಮ್ಮ ಸಹೋದರತ್ವ, ಗೆಳೆತನವನ್ನು ಮುರಿಯಲು ಸಾಧ್ಯವಿಲ್ಲ. ತಂಡದ ನಾಯಕನಾಗಿ ಇಂತಹ ವಿಷಯಗಳು ನುಸುಳದಂತಹ ವಾತಾವರಣವನ್ನು ನಿರ್ಮಿಸಲಾಗಿದೆ' ಎಂದಿದ್ದಾರೆ.

ವಿರಾಟ್ ಕೊಹ್ಲಿ– ಮೊಹಮ್ಮದ್ ಶಮಿ

ನೆನಪಿನ ಸುರುಳಿ ಬಿಚ್ಚಿಟ್ಟ ಕರ್ನಾಟಕದ ಜಿ.ಆರ್.ವಿಶ್ವನಾಥ್

ಉಮ್ರಿಗರ್, ಮಂತ್ರಿ ಭೇಟಿಯಾದ ಆ ದಿನ..

ಮುಂಬೈ (ಪಿಟಿಐ): 'ಯಾರೊಂದಿಗೆ ಮಾತನಾಡಬೇಕು ಎಂದು ಕನಸು ಕಂಡಿದ್ದೆನೋ ಅವರು ಅಂದು ಸುಲಭವಾಗಿ ನನಗೆ ಸಿಕ್ಕಿದರು. ಆಗ ಇಬ್ಬರೂ ನೀಡಿದ ಸಲಹೆ ವೃತ್ತಿಜೀವನದಲ್ಲಿ ನನಗೆ ತುಂಬ ಸಹಕಾರಿಯಾಯಿತು...'

ತಮ್ಮ ಅಮೋಘ ಸ್ಕ್ವೇರ್ ಕಟ್‌ಗಳಿಗೆ ಹೆಸರುವಾಸಿಯಾಗಿರುವ, ಭಾರತದ ಪರ 91 ಟೆಸ್ಟ್ ಪಂದ್ಯಗಳನ್ನು ಆಡಿರುವ ಕರ್ನಾಟಕದ ಜಿ.ಆರ್.ವಿಶ್ವನಾಥ್ (ವಿಶಿ) ಶನಿವಾರ ಆಡಿದ ಮಾತು ಇದು.

ಇಲ್ಲಿನ ಎಂಸಿಎ–ಬಿಕೆಸಿ ಅಂಗಣದಲ್ಲಿ ಮಾಧವ ಮಂತ್ರಿ ಸ್ಮಾರಕ ಏಕದಿನ ಕ್ರಿಕೆಟ್ ಲೀಗ್ ಉದ್ಘಾಟಿಸಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ವಿಶಿ ಅವರು ಮಾಧವ ಮಂತ್ರಿ ಮತ್ತು ಪಾಲಿ ಉಮ್ರಿಗರ್ ಅವರನ್ನು ಭೇಟಿಯಾದ ದಿನದ ಬಗ್ಗೆ ವಿವರಿಸಿದರು.

1968-69ರಲ್ಲಿ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ನಡೆದ ಮೈಸೂರು (ಈಗ ಕರ್ನಾಟಕ) ಮತ್ತು ಬಾಂಬೆ (ಈಗಿನ ಮುಂಬೈ) ತಂಡಗಳ ನಡುವಿನ ರಣಜಿ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುತ್ತಿದ್ದಾಗ ಗಣ್ಯರ ಆಸನದಲ್ಲಿ ಕುಳಿತಿದ್ದ ಮಾಧವ ಮಂತ್ರಿ ಮತ್ತು ಪಾಲಿ ಉಮ್ರಿಗರ್ ಅವರನ್ನು ಮೊದಲ ಬಾರಿ ನೋಡಿದ್ದಾಗಿ ವಿಶಿ ಹೇಳಿದರು.


ಜಿ.ಆರ್. ವಿಶ್ವನಾಥ್

'ಮಾಧವ ಮಂತ್ರಿ ಮತ್ತು ಪಾಲಿ ಕಾಕಾ ಪಂದ್ಯವನ್ನು ವೀಕ್ಷಿಸುತ್ತಿರುವುದನ್ನು ಕಂಡು ನನಗೆ ಆತಂಕವಾಗಿತ್ತು. ಶ್ರೇಷ್ಠ ಆಟಗಾರರಾಗಿದ್ದ ಅವರಿಬ್ಬರ ಮುಂದೆ ಆಡುವುದಾದರೂ ಹೇಗೆ ಎಂಬ ಅಳುಕು ಇತ್ತು. ಏನೇ ಆಗಲಿ, ಆ ದಿನ ಅವರಿಬ್ಬರನ್ನು ಭೇಟಿಯಾಗಬೇಕು ಎಂದುಕೊಂಡಿದ್ದೆ. ಅವರೊಂದಿಗೆ ಮಾತನಾಡುವುದು ಬಹಳ ಕಾಲದ ಕನಸಾಗಿತ್ತು. ದಿನದಾಟ ಮುಗಿದ ನಂತರ ಅವರು ಅಂಗಣಕ್ಕೆ ಇಳಿದಿದ್ದರು. ಅಲ್ಲಿ ಅವರನ್ನು ಭೇಟಿಯಾದೆ' ಎಂದು ವಿಶಿ ಹೇಳಿದರು.

'ನಿಮ್ಮನ್ನು ಭೇಟಿಯಾದ ಈ ದಿನವನ್ನು ನಾನು ಮರೆಯಲಾರೆ ಎಂದು ಅವರ ಬಳಿ ಹೇಳಿದೆ. ಅದಕ್ಕೆ ಉತ್ತರಿಸಿದ ಅವರು, ನಿಮ್ಮ ಕ್ರಿಕೆಟ್ ಜೀವನ ಈಗಾಗಲೇ ಆರಂಭವಾಗಿದೆ. ನಿಮ್ಮ ಬಗ್ಗೆ ಸಾಕಷ್ಟು ಕೇಳಿದ್ದೇವೆ. ಆಡುವಾಗ ಗಾಬರಿಯಾಗುವುದು ಬೇಡ. ಸಹಜವಾಗಿ ಬ್ಯಾಟಿಂಗ್ ಮಾಡಬೇಕು, ಸುಮ್ಮನೇ ವಿಕೆಟ್ ಕಳೆದುಕೊಳ್ಳಬಾರದು ಎಂಬ ಸಲಹೆ ನೀಡಿದರು' ಎಂದು ವಿಶ್ವನಾಥ್ ನೆನಪಿಸಿಕೊಂಡರು.

ಹಸರಂಗಾ ಹ್ಯಾಟ್ರಿಕ್, ನಿಸಾಂಕ ಅರ್ಧಶತಕ ವ್ಯರ್ಥ

ದಕ್ಷಿಣ ಆಫ್ರಿಕಾ ತಂಡಕ್ಕೆ ಜಯ

ಶಾರ್ಜಾ (ಪಿಟಿಐ): ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್ ಸಿಡಿಸಿದ ಡೇವಿಡ್ ಮಿಲ್ಲರ್ ದಕ್ಷಿಣ ಆಫ್ರಿಕಾ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು. ಇದರಿಂದಾಗಿ ಶ್ರೀಲಂಕಾ ತಂಡದ ವಾನಿಂದು ಹಸರಂಗಾ ಅವರು ಹ್ಯಾಟ್ರಿಕ್ ಸಾಧನೆ ವ್ಯರ್ಥವಾಯಿತು.

ಶನಿವಾರ ಇಲ್ಲಿ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ಶ್ರೀಲಂಕಾ ಎದುರು 4 ವಿಕೆಟ್‌ಗಳಿಂದ ಗೆದ್ದಿತು. ಟೂರ್ನಿಯಲ್ಲಿ ತಂಡಕ್ಕೆ ಇದು ಎರಡನೇ ಜಯ. ಲಂಕಾಗೆ ಎರಡನೆ ಸೋಲು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಪಥುಮ್ ನಿಸಾಂಕಾ (72; 58ಎಸೆತ, 6ಬೌಂಡರಿ, 3ಸಿಕ್ಸರ್) ಏಕಾಂಗಿ ಹೋರಾಟದಿಂದಾಗಿ ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 142 ರನ್ ಗಳಿಸಿತು. ತಬ್ರೇಜ್ ಶಂಸಿ ಮತ್ತು ಡ್ವೇನ್ ಪ್ರಿಟೋರಿಯಸ್ ತಲಾ ಮೂರು ವಿಕೆಟ್ ಗಳಿಸಿ ಲಂಕಾದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕಿದರು. ಸಾಧಾರಣ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 19.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 146 ರನ್ ಗಳಿಸಿತು.

ವಿಕೆಟ್ ಗಳಿಸಿದ ದಕ್ಷಿಣ ಆಫ್ರಿಕಾದ ತಬ್ರೇಜ್ ಶಂಸಿ (ಎಡದಿಂದ ಎರಡನೆಯವರು) ಅವರನ್ನು ಸಹ ಆಟಗಾರರು ಅಭಿನಂದಿಸಿದರು– ಪಿಟಿಐ ಚಿತ್ರ

ಆರಂಭದಲ್ಲಿಯೇ ದುಷ್ಮಂತ ಚಮೀರ ಕೊಟ್ಟ ಪೆಟ್ಟಿನಿಂದಾಗಿ ಆಫ್ರಿಕಾ ತಂಡವು 26 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತು. ನಾಯಕ ತೆಂಬಾ ಬವುಮಾ (46 ರನ್) ಮತ್ತು ಏಡನ್ ಮರ್ಕರಂ (19) ತಂಡವನ್ನು ಗೆಲುವಿನತ್ತ ಮುನ್ನಡೆಸುವ ಪ್ರಯತ್ನ ಮಾಡಿದರು. ಆದರೆ, 15ನೇ ಓವರ್‌ನ ಕೊನೆಯ ಎಸೆತದಲ್ಲಿ ಏಡನ್ ಮರ್ಕರಮ್ ವಿಕೆಟ್ ಗಳಿಸಿದರು. ಮತ್ತೆ 18ನೇ ಓವರ್ ಬೌಲಿಂಗ್ ಮಾಡಲು ಇಳಿದ ಹಸರಂಗಾ, ಮೊದಲ ಎಸೆತದಲ್ಲಿ ಬವುಮಾ ಹಾಗೂ ಎರಡನೇ ಎಸೆತದಲ್ಲಿ ಡ್ವೇನ್ ಪ್ರಿಟೋರಿಯಸ್ ವಿಕೆಟ್ ಗಳಿಸಿದರು. ಇದರಿಂದಾಗಿ ತಂಡವು ಸೋಲುವ ಆತಂಕ ಎದುರಿಸಿತ್ತು. ಆದರೆ ಕೊನೆಯ ಓವರ್‌ನಲ್ಲಿ 15 ರನ್‌ಗಳ ಅವಶ್ಯಕತೆ ಇದ್ದಾಗ, ಮಿಲ್ಲರ್ ಎರಡು ಸಿಕ್ಸರ್ ಹೊಡೆದರು. ನಾಲ್ಕನೇ ಎಸೆತದಲ್ಲಿ ಒಂದು ರನ್ ಹೊಡೆದರು. ಬ್ಯಾಟಿಂಗ್‌ಗೆ ಬಂದ ಕಗಿಸೊ ರಬಾಡ ಸುಂದರವಾದ ಬೌಂಡರಿ ಹೊಡೆಯುವ ಮೂಲಕ ತಂಡದ ಗೆಲುವಿಗೆ ಮುದ್ರೆ ಒತ್ತಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 142 (ಪಥುಮ್ ನಿಸಾಂಕಾ 72, ಅಸಲಂಕಾ 21, ಏನ್ರಿಚ್ ನಾರ್ಕಿಯಾ 27ಕ್ಕೆ2, ತಬ್ರೇಜ್ ಶಂಸಿ 17ಕ್ಕೆ3, ಡ್ವೇನ್ ಪ್ರಿಟೋರಿಯಸ್ 17ಕ್ಕೆ3), ದಕ್ಷಿಣ ಆಫ್ರಿಕಾ: 19.5 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 146 (ಕ್ವಿಂಟನ್ ಡಿ ಕಾಕ್ 12, ರೀಜಾ ಹೆನ್ರಿಕ್ಸ್ 11, ರಸಿ ವ್ಯಾನ್ ಡರ್ ಡಸೆನ್ 16, ತೆಂಬಾ ಬವುಮಾ 46, ಏಡನ್ ಮಾರ್ಕರಮ್ 19, ಡೇವಿಡ್ ಮಿಲ್ಲರ್ 23, ಕಗಿಸೊ ರಬಾಡ 13,ವಾನಿಂದು ಹಸರಂಗಾ 20ಕ್ಕೆ3, ದುಷ್ಮಂತ ಚಮೀರಾ 27ಕ್ಕೆ2) **ಫಲಿತಾಂಶ:** ದಕ್ಷಿಣ ಆಫ್ರಿಕಾಕ್ಕೆ 4 ವಿಕೆಟ್ ಜಯ.

ಐಪಿಎಲ್ ತಂಡಗಳಿಗೆ ₹ 90 ಕೋಟಿ ಪರ್ಸ್ ಮಿತಿ

ನವದೆಹಲಿ (ಪಿಟಿಐ): ಮಂದಿನ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಆಟಗಾರರ ಖರೀದಿಗಾಗಿ ನಡೆಯಲಿರುವ ಹರಾಜು ಪ್ರಕ್ರಿಯೆಯಲ್ಲಿ ತಂಡಗಳ ಪರ್ಸ್ ಮಿತಿಯನ್ನು ₹ 90 ಕೋಟಿಗೆ ನಿಗದಿ ಮಾಡಲಾಗಿದೆ.

ಐ ಪಿ ಎ ಲ್ ರಿಟೆನಷನ್ ಮತ್ತು ವೇತನ ಮಿತಿಯ ನಿಯಮವನ್ನು ಹೊಸದಾಗಿ ರೂಪಿಸಿದೆ.

ಸದ್ಯ ಟೂರ್ನಿಯಲ್ಲಿರುವ ಎಂಟು ತಂಡಗಳು ತಲಾ ನಾಲ್ವರನ್ನು ರಿಟೇನ್ (ಉಳಿಕೆ) ಮಾಡಿಕೊಳ್ಳಲು ಅವಕಾಶ ಕೊಡಲಾಗಿದೆ. ಹೊಸದಾಗಿ ಸೇರ್ಪಡೆಯಾಗಿರುವ ಲಖನೌ ಮತ್ತು ಅಹಮದಾಬಾದ್ ತಂಡಗಳು ತಲಾ ಮೂವರನ್ನು ಸೇರ್ಪಡೆ ಮಾಡಿಕೊಂಡು ಉಳಿಸಿಕೊಳ್ಳಲು ಅವಕಾಶ ಕೊಡಲಾಗಿದೆ.

'ಬಿಸಿಸಿಐ ಈ ವಿಷಯದ ಕುರಿತು ಎಲ್ಲ ಫ್ರ್ಯಾಂಚೈಸಿಗಳಿಗೆ ಪತ್ರ ಬರೆದಿದೆ. ನಾಲ್ವರನ್ನು ಉಳಿಸಿಕೊಳ್ಳಲು ₹ 42 ಕೋಟಿ ವೆಚ್ಚವಾಗಲಿದೆ. ಮೂವರನ್ನು ಉಳಿಸಿಕೊಳ್ಳಲು ತಂಡಕ್ಕೆ ₹ 33 ಕೋಟಿವೇತನ ಕ್ಯಾಪ್ ಮಿತಿಗೊಳಿಸಲಾಗಿದೆ' ಎಂದು ಐಪಿಎಲ್ ಫ್ರ್ಯಾಂಚೈಸಿಯೊಂದರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. 'ಯಾವುದಾದರೂ ತಂಡವು ಇಬ್ಬರನ್ನು ಮಾತ್ರ ಉಳಿಸಿಕೊಂಡರೆ, ₹ 24 ಕೋಟಿ ವೇತನ ವೆಚ್ಚ ಮಾಡಬೇಕಿದೆ. ಒಬ್ಬರೇ ಉಳಿದರೆ ₹ 14 ಕೋಟಿ ನಿಗದಿಯಾಗಿದೆ' ಎಂದು ತಿಳಿಸಿದ್ದಾರೆ.

ತಂಡಗಳು ತಮ್ಮಲ್ಲಿ ಉಳಿಸಿಕೊಳ್ಳುವ ಆಟಗಾರರ ಕುರಿತು ನವೆಂಬರ್ 30ರೊಳಗೆ ಪ್ರಕಟಿಸಬೇಕು.

ಉಳಿಕೆ ವೇತನ ಪದ್ಧತಿ ಹೀಗಿದೆ

- ನಾಲ್ವರು ಆಟಗಾರರನ್ನು ಉಳಿಸಿಕೊಂಡರೆ ಆಟಗಾರರ ವೇತನ ಸ್ವರೂಪ ಇಂತಿದೆ: ಮೊದಲ ಆಟಗಾರನಿಗೆ ₹16 ಕೋಟಿ, ಎರಡನೇ ಆಟಗಾರನಿಗೆ ₹12 ಕೋಟಿ., ಮೂರನೇ ಆಟಗಾರನಿಗೆ ₹8 ಕೋಟಿ ನಾಲ್ಕನೇ ಆಟಗಾರನಿಗೆ ₹6 ಕೋಟಿ.
- ಮೂವರು ಆಟಗಾರರನ್ನು ಉಳಿಸಿಕೊಂಡರೆ ಮೊದಲ ಆಟಗಾರನಿಗೆ ₹15 ಕೋಟಿ ಎರಡನೇ ಆಟಗಾರನಿಗೆ ₹11 ಕೋಟಿ, ಮೂರನೇ ಆಟಗಾರನಿಗೆ ₹7 ಕೋಟಿ
- ಇಬ್ಬರು ಆಟಗಾರರನ್ನು ಉಳಿಸಿಕೊಂಡರೆ ಮೊದಲ ಆಟಗಾರನಿಗೆ ₹14 ಕೋಟಿ ಎರಡನೇ ಆಟಗಾರನಿಗೆ ₹10 ಕೋಟಿ
- ಒಬ್ಬ ಆಟಗಾರನನ್ನು ಉಳಿಸಿಕೊಂಡರೆ ₹14 ಕೋಟಿ.

ಅಫ್ಗಾನಿಸ್ತಾನಕ್ಕೆ ಜಯದ ಭರವಸೆ

ಅಬುಧಾಬಿ (ಪಿಟಿಐ): ಪಾಕಿಸ್ತಾನದ ವಿರುದ್ಧ ಹೋರಾಡಿ ಸೋತ ಅಫ್ಗಾನಿಸ್ತಾನ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಜಯದ ಹಾದಿಗೆ ಮರಳುವ ಕನಸಿನೊಂದಿಗೆ ಭಾನುವಾರ ಕಣಕ್ಕೆ ಇಳಿಯಲಿದೆ. ಸೂಪರ್ 12ರ ಹಂತದ ಎರಡನೇ ಗುಂಪಿನ ಈ ಪಂದ್ಯದಲ್ಲಿ ಮೊಹಮ್ಮದ್ ನಬಿ ಬಳಗಕ್ಕೆ ನಮೀಬಿಯಾ ಎದುರಾಳಿ.

ರಶೀದ್ ಖಾನ್, ಮುಜೀಬ್ ಉರ್ ರಹಮಾನ್, ಮೊಹಮ್ಮದ್ ನಬಿ ಅವರನ್ನು ಒಳಗೊಂಡ ಪ್ರಬಲ ಸ್ಪಿನ್ನರ್‌ಗಳು ಮತ್ತು ಭರ್ಜರಿ ಹೊಡೆತಗಳನ್ನು ಪ್ರದರ್ಶಿಸುವ ಬ್ಯಾಟರ್‌ಗಳಿರುವ ಅಫ್ಗಾನಿಸ್ತಾನ ಯಾವ ತಂಡಕ್ಕೂ ಸುಲಭವಾಗಿ ಮಣಿಯುವುದಿಲ್ಲ ಎಂಬುದು ಈಗಾಗಲೇ ಅನೇಕ ಬಾರಿ ಸಾಬೀತಾಗಿದೆ.

ಇದೇ ಮೊದಲ ಬಾರಿ ವಿಶ್ವಕಪ್ ಟೂರ್ನಿಯಲ್ಲಿ ಆಡುತ್ತಿರುವ ನಮೀಬಿಯಾ ಆಲ್‌ರೌಂಡ್ ಆಟದ ಮೂಲಕ ಗಮನ ಸೆಳೆದಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಶಿಕ್ಷಣ ಹಕ್ಕು ರಕ್ಷಣೆಗೆ ಕ್ರಮ: ವಿಶ್ವಸಂಸ್ಥೆ ಭದ್ರತಾ ಮಂಡಳಿ ನಿರ್ಣಯ ಅಂಗೀಕಾರ

ವಿಶ್ವಸಂಸ್ಥೆ (ಎಪಿ): ವಿಶ್ವದ ವಿವಿಧ ಭಾಗಗಳಲ್ಲಿ ಶಾಲೆಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಮೇಲೆ ನಡೆಯುತ್ತಿರುವ ದಾಳಿಗಳನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಬಲವಾಗಿ ಖಂಡಿಸಿದೆ. ಅಲ್ಲದೇ, ಸಂಘರ್ಷಮಯವಾದ ಇಂಥ ಸನ್ನಿವೇಶದಲ್ಲಿ ಶಿಕ್ಷಣದ ಹಕ್ಕನ್ನು ರಕ್ಷಿಸಲು ಪ್ರತಿಯೊಂದು ರಾಷ್ಟ್ರ ಕ್ರಮ ಕೈಗೊಳ್ಳ ಬೇಕು ಎಂಬ ನಿರ್ಣಯವನ್ನು ಅಂಗೀಕರಿಸಿದೆ.

'ಜೀವನ ನಿರ್ವಹಣೆ, ಶಾಂತಿ–ಸುರಕ್ಷತೆ ಸಾಧಿಸುವಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದು' ಎಂಬ ನಿರ್ಣಯವನ್ನು ಶುಕ್ರವಾರ ನಡೆದ ಭದ್ರತಾ ಮಂಡಳಿ ಸಭೆಯಲ್ಲಿ ಅಂಗೀಕರಿಸಲಾಗಿದೆ.

'ಶಿಕ್ಷಣ ಹಕ್ಕು ರಕ್ಷಿಸುವುದಕ್ಕೆ ಸಂಬಂಧಿಸಿ, ಭದ್ರತಾ ಮಂಡಳಿಯು ಇದೇ ಮೊದಲ ಬಾರಿಗೆ ಇಂಥ ವಿಶೇಷ ನಿರ್ಣಯ ಅಂಗೀಕರಿಸಿದೆ' ಎಂದು ವಿಶ್ವಸಂಸ್ಥೆಯಲ್ಲಿ ನಾರ್ವೆ ರಾಯಭಾರಿ ಮೋನಾ ಜುಲ್ ಹೇಳಿದರು.

ಈ ನಿರ್ಣಯವನ್ನು ಮಂಡಿಸುವ ವೇಳೆ ಮಾತನಾಡಿದ ಮೋನಾ ಅವರು, 'ವಿಶ್ವದಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಅಪಾಯ ಬಂದೊದಗಿದೆ. 2014 ರಿಂದ 2019ರ ಅವಧಿಯಲ್ಲಿ ಕನಿಷ್ಠ 93 ದೇಶಗಳಲ್ಲಿ 11,000 ದಾಳಿಗಳು ನಡೆದಿವೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಸೇರಿ 22 ಸಾವಿರಕ್ಕೂ ಅಧಿಕ ಮಂದಿ ತೊಂದರೆಗೆ ಒಳಗಾಗಿದ್ದಾರೆ' ಎಂದು ಸಭೆಯ ಗಮನಕ್ಕೆ ತಂದರು.

'ಅಫ್ಗಾನಿಸ್ತಾನದಲ್ಲಿ ಹಸಿವು ತಡೆಯಿರಿ'

ವಿಶ್ವಸಂಸ್ಥೆ (ಎಪಿ): ಅಫ್ಗಾನಿಸ್ತಾನ ನಾಗರಿಕರು ಸಾಮೂಹಿಕವಾಗಿ ಆಹಾರದ ಬಿಕ್ಕಟ್ಟನ್ನು ಎದುರಿಸುತ್ತಿದ್ದು ಅದನ್ನು ತಡೆಯಲು ಸಂಘಟಿತ ಪ್ರಯತ್ನ ನಡೆಸುವಂತೆ ವಿಶ್ವಸಂಸ್ಥೆಯ ಮಾನವೀಯ ವಿಭಾಗದ ಮುಖ್ಯಸ್ಥ ಮಾರ್ಟಿನ್ ಗ್ರಿಫಿಕ್ಸ್ ಜಿ20 ಶೃಂಗಸಭೆಯ ನಾಯಕರನ್ನು ಒತ್ತಾಯಿಸಿದ್ದಾರೆ.

ಅಸೋಸಿಯೇಟ್ ಪ್ರೆಸ್‌ಗೆ ಶುಕ್ರವಾರ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, ಅಫ್ಗಾನಿಸ್ತಾನ ಆರ್ಥಿಕತೆ ಕುಸಿಯುತ್ತಿದ್ದು, ಅಲ್ಲಿನ ಅರ್ಧದಷ್ಟು ಜನರು ತಿನ್ನಲೂ ಆಹಾರವಿಲ್ಲದೆ ಪರದಾಡುತ್ತಿದ್ದಾರೆ. ಅಲ್ಲಿಯ ಜನರ ಮೂಲಭೂತ ಅಗತ್ಯಗಳಲ್ಲಿದೆ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ವಿಕೆಟ್‌ಗಳ 'ಶತಕ': ರಶೀದ್ ದಾಖಲೆ

ದುಬೈ: ಅಫ್ಗಾನಿಸ್ತಾನ ತಂಡದ ಸ್ಪಿನ್ನರ್ ರಶೀದ್ ಖಾನ್ ಅಂತರರಾಷ್ಟ್ರೀಯ ಟ್ವೆಂಟಿ-20 ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 100 ವಿಕೆಟ್ ಗಳಿಸಿದ ಬೌಲರ್ ಎನಿಸಿಕೊಂಡಿದ್ದಾರೆ.

ಟ್ವೆಂಟಿ-20 ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನದ ವಿರುದ್ಧ ಶುಕ್ರವಾರ ನಡೆದ ಪಂದ್ಯದಲ್ಲಿ ಅವರು ಈ ಸಾಧನೆ ಮಾಡಿದರು. ಪಂದ್ಯದಲ್ಲಿ ಅಫ್ಗಾನಿಸ್ತಾನ 5 ವಿಕೆಟ್‌ಗಳಿಂದ ಸೋತಿತು.

53ನೇ ಪಂದ್ಯದಲ್ಲಿ ರಶೀದ್ ಈ ಮೈಲಿಗಲ್ಲು ತಲುಪಿದ್ದಾರೆ. ಈ ಮೂಲಕ ಶ್ರೀಲಂಕಾದ ಮಾಜಿ ವೇಗಿ ಲಸಿತ್ ಮಾಲಿಂಗ ದಾಖಲೆಯನ್ನು ಹಿಂದಿಕ್ಕಿದರು. ಮಾಲಿಂಗ 76ನೇ ಪಂದ್ಯದಲ್ಲಿ 100 ವಿಕೆಟ್ ಗಳಿಸಿದ್ದರು.

ಮಾಜಿ ಕ್ರಿಕೆಟಿಗ ಡೇವಿಡ್‌ಸನ್ ನಿಧನ

ಅಲನ್ ಡೇವಿಡ್‌ಸನ್

ಸಿಡ್ನಿ (ಎಪಿ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ಆಲ್‌ರೌಂಡರ್ ಅಲನ್ ಡೇವಿಡ್‌ಸನ್ (92) ಶನಿವಾರ ನಿಧನರಾದರು. 1953–63ರ ಅವಧಿಯಲ್ಲಿ ತಂಡದ ಪರ 44 ಟೆಸ್ಟ್ ಆಡಿದ್ದ ಎಡಗೈ ವೇಗಿ ಡೇವಿಡ್‌ಸನ್, 186 ವಿಕೆಟ್ ಗಳಿಸಿದ್ದರು. 1,328 ರನ್ ಗಳಿಸಿದ್ದರು.

ಆಸ್ಟ್ರೇಲಿಯಾ ತಂಡದ ಆಫ್‌ಸ್ಪಿನ್ನರ್ ಆಗಿದ್ದ ಆ್ಯಶ್ಲೆ ಮ್ಯಾಲೆಟ್ (76) ಶುಕ್ರವಾರ ನಿಧನರಾಗಿದ್ದರು.

ಆಹಾ! ಕನ್ನಡಂಗಳ್!

ರಾಜ್ಯದಲ್ಲೀಗ 'ಮಾತಾಡ್ ಮಾತಾಡ್ ಕನ್ನಡ' ಎಂಬ ಅಭಿಯಾನವೇನೋ ನಡೆಯುತ್ತಿದೆ. ಆದರೆ, ನಮ್ಮ ಕನ್ನಡದೊಡಲಲ್ಲಿ ಕೇಳಿಬರುತ್ತಿರುವುದು ಎಷ್ಟೊಂದು ಆಡುಭಾಷೆಗಳು ಗೊತ್ತೆ? ಬಯಲುಸೀಮೆ ಕನ್ನಡ, ಕರಾವಳಿ ಕನ್ನಡ, ಹೈ–ಕ ಕನ್ನಡ, ಮುಂ–ಕ ಕನ್ನಡ, ಕೊಡಗಿನ ಕನ್ನಡ, ಘಟ್ಟದ ಕನ್ನಡ... ಅಬ್ಬಬ್ಬಾ, ಅದೆಷ್ಟೊಂದು ಕನ್ನಡಗಳು!

ಪ್ರೊ.ಎಂ.ಕೃಷ್ಣೇಗೌಡ

ಕಲೆ: ಭಾವು ಪತ್ತಾರ್

ಟಿವಿಯಲ್ಲೊಂದು ಅಡುಗೆ ಕಾರ್ಯಕ್ರಮ ಬರ್‍ತಾ ಇತ್ತು. ನನಗೂ ಮಾಡೋದಕ್ಕೆ ಘನವಾದ ಕೆಲಸಗಳೇನೂ ಇಲ್ಲವಾದ್ದರಿಂದ ಹಾಗೇ ನೋಡ್ತಾ ಇದ್ದೆ. ಕೊರಳು ಬೆರಳುಗಳ ತುಂಬೆಲ್ಲಾ ಬಗೆಬಗೆ ಬಂಗಾರದ ಆಭರಣ ಧರಿಸಿಕೊಂಡು ಮೊಗಕ್ಕೆ ಮಂದವಾಗಿ ಮೇಕಪ್ಪು ಮಾಡಿಕೊಂಡ ಮಹಿಳೆಯೊಬ್ಬಳು ಅದ್ಯಾವುದೋ ಲೋಕೋತ್ತರವಾದ ತಿಂಡಿಯೊಂದನ್ನು ಬಾಣಸುಗೈವ ಕ್ರಮಗಳನ್ನು ವಿವರಿಸುತ್ತಿದ್ದಳು.

ನಮ್ಮ ಜನಪದರು ಯಾವುದಾದರೂ ಕತೆಯೊಂದನ್ನೋ ಮತ್ತೊಂದನ್ನೋ ಹೇಳುವಾಗ ಅಲ್ಲೊಬ್ಬ ಹೌದಪ್ಪಾ, ಆಹಾಹಾ, ಭಲೆ ಭಲೆ, ಶಹಬಾಸ್ ಅನ್ನುತ್ತಾ ಇರುತ್ತಾನಲ್ಲ? ಹಾಗೆಯೇ ಆ ಕಾರ್ಯಕ್ರಮದ ನಿರೂಪಕಿಯು ಆ ಮಹಿಳೆಯ ಮಾತಿನ ಮಧ್ಯೆ ಮಧ್ಯೆ ವಾಹ್, ಆSSಸಮ್, ಲವ್‌ಲಿ, ಫೆಂಟಾಸ್ಟಿಕ್, ಅಮೇಜಿಂಗ್ ಎಂಬಿತ್ಯಾದಿಯಾಗಿ ಉದ್ಗರಿಸುತ್ತಿದ್ದಳು. ನೀವು ಕನ್‌ಫ್ಯೂಸ್ ಆಗದಿರಲಿ ಅಂತ ಮೊದಲೇ ಹೇಳಿಬಿಡ್ತೀನಿ. ಅದು ಕನ್ನಡ ಚಾನೆಲ್. ಕಾರ್ಯಕ್ರಮದ ನಿರೂಪಣೆಯೆಲ್ಲವೂ ಫ್ರಮ್ ಬಿಗಿನಿಂಗ್ ಟು ಎಂಡ್ ಪ್ಯೂರ್ ಕನ್ನಡದಲ್ಲೇ. ಆ ಮಹಿಳೆ ಹೇಳಿಕೊಟ್ಟ ಅಡುಗೆ ಪಾಠ ನನ್ನ ನೆನಪಿನಲ್ಲಿ ಇಲ್ಲವಾದರೂ ಆಕೆಯ ಕನ್ನಡ ಮಾತುಗಳು ಬಿಟ್ಸ್ ಆ್ಯಂಡ್ ಪೀಸಸ್‌ನಲ್ಲಿ ಒಂದಿಷ್ಟು ನೆನಪಿನಲ್ಲಿವೆ. ನಾನು ಹೇಳ್ತೀನಿ ಯು ಪ್ಲೀಸ್ ಲಿಸನ್...

'ನಾನಿವತ್ತು ಪ್ರಿಪೇರ್ ಮಾಡ್ತಾ ಇರೋ ಡಿಷ್ ತುಂಬಾ ಸಿಂಪಲ್ ಆಗಿದೆ. ಸ್ಟೆಪ್ ಬೈ ಸ್ಟೆಪ್ ಹೇಳ್ತೀನಿ. ಪ್ಲೀಸ್ ಫಾಲೋ ಮಾಡಿ. ಇದಕ್ಕೆ ಬೇಕಾಗಿರೋ ಇನ್‌ಗ್ರೇಡಿಯಂಟ್ಸ್ ತುಂಬಾ ಏನಿಲ್ಲ. ತ್ರಿ ಆರ್ ಫೋರ್ ಮೀಡಿಯಂ ಸೈಜ್ ಪೊಟ್ಯಾಟೊ, ಒಂದು ಕಪ್ ಗ್ರೀನ್ ಪೀಸ್, ಒಂದು ಸ್ಪೂನ್‌ನಷ್ಟು ಪೆಪ್ಪರ್ ಪೌಡರ್, ಸೇಮ್ ಕ್ವಾಂಟಿಟಿ ಆಫ್ ಜೀರಾ, ಒನ್ ಸ್ಮಾಲ್ ಬಿಟ್ ಆಫ್ ಜಿಂಜರ್, ಒಂದು ಹೋಳು ಕೋಕೊನಟ್ (ಬರೀ ಓಳು), ಒಂದು ಸ್ಮಾಲ್ ಬಂಡಲ್ (!) ಕೊರಿಯಾಂಡರ್ ಲೀವ್ಸ್. ಒಂದು ಟೂ ಹಂಡ್ರೆಡ್ ಗ್ರಾಮ್ಸ್ ಫ್ರೆಷ್ ಪನೀರ್, ಟೆನ್ ಎಮ್ಮೆಲ್ ಸೋಯಾ ಸಾಸ್, ಒಂದೆರಡು ಚಿಟಿಕೆ ಟರ್ಮರಿಕ್ ಪೌಡರ್, ಒನ್ ಸ್ಪೂನ್ ಟೇಬಲ್ ಸಾಲ್ಟ್, ಟು ಸ್ಮಾಲ್ ಆನಿಯನ್ಸ್, ಲಿಟ್ಲ್ ಗಾರ್ಲಿಕ್ ಪೇಸ್ಟ್, ಇಷ್ಟೆ. ದಟ್ಸ್ ಆಲ್.

(ಮೇಲಿನ ಫುಲ್‌ಸ್ಟಾಪು, ಕಾಮಾಗಳ ಜಾಗದಲ್ಲಿ ನಿರೂಪಕಿಯ ಗ್ರೇಟ್, ನೈಸ್, ಓಕೆ, ಅಮೇಜಿಂಗ್ ಇತ್ಯಾದಿಯಿಂದ ಉದ್ಗಾರಗಳನ್ನು ನೀವೇ ಸೇರಿಸಿಕೊಂಡು ಓದಿಕೊಳ್ಳತಕ್ಕದ್ದು)

ಇನ್ನು ಆ 'ಮ್ಯಾಮ್' ಹೇಳುವ ಅಡುಗೆ ವಿಚಾರ ಮುಂದುವರಿಯುತ್ತದೆ.

'ಒಂದು ರೌಂಡ್ ಬಾಟಮ್ ವೆಸೆಲ್‌ನಲ್ಲಿ ಪೊಟ್ಯಾಟೊ ಕುಕ್ ಮಾಡಿ. ಅದರ ಔಟರ್ ಲೇಯರ್ ಎಲ್ಲ ಪೀಲ್ ಮಾಡಿ. ಲೈಟ್ ಆಗಿ ಸ್ಮ್ಯಾಷ್ ಮಾಡಿ, ಒಂದು ಸೈಡಲ್ಲಿ ಇಟ್ಕೋಬೇಕು. ಕೋಕೊನಟ್‌ನ ಗ್ರೇಟ್ ಮಾಡಿ, ಮಿಕ್ಸಿಯಲ್ಲಿ ಗ್ರೈಂಡ್ ಮಾಡಿ. ಅದನ್ನು ಇನ್ನೊಂದು ಸೈಡಲ್ಲಿ ಇಟ್ಕೋಬೇಕು. ಗ್ರೀನ್‌ಪೀಸ್‌ನ ಬಾಯ್ಲ್ ಮಾಡಿ ಅದರ ವಾಟರ್ ಎಲ್ಲಾ ಪೋರ್ ಮಾಡಿ ಇನ್ನೊಂದು ಸೈಡಲ್ಲಿ ಇಟ್ಕೊಳ್ಳಿ. ಒಂದು ರೌಂಡ್ ಬಾಟಮ್ ಪ್ಯಾನ್‌ನಲ್ಲಿ ಸ್ವಲ್ಪಾನೆ ಆಯಿಲ್ ಹಾಕ್ಕೊಂಡು ಕಟ್ ಮಾಡಿರೋ ಆನಿಯನ್, ಟರ್ಮರಿಕ್ ಪೌಡರ್, ಪೆಪ್ಪರ್ ಪೌಡರ್, ಜೀರಾ, ಗ್ರೇಟೆಡ್ ಜಿಂಜರ್ ಎಲ್ಲಾ ಹಾಕ್ಕೊಂಡು ಲೈಟ್ ಆಗಿ ಸ್ಮಾಲ್ ಫ್ಲೇಮ್ ಇಟ್ಕೊಂಡು ಫ್ರೈ ಮಾಡ್ಬೇಕು. ಆಮೇಲೆ ಅದಕ್ಕೆ ಸ್ಮ್ಯಾಷ್ಡ್ ಪೊಟ್ಯಾಟೊ, ಬಾಯಿಲ್ಡ್ ಗ್ರೀನ್‌ಪೀಸ್, ಸೋಯಾ ಸಾಸ್, ಗಾರ್ಲಿಕ್ ಪೇಸ್ಟ್ ಎಲ್ಲಾ ಮಿಕ್ಸ್ ಮಾಡ್ಬೇಕು. ಆಮೇಲೆ...'

ಸಾಕು ಬಿಡಿ ಸದ್ಯಕ್ಕೆ ಇಷ್ಟು ಕನ್ನಡ ತಡ್ಕೊಳ್ಳಿ ನೀವು. ಇದೂ ಸಾಕಾಗಿಲ್ಲ ಅಂತಾದರೆ ನಮ್ಮ ಯಾವುದಾದರೂ ಎಫ್.ಎಂ. ರೇಡಿಯೊ ತಿರುಗಿಸಿ ಸಾಕು. 'ನಮ್ಮ ಕನ್ನಡ' ಆರ್‌ಜೆಗಳ ನಾನ್ ಸ್ಟಾಪ್ ಕನ್ನಡಕ್ಕೆ ಕಿವಿಕೊಡಿ.

'ಹಾಯ್ ಹಲೋ ಮೈ ಡಿಯರ್ ಡಿಯರ್‍ರ್... ಫ್ರೆಂಡ್ಸ್, ಗುಡ್ ಗುಡರ್, ಗುಡ್ಡೆಸ್ಟ್ ಮಾರ್ನಿಂಗ್! ಹೌ ಆರ್ ಯೂ ದಿಸ್ ಮಾರ್ನಿಂಗ್, ಹೋಪ್ ಯು ಆರ್ ಆಲ್ ಡೂಯಿಂಗ್ ವೆರಿಗುಡ್. ಏನಪ್ಪಾ ಅಂದ್ರೆ ಈವತ್ತು ಫೆಂಟಾಸ್ಟಿಕ್ ಫ್ರೈಡೇ. ಐ ನೋ ಯು ಆರ್ ಲುಕಿಂಗ್ ಫಾರ್ವರ್ಡ್ ಫಾರ್ ಎ ಗ್ರೇಟ್ ವೀಕೆಂಡ್. ಮತ್ತೆ ಏನ್ ಸಮಾಚಾರ? ವೀಕೆಂಡ್‌ಗೆ ವಾಟ್ ಆರ್ ಯುವರ್ ಪ್ಲಾನ್ಸ್? ಅದನ್ನು ನನಗೆ ಕಾಲ್ ಮಾಡಿ ಹೇಳಿ. 94485*****ಗೆ ಕಾಲ್ ಮಾಡಿ ಅಥವಾ ವಾಟ್ಸ್‌ಆ್ಯಪ್ ಮಾಡಿ. ಅಲ್ಲಿವರೆಗೂ ಕೀಪ್ ಲಿಸ್‌ನಿಂಗ್ ಟು ದಿಸ್ ವಂಡರ್ ವಂಡರ್‌ಫುಲ್ ಕನ್ನಡ ಸಾಂಗ್ ಬೈ ನನ್ ಅದರ್ ದ್ಯಾನ್ ನಮ್ಮ್ ಅಣ್ಣಾವ್ರು. ಪ್ಲೀಸ್ ಸ್ಟೇ ಟ್ಯೂನ್ಡ್ ಕೇಳಿ ಕೇಳ್ಸಿ... ಸೂಪರ್‍ರ್ ಆಗಿ ಎಂಜಾಯ್ ಮಾಡಿ ಅಣ್ಣಾವ್ರ ಈ ಸಾಂಗ್. ಡು ಯು ನೋ ಫ್ರಮ್ ವಿಚ್ ಮೂವಿ? ವಾವ್! ಚಲ್ಲೀ... ಸ್ಸು..ವ... ಮೋSSಡ್ಡಗಳು!!

ಜೇನಿನ ಹೊಳೆಯೋ ಹಾಲಿನ ಮಳೆಯೋ
ಸುಧೆಯೋ ಕನ್ನಡ ಸವಿ ನುಡಿಯೋ
ವಾಣಿಯ ವೀಣೆಯ ಸ್ವರಮಾಧುರ್ಯವೋ
ಸುಮಧುರ ಕನ್ನಡ ನುಡಿಯೋ – ಆಹಾ!

ಅಂತೂ ಜೇನಿನ ಹೊಳೆ ಹಾಲಿನ ಮಳೆ ಕನ್ನಡ ಸವಿನುಡಿಯು ನಮ್ಮ ಕಾಂಟೆಂಪೊರರಿ ಕನ್ನಡದ ಸಂದುಗೊಂದಿಗಳಲ್ಲೇ ಹರಿಯಬೇಕು.

ನವೆಂಬರ್ ತಿಂಗಳು ಬಂತು ಅಂತ ಅಭಿಮಾನಕ್ಕೆ ಹೇಳುವ ಮಾತಲ್ಲ. ನಂಬಿ, ಒಪ್ಪಿಕೊಳ್ಳಿ. ಕನ್ನಡವೆಂಬುದು ಒಂದು ಅದ್ಭುತವಾದ ಭಾಷೆ. ಎರಡು ಸಾವಿರ ವರ್ಷಗಳಿಗೂ ಮಿಗಿಲಾಗಿ ಬಾಳಿ, ಬದುಕಿ, ಬೆಳೆದು, ಮೆರೆದು ಬಂದಿರುವ ಭಾಷೆ ಇದು. ಕೋಟ್ಯಂತರ ನಾಲಗೆಗಳ ಮೇಲೆ ಹೊರಳಿ, ಅರಳಿ ಅನಂತ ಬಗೆಯ ಅನುಭವಗಳಿಗೆ ವಾಹಕವಾಗಿ ಬಂದ ಭಾಷೆ ಇದು. ನಾವು ಈ ಬಗೆಗೆ ತಂದುಕೊಂಡು ಭಾವಿಸಬೇಕಾದ್ದೊಂದಿದೆ, ಅದೇನೆಂದರೆ ಇಂದು ನಮ್ಮ ನಾಲಗೆಯ ಮೇಲೆ, ನಮ್ಮ ಪುಸ್ತಕಗಳಲ್ಲಿ ಅಚ್ಚಾಗಿರುವ ಭಾಷೆ ಇಂದಿನದ್ದಷ್ಟೇ ಅಲ್ಲ. ಎಲ್ಲಿಂದಲೋ ಹುಟ್ಟಿ ಎಲ್ಲೆಲ್ಲೋ ಹರಿಯುವ ಹೊಳೆ, ಅದು ಹರಿದುಬಂದ ನೆಲದ ವಾತಾವರಣದ ಸಸ್ಯ, ಪ್ರಾಣಿ ಸಂಕುಲದ ಯಾವ್ಯಾವುದೋ ಗುಣಗಳನ್ನೆಲ್ಲ ಮೈದುಂಬಿಕೊಂಡು ಹರಿಯುವ ಹಾಗೆ ನಮ್ಮ ಕನ್ನಡ ಭಾಷೆಯು ತನ್ನ ಸಹಸ್ರಾರು ವರ್ಷಗಳ ಹರಿವಿನ ಜನುಮದಿನದ ಅರಿವು, ಅನುಭವ, ಜ್ಞಾನಗಳನ್ನೆಲ್ಲ ಮೈದುಂಬಿಕೊಂಡಿದೆ. ನಮ್ಮ ಪೂರ್ವಿಕರೆಲ್ಲರ ನಾಲಗೆಯ ನೆನಪು ನಮ್ಮ ಕನ್ನಡದೊಳಗೇ ಇದೆ. ನಮ್ಮ ಕನ್ನಡವನ್ನು ಯಾವುದೇ ನಾಗರಿಕ ಕಾರಣಗಳಿಗಾಗಿ ನಾವು ತಿರಸ್ಕರಿಸಿದರೆ, ಧಿಕ್ಕರಿಸಿದರೆ, ಆ ಭಾಷೆಯೊಳಗೆ ನಿಹಿತವಾಗಿರುವ ಸರ್ವ ಸಂಪನ್ಮೂಲಗಳನ್ನೂ ನಾವು ಧಿಕ್ಕರಿಸಿದಂತೆ.

ನಾನು ಕನ್ನಡದ ವಿದ್ಯಾರ್ಥಿ, ಕನ್ನಡದ ಮೇಷ್ಟ್ರು. ಸಹಜವಾಗಿ ಕನ್ನಡದ ಈ ಸಂಪನ್ಮೂಲಕ್ಕೆ ತೆರೆದುಕೊಂಡವನು ನಾನು. ಸತ್ಯವಾಗಿಯೂ ಕನ್ನಡ ಭಾಷೆಗಿರುವ ಸೊಗಡು, ರುಚಿ, ಶಕ್ತಿ ನನ್ನ ವ್ಯಕ್ತಿತ್ವವನ್ನು ಕಟ್ಟಿವೆ. ನಮ್ಮ ಪೂರ್ವಿಕ ಪ್ರಮುಖರಲ್ಲೊಬ್ಬರಾದ ಬೆನಗಲ್ ನರಸಿಂಹರಾವ್ ಕನ್ನಡದ ಬಗ್ಗೆ ಏನು ಹೇಳಿದ್ದಾರೆ ನೋಡಿ...

ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ
ಕನ್ನಡವೇ ಎನ್ನುಸಿರು ಪೆತ್ತೆನ್ನ ತಾಯಿ
ಕನ್ನಡವೇ ಧನದಾನ್ಯ ಕನ್ನಡವೇ ಮನೆ ಮಾನ್ಯ
ಕನ್ನಡವೇ ಎನಗಾಯ್ತು ಕಣ್ಣು, ಕಿವಿ ಬಾಯಿ

ಈ ಪದ್ಯವನ್ನು ಕೀರ್ತಿಶೇಷ ಬೆನಗಲ್ ನರಸಿಂಹರಾಯರು ನನಗಾಗಿಯೇ, ನನ್ನಂಥವರಿಗಾಗಿಯೇ ಬರೆದುಕೊಟ್ಟರಾ ಅನ್ನಿಸುತ್ತಿದೆ.

11ನೇ ಪುಟಕ್ಕೆ...

ತಮಿಳು ಕಾನನ, ಕನ್ನಡ ಜೀವನ

ಕೆ.ನರಸಿಂಹಮೂರ್ತಿ

'ಕನ್ನಡ ಅಂದ್ರೆ, ರಾಜ್‌ಕುಮಾರ್ ಅಂದ್ರೆ ನಂಕ ತುಂಬ ಇಷ್ಟ. ನಮ್ಮ ಜೀವ ಇರೋಗಂಟ ಇದೇ. ಜೀವ ಓದರೂ ಇದೇ. ಇನ್ನೊಂದ್ ಟ್ರಿಪ್ ಹುಟ್ಟಿದ್ರೂ ನಾನಿಲ್ಲೇ ಹುಟ್ಟಬೇಕು ಅಂತ ಒಂದಾಸೆ. ಅದು ದೇವ್ರಿಷ್ಟ...'

ನಲವತ್ತು ವರ್ಷದ ಹಿಂದೆ ವೆಲ್ಲೂರಿನಿಂದ ಚಾಮರಾಜನಗರಕ್ಕೆ ಅಳಿಯನಾಗಿ ಬಂದ ವಿ.ಪಿ. ಸುಬ್ರಹ್ಮಣ್ಯಂ ಕಂದಮಿಳು ಶೈಲಿಯಲ್ಲಿ ನಗುನಗುತ್ತಾ ಮಾತನಾಡುತ್ತಿದ್ದರೆ ಅವರ ಪತ್ನಿ ಶಾಂತಾಮಣಿ ನೆನಪುಗಳಿಗೆ ಜಾರಿದ್ದರು.

ಘಟಪ್ರಭಾ ನದಿಗೆ ಅಡ್ಡಲಾಗಿ ಕಟ್ಟಿರುವ ಬೆಳಗಾವಿ ಜಿಲ್ಲೆಯ ಹಿಡಕಲ್ ಜಲಾಶಯ ನಿರ್ಮಾಣದ ಕಾಲದಲ್ಲಿ ಕೆಲಸಕ್ಕೆಂದು ತಮಿಳುನಾಡಿನಿಂದ ವಲಸೆ ಬಂದಿದ್ದ ಕುಟುಂಬದ ದೊಡ್ಡ ಮಗಳು ಶಾಂತಾಮಣಿ. ಜಲಾಶಯದ ಕೆಲಸ ಮುಗಿಸಿ ಕುಟುಂಬ ಕರ್ನಾಟಕ–ತಮಿಳುನಾಡು ಗಡಿ ಜಿಲ್ಲೆಯಾದ ಚಾಮರಾಜನಗರಕ್ಕೆ ವಲಸೆ ಬಂದು ನೆಲೆಸಿತ್ತು. ಕಾಡಿನಂತಿದ್ದ ಮಾಳಗೆರೆಯಲ್ಲಿ ಮೂರು ಎಕರೆ ಜಮೀನು ಖರೀದಿಸಿ ಕೃಷಿ ಆರಂಭಿಸಿತ್ತು.

ಅವರಿಗೆ ಹದಿಹರೆಯಕ್ಕೆ ಬರುವ ಮುಂಚೆಯೇ ವೆಲ್ಲೂರಿನ ಪೆರುಂದರೈಗೆ ಸೇರಿದ ವೇಪಂಬಾಳ್ಯೆ ಎಂಬ ಚಿಕ್ಕ ಹಳ್ಳಿಊರಿನ ಸುಬ್ರಹ್ಮಣ್ಯಂ ಹೆಣ್ಣು ನೋಡಲು ಬಂದರು. ಸೋದರತ್ತೆ ಮಗಳನ್ನು ನೋಡಿದ ಕೂಡಲೇ ಒಪ್ಪಿದರು. ಮನೆ ಅಳಿಯನೂ ಆದರು. ಈ ದಂಪತಿ ಮಗ, ಮಗಳನ್ನು ನಗರದಲ್ಲೇ ಕನ್ನಡ ಮಾಧ್ಯಮದಲ್ಲೇ ಓದಿಸಿದರು. ಅವರ ಮನೆಯಲ್ಲಷ್ಟೇ ತಮಿಳು. ಉಳಿದೆಲ್ಲೆಡೆ ಕನ್ನಡ.

ಚಾಮರಾಜನಗರದಲ್ಲಿ ಇಂಥ ಸಾವಿರಾರು ಕುಟುಂಬಗಳ ಸದಸ್ಯರು ಸುಮಾರು ಆರೇಳು ದಶಕಗಳಿಂದ ಬದುಕು ಕಟ್ಟಿಕೊಂಡು, ಕನ್ನಡಿಗರೊಂದಿಗೆ ಬೆರೆತು ಕನ್ನಡಿಗರೇ ಆಗಿದ್ದಾರೆ. ಈ ಜಿಲ್ಲೆಯಲ್ಲಿರುವ ತಮಿಳರ ಸಂಖ್ಯೆ ಸುಮಾರು 70 ಸಾವಿರ.

ಸುಬ್ರಹ್ಮಣ್ಯಂ ಹೇಳುತ್ತಿದ್ದರು: ನಾವು ಎಲ್ಲಿ ಇರ್ತೀವೋ ಅದೇ ನಮ್ಮ ತಾಯಿ, ಅದೇ ನಮ್ಮ ತಾಯಿಮಣ್ಣು. ಅದಕ್ಕೂ ನಾವು ಭಕ್ತರಂತೆ ಇದ್ದು ಕೈ ಮುಗಿದು ಅಲ್ಲೇ ಅನುಸರಿಸಿಕೊಂಡು ಬಾಳಬೇಕು. ಸಂತೋಸವಾಗಿ ಒಪ್ಕೊಬೇಕು. ಮಕ್ಕಳಿಕೂ ಅದ್ನೇ ಹೇಳಿದೀನಿ... ವೋಟು, ರೇಸನ್ ಕಾರ್ಡ್ ಇರೋದು ಇಲ್ಲಿ. ನಾವು ದುಡುವಣಿಕೆ ಮಾಡ್ತೀವಿ, ಏನ್ ತೊಂದ್ರೆ ಇಲ್ಲ. ಭೂಕಂಪ ಇಲ್ಲ. ಪ್ರವಾಹ ಇಲ್ಲ. ವೆದರೆಲ್ಲ ಫೈನಾಗಿರ್ತದೆ. ಇದರ ಮೇಲೆ ದೇವರು ನಮಗೆ ಏನು ಸೌಲಭ್ಯ ಕೊಡಬೇಕು? ಎಲ್ಲೇ ಹೋದ್ರೂ ದುಡಿಬೇಕು. ಎಲ್ಲಕ್ಕಿಂತ ನಗರವೇ ಬೆಸ್ಟು.

ಮಾಳಗೆರೆಯ ತೋಟದಲ್ಲಿ ವಿ.ಪಿ.ಸುಬ್ರಹ್ಮಣ್ಯಂ–ಶಾಂತಾಮಣಿ ದಂಪತಿ ಚಿತ್ರ: ಸಿ.ಆರ್.ವೆಂಕಟರಾಮು

ಚಾಮರಾಜನಗರ ಕಸಬಾ ಹೋಬಳಿಯ ದೊಲ್ಲಿಪುರ, ಮಾಳಗೆರೆ, ಹರದನಹಳ್ಳಿ, ಚಿಕ್ಕಹೊಳೆ, ಅಟ್ಟುಗುಳಿಪುರ, ಗುಂಡ್ಲುಪೇಟೆ, ಹನೂರು, ಕೊಳ್ಳೇಗಾಲ, ಯಳಂದೂರು– ಹೀಗೆ ಎಲ್ಲಿಯೇ ಹೋದರೂ ನಮಗೆ ಮೂರ್ನಾಲ್ಕು ಎಕರೆಯಿಂದ ಹತ್ತನ್ನೆರಡು ಎಕರೆವರೆಗೆ ಸ್ವಂತ ಜಮೀನಿನಲ್ಲಿ ಕೃಷಿ, ತೋಟಗಾರಿಕೆ ಮಾಡಿಕೊಂಡು ಸದ್ದಿಲ್ಲದೆ ಬದುಕುತ್ತಿರುವ ತಮಿಳು ಕುಟುಂಬಗಳು ಕಾಣುತ್ತವೆ.

> ಕರ್ನಾಟಕ-ತಮಿಳುನಾಡು ಗಡಿ ಜಿಲ್ಲೆ ಚಾಮರಾಜನಗರದಲ್ಲಿರುವ ತಮಿಳರ ಕನ್ನಡ ಪ್ರೇಮ ಎಂಥದ್ದು?

ಅವರೆಲ್ಲ ತಮ್ಮ ತಂದೆ, ತಾತಂದಿರ ಕಾಲದಿಂದಲೂ ನಗರದ ಕಪ್ಪು ನೆಲವನ್ನೇ ಕರ್ಮಭೂಮಿಯನ್ನಾಗಿ ಮಾಡಿಕೊಂಡವರು. ಕೆರೆಗಳಿಂದ ಕೆಂಪು ಮಣ್ಣನ್ನು ತಂದು ಭೂಮಿಯನ್ನು ಹಸನು ಮಾಡಿದವರು. ಇತ್ತೀಚಿನ ವರ್ಷಗಳಲ್ಲಿ ತಮಿಳುನಾಡಿನಿಂದ ಬಂದು ಜಮೀನುಗಳನ್ನು ಗುತ್ತಿಗೆ ಪಡೆದು ಕೃಷಿ ಮಾಡುತ್ತಿರುವವರೂ ಉಂಟು. ಅವರಿಗೆ ಈ ನೆಲದೊಂದಿಗೆ ವ್ಯವಹಾರದ ನಂಟಷ್ಟೇ ಇದೆ. ಅದಕ್ಕೆ ಬೇಕಾಗುವಷ್ಟು ಮಾತ್ರ ಕನ್ನಡ ಗೊತ್ತು. ಹೆಚ್ಚಿಗೆ ಕಾಣಿಸಿಕೊಳ್ಳುವುದೂ ಇಲ್ಲ.

ಸತತ ಪ್ರಯತ್ನಗಳ ಬಳಿಕವೂ ಸುಧಾರಿತ ಕಾಡುಗಳಂತಿರುವ ತಮಿಳರ ತೋಟಗಳಿಗೆ ಈಗಲೂ ಸರಿಯಾದ ರಸ್ತೆ ಸಂಪರ್ಕವಿಲ್ಲ. ಸುವರ್ಣಾವತಿ ನದಿ ಕಾಲುವೆ ಪಕ್ಕದಲ್ಲೇ ನೂರಾರು ಎಕರೆ ಜಮೀನುಗಳಲ್ಲಿ ಅವರು ಬಾಳೆ, ಅಡಿಕೆ, ತೆಂಗು ಬೆಳೆಯುತ್ತಿದ್ದಾರೆ. ಅಗತ್ಯ ಬಿದ್ದರಷ್ಟೇ ನಗರಕ್ಕೆ ಸವಾರಿ. ಇಲ್ಲದಿದ್ದರೆ ತಮ್ಮ ಕೃಷಿಯದ್ದೇ ದಾರಿ. ತೋಟ ಮತ್ತು ತೋಟದ ಮನೆಯ ಬದುಕು ಸಂಪನ್ನ.

ತಮಿಳರಷ್ಟೇ ಅಲ್ಲ, ಕೇರಳದ ಮೂಲೆಯಿಂದ ಬಂದ ಮಲಯಾಳಿ ಮಂದಿಗೂ ಚಾಮರಾಜನಗರ ಜಿಲ್ಲೆ ಜೀವನ ಕೊಟ್ಟಿದೆ. ಅವರು ಕೂಡ ಜಲಾಶಯಗಳ ಕೆಲಸ ಮಾಡಲೆಂದು ವಲಸೆ ಬಂದ ಕುಟುಂಬಗಳ ಮಂದಿಯೇ. ಅವರ ಸಂಖ್ಯೆ ಕಡಿಮೆ.

91ರಲ್ಲಿ ಕಾವೇರಿ ವಿವಾದದ ಸಂದರ್ಭದ ಹಿಂಸಾಚಾರದ ಕಹಿ ನೆನಪನ್ನೇ ನುಂಗಿಕೊಂಡು ಅವರೆಲ್ಲ ಕನ್ನಡವನ್ನು ಮನ–ಮನೆಯಲ್ಲಿ ಬೆಚ್ಚಗೆ ಕಾಪಿಟ್ಟುಕೊಂಡಿದ್ದಾರೆ ಎಂಬುದೇ ವಿಶೇಷ. ಆ ಗಲಾಟೆ ಆದ ಬಳಿಕ, ಕೂಲಿಗಾಗಿ ಬಂದಿದ್ದ ಬಹಳಷ್ಟು ಮಂದಿ ತಮಿಳುನಾಡಿನ ಕೊಯಮತ್ತೂರು, ತಿರುಪ್ಪೂರು, ಮೈಸೂರು, ಬೆಂಗಳೂರಿಗೆ ಕೆಲಸ ಹುಡುಕಿಕೊಂಡು ಹೋಗಿಬಿಟ್ಟರು. ಆಗ ಮಾಳಗೆರೆಯಲ್ಲೇ 60 ಕುಟುಂಬಗಳಿದ್ದವು. ಈಗ ಬರೀ 15 ಕುಟುಂಬಗಳಷ್ಟೇ ಇವೆ. ಸ್ವಂತ ಜಮೀನುಗಳನ್ನು ಮಾಡಿಕೊಂಡವರು ಮಾತ್ರ ಇಲ್ಲಿಯೇ ಉಳಿದಿದ್ದಾರೆ. ತಮ್ಮ ಹೆಣ್ಣು ಮಕ್ಕಳನ್ನು ತಮಿಳುನಾಡಿನ ಸಂಬಂಧಿಕರಿಗೆ ಮದುವೆ ಮಾಡಿಕೊಟ್ಟಿದ್ದಾರೆ. ಸುಬ್ರಹ್ಮಣ್ಯಂ ಅವರ ಮಗಳು ಈರೋಡಿನ ಗೋಪಿ ಜಿಲ್ಲೆಯ ಸೊಸೆ. ಮಗನಿಗೆ ಬೆಂಗಳೂರಿನಲ್ಲಿ ಕೆಲಸ.

70ರ ದಶಕದಲ್ಲಿ ಕೊಯಮತ್ತೂರಿನಿಂದ ವ್ಯವಸಾಯಕ್ಕೆಂದು ಇಲ್ಲಿಗೆ ಬಂದ ಪಿ.ಎನ್. ಚಿನ್ನಸ್ವಾಮಿ ಚಾಮರಾಜನಗರ ಜಿಲ್ಲಾ ತಮಿಳು ಸಂಘದ ಅಧ್ಯಕ್ಷರು. 'ಆಗ ಜಮೀನು ಜಂಗಲ್ ತರ ಇತ್ತು. ಅದೆಲ್ಲ ಸುದ್ದ ಮಾಡಿ ವ್ಯವಸಾಯ ಮಾಡಿಕೊಂಡು ಇದ್ದೀವಿ' ಎಂಬ ಅವರ ಮಾತಿನಲ್ಲಿ ನೋವು ನುಂಗಿಕೊಂಡ ನಗು ಇಣುಕಿತು.

'ನಮ್ಮ ಸುರಕ್ಷತೆ ಮತ್ತು ತಮಿಳರು–ಕನ್ನಡಿಗರ ನಡುವೆ ಸೇತುವೆಯೊಂದಿರಬೇಕು ಎಂದು ಸಂಘವನ್ನು ಸ್ಥಾಪಿಸಿದೆವು. ನಾವು ಕರ್ನಾಟಕದ ಪರವಾಗಿಯೇ ಹೋರಾಟ ಮಾಡೋರು. ಬೇರೆ ಯೋಚನೆ ಏನಿಲ್ಲ' ಎನ್ನುವಷ್ಟರಲ್ಲಿ ಅವರ ಮೊಮ್ಮಗಳು ಮನೆಯಿಂದ ಹೊರಬಂದಳು.

'ಕನ್ನಡ ನಂಗೆ ಮಾತಾಡಕ್ ಗೊತ್ತಿಲ್ಲ' ಎನ್ನುತ್ತಲೇ, ಆಕೆ, 'ನನ್ ಹೆಸ್ರೂ ನೇಹಶ್ರೀ, ನಾನು ಚೆನ್ನೈನಲ್ಲಿ ಅಣ್ಣಾ ಯೂನಿವರ್ಸಿಟಿಲಿ ಸೆಕೆಂಡ್ ಈಯರ್ ಬಿ.ಟೆಕ್ ಡಿಗ್ರಿ ಓದ್ಕೊಂಡಿದಿನಿ' ಎಂದು ನಗೆ ಚೆಲ್ಲಿದಳು. 'ನಮ್ಮ ಮನೆ ಸತ್ಯಮಂಗಲದಲ್ಲಿದೆ. ಅಜ್ಜಿಯವರ ಊರು ಚಾಮರಾಜನಗರ' ಎಂದು ಮತ್ತೆ ಮುಗ್ಧ ನಗೆ ನಕ್ಕಳು.

ಈ ನೆಲದಲ್ಲಿ ಕನ್ನಡದ ನಂಟನ್ನು ಉತ್ಕೃಷ್ಟವಾಗಿ ಉಳಿಸಿಕೊಂಡು ಬರಲು ತಮಿಳು ಸಂಘ ತನ್ನದೇ ಕೊಡುಗೆ ನೀಡುತ್ತಿರುವುದನ್ನು ಮರೆಯುವಂತಿಲ್ಲ. ಏಕೆಂದರೆ ಈ ಸಂಘವೂ ಕೂಡ ಪ್ರತಿ ವರ್ಷ ನವೆಂಬರ್‌ನಲ್ಲಿ ಕನ್ನಡ ರಾಜ್ಯೋತ್ಸವವನ್ನು ಏರ್ಪಡಿಸುತ್ತದೆ. 'ಕನ್ನಡವನೆ ಕುಣಿದಾಡುವುದೆನ್ನದೆ' ಎಂದು ಪುಳಕಗೊಳ್ಳುತ್ತದೆ.

ಮಾತು ಮುಗಿಸುವ ಮುನ್ನ ಸುಬ್ರಹ್ಮಣ್ಯಂ ಕಂದಮಿಳಿನಲ್ಲಿ ಮತ್ತೆ ಹೇಳುತ್ತಲೇ ಹೋದರು: ನಂಗೆ ರಾಜಕುಮಾರ್ ಅಂತ್ರೆ ತುಂಬ ಇಷ್ಟ. ಅವರ ಹಾಡುಗಳೂ ಇಷ್ಟ ಎನ್ನುತ್ತಾ ಯೂಟ್ಯೂಬ್‌ನಲ್ಲಿ 'ಹುಟ್ಟಿದರೆ ಕನ್ನಡ ನಾಡಲ್ ಹುಟ್ಟಬೇಕು' ಹಾಡು ನೋಡುತ್ತಾ ಖುಷಿಯಿಂದ ತಲೆಯಾಡಿಸತೊಡಗಿದರು.

ಜಾಹೀರಾತು

ಪಿ ಸಿ ಓ ಡಿ

ಡಾ|| ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಪಿ ಸಿ ಓ ಡಿ ಈ ಕಾಲದ ಸ್ತ್ರೀಯರನ್ನು ಕಾಡುತ್ತಿರುವ ಸಮಸ್ಯೆಯಾಗಿದೆ . ಪ್ರಸ್ತುತ ಆಧುನಿಕ ಜೀವನಶೈಲಿಯಿಂದಾಗಿ ಮಾನವನ ಜೀವನದಲ್ಲಿ ಹಾಗೆಯೇ ಜೀವನ ವಿಧಾನಗಳಲ್ಲಿ, ಆಹಾರ ಪದ್ಧತಿಗಳಲ್ಲಿ ಬದಲಾವಣೆಗಳಾಗುತ್ತಿದ್ದು, ಇದು ಬಹಳಷ್ಟು ಹಾನಿಕಾರಕ ಪರಿಣಾಮವನ್ನು ಮಾನವನ ದೇಹದಲ್ಲಿ ಉಂಟುಮಾಡುತ್ತಿದೆ.ಮಹಿಳೆಯರಲ್ಲಿ ಹೆಚ್ಚಾಗಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಪಿ ಸಿ ಓ ಡಿ ಕೂಡ ಒಂದು.

ಈ ಸಮಸ್ಯೆ ಅಂದಾಜು 25 ರಿಂದ 30 ವಯಸ್ಸಿನ ಸ್ತ್ರೀಯರಲ್ಲಿ ಸಾಮನ್ಯವಾಗಿ ಕಾಣಿಸಿಕೊಳ್ಳುತ್ತದೆ. ಅನೇಕ ಸ್ತ್ರೀಯರಲ್ಲಿ ಆಹಾರ ಪದ್ಧತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲದಿದ್ದರು ಅಧಿಕ ತೂಕ, ಕೂದಲು ಉದುರುವಿಕೆ ಮೊಡವೆ ಗಂಡಸರಿಗೆ ಇರುವಂತೆ ಕೂದಲು ಬರುವುದು ಮೊದಲಾದ ಸಮಸ್ಯೆಗಳನ್ನು ಕಾಣಬಹುದಾಗಿದೆ.

ಅಪರಿಪಕ್ವವಾದ ಅಂಡಾಣು ಗರ್ಭಾಶಯದ ಎರಡು ಬದಿಯಲ್ಲಿರುವ ಅಂಡಕೋಶದ ಮೇಲೆ ನೀರಿನ ಗುಳ್ಳೆ ಯಂತೆ ಇರುವುದನ್ನು ಪಿ ಸಿ ಓ ಡಿ ಎಂದು ಕರೆಯುತ್ತಾರೆ.

ಸಾಮನ್ಯವಾಗಿ ಮಹಿಳೆಯರಲ್ಲಿ 28–30 ದಿನಗಳ ಅವಧಿಗೊಮ್ಮೆ ಋತುಸ್ರಾವಾಗುತ್ತದೆ. ಮುಟ್ಟಾದ 11–14ನೇ ದಿನಗಳ ಮಧ್ಯೆ ಯಾವದಾದ್ರು ಅಂಡಕೋಶದಿಂದ ಅಂಡ ಬಿಡುಗಡೆಯಾಗುತ್ತದೆ.ಹೀಗೆ ಪ್ರತಿ ತಿಂಗಳು ಬಲ ಅಥವಾ ಎಡ ಅಂಡಾಶಯದಿಂದ ಒಂದು ಅಂಡಾಣು ಬಿಡುಗಡೆಯಾಗುತ್ತಿರುತ್ತದೆ ಹಾಗೂ ಗರ್ಭಧರಿಸಲು ಸಿದ್ಧವಾಗಿರುತ್ತದೆ. ಆದರೆ ಯಾರಲ್ಲಿ ಪಿ ಸಿ ಓ ಡಿ ಸಮಸ್ಯೆ ಇರುತ್ತದೆಯೇ ಅವರಲ್ಲಿ ಅಂಡಕೋಶದಿಂದ ಬಿಡುಗಡೆಯಾಗದೇ ಅಲ್ಲಿಯೇ ಅಪರಿಪಕ್ವವಾದ ಅಂಡಾಣುಗಳು ನೀರಿನ ಗುಳ್ಳೆಯಂತೆ ಅಂಡಕೋಶದ ಒಳಪದರದ ಮೇಲೆ ಉಳಿದು ಹೋಗುತ್ತವೆ.

ಕಾರಣಗಳು :
- ಹಾರ್ಮೋನ್ ಗಳ ಅಸಮತೋಲನ.
- ಸರಿಯಾದ ಜೀವನ ಶೈಲಿ ಇಲ್ಲದಿರುವುದು.
- ಅಧಿಕ ಮಾನಸಿಕ ಒತ್ತಡ .
- ಶಾರೀರಿಕ ವ್ಯಾಯಾಮದ ಕೊರತೆ.
- ಆಧುನಿಕ ಆಹಾರ ಪದ್ಧತಿ.
- ಅನುವಂಶಿಕ ಕಾರಣಗಳು.
- ಈ ಸಮಸ್ಯೆಗೆ ಖಚಿತವಾದ ಕಾರಣಗಳು ಇಲ್ಲಿಯವರೆಗೂ ತಿಳಿದು ಬಂದಿಲ್ಲ.
- ರಕ್ತದಲ್ಲಿ ಇನ್ಸುಲಿನ್ ಅಂಶವು ಹೆಚ್ಚಾಗಿ ಅದು ಟೆಸ್ಟೋಸ್ಟಿರಾನ್ ಅನ್ನುವ ಹಾರ್ಮೋನ ವನ್ನ ಬಿಡುಗಡೆಮಾಡುತ್ತದೆ ಇದು ಸ್ಥೂಲಕಾಯಕ್ಕೆ ಕಾರಣವಾಗಿ ಪಿ ಸಿ ಓ ಡಿ ಬರುತ್ತದೆ.

ಲಕ್ಷಣಗಳು :
- ಹೆಚ್ಚಿದ ಆಂಡ್ರೋಜನ್ ಹಾರ್ಮೋನ್ ಗಳ ಕಾರಣದಿಂದ ದೇಹದ ತೂಕದಲ್ಲಿ ಹೆಚ್ಚಳ, ಅನಿಯಮಿತ ಋತುಸ್ರಾವ ಬಂಜೆತನ ಉಂಟಾಗುತ್ತದೆ ಹಾಗೂ ಅಂಡಾಣು ಬಿಡುಗಡೆಗೆ ಅಡ್ಡಿಯಾಗಬಹುದು.
- ಮುಟ್ಟಿನ ವಿಳಂಬ, ಮುಟ್ಟಾಗದೆ ಇರುವುದು, ಅತಿ ಕಡಿಮೆ ಅಥವಾ ಯಾವಾಗಲಾದರೊಮ್ಮೆ ಅತಿಯಾದ ಋತುಸ್ರಾವ ಉಂಟಾಗಬಹುದು.
- ಬಂಜೆತನ : ಗರ್ಭಧರಿಸಲು ಸಾಧ್ಯವಾಗದಿರುವುದು.
- ಬೊಜ್ಜು ಶೇ :80 ರಷ್ಟು ಮಹಿಳೆಯರಲ್ಲಿ ಕಾಣಿಸಿಕೊಳ್ಳಬಹುದು
- ರೋಮಗಳು ಬೆಳೆಯುವುದು, ಮುಖ, ಎದೆ,ಹೊಟ್ಟೆ ಹಾಗೂ ತೊಡೆಯ ಭಾಗಗಳಲ್ಲಿ ಅತಿಯಾಗಿ ರೋಮಗಳು ಕಾಣಿಸಿಕೊಳ್ಳುವುದು.
- ಬಹುತೇಕ ಶೇ: 70 ರಷ್ಟು ಮಹಿಳೆಯರಲ್ಲಿ ಕೂದಲುಗಳ ಬೆಳವಣಿಗೆ ವಿಭಿನ್ನವಾಗಿರುತ್ತದೆ.
- ಕೂದಲು ಉದುರುವುದು.
- ಅತಿಯಾದ ಮೊಡವೆಗಳು ಹಾಗು ಸಾಮಾನ್ಯ ಚಿಕಿತ್ಸೆಗೆ ಗುಣವಾಗದಿರುವುದು.
- ಮುಖದ ಮೇಲೆ ದಪ್ಪಗಿನ ಮೊಡವೆಯ ಕಲೆಗಳು ಕಪ್ಪಾದ ಚರ್ಮ.
- ಸುಸ್ತಾಗುವಿಕೆ, ಕೆಲಸದಲ್ಲಿ ಆಸಕ್ತಿ ಇಲ್ಲದಿರುವುದು. ಭಾವನೆಗಳ ಏರುಪೇರು, ಬೇಗ ಕೋಪ ಬರುವುದು ದೊಡ್ಡ ಗಾತ್ರದ ಅಂಡಾಶಯಗಳು ಮತ್ತು ಅಂಡಾಶಯದ ಮೇಲೆ ಹಲವಾರು ಗುಳ್ಳೆಗಳು.
- ಋತುಚಕ್ರದ ದಿನಗಳಲ್ಲಿ ಋತುಸ್ರಾವದ ದಿನಗಳಲ್ಲಿ ಅತಿ ತೀವ್ರವಾದ ನೋವು ಕಾಣಿಸಿಕೊಳ್ಳುವುದು.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಪರಿಣಾಮಗಳು :
- ಬಂಜೆತನ ಗರ್ಭಧರಿಸಲು ಸಾಧ್ಯವಾಗದಿರುವುದು.
- ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು.
- ಕೊಲೆಸ್ಟ್ರಾಲ್ ಸಮಸ್ಯೆಗಳು ಅಧಿಕ ರಕ್ತದ ಹರಿವು.
- ಗರ್ಭಕೋಶದ ಕ್ಯಾನ್ಸರ್
- ಬೊಜ್ಜು.
- ಎಂಡೋಮೆಟ್ರಿಯಮ್, ಕ್ಯಾನ್ಸರ್,ಖಿನ್ನತೆ,ಮನಸ್ಥಿತಿಗಳ ಬದಲಾವಣೆ ಹಗಲು ನಿದ್ರೆ, ಗೊರಕೆ ಇತ್ಯಾದಿ.

ಪತ್ತೆ ಹಚ್ಚುವ ವಿಧಾನಗಳು:
- ಲಕ್ಷಣಗಳನ್ನು ವಿವರವಾಗಿ ತಿಳಿದುಕೊಳ್ಳುವುದರ ಮೂಲಕ
- ರಕ್ತ ಪರೀಕ್ಷೆ ವರದಿ
- ಹಾರ್ಮೋನುಗಳ ಪರೀಕ್ಷಾ ವರದಿ
- ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಇತ್ಯಾದಿ.

ಮುಂಜಾಗ್ರತಾ ಕ್ರಮಗಳು :
- ಹಣ್ಣು, ತರಕಾರಿ ಹಾಗೆಯೇ ಸಂಪೂರ್ಣ ಪೋಷಕಾಂಶಗಳಿರುವ ಆಹಾರದ ಸೇವನೆ.
- ಅತಿ ಹೆಚ್ಚು ಸಕ್ಕರೆ ಉಪ್ಪು ಕೆಫೀನ್ ಆಲ್ಕೋಹಾಲ್ ಇರುವ ವಸ್ತುಗಳ ಸೇವನೆ ಬಿಡಬೇಕು.
- ಧೂಮಪಾನ ವರ್ಜ್ಯ.
- ನಿಯಮಿತ ಆಹಾರ ಸೇವನೆ.
- ಅಧಿಕ ಒತ್ತಡವನ್ನು ಕಡಿಮೆ ಬಡಿಕೊಳ್ಳುವುದು.
- ಸರಿಯಾದ ವ್ಯಾಯಾಮ ಮಾಡುವುದು, ಯೋಗ ಪ್ರಾಣಾಯಾಮ ಮೊದಲಾದವುಗಳನ್ನು ಮಾಡುವುದು.
- ತೂಕ ಕಡಿಮೆ ಮಾಡುವುದು ಅಥವಾ ನಿಯಂತ್ರಣದಲ್ಲಿಡುವುದು.
- ಕೊಬ್ಬಿನ ಆಹಾರ ಸೇವನೆ ಮಾಡಬಾರದು. ಇದರಿಂದ ಡಯಾಬಿಟೀಸ್, ರಕ್ತದೊತ್ತಡದಂತಹ ಸಮಸ್ಯೆಗಳನ್ನು ದೂರ ಮಾಡಬಹುದು.
- ನಿಯಮಿತವಾಗಿ ನಿದ್ರೆ ಹಾಗೂ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಕುಡಿಯಬೇಕು. ತಕ್ಕ ಸಮಯಕ್ಕೆ ಪರೀಕ್ಷಿಸಿ ಕೊಂಡು ಅಗತ್ಯವಿರುವ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.

ಹೋಮಿಯೋಕೇರ್ ಚಿಕಿತ್ಸೆ :
ಹೋಮಿಯೋಕೇರ ನಲ್ಲಿ ವ್ಯಕ್ತಿಯ ಮಾನಸಿಕ ಶಾರರಿಕ ಪರಿಸ್ಥಿಗಳನ್ನು ಕೂಲಂಕುಷವಾಗಿ ಪರೀಕ್ಷಿಸಿ ಚಿಕಿತ್ಸೆಯನ್ನು ನೀಡಲಾಗುವುದು. ಇಲ್ಲಿನ ಕಾನ್ಸಿಟ್ಯೂಷನಲ್ ಚಿಕಿತ್ಸೆಯು ವ್ಯಕ್ತಿಯ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಕೂಡಾ ಸಹಾಯಕಾರಿಯಾಗಿದೆ. ಇಲ್ಲಿ ರೋಗಿಯ ಹಿಂದಿನ ಚಿಕಿತ್ಸೆಯ ಬಗ್ಗೆ ವಿವರ ಕುಟುಂಬದ ಹಿನ್ನಲೆ ಹಾಗೆ ಇನ್ನಿತರ ಮಾಹಿತಿಯ ಜೊತೆಗೆ ಒಂದು ಸೂಕ್ತವಾದ ಚಿಕಿತ್ಸೆಯನ್ನು ನೀಡಲಾಗುತ್ತದೆ. ಚಿಕಿತ್ಸೆಯ ಅವಧಿ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಈ ಬಗ್ಗೆ ಮಾಹಿತಿಯನ್ನು ನಮ್ಮ ಕ್ಲಿನಿಕ್ ಗಳಲ್ಲಿ ನೀಡಲಾಗುತ್ತದೆ ಹಾಗೂ ಚಿಕಿತ್ಸೆಯ ವಿವರಗಳನ್ನು ತಿಳಿಸಲಾಗುತ್ತದೆ.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ. ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಕನ್ನಡದ ತಾಣ


ಹಚ್ಚಹಸುರಿನ ಪ್ರಕೃತಿಯ ನಡುವಿರುವ ಚತುರ್ಮುಖ ಬಸದಿ ಗೊಮ್ಮಟಬೆಟ್ಟದಿಂದ ಹೀಗೆ ಕಾಣುತ್ತದೆ..

ಪ್ರತಿಬಿಂಬದ ಚತುರ್ಮುಖ ಬಸದಿ

ಕರಾವಳಿಯ ಮೂಡುಬಿದಿರೆ ಹಾಗೂ ಕಾರ್ಕಳ ಬಸದಿಗಳ ಬೀಡು. ಕರಿ ಕಲ್ಲಿಗೆ ಖ್ಯಾತವಾದ ಕಾರ್ಕಳದಲ್ಲಿ ಪ್ರವಾಸಿಗರನ್ನು ಸೆಳೆಯುವುದು ಚತುರ್ಮುಖ ಬಸದಿ. ಜಿನತತ್ವವನ್ನು ನಾಲ್ಕು ದಿಕ್ಕುಗಳಿಗೆ ಪಸರಿಸಿದ ರೂಪಕವಾಗಿ ಈ ಬಸದಿ ಭಾಸವಾಗುತ್ತದೆ.

ಗೀತಾ ಕುಂದಾಪುರ

ಕಾರ್ಕಳ ಹೆಸರು ಕೇಳಿದ ಕೂಡಲೇ ನೆನಪಿಗೆ ಬರುವುದೇ ಎಲ್ಲವನ್ನೂ ನೋಡಿಕೊಂಡು ಮುಗುಳ್ನಗುವಿನೊಂದಿಗೆ ಶಾಂತವಾಗಿ ನಿಂತಿರುವ ಗೊಮ್ಮಟೇಶ್ವರನ ಮೂರ್ತಿ. ಉಡುಪಿಯಿಂದ 40 ಕಿ.ಮೀ. ದೂರದಲ್ಲಿರುವ ಕಾರ್ಕಳದಲ್ಲಿ ಗೊಮ್ಮಟೇಶ್ವರ ಮಾತ್ರ ಅಲ್ಲ, ನೋಡಲು ಹಲವಾರು ಸ್ಥಳಗಳಿವೆ, ಅವುಗಳಲ್ಲಿ ಪ್ರಮುಖವಾದದ್ದು 'ಚತುರ್ಮುಖ ಬಸದಿ'.

ನಮ್ಮ ದೇವಾಲಯಗಳು ಕೇವಲ ಪ್ರಾರ್ಥನಾ ಮಂದಿರಗಳಲ್ಲ, ನಮ್ಮ ಪರಂಪರೆಯ ತಾಣವಾಗಿವೆ. ಇವು ನಮ್ಮ ಸಂಸ್ಕೃತಿಯನ್ನು ಸಾರುತ್ತವೆ. ಕಲೆಯ ವಿವಿಧ ಪ್ರಕಾರಗಳನ್ನು, ವಿಕಸನವನ್ನು ಎತ್ತಿ ತೋರಿಸುತ್ತವೆ. ದೇಶ, ಧರ್ಮ, ಕಾಲ ಬದಲಾದಂತೆ ಕಲೆಯಲ್ಲೂ ಬದಲಾವಣೆ ಗೋಚರಿಸುತ್ತದೆ. ಒಂದು ತರಹದಲ್ಲಿ ದೇವಾಲಯಗಳು ನಮ್ಮ ಪಠ್ಯಪುಸ್ತಕಗಳು, ಸ್ವಲ್ಪ ಸಮಯ ಕೊಟ್ಟು ಅಭ್ಯಾಸ ಮಾಡಿದರೂ ಹಲವಾರು ವಿಷಯಗಳು ನಮ್ಮ ಮುಂದೆ ತೆರೆದುಕೊಳ್ಳುತ್ತವೆ.

ಕಾರ್ಕಳದ ಅನಂತಶಯನ ದೇವಸ್ಥಾನದ ಸಮೀಪವೇ ಕಪ್ಪು ಶಿಲೆಯ ಬೆಟ್ಟದ ಮೇಲೆ ನಿಂತಿರುವ ಗೊಮ್ಮಟೇಶ್ವರ ಕಾಣಿಸಿದರೆ, ಎಡಬದಿಯ ಬೆಟ್ಟದ ಮೇಲೆ ಚತುರ್ಮುಖ ಬಸದಿ ಕಾಣಿಸುತ್ತದೆ. ಬಹಳ ಸುಂದರ ದೃಶ್ಯವದು. ಕಷ್ಟವಾದರೂ ನಮ್ಮ ಹಿರಿಯರು ಇಂತಹ ಜಾಗಗಳನ್ನೇ ಪ್ರಾರ್ಥನೆಯ ತಾಣವಾಗಿ ಆರಿಸಿಕೊಂಡಿದ್ದಾರೆ. ಬೆಟ್ಟದ ತುದಿಯಲ್ಲಿರುವ ಬಸದಿ ಸೇರಲು ಹೆಚ್ಚು ಕಷ್ಟಪಡಬೇಕಾಗಿಲ್ಲ, ಮೆಟ್ಟಿಲುಗಳಿವೆ. ಮೆಟ್ಟಿಲುಗಳ ಬುಡದಲ್ಲಿ ಪುರಾತತ್ವ ಇಲಾಖೆಯ ಮಾಹಿತಿ ನೀಡುವ ಫಲಕವಿದೆ.

ಚತುರ್ಮುಖ ಬಸದಿ, ಹೆಸರೇ ಹೇಳುವಂತೆ ಬಸದಿಯ ನಾಲ್ಕು ದಿಕ್ಕಿನಲ್ಲೂ ನಾಲ್ಕು ಹೆಬ್ಬಾಗಿಲುಗಳಿವೆ. ಬಸದಿಯ ಪ್ರತೀ ಭಾಗವೂ ಮತ್ತೊಂದರ ಪ್ರತಿಬಿಂಬದಂತಿದೆ. ಎತ್ತ ಕಡೆಯಿಂದ ಪ್ರವೇಶಿಸಿದರೂ ಜೈನ ತೀರ್ಥಂಕರರ ಮೂರ್ತಿ ಎದುರಾಗುತ್ತದೆ. 'ತ್ರಿಭುವನ ತಿಲಕ ಜಿನ ಚೈತ್ಯಾಲಯ' ಎಂದೂ ಕರೆಯಲ್ಪಡುವ ಈ ಜಿನ ಮಂದಿರದ ಗರ್ಭಗ್ರಹದಲ್ಲಿ 18, 19 ಮತ್ತು 20ನೇ ತೀರ್ಥಂಕರರಾದ ಅರನಾಥ, ಮಲ್ಲಿನಾಥ ಮತ್ತು ಮುನಿಸುವ್ರತರ ಮೂರ್ತಿಗಳು ಇವೆ. ಇವುಗಳು ನುಣುಪಾದ ಆಳೆತ್ತರದ ಕಪ್ಪು ಶಿಲೆಯ ಮೂರ್ತಿಗಳು. ಅಲ್ಲದೆ ಯಕ್ಷಿ ಪದ್ಮಾವತಿ ಮತ್ತು 24 ತೀರ್ಥಂಕರರ ಚಿಕ್ಕ ಮೂರ್ತಿಗಳೂ ಇವೆ. ಬಸದಿಯನ್ನು 'ರತ್ನತ್ರಯ ಧಾಮ' ಎಂದೂ ಕರೆಯುತ್ತಿದ್ದರೆಂದು ಅಲ್ಲಿರುವ ಶಾಸನದಿಂದ ತಿಳಿದು ಬರುತ್ತದೆ. ಇದನ್ನು ಕಟ್ಟಿಸಲು 30 ವರ್ಷಗಳು ಬೇಕಾಯಿತಂತೆ.

ಬಸದಿಯ ಸುತ್ತ ಕಲ್ಲಿನ ಕಂಬಗಳು, ಎತ್ತರದ ಕಲ್ಲಿನ ವೇದಿಕೆ ಮತ್ತು ಕಲ್ಲಿನ ಮುಚ್ಚಿಗೆ ಇರುವುದು ಸಾಮಾನ್ಯ. ಚತುರ್ಮುಖ ಬಸದಿಯೂ ಇದಕ್ಕೆ ಹೊರತಾಗಿಲ್ಲ, ಬಸದಿಯ ಸುತ್ತ 108 ಗ್ರಾನೈಟ್ ಕಂಬಗಳಿರುವ ವರಾಂಡವಿದೆ. ಪ್ರತಿಯೊಂದು ಕಂಬ ಏಕಶಿಲೆಯದ್ದಾಗಿದ್ದು ಸುಮಾರು 18 ಅಡಿ ಎತ್ತರವಿದೆ. ಕಂಬಗಳಲ್ಲಿ ಕೆತ್ತನೆಗಳೂ ಇದ್ದು ಎಲ್ಲವನ್ನೂ ನೋಡುತ್ತಾ ಹೋದರೆ ಸಾಕಷ್ಟು ಸಮಯ ಬೇಕು. ಬಸದಿಯ ಹೊರಗೆ ಶಿಲಾಶಾಸನವೊಂದು ಕಾಣಿಸುತ್ತದೆ.

ಬಸದಿಯ ಗೋಡೆಗಳಲ್ಲಿ ದೇವತೆಗಳ ಕೆತ್ತನೆಗಳು ಮತ್ತು ಕಲ್ಲಿನ ಮುಚ್ಚಿಗೆಯಲ್ಲಿ ಚಿತ್ತಾರಗಳಿದ್ದರೂ ಹೊಯ್ಸಳ ದೇವಸ್ಥಾನಗಳಲ್ಲಿರುವ ಶ್ರೀಮಂತ ವಾಸ್ತುಶಿಲ್ಪವಾಗಲಿ, ಮೂರ್ತಿಗಳಾಗಲಿ ಇಲ್ಲ, ಉತ್ತರ ಭಾರತದ ಜೈನ ಮಂದಿರಗಳಲ್ಲಿರುವ ಶ್ರೀಮಂತ ಕಾಷ್ಠಶಿಲ್ಪವಾಗಲಿ, ಮಾರ್ಬಲ್ಲಿನ ಅಲಂಕಾರವಾಗಲಿ ಇಲ್ಲಿಲ್ಲ. ಸರಳವಾಗಿ, ಪ್ರಶಾಂತವಾಗಿರುವುದೇ ಇಲ್ಲಿನ ಆಕರ್ಷಣೆ ಎನಿಸುತ್ತದೆ. ಬಸದಿಯ ಹೊರಗೆ ನಿಂತರೆ ಗೊಮ್ಮಟೇಶ್ವರನ ಮೂರ್ತಿಯಲ್ಲದೆ ಗದ್ದೆ, ಕಾಡುಮೇಡಿನ ಸುಂದರ ಕಾರ್ಕಳವನ್ನು ನೋಡಬಹುದು. ಹೀಗೆ ನಾಲ್ಕು ದಿಕ್ಕಿನಲ್ಲಿ ತೆರೆದುಕೊಳ್ಳುವ ಬಸದಿ ಬಹಳ ಕಡಿಮೆ ಎನ್ನುತ್ತಾರೆ ಇಲ್ಲಿ ಪೂಜೆ ಮಾಡುವವರು.

16ನೇ ಶತಮಾನದ ಸಂತಾರ ವಂಶಕ್ಕೆ ಸೇರಿದ ಇಮ್ಮಡಿ ಭೈರರಸ ಒಡೆಯನು ಇದನ್ನು ಕಟ್ಟಿಸಿದನಂತೆ, ಇನ್ನು ಕೆಲವರು ರಾಣಿ ಚೆನ್ನಭೈರವದೇವಿ ಕಟ್ಟಿಸಿದ್ದು ಎನ್ನುತ್ತಾರೆ. ಬಸದಿಯನ್ನು 15ನೇ ಶತಮಾನದಲ್ಲಿ ಜೈನ ಅರಸನಾದ ಪಾಂಡ್ಯದೇವನು ಕಟ್ಟಿಸಿದನೆಂಬ ಊಹೆಯೂ ಇದೆ.

ಈ ಸ್ಮಾರಕವೀಗ ಆರ್ಕಿಯಲಾಜಿಕಲ್ ಸರ್ವೇ ಆಫ್ ಇಂಡಿಯಾದ ಸುಪರ್ದಿಯಲ್ಲಿದೆ. ಪ್ರವೇಶಧನವಿಲ್ಲ, ವಿಪರೀತ ಬಿಸಿಲು, ಸೆಖೆ ಇರುವುದರಿಂದ ಬೆಳಿಗ್ಗೆ 10 ಗಂಟೆಯೊಳಗೆ ಅಥವಾ ಸಂಜೆಯ ನಾಲ್ಕು ಗಂಟೆಯ ನಂತರ ಸಂದರ್ಶಿಸುವುದು ಒಳಿತು.

ಕ್ರಿಸ್ತಪೂರ್ವ 500ರ ಸುಮಾರಿಗೆ ಉತ್ತರ ಭಾರತದ ಈಗಿನ ಪಾಟ್ನಾದಲ್ಲಿ ಹುಟ್ಟಿತು ಜೈನ ಧರ್ಮ. ಚಂದ್ರಗುಪ್ತ ಮೌರ್ಯ ರಾಜ್ಯವನ್ನು ತ್ಯಜಿಸಿ, ಜೈನ ಸನ್ಯಾಸಿಯಾಗಿ ಕರ್ನಾಟಕದ ಚಂದ್ರಗಿರಿ ಬೆಟ್ಟದಲ್ಲಿ ನೆಲೆಸಿದ. ಅಲ್ಲಿಂದ ದಕ್ಷಿಣ ಭಾರತದ ಹಲವು ರಾಜ್ಯಗಳಲ್ಲಿ ಜೈನ ಧರ್ಮ ಮಾನ್ಯತೆ ಪಡೆಯಿತು. ರಾಜರು ಜೈನ ಧರ್ಮದ ಪೋಷಕರಾದರು. ಇವರಲ್ಲಿ ಚಾಲುಕ್ಯ, ಕದಂಬ ಮತ್ತು ಹೊಯ್ಸಳರು ಮುಖ್ಯರಾದವರು. ಬಸದಿಗಳು, ಸ್ತಂಭಗಳು, ಗೊಮ್ಮಟ ಜೈನ ಧರ್ಮದ ಸಂಕೇತ ಮಾತ್ರ ಅಲ್ಲ ಸಂಸ್ಕೃತಿ ಮತ್ತು ವಾಸ್ತುಶಿಲ್ಪವೂ ಹೌದು. ಒಂದು ಕಾಲದಲ್ಲಿ ಕಾರ್ಕಳ ಜೈನಧರ್ಮದ ಪ್ರಮುಖ ಕೇಂದ್ರವಾಗಿತ್ತು. ಅದರ ಕುರುಹಾಗಿ 13 ಮೀಟರ್ ಎತ್ತರದ ಬಾಹುಬಲಿ ಮತ್ತು 18 ಬಸದಿಗಳು ಇಲ್ಲಿವೆ.

ಚತುರ್ಮುಖ ಬಸದಿಯ ಹೊರಾಂಗಣ ಒಂದಕ್ಕೊಂದರ ಪ್ರತಿಬಿಂಬ

ಕಾರ್ಕಳದಲ್ಲಿ ಚತುರ್ಮುಖ ಬಸದಿಯಲ್ಲದೆ ಒಟ್ಟು 18 ಬಸದಿಗಳಿವೆ. ಗೊಮ್ಮಟೇಶ್ವರ, ಅನಂತಪದ್ಮನಾಭ ದೇವಸ್ಥಾನಗಳನ್ನು ಪ್ರವಾಸಿಗರು ನೋಡಬಹುದು. ಕಾರ್ಕಳವೆಂದರೆ ಕಪ್ಪು ಕಲ್ಲು ಎಂದರ್ಥ. ಹೆಸರಿಗೆ ತಕ್ಕಂತೆ ಅಲ್ಲಲ್ಲಿ ಕಪ್ಪು ಬಂಡೆಗಳು ಕಂಡು ಬರುತ್ತವೆ, ಆದರೆ ಸುತ್ತಮುತ್ತ ಬೇಸಿಗೆ ಕಾಲದಲ್ಲೂ ತುಂಬಿರುವ ಕೆರೆಗಳಿವೆ, ನಮ್ಮ ಕಣ್ಮನ ತಣಿಸುವ ಕೆರೆಗಳೆಂದರೆ ಆನೆ ಕೆರೆ, ರಾಮಸಮುದ್ರ ಕೆರೆ, ಮಠದ ಕೆರೆ, ಕಮಲ ಕೆರೆ.

ಕಾರ್ಕಳದಿಂದ 19 ಕಿ.ಮೀ. ದೂರದಲ್ಲಿರುವ ಮೂಡುಬಿದರೆಯಲ್ಲಿ ಪ್ರಸಿದ್ಧ ಸಾವಿರ ಕಂಬದ ಬಸದಿಯಿದೆ. ❖

ಆಹಾ! ಕನ್ನಡಂಗಳ್!

10ನೇ ಪುಟದಿಂದ....

ಕನ್ನಡವನ್ನೇ ವೃತ್ತಿಯನ್ನಾಗಿಯೂ ಬದುಕಾಗಿಯೂ ಮಾಡಿಕೊಂಡ ನನ್ನಂಥವರಿಗೆ ಧನ, ಧಾನ್ಯ, ಮನೆ, ಮಾನ್ಯ ಎಲ್ಲ ಸೌಭಾಗ್ಯಗಳನ್ನು ಕನ್ನಡವೇ ಪ್ರಸಾದಿಸಿದೆ. ಕನ್ನಡದ ಶಕ್ತಿಯ ಕಿಂಚಿತ್ ಅರಿವಿರುವ ನನ್ನಂಥವರ ಸರ್ವೇಂದ್ರಿಯಗಳನ್ನೂ ಕನ್ನಡವೇ ತುಂಬಿಕೊಂಡಿದೆ.

'ಕನ್ನಡವನೆ ಕುಣಿದಾಡುವುದೆನ್ನೆದೆ' 'ಕನ್ನಡ ಕನ್ನಡ ಹಾ ಸವಿ ಕನ್ನಡ' ಎಂದು ಹಾಡಿದ ಕವಿ ಕೇವಲ ಅಭಿಮಾನಕ್ಕೋ, ಹೊಟ್ಟೆಪಾಡಿಗೋ ಹಾಗೆ ಹಾಡಿರಲಾರರು ಎಂದು ನಾವು ನಂಬಬೇಕಿದೆ. ಅಂಥ ನಂಬುಗೆ ಒಡಮೂಡಬೇಕೆಂದರೆ ಮೊದಲನೆಯದು, ನಮ್ಮ ಭಾಷೆಯನ್ನು ನಾವು ಪ್ರೀತಿಸಬೇಕು. ಎರಡನೆಯದು, ಅದರ ಶಕ್ತಿ ಸಂಪನ್ಮೂಲಕ್ಕೆ ನಮ್ಮನ್ನು ತೆರೆದುಕೊಳ್ಳಬೇಕು.

ಭಾರತ ದೇಶದ ಬಹುದೊಡ್ಡ ವೈಶಿಷ್ಟ್ಯವೆಂದರೆ ಅದರ 'ವೈವಿಧ್ಯ'. ಇಡೀ ಜಗತ್ತಿನಲ್ಲಿರುವ ಭಾಷೆಗಳ ಪೈಕಿ ಅರ್ಧಕ್ಕಿಂತ ಹೆಚ್ಚುಭಾಷೆಗಳು ನಮ್ಮ ಭಾರತದಲ್ಲೇ ಇವೆ. ಭಾಷೆಯೊಂದೇ ಅಲ್ಲ. ಇಲ್ಲಿಯ ಸಂಸ್ಕೃತಿ, ನಡವಳಿಕೆ, ಆಚಾರ ವಿಚಾರಗಳು, ಧರ್ಮ, ಜಾತಿ, ಆಹಾರ, ಬಟ್ಟೆಬರೆ, ಕಸುಬು, ಕಲೆಗಾರಿಕೆ ಒಂದಾ ಎರಡಾ? ಇಲ್ಲಿರುವಷ್ಟು ವೈವಿಧ್ಯ, ಜಗತ್ತಿನ ಯಾವ ದೇಶದಲ್ಲೂ ಇಲ್ಲ, ಇಲ್ಲವೇ ಇಲ್ಲ. 'ವಿವಿಧತೆಯಲ್ಲಿ ಏಕತೆ ಅನ್ನುವುದು ಈ ದೇಶದ ಮಹಾನ್ ಆದರ್ಶ. ಈ ವಿವಿಧತೆಯನ್ನು ಒಪ್ಪಿಕೊಳ್ಳದೇ ಗೌರವಿಸದೇ ನಮ್ಮ ದೇಶಕ್ಕೆ ಅನ್ಯ ಮಾರ್ಗವೇ ಇಲ್ಲ. ಹಾಗೊಂದು ವೇಳೆ ನಮ್ಮಿಂದ ಅನ್ಯವಾದುದನ್ನು ನಾವು ಟೀಕೆ ಮಾಡುತ್ತೇವೆಂದರೆ, ವಿಮರ್ಶೆ ಮಾಡುತ್ತೇವೆಂದರೆ ಅದು ಸಂಘರ್ಷಕ್ಕೆ, ಸರ್ವನಾಶಕ್ಕೆ ಮುಖ ಮಾಡಿದಂತೆ. ಕವಿ ಕುವೆಂಪು ಹೇಳುವ ಮಾತನ್ನು ನಾವು ಕೇಳಬೇಕು. 'ನಾವು ವಿರೋಧ, ವಿಮರ್ಶೆ ಮಾಡಬೇಕೆಂದರೆ ಅದು ನಮ್ಮಿಂದಲೇ ಆರಂಭವಾಗಬೇಕು'. ಆ ಮಾತಿರಲಿ. ನಾವು ಕನ್ನಡದ ಕಡೆಗೆ ಬರೋಣ.

ಭಾರತದಲ್ಲಿ ಎಷ್ಟೆಲ್ಲ ವೈವಿಧ್ಯಗಳಿರುವಂತೆಯೇ ಆ ಭಾರತ ಜನನಿಯ ತನು ಜಾತೆಯಲ್ಲವೇ ಕನ್ನಡ ನಾಡು! ನಮ್ಮ ನಾಡಿನಲ್ಲೂ ನಮ್ಮ ಭಾಷೆಯಲ್ಲೂ ವೈವಿಧ್ಯವಿದೆ. ಅದಕ್ಕೆ ನಮ್ಮ ಪೂರ್ವಸೂರಿಗಳು 'ಕನ್ನಡಂಗಳ್' ಎಂಬ ಮಾತನ್ನು ಆಡಿದ್ದು. ಕನ್ನಡದಲ್ಲೇ ಎಷ್ಟು ಕನ್ನಡಗಳಿವೆಯಲ್ಲಾ? ಕನ್ನಡಕ್ಕೆ ಶಿಷ್ಟ ಭಾಷೆ, ಗ್ರಂಥ ಭಾಷೆ ಅಂತ ಒಂದಿರುವ ಹಾಗೆ ಬೇಕಾದಷ್ಟು ಆಡುಭಾಷೆಗಳಿವೆ. ಭಾಷೆಗೊಂದು ಲಯ, ಸೊಗಸು, ಸೊಗಡು ಅಂತ ಇರುತ್ತದೆಯಲ್ಲ, ಅದು ಗ್ರಂಥ ಭಾಷೆಗಿಂತ ಆಡು ಭಾಷೆಗಳಲ್ಲೇ ಹೆಚ್ಚು (Dialects).

ಆಡುಭಾಷೆ ಎಂದರೆ, ಆ ಪರಿಕಲ್ಪನೆ ಹೇಳುವ ಹಾಗೆ ಅದು ಆಡುವ ಭಾಷೆ. ಬರೆಯುವ ಭಾಷೆ ಅಲ್ಲ. ಬರೆಯಲು ಪ್ರಯತ್ನಿಸಬಹುದೇ ವಿನಾ ಅದರ ಬಾಗು, ಬಳುಕು, ಬನಿ ಬೆರಗುಗಳನ್ನೆಲ್ಲಾ ಬರಹಕ್ಕಿಳಿಸುವುದು ಸಾಧ್ಯವಿಲ್ಲ. ಯಾಕೆಂದರೆ ನಮ್ಮ ವರ್ಣಮಾಲೆಗೆ ಆಡುಭಾಷೆಗಳನ್ನು ಹಿಡಿಯುವುದು ಆಗುವುದೇ ಇಲ್ಲ. ಇದು ಕನ್ನಡಕ್ಕೆ ಮಾತ್ರ ಹೇಳುವ ಮಾತಲ್ಲ. ಯಾವ ಭಾಷೆಯಲ್ಲೂ ಅದರ ಆಡುಭಾಷೆಯನ್ನು ಅಕ್ಷರಗಳಲ್ಲಿ ಹಿಡಿಯುವುದಕ್ಕಾಗುವುದಿಲ್ಲ. ಅಷ್ಟು ಮಾತ್ರವಲ್ಲ, ಆಡುಭಾಷೆಯ ಅರ್ಥಗಳನ್ನು ನಿಘಂಟಿನಲ್ಲಿ ಹಿಡಿಯುವುದೂ ಕಷ್ಟವೇ. ಯಾಕೆಂದರೆ ಆಡುಭಾಷೆಗೆ ಅದರ ಅರ್ಥಕ್ಕಿಂತ ಅಭಿಪ್ರಾಯ ಮುಖ್ಯ. ನಮ್ಮಲ್ಲಿ ಎಷ್ಟೊಂದು ಆಡುಭಾಷೆಗಳಿವೆ ನೋಡಿ. ಸ್ಥೂಲವಾಗಿ ಹೇಳಬೇಕೆಂದರೆ ಬಯಲುಸೀಮೆ ಕನ್ನಡ, ಕರಾವಳಿ ಕನ್ನಡ, ಧಾರವಾಡ ಕನ್ನಡ, ಹೈದರಾಬಾದ್ ಕರ್ನಾಟಕ ಕನ್ನಡ, ಮುಂಬೈ ಕರ್ನಾಟಕದ ಕನ್ನಡ, ಕೊಡಗಿನ ಕನ್ನಡ, ಘಟ್ಟದ ಕನ್ನಡ... ಇದೇನೂ ಶಾಸ್ತ್ರೀಯ ವಿಭಾಗವಲ್ಲ. ಹಾಗೆಯೇ ಒಂದೊಂದರಲ್ಲೂ ಮತ್ತೆ ಬಗೆಬಗೆ ಆಡುಭಾಷೆಗಳಿವೆ. ಬಯಲುಸೀಮೆ ಕನ್ನಡದಲ್ಲೇ ಮಂಡ್ಯದ ಕನ್ನಡ, ಮೈಸೂರಿನ ಕನ್ನಡ, ಹಾಸನದ ಕನ್ನಡ, ತುಮಕೂರಿನ ಕನ್ನಡ, ಬೆಂಗಳೂರಿನ ಕನ್ನಡ ಇವೆಲ್ಲಾ ಬೇರೆ ಬೇರೆ. ಮಂಡ್ಯದ ಕನ್ನಡದಲ್ಲೂ ಶ್ರೀರಂಗಪಟ್ಟಣ – ಪಾಂಡವಪುರದ ಕನ್ನಡ ಬೇರೆ, ಮಂಡ್ಯ-ಮದ್ದೂರಿನ ಕನ್ನಡ ಬೇರೆ, ನಾಗಮಂಗಲದ ಕನ್ನಡ ಬೇರೆ, ಮಳವಳ್ಳಿ ಕನ್ನಡ ಬೇರೆ, ಕೆ.ಆರ್.ಪೇಟೆ ಕನ್ನಡ ಬೇರೆ, ಇನ್ನು ಈ ಕನ್ನಡಗಳಲ್ಲೇ ಬ್ರಾಹ್ಮಣರ ಕನ್ನಡ ಬೇರೆ, ಒಕ್ಕಲಿಗರ ಕನ್ನಡ ಬೇರೆ, ದಲಿತರ ಕನ್ನಡ ಬೇರೆ, ಮುಸ್ಲಿಮರ ಕನ್ನಡ ಬೇರೆ, ಒಕ್ಕಲಿಗರಲ್ಲೂ ಕನ್ನಡ ಬೇರೆ, ಮರಸು ಒಕ್ಕಲಿಗರು, ರೆಡ್ಡೊಕ್ಕಲಿಗರ ಕನ್ನಡ ಬೇರೆ.



ಕರಾವಳಿಗೆ ಹೋದರೆ ಮಂಗಳೂರು ಕನ್ನಡವೇ ಬೇರೆ, ಸುಳ್ಯ, ಪುತ್ತೂರುಗಳ ಕನ್ನಡವೇ ಬೇರೆ, ಕುಂದಾಪುರ ಕನ್ನಡವಂತೂ ಬೇರೆಯೇ. ಹಾಗೇ ಉತ್ತರ ಕನ್ನಡದ ಕನ್ನಡ ಬೇರೆ. ಇನ್ನು ಈ ವಿವರವನ್ನು ಲಂಬಿಸಲಾರೆ. ಜಿಲ್ಲೆಗೊಂದು ಕನ್ನಡ, ತಾಲ್ಲೂಕಿಗೊಂದು ಕನ್ನಡ, ಊರಿಗೊಂದು ಕನ್ನಡ, ಜಾತಿಗೊಂದು ಕನ್ನಡ, ಕಸುಬಿಗೊಂದು ಕನ್ನಡ, ಎಷ್ಟು ಕನ್ನಡಗಳು! ಮತ್ತೆ ನಮ್ಮ ಕಲಾ ಪ್ರಕಾರಗಳ ಕನ್ನಡವನ್ನೂ ಯೋಚಿಸಿ. ಕಥೆ ಹೇಳುವುದಕ್ಕೊಂದು ಕನ್ನಡ, ಪದ ಹೇಳುವುದಕ್ಕೊಂದು ಕನ್ನಡ, ಯಕ್ಷಗಾನಕ್ಕೊಂದು ಕನ್ನಡ, ಸಾಮಗಾನಕ್ಕೊಂದು ಕನ್ನಡ, ಭಜನೆಗೊಂದು ಕನ್ನಡ, ಹರಿಕತೆಗೊಂದು ಕನ್ನಡ, ಪೌರಾಣಿಕ ನಾಟಕಗಳಿಗೊಂದು ಕನ್ನಡ, ಐತಿಹಾಸಿಕ, ಸಾಮಾಜಿಕ ನಾಟಕಗಳಿಗೆ ಬೇರೆಯದೇ ಕನ್ನಡ. ಯಾವ ಕನ್ನಡ ಸರಿ? ಯಾವುದು ಸರಿಯಲ್ಲ? ಯಾವುದು ಮೇಲು?

ಯಾವುದು ಕೀಳು? ವೈವಿಧ್ಯವನ್ನು ಗೌರವಿಸುವ, ಪ್ರೀತಿಸುವ ಮನಸ್ಸಿಗೆ ಇದು ಕೇಳಬೇಕಾದ ಪ್ರಶ್ನೆಯೇ ಅಲ್ಲ.

ಆಯಾ ಆಡುಭಾಷೆಗಳೆಲ್ಲವೂ ಆಯಾ ಜನಬದುಕಿನ ಸರ್ವ ಅನುಭವಗಳನ್ನೂ ಸೆರೆಹಿಡಿದುಕೊಂಡಿರುತ್ತವೆ. ನಮ್ಮ ಜೀವಕೋಶಗಳಲ್ಲಿರುವ ವಂಶವಾಹಿಗಳಲ್ಲಿ (Genes) ನಮ್ಮ ಮನುಕುಲದ, ನಮ್ಮ ವಂಶದ, ನಮ್ಮ ರಕ್ತಧಾರೆಯ ಗುಣಗಳೆಲ್ಲವೂ ಮುದ್ರೆಗೊಂಡಿರುವ ಹಾಗೆ.

ಕನ್ನಡದ ಶಿಷ್ಟ ಸಾಹಿತ್ಯವನ್ನು ಓದಿ ಆನಂದಿಸುವ ಹಾಗೆಯೇ ಕನ್ನಡದ ಆಡುಭಾಷೆಗಳನ್ನೂ ಕೇಳಿ ಆನಂದಿಸಿದರೆ, ಗೌರವಿಸಿದರೆ ಕನ್ನಡಾನುಭವದ ನಿಧಿಯೊಂದು ತೆರೆದುಕೊಳ್ಳುತ್ತದೆ.

'ಇಂಗಿ ಹೋಗುತ್ತಿದೆ ಇಂಗ್ಲಿಷಿನ ಮರುಭೂಮಿಯಲಿ
ನಮ್ಮ ಮಕ್ಕಳ ಬುದ್ಧಿಶಕ್ತಿ ಪ್ರತಿಭಾ!

– ಕುವೆಂಪು ❖

ಪ್ರತಿಕ್ರಿಯೆ

ಆ ಮಾಹಿತಿ ಯಾವುದೂ ದಿಟವಲ್ಲ

ಈ ವರ್ಷದ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ 44ನೇ ಪುಟದಲ್ಲಿ 'ಸುಬ್ಬಣ ಸೋತು, ನಾನು ಗೆದ್ದಿದ್ದೆ!' ಎಂಬ ತಲೆಬರಹದಡಿ ಎಚ್. ಜನಾರ್ದನ್ ಅವರು ಆಡಿರುವ ಮಾತಿನ ಮುಖ್ಯಾಂಶಗಳಲ್ಲಿ ಯಾವುದೂ ದಿಟವಲ್ಲ. ವಾಸ್ತವಾಂಶಗಳು (facts) ಹೀಗಿವೆ:

ನಾನು ಮತ್ತು ಸುರೇಶ್ ಶೆಟ್ಟಿಯವರು ರಾಷ್ಟ್ರೀಯ ನಾಟಕಶಾಲೆಗೆ ಸೇರಿದ್ದು 1978ರಲ್ಲಿ. ಬಸವಲಿಂಗಯ್ಯನವರು ಅಲ್ಲಿಗೆ ಸೇರಿದ್ದು 1981ರಲ್ಲಿ. ಶೆಟ್ಟಿಯವರಾಗಲಿ, ನಾನಾಗಲಿ, ಬಸವಲಿಂಗಯ್ಯನವರಾಗಲಿ 'ಗ್ರಾಮೀಣ ಪ್ರದೇಶದಲ್ಲಿ ಬೆಳೆದವರು' ಅಲ್ಲ.

ಆಗೆಲ್ಲ ಅರ್ಜಿದಾರರು 'ಶಿಫಾರಸು' ಪತ್ರಗಳನ್ನು ಸಲ್ಲಿಸಬೇಕಿರಲಿಲ್ಲ. ಅರ್ಜಿ ನಮೂನೆಯಲ್ಲಿದ್ದ ತೀರ ಚಿಕ್ಕ ಕಂಡಿಕೆಯಲ್ಲಿ ರಂಗಭೂಮಿಯ ಹಿರಿಯರಿಬ್ಬರ ಹೆಸರು, ವಿಳಾಸ ಬರೆದು, ಅವರ ಸಹಿ ತೆಗೆದುಕೊಂಡು ಸಲ್ಲಿಸಬೇಕಿತ್ತು, ಅಷ್ಟೆ. ಶೆಟ್ಟಿಯವರು ಮತ್ತು ನಾನು, ನಮ್ಮಿಬ್ಬರ ಅರ್ಜಿಗಳಲ್ಲಿ ತಮ್ಮ ಹೆಸರು, ವಿಳಾಸ ಬರೆದು ಸಹಿ ಮಾಡಿದವರು ಜನಾರ್ದನ ಅವರಲ್ಲ. 1978ರಲ್ಲಿ ನನಗೆ ಇಪ್ಪತ್ತೊಂದರ ಹರೆಯ; ಶೆಟ್ಟಿಯವರಿಗೆ ಇಪ್ಪತ್ತನಾಲ್ಕು; ಜನಾರ್ದನ ಅವರಿಗೆ ಇಪ್ಪತ್ತು.

ಯಾರೇ ಆಗಲಿ, ಆ ಶಾಲೆಗೆ ಶಿಫಾರಸಿನ ಬಲದ ಮೇಲೆ ಸೇರಲಾಗುವುದಿಲ್ಲ.

ಈಗ್ಗೆ ಹಲವು ವರ್ಷಗಳ ಹಿಂದೆ ತೀರಿಕೊಂಡ ಸಿ. ಜಿ. ಕೃಷ್ಣಸ್ವಾಮಿ (ಸಿಜಿಕೆ) ಅವರು 1977ರ ನವೆಂಬರ್ 5ನೇ ತಾರೀಕಿನಿಂದ 1981ರ ಫೆಬ್ರವರಿ 28ನೇ ತಾರೀಕಿನವರೆಗೆ 'ಸಮುದಾಯ'ದ ಪ್ರಧಾನ ಕಾರ್ಯದರ್ಶಿಯಾಗಿದ್ದರು. 1981ರ ಅದೇ ದಿನ ಸಿಜಿಕೆಯವರು ಆ ಸಂಸ್ಥೆಯ ಅಧ್ಯಕ್ಷರಾಗಿ, ಜನಾರ್ದನ್ ಅವರು ಅದರ ಪ್ರಧಾನ ಕಾರ್ಯದರ್ಶಿಯಾದರು. ಆ ವೇಳೆಗೆ ನಾನು ಮತ್ತು ಶೆಟ್ಟಿಯವರು ಆ ಶಾಲೆಯಲ್ಲಿನ ನಮ್ಮ ವ್ಯಾಸಂಗದ ಮೂರನೇ ವರ್ಷದಲ್ಲಿದ್ದೆವು. ಜನಾರ್ದನ್ ಅವರು ಆ ಶಾಲೆಯ ವಿದ್ಯಾರ್ಥಿಯಾದದ್ದು 1983ರಲ್ಲಿ. ಆಹೊತ್ತಿಗೆ ನಾನು ಮತ್ತು ಶೆಟ್ಟಿಯವರು ಅಲ್ಲಿಯೇ ಮತ್ತೊಂದು, ನಾಲ್ಕನೇ, ವರ್ಷದ ವಿಶೇಷ ಅಧ್ಯಯನ ಮುಗಿಸಿ ಹೊರಬಂದಿದ್ದೆವು

ಇವಿಷ್ಟು ಅತಿಖಚಿತ ವಾಸ್ತವಾಂಶಗಳು.

ಇನ್ನು, ಗುರುಜನರಾದ ಕೆ.ವಿ. ಸುಬ್ಬಣ್ಣ ಮತ್ತು ಬಿ.ವಿ. ಕಾರಂತ ಅವರನ್ನು ಕುರಿತು ಆ ಬರಹದಲ್ಲಿರುವುದೆಲ್ಲವೂ ಶುದ್ಧ ಅಬದ್ಧ.

ರಘುನಂದನ, ಬೆಂಗಳೂರು

ಮುನ್ನೋಟ 31-10-2021 ರಿಂದ 06-11-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಕೃಷಿಭೂಮಿಯ ಖರೀದಿ ಬಗ್ಗೆ ಮನೆಯವರೊಡನೆ ಚರ್ಚೆ ಮಾಡುವಿರಿ. ಕೆಟ್ಟು ನಿಂತಿದ್ದ ಯಂತ್ರೋಪಕರಣಗಳ ದುರಸ್ತಿಯಿಂದ ಉದ್ದಿಮೆಯಲ್ಲಿ ತಯಾರಿಕೆ ಹೆಚ್ಚುತ್ತದೆ. ಮನೆಯವರಿಗೆ ಹೊಸ ವಸ್ತ್ರಗಳನ್ನು ಕೊಂಡುಕೊಳ್ಳುವಿರಿ. ನಿಮ್ಮದೇ ತಪ್ಪಿನಿಂದ ಶತ್ರುಬಾಧೆ ಉಲ್ಬಣಗೊಳ್ಳುವ ಸಾಧ್ಯತೆಗಳಿವೆ. ವ್ಯವಹಾರಗಳ ಮಾತುಕತೆಯ ನಿಮಿತ್ತ ದೂರ ಪ್ರಯಾಣ ಮಾಡುವ ಸಾಧ್ಯತೆಗಳಿವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಸಂಪತ್ತಿನಲ್ಲಿ ಸ್ವಲ್ಪ ವೃದ್ಧಿಯನ್ನು ಕಂಡುಕೊಳ್ಳುವಿರಿ. ನೌಕಾಪಡೆಯಲ್ಲಿ ಕೆಲಸ ಮಾಡುವ ಕೆಲವರಿಗೆ ಬಡ್ತಿ ದೊರೆಯುತ್ತದೆ. ಕೆಲವು ಹಿರಿಯ ಅಧಿಕಾರಿಗಳಿಗೆ ರಾಜಕಾರಣಿಗಳಿಂದ ಕಿರಿಕಿರಿ ಉಂಟಾಗಬಹುದು. ಮಕ್ಕಳು ಉದ್ಯೋಗದ ನಿಮಿತ್ತ ದೂರ ಪ್ರಯಾಣ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಮಹಿಳೆಯರಿಗೆ ಆರ್ಥಿಕ ಸಬಲತೆಗೆ ಬೇಕಾದ ಅನುಕೂಲತೆಗಳು ಒದಗಿಬರುತ್ತವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಆರ್ಥಿಕ ಸಂಪನ್ಮೂಲಗಳು ನಿಮ್ಮ ಶ್ರಮದಿಂದ ನಿಧಾನವಾಗಿ ಏರಿಕೆ ಆಗುತ್ತವೆ. ಹಣಕಾಸಿನ ವಿಚಾರದಲ್ಲಿ ಬಹಳ ಎಚ್ಚರಿಕೆಯನ್ನು ವಹಿಸುವುದು ಒಳ್ಳೆಯದು. ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ಸಾಮರ್ಥ್ಯ ನಿಮಗೆ ಒದಗುತ್ತದೆ. ವ್ಯವಹಾರಗಳಲ್ಲಿ ರಾಜಿಯಾಗದೆ ನಿಮ್ಮದೇ ಅಭಿಪ್ರಾಯವನ್ನು ಮುಂದುವರೆಸಿದಲ್ಲಿ ನಿಮಗೆ ಲಾಭವಿದೆ. ಕೃಷಿ ಕ್ಷೇತ್ರದಲ್ಲಿ ಹೂಡಿಕೆಯನ್ನು ಹೆಚ್ಚು ಮಾಡುವ ಅವಕಾಶಗಳಿವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆರ್ಥಿಕ ಸ್ಥಿತಿಯು ಈ ವಾರ ಉತ್ತಮವೆನಿಸುವಷ್ಟು ಇರುತ್ತದೆ. ಹಳೆಯ ಬಾಕಿ ಹಣ ವಸೂಲಾಗಿ ಮನಸ್ಸಿಗೆ ಹಿತವೆನಿಸುತ್ತದೆ. ಬಂಧುಗಳಿಂದ ಬರುವ ಕೆಲವು ನಿಂದನೆಗಳನ್ನು ಅನಿವಾರ್ಯ ಕಾರಣಗಳಿಂದಾಗಿ ತಡೆದುಕೊಳ್ಳಬೇಕಾದೀತು. ನೂತನ ಪಾಲುದಾರರಿಂದ ನಿಮ್ಮ ಯೋಜನೆಗಳಿಗೆ ಸೂಕ್ತ ಸಹಕಾರ ದೊರೆಯುತ್ತದೆ. ಯಾವುದೇ ವಿಚಾರದಲ್ಲೂ ಅವಸರದ ನಿರ್ಧಾರಗಳು ಬೇಡವೇಬೇಡ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಕೆಲವರಿಗೆ ಅವರ ಹವ್ಯಾಸವೇ ವೃತ್ತಿಯಾಗಿ ಪರಿವರ್ತನೆಗೊಂಡು ಆದಾಯ ತರುತ್ತದೆ. ಅನವಶ್ಯಕ ವ್ಯವಹಾರಗಳಲ್ಲಿ ಭಾಗಿಯಾಗುವುದರಿಂದ ನಷ್ಟದ ಜೊತೆಗೆ ಆರೋಪಗಳನ್ನೂ ಎದುರಿಸಬೇಕಾದ ಸಂದರ್ಭವಿದೆ. ಆದ್ದರಿಂದ ಯೋಚಿಸಿ ವ್ಯವಹಾರಕ್ಕೆ ಕೈ ಹಾಕಿರಿ. ದೂರ ಪ್ರಯಾಣದ ವೇಳೆ ನಿಮ್ಮ ಜೊತೆಗಿರುವ ವಸ್ತುಗಳ ಬಗ್ಗೆ ಬಹಳ ಎಚ್ಚರವಿರಲಿ. ಹಣ್ಣುಗಳ ಸಗಟು ವ್ಯಾಪಾರಿಗಳಿಗೆ ಲಾಭವಿರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಕಲಾವಿದರುಗಳು ತಮ್ಮ ಆಕರ್ಷಣೀಯ ನಡವಳಿಕೆಯಿಂದಾಗಿ ಹೆಚ್ಚು ಅಭಿಮಾನಿಗಳನ್ನು ಹೊಂದುವರು. ವೃತ್ತಿಯಲ್ಲಿ ಹೆಚ್ಚಿನ ಒತ್ತಡವಿದ್ದರೂ ತೋರಿಸಿಕೊಳ್ಳದೆ ಸಮಾಧಾನವಾಗಿ ಕೆಲಸ ಮಾಡುವಿರಿ. ಸಮರ್ಥ ಕಾರ್ಯಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ಗೌರವ ಪಡೆಯುವಿರಿ. ಸರ್ಕಾರಿ ನೌಕರರಿಗೆ ಅನಿರೀಕ್ಷಿತ ತಪಾಸಣೆಯಿಂದ ಮುಜುಗರ ಉಂಟಾಗುವುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖ 1,2,3

ವ್ಯವಸಾಯದಲ್ಲಿನ ಅಭಿವೃದ್ಧಿಯಿಂದಾಗಿ ಆದಾಯದಲ್ಲಿ ಹೆಚ್ಚಳ ಕಾಣಬಹುದು. ಸಹೋದ್ಯೋಗಿಗಳೊಂದಿಗೆ ವಿನಾಕಾರಣ ಮನಃಸ್ತಾಪ ಮಾಡಿಕೊಳ್ಳುವಿರಿ. ಮಹಿಳಾ ಸಹೋದ್ಯೋಗಿಗಳು ನಿಮ್ಮ ವಿರುದ್ಧ ತಿರುಗಿಬೀಳುವ ಸಾಧ್ಯತೆಗಳಿವೆ. ನಿಮ್ಮ ಗುರಿ ಸಾಧನೆಯಲ್ಲಿ ಯಶಸ್ಸನ್ನು ಕಾಣಲು ಕಷ್ಟ ಪಡುವಿರಿ. ಮಹಿಳೆಯರ ಮನೋಭಿಲಾಷೆಗಳು ಈಡೇರುತ್ತವೆ.

ವೃಶ್ಚಿಕ — ವಿಶಾಖ 4 ಅನೂರಾಧ, ಜ್ಯೇಷ್ಠ

ಉದ್ಯಮ ನಡೆಸುವವರಿಗೆ ಸಾಕಷ್ಟು ಪ್ರತಿಸ್ಪರ್ಧಿಗಳು ಎದುರಾದರೂ ಆತಂಕ ವಿರುವುದಿಲ್ಲ. ಸರ್ಕಾರದ ಉನ್ನತ ಹುದ್ದೆಯಲ್ಲಿರುವ ವ್ಯಕ್ತಿಯಿಂದ ನಿಮ್ಮ ಉದ್ಯಮಕ್ಕೆ ಸಹಾಯ ಹರಿದುಬರುತ್ತದೆ. ನಿಮ್ಮ ಕಾರ್ಯಯೋಜನೆ ಯಶಸ್ಸಿಗಾಗಿ ಅನೇಕ ಸಲಹೆಗಳು ಬಂದರೂ ಅವುಗಳನ್ನು ತುಲನೆ ಮಾಡಿ ನೋಡುವುದು ಉತ್ತಮ. ಜಮೀನು, ಆಸ್ತಿಗಳಿಗೆ ಸಂಬಂಧಿಸಿದ ನೋಂದಣಿ ಕಾರ್ಯಗಳು ನಿಮ್ಮ ಅನಿಸಿಕೆಯಂತೆ ಆಗುತ್ತವೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ವ್ಯವಹಾರದಲ್ಲಿ ಸೋದರರಿಂದ ಸಹಕಾರ ದೊರೆಯುತ್ತದೆ. ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣತರೊಂದಿಗೆ ಸಮಾಲೋಚನೆ ನಡೆಸುವಿರಿ ಮತ್ತು ಸರಿಯಾದ ನಿರ್ಧಾರವನ್ನು ತೆಗೆದುಕೊಂಡು ಪ್ರಶಂಸೆಗೆ ಪಾತ್ರರಾಗುವಿರಿ. ವೃತ್ತಿಯಲ್ಲಿ ಅತ್ಯಂತ ಧಾವಂತದ ಕೆಲಸಗಳು ಎದುರಾಗಬಹುದು. ಶುಭ ಸಮಾರಂಭಗಳ ಸಲುವಾಗಿ ದೂರ ಪ್ರಯಾಣ ಮಾಡುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಒಮ್ಮೆಗೇ ಹಲವಾರು ಕಾರ್ಯಗಳನ್ನು ಆರಂಭಿಸುವುದು ಬೇಡ. ಒಂದರ ನಂತರ ಒಂದನ್ನು ಆರಂಭಿಸಿ. ಸಂಗೀತ ಕಲಾವಿದರಿಗೆ ಸಾರ್ವಜನಿಕ ಪ್ರದರ್ಶನದ ಭಾಗ್ಯ ದೊರೆಯುವುದರ ಜೊತೆಗೆ ಸಂಭಾವನೆಯೂ ಸಿಗುತ್ತದೆ. ಕೊಟ್ಟ ಸಾಲ ಈಗ ವಾಪಸ್ ಬರುತ್ತದೆ. ಕರಕುಶಲ ವಸ್ತುಗಳ ಮಾರಾಟ ಮಾಡುವವರಿಗೆ ವ್ಯಾಪಾರದಲ್ಲಿ ಅಭಿವೃದ್ಧಿ ಇರುತ್ತದೆ. ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಹಣದ ಒಳಹರಿವು ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರು ತೆಗೆದುಕೊಳ್ಳುವ ನಿರ್ಧಾರಗಳು ಬಹಳ ಯಶಸ್ವಿಯಾಗುತ್ತವೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಇರುತ್ತದೆ. ಸಾಮಾಜಿಕ ಕಾರ್ಯಗಳನ್ನು ಮಾಡುವವರಿಗೆ ವಿಶೇಷ ಗೌರವ ಇರುತ್ತದೆ. ಮನೆಯ ನವೀಕರಣ ಕಾರ್ಯವನ್ನು ಕೈಗೆತ್ತಿಕೊಳ್ಳುವಿರಿ. ಯುವಕರಿಗೆ ಪ್ರೇಮಿಗಳು ಕೈ ಕೊಡುವ ಸಾಧ್ಯತೆ ಇದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಮಹಿಳೆಯರ ಯಾತ್ರಾ ಇಷ್ಟಾರ್ಥಗಳು ನೆರವೇರುವ ಸಾಧ್ಯತೆಗಳಿವೆ. ಕುಟುಂಬ ದವರೊಡನೆ ಧಾರ್ಮಿಕ ಕ್ಷೇತ್ರಗಳನ್ನು ಸಂದರ್ಶಿಸಬಹುದು. ಉದ್ಯೋಗದಲ್ಲಿ ಯಾವುದೋ ಹಳೆಯ ಪ್ರಕರಣವೊಂದು ಹೊರಬಂದು ಶಿಸ್ತುಕ್ರಮಕ್ಕೆ ಗುರಿಯಾಗುವಿರಿ. ಶೀತ ಸಂಬಂಧಿ ಕಾಯಿಲೆಗಳು ಉಲ್ಬಣವಾಗುವ ಲಕ್ಷಣಗಳಿವೆ. ನಿಮ್ಮ ನೆರೆಹೊರೆಯ ಜನರೊಂದಿಗೆ ವಿನಾಕಾರಣ ನಿಷ್ಠುರವನ್ನು ಮಾಡಿಕೊಳ್ಳುವಿರಿ.

ಪದಬಂಧ 2711



ಮೇಲಿನಿಂದ ಕೆಳಕ್ಕೆ

1. ಸಂಧಿಯ ಜೊತೆಗೂಡುವ ವ್ಯಾಕರಣ ಶಬ್ದ 3
2. ಉತ್ತರಭಾರತದ ಯೌವ್ವನದ ಚೆಲುವೆ 3
3. ಸಮಾನಸ್ಕಂದನ ಕನ್ನಡ ಪ್ರತಿರೂಪ 3
4. ಮಹಾರಾಷ್ಟ್ರದ ಹಾಸ್ಯದ ಪ್ರಕಾರ 3
7. ಸ್ಫೋಟದ ಸದ್ದಿಗೆ ತಲೆ ಬಡಿತ 3
9. ಸತತವಾಗಿ ಸುರಿವ ಭೋಜರಾಜನ ಪುರ 5
11. ನಾಟಕಕ್ಕೊಂದು ಹಂತ 2
13. ಮತ್ತೆ ಬರುವ ಉಸುಕು 3
14. ಖಗವನ್ನು ಹಾರದಂತೆ ಕೂಡಿಹಾಕುವ ವ್ಯವಸ್ಥೆ 5
15. ಕುಡಿದರೆ ಏರುವ ಭ್ರಮಾವಸ್ಥೆ 2
17. ಸುಮ್ಮನಿರಿಸಲು ಜೋರು ಮಾಡು 3
18. ಚೆನ್ನಾಗಿ ಒಂದರಲ್ಲಿ ಮತ್ತೊಂದು ಸೇರುವಂತೆ ಮಾಡು 3
19. ಮೂಡುವ ಮಹಾ ಶಂಕೆ 3
20. ಆತಂಕದಿಂದ ಓಡು 3
21. ಶಿವನ ಕೈಲಿರುವ ಚರ್ಮವಾದ್ಯ 3

ಎಡದಿಂದ ಬಲಕ್ಕೆ

1. ಕೊಳದಲ್ಲಿ ಹುಟ್ಟಿದ ತಾವರೆಗೆ ಸಮನಾದವ 4
2. ಒಪ್ಪಂದಕ್ಕೆ ನೀಡುವ ಹೌದು ಎನ್ನುವ ಒಪ್ಪಿಗೆ 3
5. ಮಾತಿನೊಡತಿ ಸಾಕ್ಷಾತ್ ಸರಸ್ವತಿ 4
6. ಅಂತರಂಗದಿಂದ ಮೂಡಿದವಳು 3
8. ಎಂದಿಗೂ ಉದ್ರೇಕಗೊಳ್ಳದ ಶಾಂತರೂಪಿ 4
10. ಮನಸ್ಸಿನಲ್ಲಿರಬಹುದಾದಂತ ಕೊಳೆ 3
11. ಕೊನೆಗೊಂದು ಪರ್ಯಾಯ 2
12. ಪಾಪಗಳಿಂದ ಮುಕ್ತವಾದದು 3
13. ಅಂತರಂಗವನ್ನು ಅಪಹರಿಸುವಂತದ್ದು 5
15. ಮೊಮ್ಮಗಳ ಮಗಳು 5
16. ಎಲ್ಲವನ್ನು ತಿಳಿದಿರುವ ಮೇಧಾವಿ 3
17. ಗಮತ್ತಿನ ಬಿಗಿತನ 2
18. ಬಿನ್ನಾಣಕ್ಕೆ ಮಾರುಹೋಗುವ ಅಚ್ಚರಿ 3
20. ಹುಬ್ಬಳ್ಳಿಯ ಅವಳಿ ನಗರ 4
22. ಸಂಸ್ಕೃತದಲ್ಲಿ ಹರಿದು ಬಂದ ನೆತ್ತರು 3
23. ಇದ್ದಕ್ಕಿದ್ದಂತೆ ಕಣ್ಮರೆಯಾಗುವ ಶಕ್ತಿ ಸ್ವರೂಪಿಣಿ 4
24. ಮಾಧುರ್ಯದ ಮನೋಹರ ಶಬ್ದ 3
25. ದೀಪಾವಾಳಿಯಲ್ಲಿ ಮೊದಮೊದಲು ಹಚ್ಚುವ ಬತ್ತಿ ಹೀಗೆ ಶಬ್ದ ಮಾಡುತ್ತದೆ 4

ಪದಬಂಧ ಉತ್ತರ -2710

ಮೇಲಿಂದ ಕೆಳಕ್ಕೆ

1. ನಿತ್ಯಪ್ರಚಾರ 2.ನಲುಗು 3.ಸುಗಮಗಾನ 4.ನಾಮಫಲಕ 5.ಮುಗಿಲು 6.ಸುಖನಿವಾಸ 11.ಧರಣಿ 13.ನಗರ 14.ತಲೆಕೆಳಗೆ 15.ಕೆಲಸಗಾರ 16.ಹಣವಂತರು 17.ತಿರುಗುಬಾಣ 19.ಪಾಲಿಸು 21.ನೆಗೆತ

ಎಡದಿಂದ ಬಲಕ್ಕೆ

1.ನಿಧಾನ 3.ಸುಮನಾ 5.ಮುನಿಸು 7.ಗುಲಾಮ 8.ಫಸಲು 9.ಗಾವಿಲ 10.ತಪ್ಪುಕಾಣಿಕೆ 16.ಹರಪಾರ್ವತಿ 18.ಲಕ್ಷಣ 19.ಪಾಯಸ 20.ವಂಚನೆ 22.ಗೆಣಸು 23.ರಬ್ಬರು 24.ತಕ್ಷಣ

ಮೂರ್ತ, ಅಮೂರ್ತ ಮತ್ತು ಅಪ್ಪ

ಶ್ಯಾಮಲಾ ಗುರುಪ್ರಸಾದ್

ಕಲೆ: ಗುರು ನಾವಳ್ಳಿ

> ರಾಜ್ಯೋತ್ಸವ ಹತ್ತಿರವಾಗಿರುವಾಗಲೇ ನಮ್ಮನ್ನು ಅಗಲಿದವರು ರಂಗಕರ್ಮಿ, ನಟ, ಸಾಹಿತಿ ಜಿ.ಕೆ.ಗೋವಿಂದರಾವ್. ಈ ಮೇರು ವ್ಯಕ್ತಿತ್ವವನ್ನು ತುಂಬಾ ಹತ್ತಿರದಿಂದ ಕಂಡ ಅವರ ಪುತ್ರಿಯ ಆಪ್ತ ಬರಹ ಇಲ್ಲಿದೆ

ನನಗಾಗ ಐದು ವರ್ಷಗಳಿರಬಹುದು. ನಾವಿದ್ದ ಸಾಗರದ ಮನೆಯಲ್ಲಿ ಅಟ್ಟದ ಮೇಲೆ ಎರಡು ಕೋಣೆಗಳಿದ್ದವು. ಬೀದಿಗೆ ಮುಖವಾಗಿದ್ದ ಕೋಣೆ, ಅಪ್ಪನ ಓದಿಗೆ ಮೀಸಲಾಗಿತ್ತು. ಬೆಳಕು, ಗಾಳಿ ಸಮೃದ್ಧವಾಗಿದ್ದ ಕೋಣೆಯದು. ಅವರಿಲ್ಲದ ಸಮಯ ಹುಡುಕಿ, ನಾನು ಮೆಲ್ಲಗೆ ಆ ಕೊಠಡಿಯನ್ನು ಸೇರುತ್ತಿದ್ದೆ. ಅಲ್ಲಿಟ್ಟಿದ್ದ ಪುಸ್ತಕಗಳ ಮುಟ್ಟುತ್ತಿದ್ದೆ. ಇಷ್ಟವಾದ ಪುಸ್ತಕವನ್ನು ಕೈಗೆತ್ತಿಕೊಂಡು, ಪುಟಗಳನ್ನು ತಿರುವಿಹಾಕುತ್ತಿದ್ದೆ. ಆ ವಯಸ್ಸಿನಲ್ಲಿ, ಆ ಗಳಿಗೆಯಲ್ಲಿ ನನ್ನಲ್ಲಿ ಎಂಥಾ ಭಾವನೆಗಳ ಸಂಚಲನವಿದ್ದೀತು?! ನನಗೆ ಪುಸ್ತಕಗಳ ಪರಿಚಯವಾದ, ಸಂಪರ್ಕಕ್ಕೆ ಬಂದ, ಸ್ಪರ್ಶಕ್ಕೆ ಸಿಕ್ಕ ಮೊದಲ ದಿನಗಳವು!

ವರ್ಜೀನಿಯಾ ವೂಲ್ಫ್ –ಇಪ್ಪತ್ತನೇ ಶತಮಾನದ ಖ್ಯಾತ ಬರಹಗಾರ್ತಿ– ರಚನಾತ್ಮಕ ವಯಸ್ಸಿನ ಘಟನೆಗಳನ್ನು 'Moments of being' ಎಂದು ಕರೆಯುತ್ತಾರೆ. ನಮ್ಮ ಇರುವಿಕೆಗೆ, ಅಸ್ತಿತ್ವಕ್ಕೆ ಅರ್ಥ ನೀಡುವ ಕ್ಷಣಗಳು ಅಥವಾ ಅನುಭವಗಳು ನಮ್ಮ ಬೆಳವಣಿಗೆಯ ವಯಸ್ಸಿನಲ್ಲೇ ರೂಪುಗೊಳ್ಳುತ್ತಿರುತ್ತವೆ. ವರ್ಜೀನಿಯಾ ಇದನ್ನು 'Sense making mechanism' ಎಂದೂ ಅರ್ಥೈಸುತ್ತಾರೆ. ನನ್ನ ತಂದೆಯೊಂದಿಗೆ ಬೆಳೆಯುವ ಅನುಭವದ ತೀವ್ರತೆ ಅನುಭವಿಸಲು ಬೇಕಾದ ಶಕ್ತಿ ನನ್ನ ಸಣ್ಣ ವಯಸ್ಸಿನಲ್ಲೇ ರೇಷ್ಮೆ ನೂಲಿನಷ್ಟು ಮೃದುವಾಗಿ, ನುಣುಪಾಗಿ ನನ್ನ ದೇಹದ ಕಣಕಣದಲ್ಲಿಯೂ ಬೆರೆತು ಹೋಗಲು ಹವಣಿಸುತ್ತಿತ್ತು. ಇದರ ಸೂಕ್ಷ್ಮ ಪದರಗಳು ಆಗಲೇ ನನ್ನ ಸುಪ್ತಪ್ರಜ್ಞೆಯಲ್ಲಿ ಜಾಗೃತವಾಗಿದ್ದವು.

ಬೆಂಗಳೂರಿಗೆ ಬಂದು ನೆಲೆಸಿದಾಗ, ನಾವಿದ್ದುದು ಚಾಮರಾಜಪೇಟೆಯ ಪಂಪ ಮಹಾಕವಿ ರಸ್ತೆಯಲ್ಲಿದ್ದ ಮನೆಯಲ್ಲಿ. ಈ ಮನೆ, ರಸ್ತೆಗೆ ಸರಿಸಮನಾಗಿರದೆ, ಹಳ್ಳದಲ್ಲಿತ್ತು. ಅಂದಿನಿಂದ ಆ ಮನೆ, ನಮಗೆಲ್ಲ ಪ್ರೀತಿಯ 'ಹಳ್ಳದ ಮನೆ'ಯಾಯ್ತು. ಈ ಮನೆಯ ಅನುಭವಗಳು, ನನ್ನ ಬದುಕಿನ ಅತ್ಯಂತ ಸುಂದರಘಟ್ಟದ ಕ್ಷಣಗಳು ಎಂದು ವರ್ಣಿಸಬಹುದು. ನನ್ನ ಅಪ್ಪನೊಂದಿಗೆ ಕಳೆದ ಕ್ಷಣಗಳು, ಕಲಿತ ಪಾಠಗಳು ಹಾಗೂ ಪ್ರಜ್ಞೆಗೂ ಮೀರಿದ ಅನುಭವಗಳು ನನ್ನ ಅರಿವಿಗೆ ಬಂದದ್ದು ಇದೇ ಕಾಲಘಟ್ಟದಲ್ಲಿ. ಎಳೇ ಮನಸ್ಸಿನ ಮುಗ್ಧತೆ, ಪ್ರಕೃತಿಯಷ್ಟೇ ನಿಷ್ಕಲ್ಮಶವಾದದ್ದು. ಆಗ ನನ್ನೊಳಗೆ ನಡೆಯುತ್ತಿದ್ದ ಭಾವಸೂಕ್ಷ್ಮತೆಯ ಘರ್ಷಣೆಗಳು ನನ್ನ ಅಂತಃಪ್ರಜ್ಞೆಯಲ್ಲಿ ಒಂದೊಂದೇ ಹನಿಯಂತೆ ಇಳಿಯುತ್ತಾ ನನ್ನ ಬದುಕಿನುದ್ದಕ್ಕೂ ಬೆಂಬಲವಾಗಿ ನಿಲ್ಲುವ, ಅರ್ಥಕ್ಕೂ ಮಿಗಿಲಾದ ಸಂಬಂಧವಾಗಿ ಬೆಳೆಯುತ್ತಿದ್ದವು ಎನ್ನುವುದು ನನ್ನ ಬಲವಾದ ನಂಬಿಕೆ. ಬಹುಶಃ ಬೆಳೆಯುವ ವಯಸ್ಸಿನಲ್ಲಿ ನೈಸರ್ಗಿಕ ಪ್ರಕ್ರಿಯೆಯಲ್ಲಿ ಉಂಟಾಗುವ ಬದುಕಿನ ವೈವಿಧ್ಯಗಳು, ವಯಸ್ಕ ಜೀವನದಲ್ಲಿ ಹೆಚ್ಚು ಕಾಡುತ್ತವೆ. ಆತ್ಮವಿಮರ್ಶೆಗೆ ಒಳಗಾಗುವಂತೆ ಮಾಡುತ್ತವೆ. ಆತ್ಮಶೋಧನೆಗೂ ಕಾರಣವಾಗುತ್ತವೆ.

ಹಳ್ಳದ ಮನೆಯಲ್ಲಿಯೂ ಬೀದಿಗೆ ಕಾಣುವ ಕೋಣೆಯು ಪುಸ್ತಕಗಳಿಗೆ ಮೀಸಲು. ನಮ್ಮ ಮನೆಯ, ನಮ್ಮೆಲ್ಲರ ಆತ್ಮೀಯ ಒಡನಾಡಿ ಪುಸ್ತಕಗಳಿಗೆ, ನಾವು ಹುಟ್ಟುವುದಕ್ಕಿಂತ ಮುಂಚಿನಿಂದಲೇ ಪ್ರಥಮ ಆದ್ಯತೆ ಇತ್ತು. ಅವುಗಳಿಗಿದ್ದ ವಿಶಿಷ್ಟ ಸ್ಥಾನ ಎಂದಿಗೂ ಬದಲಾಗಲಿಲ್ಲ. ಬೆಂಗಳೂರಿನ ಶಾಲೆಗೆ ಸೇರುವ ವಿಷಯದಲ್ಲಿ ನಮ್ಮ ತಂದೆ ನಮ್ಮಿಬ್ಬರ (ನಾನು ಮತ್ತು ನನ್ನ ತಂಗಿ) ಶಿಕ್ಷಣ ಕನ್ನಡ ಮಾಧ್ಯಮದಲ್ಲಿಯೇ ನಡೆಯಬೇಕೆಂದು ತೀರ್ಮಾನಿಸಿದರು. ಪ್ರಾಥಮಿಕ ಶಿಕ್ಷಣದ ನಂತರದ ವಿದ್ಯಾಭ್ಯಾಸ ಇಂಗ್ಲಿಷ್‌ಗೆ ಹೊರಳಿದಾಗ, ನನ್ನಲ್ಲಿ ಆದ ಗೊಂದಲ ಅಸ್ತವ್ಯಸ್ತತೆ ವಿವರಣೆಗೆ ಸಿಗದಷ್ಟಾಯ್ತು. ಯಾವುದು ಸರಿ? ಯಾವುದು ತಪ್ಪು? ಯಾವ ಭಾಷೆಯನ್ನು ನನ್ನದಾಗಿಸಿಕೊಳ್ಳಬೇಕು? ಈ ತಾಕಲಾಟಗಳು ನನ್ನನ್ನು ಕಾಡಲಾರಂಭಿಸಿದ್ದವು. ವಿದ್ಯಾರ್ಥಿಗಳು ನೀಡಬೇಕಾದ ಮಾಹಿತಿ ಪತ್ರದಲ್ಲಿರುತ್ತಿದ್ದ 'ಜಾತಿ' ಕಾಲಂನಲ್ಲಿ ಭಾರತೀಯ ಎಂದು ಬರಿ ಎಂದು ಗದರಿಸುತ್ತಿದ್ದರು. ಬಾಲ್ಯದಲ್ಲೇ ಸಿಕ್ಕ ಜಾತಿಯ ಬಗೆಗಿನ ಈ ಜ್ಞಾನ ನಮ್ಮ ಅರಿವಿನ ಅವಿಭಾಜ್ಯ ಅಂಗವಾಗಿ ಬೆರೆತುಹೋಯಿತು. ನನ್ನ ತಂಗಿ ಹಾಗೂ ನನ್ನಲ್ಲಿ ಯಾವ ಜಾತಿ, ಮತಗಳಿಗೆ ಸಂಬಂಧಿಸಿದ ಭೇದಭಾವಗಳ ಎಳೆಯೂ ಬೆಳೆಯದೆ, 'ಜಾತಿ'ಯೆಂಬ ಪ್ರಶ್ನೆಯೇ ನಮ್ಮಲ್ಲಿ ಉದ್ಭವಿಸಲಿಲ್ಲ.

ಇದೇ ಸಂದರ್ಭದಲ್ಲಿ ನನ್ನ ಒಳಅರಿವಿನಲ್ಲಿ ಮತ್ತೊಂದು ಪದರ ತನ್ನ ಜಾಗ ಭದ್ರ ಮಾಡಿಕೊಳ್ಳತೊಡಗಿತ್ತು. ತಂದೆ, ತಾಯಿಯ ಮೊದಲ ಪ್ರೇಮ ನಾಟಕರಂಗ. ಎಪ್ಪತ್ತರ ದಶಕದಲ್ಲಿ ಹೊಸ ನಾಟಕಕಾರರು, ನಿರ್ದೇಶಕರು ಬೆಂಗಳೂರು ನಗರಕ್ಕೆ ಲಗ್ಗೆ ಹಾಕುತ್ತಿದ್ದ ಕಾಲವದು. ನನ್ನ ತಂಗಿ ಹಾಗೂ ನಾನು ಪ್ರತಿದಿನ ಸಾಯಂಕಾಲದ ವೇಳೆ ಹೆಗಲಿಗೆ ಸ್ಕೂಲುಬ್ಯಾಗು ಹಾಕಿಕೊಂಡು ಅವರಿಬ್ಬರ ನಾಟಕದ ತಾಲೀಮುಗಳಿಗೆ ಹೋಗುತ್ತಿದ್ದೆವು. ಮನೆಯ ಸಮೃದ್ಧ ವಾತಾವರಣಕ್ಕೆ ಮತ್ತಷ್ಟು ಮೆರುಗು ನೀಡುವಂತೆ, ಸಾಯಂಕಾಲದ ವೇಳೆಯಲ್ಲಿ ನಮ್ಮ ತಂದೆಯ ಗೆಳೆಯರು, ಸಾಹಿತಿಗಳು, ನಾಟಕಗಳು ಹಾಗೂ ಸಾಹಿತ್ಯ ಚರ್ಚೆಗಳಿಗೆ ಮನೆಯಲ್ಲಿಯೇ ಸೇರುತ್ತಿದ್ದರು. ನನ್ನ ಕಿವಿಗಳಿಗೆ ಅಪ್ಪನ ಜೋರುಧ್ವನಿಯ, ಸ್ಪಷ್ಟ ನುಡಿಗಳು ಬೀಳುತ್ತಿದ್ದವು. ಅಷ್ಟೇ ಅಲ್ಲದೆ ನನ್ನ ತಂಗಿ ಹಾಗೂ ನನ್ನನ್ನು ಕಲಾತ್ಮಕ ಸಿನಿಮಾಗಳಿಗೂ ಕರೆದುಕೊಂಡು ಹೋಗುತ್ತಿದ್ದರು. ನನ್ನ ನೆನಪಿನಾಳದಲ್ಲಿ ಹಚ್ಚಹಸಿರಾಗಿ ಉಳಿದುಬಿಟ್ಟಿರುವ ಈ ನನ್ನ ಬೆಳವಣಿಗೆಯ ಭಾಗಗಳು ನನ್ನ ಬದುಕಿನುದ್ದಕ್ಕೂ ಅಗಾಧವಾಗಿ ಪರಿಣಾಮ ಬೀರಿವೆ. ನನ್ನನ್ನು ಬೆಂಬಿಡದ ನೆರಳಾಗಿ ಕಾಡಿವೆ.

ನನ್ನ ತಂದೆ ಈ ಯಾವ ಹಂತದಲ್ಲಿಯೂ ನಮ್ಮೊಂದಿಗೆ, ನಮ್ಮ ಬೆಳವಣಿಗೆಗೆ ಪೂರಕವಾಗಿರುವ ರೀತಿಯಲ್ಲಿ ನೇರವಾಗಿ ಪಾಲ್ಗೊಂಡಿರಲಿಲ್ಲ. ಬಹುಶಃ ಈ ಸ್ವಾತಂತ್ರ್ಯವೂ ನನ್ನ ಮನಃಸ್ಥಿತಿಗೆ ಪ್ರೇರಕ ಶಕ್ತಿಯಾಗಿತ್ತು. ನನ್ನ ಸುತ್ತಲ ಬದುಕಿನಲ್ಲಿದ್ದ ಶ್ರೀಮಂತ ಕಲಾ ಜಗತ್ತಿಗೆ ಮಾರು ಹೋಗುತ್ತಿದ್ದೆ. ನನ್ನ ಸುಪ್ತಪ್ರಜ್ಞೆ ಈ ಪ್ರಖರವಾದ ಬದುಕಿನ ಭಾಗವನ್ನು ಹೀರಿಬಿಡುವ ಧಾವಂತದಲ್ಲಿತ್ತು. ನಾನು ಓದುತ್ತಿದ್ದ ಕನ್ನಡ, ಇಂಗ್ಲಿಷ್ ಭಾಷೆಗಳ ಸಾಹಿತ್ಯಕ ಪುಸ್ತಕಗಳು ಸ್ಫುರಿಸುತ್ತಿದ್ದ ತೀವ್ರ ಭಾವನೆಗಳು ನನ್ನಲ್ಲಿ 'ಮಾಯಾಲೋಕ'ವನ್ನು ಸೃಷ್ಟಿಸುತ್ತಿದ್ದವು. ವಾಸ್ತವ ಬದುಕಿನ ಶಾಲಾ ಕಾಲೇಜಿನ ಗಣಿತ, ವಿಜ್ಞಾನಗಳ ಕಲಿಕೆಯಲ್ಲಿ ನನ್ನಲ್ಲಿ ಯಾವ ಆಸಕ್ತಿಯೂ ಉದಯಿಸಲಿಲ್ಲ.

ನನಗೀಗ ನೆನಪಿದೆ. ಕಡೆಯ ವರ್ಷ ಬಿ.ಎ ಪರೀಕ್ಷೆಗೆ ಒಂದು ವಾರವಿತ್ತು. ನಾನಾಗ ಗೇಬ್ರಿಯಲ್ ಗಾರ್ಸಿಯಾ ಮಾರ್ಕ್ವೆಸ್ ಬರೆದ 'ಕ್ರಾನಿಕಲ್ ಆಫ್ ಎ ಡೆತ್ ಫೋರ್‌ಟೋಲ್ಡ್' ಓದುತ್ತಿದ್ದೆ! ನನ್ನ ತಂದೆಯ ಕಣ್ಣಿಗೆ ಬಿದ್ದಿತ್ತಾದರೂ ಅವರ ಪ್ರಶ್ನಾರ್ಥಕ ಮುಖಭಾವಕ್ಕೆ ನಿರಾತಂಕವಾಗಿ 'ಸಣ್ಣ ಪುಸ್ತಕ ಓದಿಬಿಡ್ತೀನಿ' ಎಂದಿದ್ದೆ. ನನ್ನ ತಂದೆಯಿಂದ ನನ್ನ ತಂಗಿ ಹಾಗೂ ನಾನು ಪಡೆದ ಬಳುವಳಿ ಇದೇ ಅಲ್ಲದೆ ಮತ್ತಿನ್ನೇನು? ಇದರಿಂದಲೇ ನನ್ನ ಜೀವನದಲ್ಲಿ ತಾನೇ ತಾನಾಗಿ ಮಿಳಿತವಾಗಿವೆ ಕಲೆ ಹಾಗೂ ಅದಕ್ಕೆ ಶಕ್ತಿನೀಡುವ ಸಂಕೀರ್ಣತೆಗಳು.

ನನ್ನ ತಂದೆಯ ಸಾರ್ವಜನಿಕ ಸಭೆಗಳ ಭಾಷಣಗಳನ್ನು ಲೆಕ್ಕಕ್ಕೆ ಸಿಗದಷ್ಟು ಬಾರಿ ಕೇಳಿದ್ದೇನೆ. ಸಾಮಾಜಿಕ ವ್ಯವಸ್ಥೆಯ ದುಃಸ್ಥಿತಿಯ ಕುರಿತಾಗಿ ಅವರು ಮೊನಚಾಗಿ ಬರೆಯುತ್ತಿದ್ದ ಲೇಖನಗಳನ್ನು ಓದಿ ಮನಸಾರೆ ಮೆಚ್ಚಿಕೊಂಡಿದ್ದೇನೆ, ಹೆಮ್ಮೆಪಟ್ಟು ಕೊಂಡಿದ್ದೇನೆ. ಆದರೆ, ನನ್ನ ಆಂತರ್ಯವಾಗಲೀ ವ್ಯಕ್ತಿತ್ವವಾಗಲೀ ಅವರಂತೆಯೇ ಧೀಮಂತ ನೇರ–ನುಡಿಗಳನ್ನು ಅನುಕರಿಸಲು ಪ್ರಯತ್ನಿಸಲಿಲ್ಲ. ಆಶಯಪಡಲಿಲ್ಲ. ಬಹುಶಃ ನನ್ನಲ್ಲಿ ಅವರ ಭಾಷಣಕಾರನ ವ್ಯಕ್ತಿತ್ವವನ್ನು ಒಪ್ಪಿಕೊಳ್ಳುವುದಕ್ಕಿಂತಲೂ ಮೊದಲೇ ಅವರ ಶಾಂತವಾದ, ಕಾವ್ಯಮಯ ವ್ಯಕ್ತಿತ್ವ ನನ್ನ ಬೆಳವಣಿಗೆಯಲ್ಲಿ ಪ್ರಧಾನವಾದ ಪಾತ್ರ ವಹಿಸಿತ್ತು.

ಅವರು ಮಾಡುತ್ತಿದ್ದ ಪ್ರತೀ ಭಾಷಣದಲ್ಲೂ ಉಪಯೋಗಿಸುತ್ತಿದ್ದ 'ಮೂರ್ತ ಹಾಗೂ ಅಮೂರ್ತ' ಪದಗಳು ಅವರ ಹಾಗೂ ನನ್ನ ನಡುವಿನ ಸಂಬಂಧದ ವಿಶ್ಲೇಷಣೆಗೂ ಅನ್ವಯಿಸುತ್ತವೆ. ಅಮೂರ್ತವಾದ ಕಲಾಪ್ರಜ್ಞೆ ನಮ್ಮಿಬ್ಬರ ಅರ್ಥಕ್ಕೂ ನಿಲುಕದಂತೆ ಕೊಂಡಿ ಬೆಸೆದಿತ್ತು ಎಂದರೆ ಹೆಚ್ಚು ಸಮಂಜಸವಾದೀತು. ಈ ಅಮೂರ್ತವಾದ ನಂಟಿನಲ್ಲಿ ಭಾಷೆಯಿಲ್ಲ, ಗದ್ದಲಗಳಿಲ್ಲ, ಪದಗಳಿಲ್ಲ. ಸದಾ ಹರಿಯುವ ನದಿಯಂತೆ ಅವರಿಲ್ಲದ ಈ ಕ್ಷಣದಲ್ಲೂ ತಂದೆ, ಮಕ್ಕಳ ಸಂಬಂಧ ಮುಂದುವರೆಸುತ್ತಲೇ ಇರುತ್ತದೆ.

ಕನ್ನಡದ ದೀಪಗಳು

‘ಚನ್ನಯ್ಯನವರದು ಕ್ಯಾನರೀಸ್ ಕಣ್ರೀ...

ಎಂ.ಎಸ್.ಶೇಖರ್

ಟಿ.ಚನ್ನಯ್ಯ ಸ್ವಾತಂತ್ರ್ಯ ಹೋರಾಟಗಾರರು. ಕಟ್ಟಾ ಗಾಂಧಿ ಅನುಯಾಯಿ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಒಡನಾಡಿಯಾಗಿದ್ದವರು. ಕಟಿಬದ್ಧತೆಯಿಂದ ಸಮಾಜಸೇವೆಗಾಗಿ ರಾಜಕೀಯ ಸೇರಿದವರು. ಸ್ವಾತಂತ್ರ್ಯ ಭಾರತದ ಮೊದಲ ತಂಡದ ರಾಜ್ಯಸಭಾ ಸದಸ್ಯರಾಗಿ, ಮೈಸೂರು ರಾಜ್ಯದ ಮಂತ್ರಿಯಾಗಿ, ಬೆಂಗಳೂರು ನಗರಾಭಿವೃದ್ಧಿ ಮಂಡಳಿ ಅಧ್ಯಕ್ಷರಾಗಿ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಅಧ್ಯಕ್ಷರಾಗಿ ಜನಮಾನಸದಲ್ಲಿ ಉಳಿಯುವ ಕೆಲಸ ಮಾಡಿ, ದೇಶ ಕಂಡ ಅಪರೂಪದ ಜನಸೇವಾ ರಾಜಕಾರಣಿ ಎನಿಸಿಕೊಂಡವರು.

ಕೆಂಗಲ್ ಹನುಮಂತಯ್ಯ ಮಂತ್ರಿಮಂಡಲದಲ್ಲಿ ಆರೋಗ್ಯ, ಪೌರಾಡಳಿತ, ಕೃಷಿ, ಅರಣ್ಯ, ಯೋಜನೆ, ಅಬಕಾರಿ, ಬಂದೀಖಾನೆ ಸಚಿವರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸಿದವರು. ಬಡ ಪ್ರತಿಭಾನ್ವಿತ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ರಾಜ್ಯದಾದ್ಯಂತ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಿ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ಆಸರೆಯಾದವರು. ಅವುಗಳಲ್ಲಿ ಕೋಲಾರದ ನಚಿಕೇತನ, ಮೈಸೂರಿನ ಸಿದ್ಧಾರ್ಥ ವಿದ್ಯಾರ್ಥಿನಿಲಯಗಳು ಪ್ರಮುಖವಾದವು.

ಚನ್ನಯ್ಯನವರ ಶಿಸ್ತು, ಪ್ರಾಮಾಣಿಕತೆ, ದಕ್ಷತೆ ಹಾಗೂ ಅವರ ಜನಪರ ನಿಲುವಿಗೆ ಮಾರುಹೋಗಿದ್ದ ಕೆಂಗಲ್ ಹನುಮಂತಯ್ಯ ಅವರು ವಿಧಾನಸೌಧವನ್ನು ನಿರ್ಮಿಸುವಾಗ ಬಹಳವಾಗಿ ನೆಚ್ಚಿದ್ದು ಇದೇ ನೇತಾರನನ್ನು. ಬಂದೀಖಾನೆಯ ಖಾತೆಯನ್ನು ನಿರ್ವಹಿಸುತ್ತಿದ್ದ ಟಿ.ಚನ್ನಯ್ಯರವರು ಮನಃಪರಿವರ್ತನೆಯಾದ ಜೈಲು ಕೈದಿಗಳಿಗೂ ಶ್ರಮದಾನದ ಮಹತ್ವ ತಿಳಿಸಿ ಅವರೊಟ್ಟಿಗೆ ಹಗಲುರಾತ್ರಿ ಖುದ್ದಾಗಿ ವಿಧಾನಸೌಧದ ನಿರ್ಮಾಣ ಕೆಲಸಕಾರ್ಯದಲ್ಲಿ ಮುಳುಗಿದ್ದರು. ಅದನ್ನು ಕಂಡ ಕೆಂಗಲ್ ಹನುಮಂತಯ್ಯ ಅವರು, 'ಸರ್ಕಾರದ ಕೆಲಸ ದೇವರ ಕೆಲಸ' ಎಂಬುದು ಚನ್ನಯ್ಯ ಅವರಿಗೆ ಚೆನ್ನಾಗಿ ಅನ್ವಯವಾಗುತ್ತದೆ ಎಂದು ಅವರನ್ನು ಆಲಿಂಗಿಸಿಕೊಂಡಿದ್ದರಂತೆ.

ಕೋಲಾರ-ಚಿಕ್ಕಬಳ್ಳಾಪುರಗಳ ಸಮಗ್ರ ಅಭಿವೃದ್ಧಿಯ ಹರಿಕಾರರಾಗಿದ್ದ ಅವರು ಕೋಲಾರ ಜಿಲ್ಲೆಗೆ ಮೊತ್ತಮೊದಲು ವಿದ್ಯುಚ್ಛಕ್ತಿಯನ್ನು ಒದಗಿಸಿಕೊಟ್ಟು 'ಕರೆಂಟ್ ಚನ್ನಯ್ಯ' ಎಂದೇ ಹೆಸರಾಗಿದ್ದರು. ಕೋಲಾರ-ಚಿಕ್ಕಬಳ್ಳಾಪುರಗಳಲ್ಲಿ ಅವರು ನಿರ್ಮಿಸಿರುವ ಮಕ್ಕಳ ಉದ್ಯಾನವನಗಳು, ಸಂತೆ ಮೈದಾನಗಳು ಬಹುಜನೋಪಯೋಗಿಯಾಗಿವೆ. ಕೋಲಾರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ಮಿಸಿರುವ ಕಲಾಮಂದಿರಕ್ಕೆ 'ಟಿ.ಚನ್ನಯ್ಯ ಕಲಾಮಂದಿರ' ಎಂದು ಹೆಸರಿಟ್ಟಿರುವುದು ಔಚಿತ್ಯಪೂರ್ಣವೇ ಆಗಿದೆ.

ಚನ್ನಯ್ಯರವರು, ತಿಮ್ಮಪ್ಪ–ತಿಮ್ಮಕ್ಕ ದಂಪತಿಗೆ (ಜನನ: 03-10-1912) ಕೋಲಾರದ ಕೆಳಗಿನಪೇಟೆಯಲ್ಲಿ ಜನಿಸಿದರು. ಪ್ರೌಢಶಿಕ್ಷಣದವರೆಗೆ ಕೋಲಾರದಲ್ಲಿಯೇ ಓದಿದರು. ವಿದ್ಯಾರ್ಥಿ ದೆಸೆಯಿಂದಲೆ ಗಾಂಧೀಜಿಯವರಿಂದ ಪ್ರಭಾವಿತರಾದರು. ಕನ್ನಡ ನಾಡು ನುಡಿಯ ಮಮಕಾರವನ್ನೂ ಬೆಳೆಸಿಕೊಂಡರು. ಮೈಸೂರು ಮಹಾರಾಜ ಕಾಲೇಜು ಸೇರಿ ಬಿ.ಎಸ್ಸಿ ಪದವೀಧರರಾದರು. ಆಗ ಜಯಚಾಮರಾಜೇಂದ್ರ ಒಡೆಯರ್ ಅವರು ಇವರ ಸಹಪಾಠಿಯಾಗಿದ್ದರು. ಪದವೀಧರರಾಗಿದ್ದ ಚನ್ನಯ್ಯ ರೆವಿನ್ಯೂ ಸ್ಪೆಷಲ್ ಅಧಿಕಾರಿಯಾಗಿ ಚಿಕ್ಕಮಗಳೂರಿನಲ್ಲಿ ಕಾರ್ಯನಿರ್ವಹಿಸಿದರು. ಅಲ್ಲಿಯೇ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದ ತುಮಕೂರಿನ ಎಚ್.ಎಂ. ಗಂಗಾಧರಯ್ಯ ಅವರ

ಡಾ.ಬಿ.ಆರ್. ಅಂಬೇಡ್ಕರ್ ಅವರ 59ನೇ ಜನ್ಮದಿನದ ಸಂಭ್ರಮದಲ್ಲಿ ರಾಜ್ಯಸಭೆಯ ಆಗಿನ ಇತರ ಸದಸ್ಯರೊಂದಿಗೆ ಟಿ.ಚನ್ನಯ್ಯ. ಅಂಬೇಡ್ಕರ್ ಅವರ ಪತ್ನಿ ಸವಿತಾ ದೇವಿ ಅವರೂ ಚಿತ್ರದಲ್ಲಿದ್ದಾರೆ.

ಪರಿಚಯವಾಯಿತು. ಇಬ್ಬರೂ ಕೆಲಸಕ್ಕೆ ರಾಜೀನಾಮೆ ನೀಡಿ ಮೈಸೂರು ಪ್ರಾಂತ್ಯದ ಪ್ರವಾಸದಲ್ಲಿದ್ದ ಗಾಂಧೀಜಿಯವರನ್ನು ಭೇಟಿಯಾಗಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು.

> ದೆಹಲಿಯಲ್ಲಿ ಕನ್ನಡದ ಧ್ವನಿ ಮೊಳಗಿಸಿದ ಮೊದಲ ನೇತಾರ

ಮೈಸೂರು ದಿವಾನರಾಗಿದ್ದ ರಾಮಸ್ವಾಮಿ ಮೊದಲಿಯಾರ್ ಅವರು ಗಂಗಾಧರಯ್ಯ ಅವರನ್ನು ಕರೆಸಿ 'ನಿಮ್ಮನ್ನು ಮೈಸೂರು ಪ್ರಾಂತ್ಯದ ಪ್ರತಿನಿಧಿಯಾಗಿ ರಾಜ್ಯಸಭಾ ಸದಸ್ಯರಾಗಿ ಮಾಡಲು ಇಚ್ಛಿಸಿದ್ದೇನೆ' ಎಂದರು. ಗಂಗಾಧರಯ್ಯನವರು 'ಚನ್ನಯ್ಯರವರು ಬಿ.ಎಸ್ಸಿ ಪದವೀಧರರು. ಇಂಗ್ಲಿಷ್–ಹಿಂದಿಯನ್ನು ಬಲ್ಲವರು. ದಯಮಾಡಿ ಅವರನ್ನು ನೇಮಕ ಮಾಡಿ' ಎಂದು ದಿವಾನರನ್ನು ಕೋರಿದ್ದರು. ಆಗ ಸ್ವತಂತ್ರ ಭಾರತದ ಮೊದಲ ತಂಡಕ್ಕೆ ಮೈಸೂರು ಪ್ರಾಂತ್ಯದ ಪ್ರತಿನಿಧಿಯಾಗಿ ರಾಜ್ಯಸಭಾ ಸದಸ್ಯರಾಗಿ ಚನ್ನಯ್ಯ ಅವರು ನೇಮಕಗೊಂಡಿದ್ದರು.

ಕನ್ನಡ, ತೆಲುಗು ಹಾಗೂ ಇಂಗ್ಲಿಷ್ ಭಾಷೆಗಳನ್ನು ಬಲ್ಲವರಾಗಿದ್ದ ಚನ್ನಯ್ಯ ಅವರು ಸಂವಿಧಾನ ಕರಡು ಸಮಿತಿಯ ಸದಸ್ಯರಾಗಿದ್ದರು. 1947ರ ಆಗಸ್ಟ್ 25ರಂದು ನಡೆದ ಸಮಿತಿಯ ಸಭೆಯಲ್ಲಿ ಚನ್ನಯ್ಯ ಅವರು ಕನ್ನಡದಲ್ಲಿ ಮಾತನಾಡಿದ್ದರು (ರಾಜಕೀಯ ನೇತಾರರೊಬ್ಬರು ದೆಹಲಿಯ ಮಹತ್ತರ ವೇದಿಕೆಯಲ್ಲಿ ಮಾಡಿದ ಮೊದಲ ಕನ್ನಡ ಭಾಷಣ ಇದು). ಅವರಿಗೆ ಇಂಗ್ಲಿಷ್ ಭಾಷೆ ಚೆನ್ನಾಗಿ ಗೊತ್ತಿದ್ದರೂ ಕನ್ನಡ ನಾಡು ನುಡಿಯ ಬಗ್ಗೆ ಅಪಾರಪ್ರೇಮದಿಂದ ಕನ್ನಡದಲ್ಲಿಯೇ ಮಾತನಾಡಿದ್ದರು.

ಸದಸ್ಯರಾಗಿದ್ದ ಎಚ್.ವಿ.ಕಾಮತ್‌ರವರು ಸಭೆಯ ಅಧ್ಯಕ್ಷರಾಗಿದ್ದ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್‌ರವರಿಗೆ, ಸನ್ಮಾನ್ಯ ಅಧ್ಯಕ್ಷರೇ, ಘನತೆವೆತ್ತ ಸದಸ್ಯರು ಚೆನ್ನಾಗಿ ಇಂಗ್ಲಿಷ್ ಬಲ್ಲವರಾಗಿದ್ದಾರೆ. ಆದ್ದರಿಂದ ನಾನು ನಿಮ್ಮಲ್ಲಿ ಅವರು ಇಂಗ್ಲಿಷ್‌ನಲ್ಲಿ ಮಾತನಾಡುವಂತೆ ಮನವಿ ಮಾಡಿಕೊಳ್ಳುತ್ತೇನೆ ಎಂದಿದ್ದರು. ಆಗ ಚನ್ನಯ್ಯರವರು, ನನಗೆ ಯಾವ ಭಾಷೆಯಲ್ಲಾದರೂ ಮಾತನಾಡುವ ಆಯ್ಕೆ ಇದೆ. ಹಾಗಾಗಿ ನನ್ನ ಮಾತೃಭಾಷೆಯಲ್ಲಿ ಮಾತನಾಡುತ್ತೇನೆ ಎಂದು ಕನ್ನಡದಲ್ಲಿ ಮಾತು ಮುಂದುವರಿಸಿದ್ದರು. ಬಾಂಬೆಯ ಪ್ರತಿನಿಧಿಯಾಗಿದ್ದ ಶಂಕರ್ ದತ್ತಾತ್ರೇಯ ದೇವ್ ಅವರು, ಮಾನ್ಯ ಸದಸ್ಯರು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ ಎಂಬುದನ್ನು ತಿಳಿಸಿಕೊಡಬೇಕು ಎಂದು ಕೋರಿದ್ದರು. ಬಾಬುರಾಜೇಂದ್ರ ಪ್ರಸಾದ್ ಅವರು ನನ್ನ ಮಾಹಿತಿ ಪ್ರಕಾರ ಅವರು, ಕನ್ನಡದಲ್ಲಿ (ಕ್ಯಾನರೀಸ್) ಮಾತನಾಡುತ್ತಿದ್ದಾರೆ ಎಂದು ನಕ್ಕಿದ್ದರು.

ಮಧ್ಯ ಪ್ರವೇಶಿಸಿದ ಮೋಹನ್‌ಲಾಲ್ ಸಕ್ಸೇನಾ ಅವರು, 'ಮಾನ್ಯ ಸದಸ್ಯರು ಕ್ಯಾನರಿಸ್‌ನಲ್ಲಿ ಮಾತನಾಡುತ್ತಿದ್ದಾರೆಯೋ ಇಲ್ಲವೋ ಎಂಬುದನ್ನು ಹೇಗೆ ತಿಳಿಯುವುದು ಎಂದಿದ್ದರು. ಮತ್ತೊಬ್ಬ ಸದಸ್ಯರಾದ ದಿವಾನ್ ಚಮನ್‌ಲಾಲ್‌ರವರು, 'ನಮ್ಮ ಮಾನ್ಯ ಸ್ನೇಹಿತರು ಮಾತನಾಡುತ್ತಿರುವ ಭಾಷೆ ಯಾವುದೇ ಆದರೂ ಅರ್ಥವಾಗುವಂತಹ ಭಾಷೆಯಲ್ಲಿ ಅನುವಾದ ಮಾಡಲು ಅವಕಾಶವಿದೆಯೇ' ಎಂದು ಕೇಳಿದ್ದರು. ಅಧ್ಯಕ್ಷರು, 'ಅನುವಾದಕ್ಕೆ ಅವಕಾಶವಿಲ್ಲ. ಮಾನ್ಯ ಸದಸ್ಯರೊಬ್ಬರು ತಮ್ಮ ಇಚ್ಛೆಯ ಭಾಷೆಯಲ್ಲಿ ಮಾತನಾಡಿದರೆ ಅದನ್ನು ನಾನು ತಡೆಯಲಾಗದು. ಅವರ ಭಾಷಣ ನೆರೆದಿರುವಂತಹ ಅನೇಕರಿಗೆ ಅರ್ಥವಾಗದಿರಬಹುದು. ಅದರಿಂದ ನಷ್ಟ ಸದಸ್ಯರದೇ ಹೊರತು ನೆರೆದಿರುವ ಬೇರೆಯವರಿಗಲ್ಲ' ಎಂದು ಹೇಳಿದ್ದರು.

ಆಗ ಚನ್ನಯ್ಯ ಅವರು, 'ಧನ್ಯವಾದಗಳು ಸನ್ಮಾನ್ಯ ಅಧ್ಯಕ್ಷರೇ' ಎಂದು ಕನ್ನಡದಲ್ಲಿ ಮಾತು ಮುಂದುವರಿಸಿದ್ದರು. ಆಗ ಎಂ.ಎಸ್.ಆನ್ಯೆರವರು ಆಕ್ಷೇಪ ವ್ಯಕ್ತಪಡಿಸಿದಾಗ, ಅಧ್ಯಕ್ಷರು, 'ಈ ಮೊದಲು ನಾನು ಒಬ್ಬ ಸದಸ್ಯರಿಗೆ ತೆಲುಗಿನಲ್ಲಿ ಹಾಗೂ ಮತ್ತೊಬ್ಬರಿಗೆ ತಮಿಳಿನಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದೇನೆ. ಹಾಗಾಗಿ ಸದಸ್ಯರೊಬ್ಬರು ಕನ್ನಡದಲ್ಲಿ ಮಾತನಾಡಬಯಸಿದಾಗ ನಾನು ಅದನ್ನು ತಡೆಯಲಾಗುವುದಿಲ್ಲ' ಎಂದು ಹೇಳಿದ್ದರು.

ಚನ್ನಯ್ಯ ಅವರು ಆಡಿದ ಮಾತುಗಳು ಬಾಂಬೆಯ ಬಿ.ಜಿ.ಖೇರ್ ಅವರಿಗೆ ಸ್ವಲ್ಪಮಟ್ಟಿಗೆ ಅರ್ಥವಾಗಿತ್ತು ಎನಿಸುತ್ತದೆ. ಹಾಗಾಗಿ ಅವರು ಕೇಂದ್ರ ಮತ್ತು ರಾಜ್ಯಗಳ ನಡುವಣ ಸಂಬಂಧಗಳನ್ನು ಕುರಿತು ಮಾತನಾಡುತ್ತಿದ್ದಾರೆ, ನಾವು ಚರ್ಚಿಸುತ್ತಿರುವ ವಿಷಯಕ್ಕೂ ಅದಕ್ಕೂ ಸಂಬಂಧವಿಲ್ಲ ಎಂದು ಆಕ್ಷೇಪ ಎತ್ತಿದ್ದರು. 'ಸಭೆಯಲ್ಲಿ ಹಿಂದುಸ್ತಾನಿ (ಹಿಂದಿ ಅಥವಾ ಉರ್ದು) ಅಥವಾ ಇಂಗ್ಲಿಷ್‌ನಲ್ಲಿ ವ್ಯವಹರಿಸಬಹುದು. ಈ ಭಾಷೆಗಳಲ್ಲಿ ಯಾರಾದರೂ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸಲು ಆಗದಿದ್ದಾಗ ಅವರು ತಮ್ಮ ತಾಯ್ನುಡಿಯಲ್ಲಿ ಮಾತನಾಡಲು ಅಧ್ಯಕ್ಷರು ಅವಕಾಶ ನೀಡಬಹುದು. ಗೌರವಾನ್ವಿತ ಸದಸ್ಯರು ಈ ನಿಯಮದ ಅನುಕೂಲವನ್ನು ಪಡೆದುಕೊಳ್ಳುತ್ತಿದ್ದಾರೆ. ಅವರು ಈ ಲಾಭವನ್ನು ಪಡೆದುಕೊಳ್ಳುವ ಅಗತ್ಯವಿರಲಿಲ್ಲ. ಅವರಿಗೆ ಇಂಗ್ಲಿಷ್ ಬರುತ್ತದೆ. ಹಾಗಾಗಿ ಅವರಿಗೆ ತಾಯ್ನುಡಿಯಲ್ಲಿ ಮಾತನಾಡಲು ಅವಕಾಶಕೊಡಬಾರದು' ಎಂದೂ ಅವರು ವಾದಿಸಿದ್ದರು. ಆದರೆ, ಅವರ ವಾದವನ್ನು ಅಧ್ಯಕ್ಷರು ತಳ್ಳಿ ಹಾಕಿದ್ದರು.

ಒಡಿಶಾದ ರಾಮಕೃಷ್ಣ ಬೋಸ್‌ರವರು, 'ಸದಸ್ಯರೊಬ್ಬರು ಉಳಿದ ಸದಸ್ಯರೊಬ್ಬರಿಗೆ ಅರ್ಥವಾಗದ ಭಾಷೆಯಲ್ಲಿ ಮಾತನಾಡಲು ಅವಕಾಶ ಮಾಡಿಕೊಟ್ಟ ಸಂದರ್ಭದಲ್ಲಿ ಅಧ್ಯಕ್ಷರು ಕೊನೆಪಕ್ಷ ಸದಸ್ಯರು ಮಾತನಾಡಿದ್ದು ಏನೆಂದು ತಿಳಿಯಲು ಒಬ್ಬ ಅನುವಾದಕರನ್ನು ಇರಿಸಿಕೊಳ್ಳಬೇಕು' ಎಂದು ಆಗ್ರಹಿಸಿದ್ದರು. ಯಾವ ಒತ್ತಡಕ್ಕೂ ಬಾಗದೆ ಚನ್ನಯ್ಯ ಅವರು ಕನ್ನಡದಲ್ಲಿಯೇ ತಮ್ಮ ಮಾತುಗಳನ್ನು ಮುಂದುವರಿಸಿ ಮುಗಿಸಿದ್ದರು.

ಸಂವಿಧಾನ ಕರಡು ರಚನಾ ಸಮಿತಿ ಸಭೆಯಲ್ಲಿ ಚನ್ನಯ್ಯ ಅವರು ತಮ್ಮ ಕಟಿಬದ್ಧತೆಯ ಮಾತೃಭಾಷಾ ಪ್ರೇಮದಿಂದ ಕನ್ನಡದಲ್ಲಿ ದಿಟ್ಟತೆಯಿಂದ ಮಾತನಾಡಿರುವುದು ಒಕ್ಕೂಟ ವ್ಯವಸ್ಥೆಯ ಮುಂದಿನ ಯಾನಕ್ಕೆ ದಿಕ್ಸೂಚಿಯಂತಿತ್ತು ಎಂಬುದು ಗಮನಾರ್ಹ ಸಂಗತಿ.

ಕನ್ನಡದ ರಾಜಪುರೋಹಿತ

ಧಾರವಾಡ ಭಾಗದಲ್ಲಿ ಕನ್ನಡ ಕಟ್ಟಿದವರಲ್ಲಿ ನಾ. ಶ್ರೀ. (ನಾರಾಯಣಾಚಾರ್ಯ ಶ್ರೀನಿವಾಸಾಚಾರ್ಯ) ರಾಜಪುರೋಹಿತ (1887– 1953) ಪ್ರಮುಖರು. ಹಾವೇರಿ ಸಮೀಪದ ಅಗಡಿ ಇವರ ಊರು. ಹೆಸರು ರಾಜಪುರೋಹಿತ ಎಂದಾದರೂ ಮನೆಯಲ್ಲಿ ಬಡತನ. ಅಂದಿನ ಮುಲ್ಕಿ ಪರೀಕ್ಷೆಯಲ್ಲಿ ಅವರು ಧಾರವಾಡ ಜಿಲ್ಲೆಗೆ ಪ್ರಥಮರಾಗಿ ಪಾಸಾದರು. ಅದೇ ರೀತಿ ತಮ್ಮ ಮೂರು ವರ್ಷಗಳ ಶಿಕ್ಷಕ ವೃತ್ತಿಯ ತರಬೇತಿಯನ್ನೂ ಯಶಸ್ವಿಯಾಗಿ ಮುಗಿಸಿ, 1905ರಲ್ಲಿ ಧಾರವಾಡದಲ್ಲಿ ಪ್ರಾಥಮಿಕ ಶಾಲಾ ಅಧ್ಯಾಪಕರಾದರು.

ಪತ್ರಿಕೆಯಲ್ಲಿ ಪ್ರತಿಕ್ರಿಯೆಯಾಗಿ ಬರೆದ ಪತ್ರದಿಂದ ನೌಕರಿಯನ್ನು ಕಳೆದುಕೊಳ್ಳಬೇಕಾಯಿತು. ಅದೇ ಸಂದರ್ಭದಲ್ಲಿ ಆಲೂರು ವೆಂಕಟರಾಯರು ಕಾನೂನು ಪದವಿಯನ್ನು ಪಡೆದುಕೊಂಡು ಧಾರವಾಡಕ್ಕೆ ಬಂದರು. ಅವರು 1908ರಲ್ಲಿ ಸ್ಥಾಪಿಸಿದ ರಾಷ್ಟ್ರೀಯ ಶಾಲೆಗೆ ರಾಜಪುರೋಹಿತರು ಶಿಕ್ಷಕರಾಗಿ ಸೇರಿಕೊಂಡದ್ದು ಕೂಡ ಒಂದು ಮಹತ್ವದ ಯೋಗಾಯೋಗ. ಅಗಿನಿಂದ ಕೊನೆಯವರೆಗೆ ಇಬ್ಬರ ಸಂಬಂಧ ಗಟ್ಟಿಯಾಗಿತ್ತು.


ರಾಜಪುರೋಹಿತ

ರಾಜಪುರೋಹಿತರಿಗೆ ಓದಿನ ಅಭಿರುಚಿ ದೊಡ್ಡದಾಗಿತ್ತು. ಸಂಶೋಧನಾ ಪ್ರಬಂಧಗಳನ್ನೂ ಅವರು ಬರೆಯತೊಡಗಿದರು. ಪುಣೆಯಲ್ಲಿದ್ದಾಗ ಲೋಕಮಾನ್ಯ ತಿಲಕರ ಸಂಪಾದಕತ್ವದ 'ಕೇಸರಿ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನ ರಾಜಪುರೋಹಿತರಿಗೆ ದೊಡ್ಡ ಅವಕಾಶವನ್ನೇ ಒದಗಿಸಿತು. 'ಕೇಸರಿ'ಯಲ್ಲಿ ಅವರು 1912ರಿಂದ 1914ರವರೆಗೆ ಬರೆದ ಆರು ಲೇಖನಗಳು ಅವರ ಮಹತ್ವದ ಸಂಶೋಧನಾ ಲೇಖನಗಳು.

ಮಹಾರಾಷ್ಟ್ರದ ಅಂದಿನ ವಿದ್ವಾಂಸ-ಇತಿಹಾಸಕಾರರು ಕರ್ನಾಟಕದ ಬಹುಭಾಗವನ್ನು ತಮ್ಮದೆಂದು ಸಾಧಿಸಿದ್ದಲ್ಲದೆ ಚಾಲುಕ್ಯ ಹಾಗೂ ರಾಷ್ಟ್ರಕೂಟ ವಂಶದ ರಾಜರುಗಳನ್ನು ತಮ್ಮವರೆಂದು ಘೋಷಿಸಿಕೊಂಡಿದ್ದರು. ಇದು ಹಾಗಲ್ಲವೆಂದು ಆಧಾರಸಹಿತ (ಈ ಆಧಾರಗಳಲ್ಲಿ ವಾಯುಪುರಾಣ, ಹ್ಯುಯೆನ್ ತ್ಸಾಂಗ್ ಹಾಗೂ ಕೆಲವು ಶಾಸನಗಳು) ತಮ್ಮ 6 ಲೇಖನಗಳಲ್ಲಿ ಸಿದ್ಧಪಡಿಸಿ ಆ ಮರಾಠಿ ವಿದ್ವಾಂಸರಿಂದಲೇ ಹೌದೆನ್ನಿಸಿಕೊಂಡರು. ಅಲ್ಲಿ ಆಗ ಓದುತ್ತಿದ್ದ ವಿದ್ಯಾರ್ಥಿಗಳಾಗಿದ್ದವರಿಗೆ ಹಾಗೂ ಈ ನಾಲ್ಕು ಜಿಲ್ಲೆಗಳ ಸುಶಿಕ್ಷಿತರಿಗೆ ಅಸ್ಮಿತೆ ಒದಗಿಸಿಕೊಟ್ಟರು.

ಈ ಲೇಖನಗಳ ಜೊತೆಗೆ ರಾಜಪುರೋಹಿತರು ಮುಂಬೈಯಲ್ಲಿ 1935ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಂಶೋಧನಾ ಗೋಷ್ಠಿಯ ಅಧ್ಯಕ್ಷರಾಗಿ ಮಾಡಿದ ಭಾಷಣವನ್ನು ಓದಬೇಕು. ಆಗ ನಮಗೆ ಗೊತ್ತಾಗುತ್ತದೆ -What was he out for?- ಅವರ ಗುರಿ, ನಡೆಯಬೇಕಾದ ದಾರಿ ಏನಾಗಿತ್ತು, ಯಾವ ಕಡೆಗಿತ್ತು ಎಂಬುದು ಮತ್ತು ನಿಶ್ಚಿತವಾಗಿಯೂ ರಾಜಪುರೋಹಿತರಂತಹ ಬುದ್ಧಿವಂತ, ನಿರಂತರ ಶ್ರಮಪಡುವ ಕನ್ನಡ ಪ್ರೇಮಿ ಸಂಶೋಧನಾಕಾರರು ಮತ್ತಾರೂ ಇಲ್ಲ ಎಂಬುದು.

ರಾಜಪುರೋಹಿತರ ಒತ್ತಾಸೆಯಂತೆ ಆಲೂರು ವೆಂಕಟರಾಯರು 'ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ' ಯನ್ನು ಸ್ಥಾಪಿಸಿದರು (ಅದು ಇಂದಿಗೂ ಇದೆ). ರಾಜಪುರೋಹಿತರು ಸಂಶೋಧನೆಯನ್ನೇ ಜೀವನದ ಉಸಿರಾಗಿಸಿ ಕೊಂಡು ಕರ್ನಾಟಕ ಇತಿಹಾಸ ಸಂಶೋಧನ ಮಂಡಳದಲ್ಲಿ ಅಪ್ರತಿಮ ಕೆಲಸ ಮಾಡಿದರು.

ರಾಜಕಾರಣವು ಇತಿಹಾಸದ ಮಹತ್ವದ ಭಾಗವಾದರೂ ಅದಷ್ಟೇ ಇತಿಹಾಸವಲ್ಲ; ಭಾಷೆಗೆ, ಸಾಹಿತ್ಯಕ್ಕೆ, ಸಾಂಸ್ಕೃತಿಕವಾಗಿ ಬೆಳೆಯುವ ಕ್ರಿಯೆಗೆ ಇತಿಹಾಸದಲ್ಲಿ ದಿಕ್ಕು ಬದಲಿಸಬಲ್ಲ ಶಕ್ತಿ ಇರುವುದನ್ನು ಕೂಡ ಇತಿಹಾಸ ದಾಖಲಿಸಬೇಕು ಎಂದು ನಂಬಿದ್ದರು. ನೃಪತುಂಗ, ಹರಿಹರ, ರನ್ನ, ಚಾಮರಸ, ಕುಮಾರವ್ಯಾಸರಂತಹ ಶ್ರೇಷ್ಠ ಕವಿಗಳ ಬಗೆಗೆ ಸಂಶೋಧನೆಗಳನ್ನು ಆ ರೀತಿ ಮೊದಲಿಗೆ ಮಾಡಿದ ಶ್ರೇಯಸ್ಸು ಅವರಿಗೆ ಸಲ್ಲಬೇಕು.

ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರ ಸಾಧನೆಯ ಶ್ರೇಷ್ಠತೆಯ ಹಲವಾರು ಅಂಶಗಳು ಇವರ ಸಂಶೋಧನೆಗಳ ಸಾಮಗ್ರಿಗಳಾಗಿದ್ದವು. ವಿಜಯನಗರ ಸಾಮ್ರಾಜ್ಯ- 'ಅದು ಕನ್ನಡ ಸಾಮ್ರಾಜ್ಯ', ವಿಜಯನಗರ ಆ ಸಾಮ್ರಾಜ್ಯದ ಒಂದು ರಾಜಧಾನಿಯಾಗಿತ್ತು ಎಂದು ಮೊದಲಿಗೆ ಹೇಳಿದವರು ನಾ ಶ್ರೀ ಅವರು. ಅಂತೆಯೇ ಆ ಸಾಮ್ರಾಜ್ಯದ ಪತನಕ್ಕೆ ಕಾರಣವಾದ ನಿರ್ಣಾಯಕ ಯುದ್ಧ ನಡೆದದ್ದು ತಾಳಿಕೋಟೆಯಲ್ಲಲ್ಲ, ರಕ್ಕಸತಂಗಡಗಿಯಲ್ಲಿ ಎನ್ನುವುದನ್ನು ಕ್ಷೇತ್ರ ಅಧ್ಯಯನ, ವಿಶಾಲ ಖನನ, ಆ ಖನನದಲ್ಲಿ ಸಿಕ್ಕ ಅವಶೇಷಗಳು ಹಾಗೂ ಕುರುಹುಗಳ ಮೂಲಕ ಸಿದ್ಧಮಾಡಿದವರು ಅವರು.

1928 ಡಿಸೆಂಬರ್‌ನಲ್ಲಿ ಆ ಬಗೆಗೆ ಸಿದ್ಧಪಡಿಸಿದ ಲೇಖನವನ್ನು 'ಭಾರತೀಯ ಇತಿಹಾಸ ಸಂಶೋಧನಾ ಮಂಡಳ'ದ ಸಭೆಯಲ್ಲಿ ಪ್ರಸ್ತುತ ಪಡಿಸಿದ್ದರು. ಇವರ ಅಚ್ಚುಮೆಚ್ಚಿನ ಕನ್ನಡ ರಾಜ ಎಂದರೆ ಕಲ್ಯಾಣ ಚಕ್ರವರ್ತಿ ಆರನೇ ವಿಕ್ರಮಾದಿತ್ಯ. ಅವನಿಗೆ ಸಂಬಂಧಿಸಿದ ಎರಡು ಲೇಖನಗಳು ಮಾಹಿತಿ ಕೊಡುವುದಲ್ಲದೆ ಓದುಗರ ಕನ್ನಡಾಭಿಮಾನ ಇನ್ನೂ ಗಟ್ಟಿಗೊಳ್ಳುವಂತೆ ಮಾಡುತ್ತವೆ.

ಕಥೆ

ಪೂರ್ಣಿಮಾ ಭಟ್ ಬರೆದ ಕಥೆ
ಅದೋ ಮೂಡಣ

ಕಥೆ ಓದಲು ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/short-story

ಕವನ

ದಾದಾಪೀರ್ ಜೈಮನ್ ಬರೆದ ಕವನ
ಅಕ್ಷರ ಅಕ್ಷಯ

ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

https://www.prajavani.net/poetry

ಸರಳವಾಗಿ ಕಾಣುವ ಸಂಕೀರ್ಣವಾದ ‘ಮುತ್ತು’

ಎಸ್. ದಿವಾಕರ್

ವಿಮರ್ಶೆ



ಸಕೀನಾಳ ಮುತ್ತು (ಕಾದಂಬರಿ)
ಲೇ: ವಿವೇಕ ಶಾನಭಾಗ
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
ಸಂ: 9980800993
ಪು: 144
₹150

ಮೇಲುನೋಟಕ್ಕೆ ತೀರ ಸರಳವೆನ್ನಿಸುವ 'ಸಕೀನಾಳ ಮುತ್ತು' ಇವತ್ತಿನ ಹಿಂಸಾಮೂಲಗಳನ್ನು ಸುಲಭವಾಗಿ ಗ್ರಹಿಸಲಾಗದ ಮಧ್ಯಮ ವರ್ಗದವರ ಆಶೋತ್ತರಗಳನ್ನು ಮತ್ತು ದುರಂತಗಳನ್ನು ತನ್ನೊಡಲಲ್ಲೇ ನೇಯ್ದುಕೊಂಡಿರುವ ಒಂದು ಸಂಕೀರ್ಣ ಕಾದಂಬರಿ. ದೇಶದ ರಾಜಕೀಯ ವಾಸ್ತವಕ್ಕೆ ಹೇಗೋ ಹಾಗೆ ಜನರ ದಿನದಿನದ ಅಸ್ತಿತ್ವಕ್ಕೂ ಪ್ರತಿಕ್ರಿಯಿಸುತ್ತಿರುವ ಈ ಕೃತಿ ತಾನು ಹೇಳಿದ್ದಕ್ಕಿಂತಲೂ ಹೆಚ್ಚಿನದನ್ನು ಧ್ವನಿಸುತ್ತದೆ. ವಿವೇಕ ಶಾನಭಾಗರು ಇಲ್ಲಿ ಪ್ರೀತಿ ಮತ್ತು ವಿಶ್ವಾಸಘಾತುಕತೆಯ ಬಗ್ಗೆ, ಭರವಸೆ, ಭಯಗಳಿಂದ ವಿಘಟನೆಗೊಂಡ ಕುಟುಂಬಗಳ ಬಗ್ಗೆ, ಸಹಜ ಜೀವನವನ್ನೇ ಅಸಾಧ್ಯಗೊಳಿಸುತ್ತಿರುವ ರಾಜಕೀಯ ಮತ್ತು ಹಿಂಸೆಯ ಬಗ್ಗೆ ಸೂಕ್ಷ್ಮ ವ್ಯಂಗ್ಯದಿಂದ ಹೇಗೋ ಹಾಗೆ ಸ್ಫಟಿಕದಷ್ಟು ಸ್ಪಷ್ಟತೆಯಿಂದಲೂ ಬರೆಯುತ್ತಾರೆ.

ಕಾದಂಬರಿಯಲ್ಲಿರುವುದು ಒಂದು ಘಟನೆ, ಒಂದು ಭಾವ, ಒಂದು ಪ್ರತಿಕ್ರಿಯೆ, ಒಂದು ಪರಿವರ್ತನಶೀಲ ಕ್ಷಣ. ಇವುಗಳ ಸುತ್ತ ವ್ಯಕ್ತಿತ್ವಗಳು, ಸಂಬಂಧಗಳು, ಬೆಳವಣಿಗೆಗಳು ಬೆಳಕಿಗೆ ಬರುತ್ತಿರುವ ಹಾಗೆಯೇ ಒಂದಿಡೀ ಕಥನ ಆಕಾರ ಪಡೆದುಕೊಳ್ಳುತ್ತದೆ. ವಿಭಿನ್ನ ಕ್ರಿಯಾಕ್ಷೇತ್ರಗಳಲ್ಲಿ ನಡೆಯುವ ಇಲ್ಲಿನ ಕಿರುಗತೆಗಳಂಥ ಘಟನೆಗಳು ಸಮಕಾಲೀನ ವಾಸ್ತವದ ಸಂಕೀರ್ಣವಾದೊಂದು ಅನುಭವಕ್ಷೇತ್ರವನ್ನು ಹಂಚಿಕೊಳ್ಳುವ ಮೂಲಕ ಆತ್ಮಾವಲೋಕನವನ್ನೂ ಮನುಷ್ಯಲೋಕ ಕಳೆದುಕೊಂಡಂತಿರುವ ಭರವಸೆಯ ಸೂಚನೆಯನ್ನೂ ಒಟ್ಟಿಗೆ ಹಿಡಿದುಕೊಡುತ್ತವೆ. ಇತರರ ಬಗ್ಗೆ ಹೇಳುತ್ತ ನಮ್ಮ ಬಗ್ಗೆಯೇ ನಾವು ಗ್ರಹಿಸಿರದ ಏನನ್ನೋ ತಿಳಿಸಿಕೊಡುವ ಈ ಕಾದಂಬರಿ ನಮ್ಮ ಮನಸ್ಸಿನ ಕತ್ತಲು ಕವಿದ ಮೂಲೆಗಳ ಮೇಲೆ ಚೆಲ್ಲುವ ಬೆಳಕು ತುಂಬ ಪ್ರಖರವಾದದ್ದು.

ಈ ಕೃತಿಗೆ ಬಹುಮಟ್ಟಿಗೆ ಮಿನಿಮಲಿಸ್ಟ್ ಎನ್ನಬಹುದಾದ ಕಥಾ ಸಂವಿಧಾನವಿದ್ದು ಅದು ತೀರಾ ದೈನಿಕ ಎನ್ನಿಸುವಂಥ ಸನ್ನಿವೇಶಗಳಿಗೆ ವಿಲಕ್ಷಣ ಗುಣ ತಂದುಕೊಟ್ಟಿದೆ. ಭಾವನೆಗಳ, ಅನುಭವಗಳ ಒಂದಿಡೀ ಶ್ರೇಣಿಯನ್ನು ಒಳಗೊಂಡಿರುವ ಕೃತಿಯಲ್ಲಿ ಜೀವನದ ಕ್ರಮರಹಿತ ಗತಿಯೇ ಅಭಿವ್ಯಕ್ತಿ ಪಡೆದುಕೊಂಡಂತಿದೆ. ಪ್ರೀತಿಯ ಹೆಂಡತಿ, ಒಬ್ಬ ಮಗಳೊಡನೆ ಸಾಕಷ್ಟು ನೆಮ್ಮದಿಯಿಂದಿರುವ ವೆಂಕಟರಮಣ ಎಂಬ ವ್ಯಕ್ತಿಯ ಜೀವನದಲ್ಲಿ ಹಠಾತ್ತನೆ ಒಂದೆರಡು ಸಣ್ಣ ಪುಟ್ಟ ಘಟನೆಗಳು ನಡೆದುಬಿಡುತ್ತವೆ. ಕಾದಂಬರಿಯ ವರ್ತಮಾನದಲ್ಲಿ ಅವನು ಮುಖಾಮುಖಿಯಾಗುವ ಹುಡುಗರ ಒಂದು ಗುಂಪಿದೆ; ಅವನ ಚಿಕ್ಕಪ್ಪ ಅಂತಣ್ಣ, ಸಿಡಿನುಡಿ ವಾರಪತ್ರಿಕೆಯ ಸುರೇಶ, ಅವನ ಅಪಾರ್ಟ್‌ಮೆಂಟ್‌ನ ಜನ ಇದ್ದಾರೆ. ಜೊತೆಗೆ ಉದ್ದಕ್ಕೂ ಅವನ ತಲ್ಲಣಗಳನ್ನು ಹೆಚ್ಚಿಸುವ ಮಗಳು ರೇಖಾಳ ಇಂಗ್ಲಿಷ್ ಅಧ್ಯಾಪಕ ಸುರೇಂದ್ರನ, ಅವನ ತಂದೆಯ ಸ್ವಾರ್ಥಸಾಧನೆಯ, ಬಂಡುಕೋರ ಸೋದರಮಾವ ರಮಣನ ಹಾಗೂ ಅವನ ನಿಗೂಢ ಸಾವಿನ ನೆನಪುಗಳೂ ಗಾಢವಾಗಿವೆ.

ರೇಖಾ, ವೆಂಕಟರಮಣನ ಊರು ಮಾವನ ಮನೆಗೆ ಹೋಗಿದ್ದಾಳೆ ಎನ್ನುವಲ್ಲಿಂದ ಪ್ರಾರಂಭವಾಗುವ ಕಾದಂಬರಿ ಒಂದಕ್ಕೊಂದು ತಳುಕುಹಾಕಿಕೊಳ್ಳುವ ಕೆಲವೊಂದು ವಿದ್ಯಮಾನಗಳನ್ನು ಬಹಿರಂಗಗೊಳಿಸುವ ಕ್ರಮದಲ್ಲೇ ಕಾಲೇಜು ಹುಡುಗರ ರಾಜಕೀಯ, ರಾಜಕಾರಣಿಗಳ ಗೂಂಡಾಗಿರಿ, ನಕ್ಸಲರು ಮತ್ತು ಪೊಲೀಸರ ನಡುವಣ ಘರ್ಷಣೆ, ಸಮೂಹ ಮಾಧ್ಯಮಗಳ ಚಿತಾವಣೆ, ನೈತಿಕ ಪೊಲೀಸ್‌ಗಿರಿ, ಹೀಗೆ ಇವತ್ತಿನ ಹಲವು ಸಮಸ್ಯೆಗಳ ಮೂಲವನ್ನೂ ಕೆದಕುತ್ತದೆ. ಇಲ್ಲಿ ಕೆಲವು ಸಂಗತಿಗಳು ಪುನರಾವರ್ತನೆಗೊಂಡಿವೆ ಅನ್ನಿಸಬಹುದು. ಆದರೆ ಅದು ಕೇವಲ ತೋರಿಕೆಯಷ್ಟೆ.

ಉದಾಹರಣೆಗೆ, ಪ್ರಾರಂಭದಲ್ಲೇ ರಾಜಾನ ಮಾತಿನಲ್ಲಿ ಮುಖ ತೋರಿಸುವ ಯೂ ರಿಪೋರ್ಟರ್ ಪತ್ರಿಕೆಯ 'ರಂಗಣ್ಣಾವ್ರು'. ಈತ ಗೂಂಡಾಗಳ ಬಲದಿಂದ ರಾಜಕಾರಣ ಮಾಡುತ್ತಿರುವವನು. ಆದರೆ ಸಿಡಿನುಡಿ ಪತ್ರಿಕೆಯ ಸುರೇಶನಿಗೆ ಭ್ರಷ್ಟ ಪ್ರಭುತ್ವವನ್ನು ಬದಲಾಯಿಸಬೇಕೆಂಬ ಉದ್ದೇಶವಿದ್ದಂತಿದೆ. ಹೀಗೆಯೇ ನೈತಿಕ ಪೊಲೀಸುಗಿರಿಗೆ ಸಂಬಂಧಿಸಿದಂತೆ ಪುಟ 45ರಲ್ಲೂ ಪುಟ 136ರಲ್ಲೂ ಇರುವ ಹೇಳಿಕೆಗಳಿಗೆ ವಿಭಿನ್ನ ಅರ್ಥಛಾಯೆಗಳಿರುವುದನ್ನು ಗಮನಿಸಬೇಕು. ಹಾಗೆ ನೋಡಿದರೆ, ಈ ಕಾದಂಬರಿಯ ಕ್ರಿಯೆಯಿರುವುದು ಏನು ನಡೆಯಿತು, ಏನು ನಡೆದಿರಬಹುದು ಎಂಬುದರ ನಡುವೆ. 'ಕಾಣ್ಕೆ ಕಣ್ಕಟ್ಟುಗಳ ನಡುವೆ ಗೆರೆ ಬಲು ತೆಳುವು'. ಈ ಮಾತಿಗೆ ಕಾದಂಬರಿಯ ಶೀರ್ಷಿಕೆಯೂ ಹೊರತಲ್ಲ.

ಓದುಗರನ್ನು ಗಾಢವಾಗಿ ಚಿಂತನೆಗೆ ಹಚ್ಚುವ, ಬಹುಮಟ್ಟಿಗೆ ಭಾವಗೀತಾತ್ಮಕವಾಗಿರುವ ಈ ಸಫಲ ಕೃತಿಯಲ್ಲಿ ಈ ಕಾದಂಬರಿಕಾರರ ಚಿಂತನೆಗೆ ಕಾರಣವಾಗಿರುವುದು ಸಾಮಾನ್ಯ ಘಟನೆಗಳಷ್ಟೇ ಅಲ್ಲ. ಆ ಘಟನೆಗಳು ಹೇಗೆ ನಮ್ಮ ಪ್ರಜ್ಞೆಯ ಹಾಗೂ ನಮ್ಮ ಕಲ್ಪನೆಯ ಮೇಲೆ ತಮ್ಮ ಪ್ರಭಾವ ಬೀರುತ್ತವೆ, ಅಸ್ತಿತ್ವದಲ್ಲಿರುವ ನಮ್ಮ ಜಗತ್ತು ಹೇಗೆ ಅತ್ಯಂತ ಸೂಕ್ಷ್ಮವಾಗಿ ನಮ್ಮ ಇಂದ್ರಿಯಗಳನ್ನು ಪ್ರವೇಶಿಸುತ್ತದೆ, ಮನುಷ್ಯರಾಗುವುದೆಂದರೆ ಏನು, ಇತ್ಯಾದಿ ಪ್ರಶ್ನೆಗಳು ಕೂಡ. ವೆಂಕಟರಮಣನ ದೃಷ್ಟಿಕೋನದಲ್ಲೇ ಸಾಗುವ ಇಲ್ಲಿನ ನಿರೂಪಣೆ ಅವನ ಭಯ, ಆತಂಕಗಳು ಮಧ್ಯಮ ವರ್ಗದ ಎಲ್ಲರ ಭಯ, ಆತಂಕಗಳಾಗುವಷ್ಟು ಶಕ್ತವಾಗಿದೆ ಎನ್ನಬೇಕು.

ವಿವೇಕರು ಸಮೃದ್ಧ ದೃಶ್ಯವೊಂದರ ಒಂದೊಂದೇ ಪಾರ್ಶ್ವವನ್ನು ತೋರಿಸುತ್ತ, ಆ ಒಂದೊಂದೇ ಪಾರ್ಶ್ವಗಳು ಕ್ರಮೇಣ ಬಹುಸ್ತರದ ಒಂದೇ ಸಂಪೂರ್ಣ ಚಿತ್ರವಾಗುವಂತೆ ಮಾಡಬಲ್ಲ ಕ್ಯೂಬಿಸ್ಟ್ ಕಲಾವಿದನ ಹಾಗೆ. ಅವರು ಕಲ್ಪಕತೆಯ ದೂರ ಸರಹದ್ದುಗಳಲ್ಲಿ ನಿಂತು, ಇದುವರೆಗೂ ನಮ್ಮ ಭಾಷೆಯಿಂದ ನುಣುಚಿಕೊಂಡಂತಿದ್ದ ಅನುಭವವನ್ನು ಸಾಕಾರಗೊಳಿಸುತ್ತಿರುವ ಲೇಖಕರೆನಿಸುತ್ತದೆ. ಇವತ್ತು ಬದುಕುತ್ತಿರುವ ಅನೇಕರ ಬದುಕಿನ ವಿಸ್ತೃತ ದರ್ಶನವಾಗಿರುವ ಈ ಕೃತಿ ಜನರನ್ನು ಅವರಿರುವ ಹಾಗೆಯೇ ತೋರಿಸುತ್ತಿರುವ, ಯಾವುದೇ ವಿರೂಪವಿಲ್ಲದ ಕನ್ನಡಿ. ಈ ಕನ್ನಡಿ ನಾವು ಬಹುಮಟ್ಟಿಗೆ ಅಡಗಿಸಿಡುವ ಅಥವಾ ನಿಗ್ರಹಿಸುವ ನಮ್ಮ ಬದುಕಿನ ದೈನಿಕಗಳನ್ನು ಪಡಿಮೂಡಿಸುವ ಹೊತ್ತಿಗೇ, ನಮ್ಮ ಜೀವನವೆಂದರೆ ನಮ್ಮ ಅತೃಪ್ತಿ, ಬಳಲಿಕೆ, ಇರುಸುಮುರುಸು, ಭಯಭೀತಿ, ಇವೇ ಮುಂತಾದವು ಎಂಬುದನ್ನು ಹಠಾತ್ತಾಗಿ ನಾವೇ ಅರಿತುಕೊಳ್ಳುವಂತೆಯೂ ಮಾಡುತ್ತದೆ.

ಕಾದಂಬರಿಯ ಕೊನೆಕೊನೆಗೆ ಬರುವ ವೆಂಕಟರಮಣನ ಸ್ವಗತದಂಥ ಈ ಮಾತುಗಳು ನಮ್ಮೆಲ್ಲರ ಮಾತುಗಳೂ ಆಗಲಿಕ್ಕೆ ಸಾಕು: 'ಎಲ್ಲವೂ ಸುಸೂತ್ರವಿದ್ದ ಸ್ಥಳದಲ್ಲಿ ಯಾವುದೋ ಅವ್ಯವಸ್ಥೆಗಾಗಿ, ಎಂಥದೋ ಕಳಂಕಕ್ಕಾಗಿ ಹುಡುಕಾಡುತ್ತಿದ್ದೆ. ಏನೋ ಆಗಿದೆ, ಏನಂತ ಗೊತ್ತಾಗುತ್ತಿಲ್ಲ. ರಕ್ತದ ಪಸೆ ಕೂಡ ಕಾಣದಷ್ಟು ವೇಗದಲ್ಲಿ ಹರಿತವಾದ ಚೂರಿಯೊಂದು ಹೊಕ್ಕು ಹೊರಟುಹೋಗಿದೆ; ಮುಂದಿನ ಯಾವ ಕ್ಷಣದಲ್ಲಾದರೂ ರಕ್ತ ಛಿಲ್ಲನೇ ಚಿಮ್ಮಿ ಎಲ್ಲೋ ಅಡಗಿದ ಗಾಯವು ಪ್ರಕಟವಾಗಲು ನಾನು ಕಾಯುತ್ತಿದ್ದೇನೆ ಅನಿಸಿತು.' (ಪುಟ 130)

ಕನ್ನಡದ ಕೆಲಸ

ನಾನು ~~non~~ ಕನ್ನಡಿಗ

ಹೊರರಾಜ್ಯದವರನ್ನು ದೂರುವ ಬದಲು, ಪ್ರೇರಣೆ ನೀಡಿ ಕನ್ನಡ ಕಲಿಸಿ ಎನ್ನುತ್ತಿದೆ 'ವಿಮೋವೇ' ಪ್ರತಿಷ್ಠಾನ. ಕನ್ನಡ ಪರಿಸರ ಸೃಷ್ಟಿಸುವ ಪುಟ್ಟ ಪ್ರಯತ್ನದ ಪರಿಚಯ ಇಲ್ಲಿದೆ


ವಿನಯ ಶಿಂಧೆ

ವೈಟ್‌ಫೀಲ್ಡ್- 'ನಾನು ಕನ್ನಡಿಗ, ನನ್ನ ಬೆಂಗಳೂರು' ಅಭಿಯಾನದಲ್ಲಿ ವಿಮೋವೇ ತಂಡ

ಸಚ್ಚಿದಾನಂದ ಕುರಗುಂದ

ಕನ್ನಡದ ಕಂಪು ಪಸರಿಸಿ, ಕನ್ನಡ ಕಲಿಸುವ, ಬೆಳೆಸುವ ಅಭಿಯಾನ ಇದು.

ಸಿಲಿಕಾನ್ ಸಿಟಿಯಲ್ಲಿ ಕನ್ನಡೇತರರಿಗೆ ಸ್ಥಳೀಯ ಭಾಷೆಯ ಸೊಗಡು, ಕಲೆ, ಸಂಸ್ಕೃತಿ ಪರಿಚಯಿಸಿ ಕಲಿಯುವಂತೆ ಪ್ರೇರಣೆ ನೀಡುವ ವಾತಾವರಣ ಸೃಷ್ಟಿಸುವ ಪ್ರಯತ್ನವೊಂದು ಸದ್ದಿಲ್ಲದೆ ಸಾಗಿದೆ.

ವೈವಿಧ್ಯ ಮತ್ತು ಬಹುಭಾಷಾ ಸಂಸ್ಕೃತಿ ಹೊಂದಿರುವ ಬೆಂಗಳೂರಿನ ಮಾಹಿತಿ ತಂತ್ರಜ್ಞಾನದ ಕಾರಿಡಾರ್ ವೈಟ್‌ಫೀಲ್ಡ್‌ನಲ್ಲಿ ಇಂತಹ ಕೈಂಕರ್ಯವನ್ನು 'ವಿಮೋವೇ' ಪ್ರತಿಷ್ಠಾನ ಕೈಗೊಂಡಿದೆ.

'ವೈಟ್‌ಫೀಲ್ಡ್- ನಾನು ಕನ್ನಡಿಗ', 'ನನ್ನ ಬೆಂಗಳೂರು' ಹಾಗೂ 'ಕನ್ನಡ ಕಲಿಯೋಣ' ಹೆಸರಿನಲ್ಲಿ 'ವಿಮೋವೇ' ವಿನೂತನ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ನೂರಾರು ಸಂಸ್ಥೆಗಳು, ಸಮುದಾಯಗಳು ಮತ್ತು ಮಾಹಿತಿ ತಂತ್ರಜ್ಞಾನ ಕಂಪನಿಗಳಲ್ಲಿನ ಕನ್ನಡೇತರರನ್ನು ಸಂಪರ್ಕಿಸಿ ಕನ್ನಡ ಭಾಷೆ ಕಲಿಯುವಂತೆ ಪ್ರೇರಣೆ ನೀಡಲಾಗುತ್ತಿದೆ.

2010ರಿಂದ ಹೊರ ರಾಜ್ಯದವರನ್ನು ಸೇರಿಸಿಕೊಂಡು ರಾಜ್ಯೋತ್ಸವ ಆಚರಿಸುವ ಮೂಲಕ ಪ್ರತಿಷ್ಠಾನವು ಕನ್ನಡ ಸೇವೆಯ ಕೈಂಕರ್ಯ ಆರಂಭಿಸಿತು. ಈ ಮೂಲಕ ಸದಾ ಕಾಲ 'ಕನ್ನಡದ ಪರಿಸರ' ಸೃಷ್ಟಿಸುವ ಕಾರ್ಯದಲ್ಲಿ ತೊಡಗಿದೆ. ಹೊರರಾಜ್ಯದವರಿಗೆ ಕನ್ನಡದ ಹಾಡುಗಳು, ಬಸವಣ್ಣನ ವಚನ, ಕುವೆಂಪು ಅವರ ಸಂದೇಶಗಳನ್ನು ಪರಿಚಯಿಸುವ ಮೂಲಕ ಭಾಷೆಯತ್ತ ಆಕರ್ಷಿಸುವ ವಿಷಯಗಳನ್ನು ತಿಳಿಸುವ ಯತ್ನ ನಡೆಸಿದೆ.

'NON-ಕನ್ನಡಿಗನಿಂದ ನಾನು ಕನ್ನಡಿಗ' ಅಥವಾ 'ಕನ್ನಡ ಗೊತ್ತಿಲ್ಲದಿಂದ... ಕನ್ನಡ ಬರುತ್ತೆ' ಎನ್ನುವ ವಾತಾವರಣ ಸೃಷ್ಟಿಯಾಗಬೇಕಾಗಿದೆ. ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಕನ್ನಡವು ಸರಳ ಮತ್ತು ಶ್ರೀಮಂತ ಭಾಷೆಯಾಗಿದೆ. ಆದರೆ, ಮಾಹಿತಿ ತಂತ್ರಜ್ಞಾನದ ರಾಜಧಾನಿಯಾಗಿರುವ ಬೆಂಗಳೂರಿನಲ್ಲೇ ಈ ಭಾಷೆ ಆಕರ್ಷಣೆ ಕಳೆದುಕೊಳ್ಳುತ್ತಿದೆ. ಇಂತಹ ಸನ್ನಿವೇಶದಲ್ಲಿ ಇತರ ರಾಜ್ಯದವರಿಗೂ ನಮ್ಮ ಭಾಷೆ ಪರಿಚಯಿಸುವುದು ಇಂದಿನ ತುರ್ತು ಅಗತ್ಯ' ಎಂದು 'ವಿಮೋವೇ' ಪ್ರತಿಷ್ಠಾನದ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿನಯ ಶಿಂಧೆ ಪ್ರತಿಪಾದಿಸುತ್ತಾರೆ.

'ಬೇರೆ ಭಾಷೆಯವರು ಸಹ ಈ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಕನ್ನಡ ನಾಡು, ನುಡಿ ಬಗ್ಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡ ಕನ್ನಡೇತರರು ಸ್ಫೂರ್ತಿಯಾಗಿದ್ದಾರೆ. ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಗ್ ಇದಕ್ಕೆ ಅತ್ಯುತ್ತಮ ಉದಾಹರಣೆ. ಇಂತಹ ಸಾಧಕರನ್ನು 'ವಿಮೋವೇ' ಗೌರವಿಸಿದೆ. ಈ ರೀತಿಯ ಪರಸ್ಪರ ಸಂಬಂಧ ಬೆಸೆಯುವ ಕಾರ್ಯಗಳು ನಡೆಯಬೇಕಾಗಿದೆ' ಎನ್ನುತ್ತಾರೆ ಶಿಂಧೆ.

'ಹೊರರಾಜ್ಯದವರು ಕನ್ನಡ ಕಲಿಯುವುದಿಲ್ಲ ಎಂದು ದೂರುವ ಬದಲು ಕನ್ನಡ ಕಲಿಯಲು ಪ್ರೇರಣೆ ನೀಡುವ ಕಾರ್ಯಗಳು ಹೆಚ್ಚು ನಡೆಯಬೇಕಾಗಿದೆ. ವೈಟ್‌ಫೀಲ್ಡ್‌ನಲ್ಲೇ ಸುಮಾರು ಹತ್ತು ಲಕ್ಷ ಕನ್ನಡೇತರರು ಇದ್ದಾರೆ. ಇವರಿಗೆ ಭಾಷೆ ಮತ್ತು ಸಂಸ್ಕೃತಿ ಪರಿಚಯಿಸುವ ಜತೆಗೆ, ಕಲಿಯುವಂತೆ ಪ್ರೇರಣೆ ನೀಡುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಬಾರಿ ನಮ್ಮ ಕಲೆ, ಸಂಗೀತ, ಇತಿಹಾಸ, ಆಹಾರ, ಪ್ರವಾಸ, ಸಂಸ್ಕೃತಿ, ಬೆಂಗಳೂರು ನಗರ ಮುಂತಾದ ವಿಷಯಗಳ ಬಗ್ಗೆ ಕನ್ನಡೇತರರು ಮಾತನಾಡಿರುವುದನ್ನು ದಾಖಲಿಸಿಕೊಂಡಿದ್ದೇವೆ. 2-3 ನಿಮಿಷಗಳ ಕಿರು ಅವಧಿಯ ವಿಡಿಯೊಗಳನ್ನು ನವೆಂಬರ್ 1ರಂದು ಬೆಳಿಗ್ಗೆ 11ಕ್ಕೆ ವಿಮೋವೇ ಪ್ರತಿಷ್ಠಾನದ ಎಲ್ಲ ಸಾಮಾಜಿಕ ಮಾಧ್ಯಮಗಳಲ್ಲಿ ಪ್ರಸಾರ ಮಾಡುವ ಯೋಜನೆ ರೂಪಿಸಲಾಗಿದೆ. ಈ ಕಾರ್ಯಕ್ರಮದ ಮೂಲಕ ಕನ್ನಡೇತರರಿಗೆ ನಮ್ಮ ಭಾಷೆ, ಸಂಸ್ಕೃತಿ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ' ಎಂದು ಶಿಂಧೆ ಹೇಳುತ್ತಾರೆ.

'ಬೆಂಗಳೂರು ನಮ್ಮದು, ಕರ್ನಾಟಕ ನಮ್ಮದು ಎನ್ನುವ ಕಲ್ಪನೆ ಹೊರರಾಜ್ಯದವರಲ್ಲಿ ಮೂಡಿಸುವ ಪ್ರಯತ್ನಕ್ಕೆ ಸ್ಪಂದನೆಯೂ ಅತ್ಯುತ್ತಮವಾಗಿದೆ. ನಮ್ಮದು ಎನ್ನುವ ಭಾವನೆ ಮೂಡಿದಾಗ ಸಹಜವಾಗಿಯೇ, ಯಾವುದೇ ಒತ್ತಡ ಇಲ್ಲದೆ ಇಷ್ಟಪಟ್ಟು ಭಾಷೆ ಕಲಿಯುತ್ತಾರೆ. ಇಷ್ಟಪಟ್ಟಿದ್ದು ಮಾತ್ರ ಹೃದಯಕ್ಕೆ ತಟ್ಟುತ್ತದೆ' ಎನ್ನುತ್ತಾರೆ ವಿನಯ ಶಿಂಧೆ.

ಮೂಲತಃ ಎಂಜಿನಿಯರ್ ಆಗಿರುವ ವಿನಯ ಶಿಂಧೆ ಅವರು ಹತ್ತು ವರ್ಷಗಳ ಕಾಲ ಲಂಡನ್‌ನಲ್ಲಿ ಕಾರ್ಯನಿರ್ವಹಿಸಿ ಈಗ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 'ವಿಮೋವೇ' ಪ್ರತಿಷ್ಠಾನ ಹಾಗೂ ಕಾರ್ಪೊರೇಟ್ ಕಂಪನಿಗಳ ಸಹಭಾಗಿತ್ವದಲ್ಲಿ 25 ಸರ್ಕಾರಿ ಶಾಲೆಗಳನ್ನು ದತ್ತುಪಡೆದು ಸಮಗ್ರವಾಗಿ ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ತೊಡಗಿದ್ದಾರೆ.


ಲಿರಿಕಲ್ ಟ್ರೀ ವೆಬ್‌ಸೈಟ್

ಅಂಗೈಯಲ್ಲೇ ಸಿನಿಹಾಡಿನ ಸಾಹಿತ್ಯ ಭಂಡಾರ

ವಿಜಯಕುಮಾರ್ ಎಸ್.ಕೆ.

ಡಿಜಿಟಲ್ ಯುಗದಲ್ಲಿ ಬಹುತೇಕ ಎಲ್ಲವೂ ಅಂಗೈಯಲ್ಲಿರುವ ಮೊಬೈಲ್‌ನಲ್ಲೇ ಲಭ್ಯ! ದೊಡ್ಡ ಪರದೆಯ ಮೇಲೆ ವಿಜೃಂಭಿಸುತ್ತಿದ್ದ ಸಿನಿಮಾಗಳೇ ಇದೀಗ ಒಟಿಟಿ ವೇದಿಕೆ ಮುಖಾಂತರ ಅಂಗೈಯಲ್ಲಿ ಕುಳಿತಿವೆ. ಲಕ್ಷಗಟ್ಟಲೆ ಹಾಡುಗಳು ಇಂಚುದ್ದದ ಮೆಮೊರಿ ಕಾರ್ಡ್‌ಗಳಲ್ಲಿ ಅಡಗಿವೆ.

ಅಂದೊಂದು ಕಾಲವಿತ್ತು. ಕನ್ನಡ ಚಿತ್ರಗೀತೆಗಳ ಪುಸ್ತಕವನ್ನು ಖರೀದಿಸಿ ಹಾಡುಗಳನ್ನು ಗುನುಗುತ್ತಿದ್ದ ಕಾಲ. 87 ವರ್ಷಗಳ ಇತಿಹಾಸ ಇರುವ ಕನ್ನಡ ಚಿತ್ರರಂಗದಲ್ಲಿ ಲಕ್ಷಾಂತರ ಹಾಡುಗಳು ಬಂದಿವೆ. ಅವುಗಳಲ್ಲಿ ನೆಚ್ಚಿನ ಚಿತ್ರಗೀತೆಗಳನ್ನು ಕೇಳುವ ಮತ್ತು ತಾವೇ ಹೇಳುವ ಮೂಲಕ ಆನಂದಿಸುವ ಜನರಿದ್ದಾರೆ. ಹಲವರಿಗೆ ಗೀತೆಗಳ ಸಾಹಿತ್ಯ ಮೆಲುಕು ಹಾಕುವ ಹಂಬಲವಿರುತ್ತದೆ. ಕಾಲ ಬದಲಾಗಿದ್ದು, ಹಾಡಿನ ಸಾಹಿತ್ಯವಿರುವ ಪುಸ್ತಕ ಖರೀದಿಸಿ ಅದನ್ನು ಆಸ್ವಾದಿಸುವಷ್ಟು ಸಮಯವೂ ತಾಳ್ಮೆಯೂ ಜನರಲ್ಲಿ ಇಲ್ಲ. ಡಿಜಿಟಲ್ ಯುಗದಲ್ಲಿ ಅಂತರ್ಜಾಲದಲ್ಲೇ ಬಹುತೇಕ ಎಲ್ಲ ಹಾಡುಗಳ ಸಾಹಿತ್ಯ ಲಭ್ಯವಿದೆ. ಯೂಟ್ಯೂಬ್‌ನಲ್ಲಿ ಆಯಾ ಹಾಡಿನ ಕರೋಕೆಗಳೂ ಲಭ್ಯವಿವೆ. ಆದರೆ 80-90ರ ದಶಕದ ಅಥವಾ ಅದಕ್ಕಿಂತಲೂ ಹಿಂದಿನ ಕನ್ನಡ ಸಿನಿಮಾಗಳ ಹಾಡಿನ ಸಾಹಿತ್ಯ ಸಿಗುವುದು ವಿರಳ.

ಡಿಜಿಟಲ್ ಯುಗದ ಜನರಿಗೆ ಕನ್ನಡ ಚಿತ್ರಗಳ ಗೀತ ಸಾಹಿತ್ಯವನ್ನು ಮೊಬೈಲ್ ಆ್ಯಪ್‌ನಲ್ಲಿ ಸಂಗ್ರಹಿಸಿಕೊಡುವ ಕೆಲಸವನ್ನು ಲಿರಿಕಲ್ ಟ್ರೀ ಪ್ರೈವೇಟ್ ಲಿಮಿಟೆಡ್ ಎಂಬ ನವೋದ್ಯಮ ಸಂಸ್ಥೆಯೊಂದು ಕೈಗೆತ್ತಿಕೊಂಡಿದೆ. 20 ಸಾವಿರ ಹಾಡುಗಳ ಪಟ್ಟಿ ಮತ್ತು 5,500 ಚಿತ್ರಗೀತೆಗಳ ಸಾಹಿತ್ಯವನ್ನು ಆ್ಯಪ್ ಮತ್ತು ವೆಬ್‌ಸೈಟ್‌ನಲ್ಲಿ (https://kannadafilmlyrics.com) ಅಡಕಗೊಳಿಸಿದೆ ಲಿರಿಕಲ್ ಟ್ರೀ ಸಂಸ್ಥೆ.

ವೆಬ್‌ಸೈಟ್ ಅಥವಾ ಆ್ಯಪ್‌ನಲ್ಲಿ 'ಹಾಡು' ಎಂದು ಆಯ್ಕೆ ಮಾಡಿದರೆ ಚಲನಚಿತ್ರ ಅಥವಾ ಹಾಡಿನ ಹೆಸರು, ಸಂಗೀತ ನಿರ್ದೇಶಕ, ಗೀತ ರಚನೆಕಾರ, ಗಾಯಕರ ಹೆಸರು, ಚಿತ್ರ ಬಿಡುಗಡೆಯಾದ ವರ್ಷ ಎಂಬ ಆಯ್ಕೆಗಳು ತೆರೆದುಕೊಳ್ಳುತ್ತವೆ. ಅವುಗಳಲ್ಲಿ ಯಾವುದಾದರೂ ಒಂದನ್ನು ನಮೂದಿಸಿದರೆ ಚಲನಚಿತ್ರದ ಹೆಸರಿನ ಚಿತ್ರದೊಂದಿಗೆ ಗೀತೆ ತೆರೆದುಕೊಳ್ಳುತ್ತದೆ.

ಇದರೊಂದಿಗೆ 1934ರಿಂದ ಬಿಡುಗಡೆಯಾದ 4,800ಕ್ಕೂ ಹೆಚ್ಚು ಚಲನಚಿತ್ರಗಳ ಮಾಹಿತಿಯನ್ನೂ ಆ್ಯಪ್ ಮತ್ತು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಚಿತ್ರಕೋಶದಲ್ಲಿ ಚಲನಚಿತ್ರದ ಹೆಸರು, ನಟರ ಹೆಸರು, ನಿರ್ದೇಶಕರು, ನಿರ್ಮಾಪಕರು ಮತ್ತು ಚಿತ್ರ ಬಿಡುಗಡೆಯಾದ ವರ್ಷ ಎಂಬ ಆಯ್ಕೆಗಳನ್ನು ನೀಡಲಾಗಿದೆ. ಅದರಲ್ಲಿ ತಮಗೆ ಬೇಕಾದ ಆಯ್ಕೆಗಳನ್ನು ಆಯ್ಕೆ ಮಾಡಿಕೊಂಡು ಚಿತ್ರದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳಬಹುದು.

ಉದಾಹರಣೆಗೆ ನಟರ ಹೆಸರಿನ ಜಾಗದಲ್ಲಿ ರಾಜ್‌ಕುಮಾರ್ ಎಂದು ನಮೂದಿಸಿದರೆ 'ಬೇಡರ ಕಣ್ಣಪ್ಪ' ಚಿತ್ರದಿಂದ 'ಶಬ್ದವೇದಿ' ತನಕದ 209 ಸಿನಿಮಾಗಳ ಪಟ್ಟಿ ಚಿತ್ರ ಸಹಿತ ತೆರೆದುಕೊಳ್ಳುತ್ತದೆ. ಚಿತ್ರದ ಹೆಸರು, ನಟ, ನಿರ್ದೇಶಕ, ನಿರ್ಮಾಪಕ, ಸಂಗೀತ ನಿರ್ದೇಶಕ, ಚಿತ್ರ ಬಿಡುಗಡೆಯಾದ ವರ್ಷ ಸೇರಿ 25ಕ್ಕೂ ಹೆಚ್ಚು ಅಂಶಗಳನ್ನು ಒಳಗೊಂಡ ಮಾಹಿತಿ ದೊರೆಯುತ್ತದೆ.

'ಕನ್ನಡ ಸಾಹಿತ್ಯಾಸಕ್ತರಿಗೆ ಬೇಕಾದ ಎಲ್ಲ ಪುಸ್ತಕಗಳು ಗ್ರಂಥಾಲಯಗಳಲ್ಲಿ ಒಂದೆಡೆ ಸಿಗುತ್ತವೆ. ಚಿತ್ರಗೀತೆಗಳ ಸಾಹಿತ್ಯ ಭಂಡಾರ ನಿರ್ಮಿಸುವ ಹೊಸ ಪ್ರಯತ್ನ ಮಾಡಲಾಗಿದೆ' ಎಂದು ಲಿರಿಕಲ್ ಟ್ರೀ ತಂಡ ತಿಳಿಸಿದೆ.

'ಕನ್ನಡ ಚಿತ್ರಗೀತೆಗಳನ್ನು ಹುಚ್ಚರಂತೆ ಪ್ರೀತಿಸುವ ಜನರಿದ್ದಾರೆ. ಅವರಿಗೆ ಡಿಜಿಟಲ್ ರೂಪದಲ್ಲಿ ಗೀತ ಸಾಹಿತ್ಯ ಒದಗಿಸಿಕೊಡುವ ಆಲೋಚನೆಯೊಂದಿಗೆ ಈ ವೆಬ್‌ಸೈಟ್ ಮತ್ತು ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಕನ್ನಡದ ಹಾಡಿನ ಗಂಟು ಒಂದು ಆಸ್ತಿಯಾಗಿ ಮುಂದಿನ ತಲೆಮಾರಿಗೂ ತಲುಪಲು ಅನುಕೂಲ ಆಗಲಿದೆ. ಚಲನಚಿತ್ರ ಪ್ರಿಯರು ಉಚಿತವಾಗಿ ಪಡೆದುಕೊಳ್ಳಬಹುದು' ಎಂದು ಹೇಳಿದೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಕ

ಕನ್ನಡ ವಿಶೇಷ

ಡಕ್ಕ ಚಿಕ್ಕ ಶೀರ್ಷಿಕೆ

'ಕ'ಕಾರ ಹಾಡು

ಕನ್ನಡ ನಾಡಿನ ಸೊಬಗಿದು ನೋಡು
ಕಾಜಾಣದ ಬಳಗ ತುಂಬಿಹುದು
ಕಿಲ ಕಿಲ ಮಕ್ಕಳ ನಗೆಯ ಹಾಗೆ
ಕೀರಿನ ರುಚಿಯು ಇದಕಿಹುದು
ಕುಹೂ ಕುಹೂ ಕೂಗುವ ಕೋಗಿಲೆ
ಕೂಜನ ಕನ್ನಡ ನಾಡದಿ ಹಬ್ಬಿಹುದು
ಕೆಸರಲ್ಲವಿದು – ಮೊಸರಿನಗಡಿಗೆ
ಕೇಸರಿ ಸತ್ವ ಅಡಗಿಹುದು
ಕೈಲಾಸವದು ಕನ್ನಡನಾಡು
ಕೊಡುಗೆಯ ಅಪಾರ ಇದಕಿಹುದು
ಕೋವಿದ ಬಳಗವು ನಾಡಿನ ತುಂಬ
ಕೌಶಲ್ಯದಿ ಭಾಷೆ ಬೆಳೆಸಿಹರು
ಕಂಪನು ಹರಡುತ ವಿಶ್ವಕೆ ತೋರುತ
ಕಃ ಕಃ ಎನ್ನುತ ಮೆರೆದಿಹುದು
ಕನ್ನಡ ನಾಡೇ ಸ್ವರ್ಗದ ತಾಣವು
ಆಡುತ ಹಾಡುತ ನುಡಿದಿಹೆವು

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಕಮರಿದ = ________
2. ಕರಿಮಣ್ಣು = ________
3. ಕರಿನಾಗ = ________
4. ಕತೆಕಟ್ಟು = ________

ಸುಹಾಸ್ ಸಾಧನೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ


ಟೊಕಿಯೊ ಪ್ಯಾರಾಲಿಂಪಿಕ್ಸ್ ಕೂಟದಲ್ಲಿ ಬೆಳ್ಳಿಪದಕ ಪಡೆದ ಕನ್ನಡಿಗ ಸುಹಾಸ್ ಯತಿರಾಜ್. ಯತಿರಾಜ್ ಅವರ ತಂದೆ ಸರ್ಕಾರಿ ನೌಕರರು. ಹಾಗಾಗಿ ಆಗಾಗ ವರ್ಗಾವಣೆ ಆಗುತ್ತಿದ್ದರು


ಸುಹಾಸ್ ಅವರು ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್‌ನ ಎನ್‌ಐಟಿಕೆ ಕಾಲೇಜಿನಲ್ಲಿ ಎಂಜಿನಿಯರಿಂಗ್ ಪದವಿ ಪಡೆದರು. ಇದೇ ವೇಳೆ ಐಎಎಸ್ ಪರೀಕ್ಷೆಗೂ ಸಿದ್ಧತೆ ನಡೆಸಿದರು

ಮುಂದೆ ಐಎಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಉತ್ತರ ಪ್ರದೇಶದ ಗೌತಮಬುದ್ಧ ನಗರ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ನಾಗರಿಕ ಸೇವೆಗೆ ಸೇರಿದರು

ಜಿಲ್ಲಾಧಿಕಾರಿಯಾಗಿದ್ದಾಗಲೂ ಬ್ಯಾಡ್ಮಿಂಟನ್ ಅಭ್ಯಾಸ ಮುಂದುವರಿಸಿ, ಪ್ಯಾರಾಲಿಂಪಿಕ್ಸ್‌ಗೆ ಸಿದ್ಧತೆ ನಡೆಸಿದರು. ಕಾಲಿನ ಊನತೆಯನ್ನು ಮೀರಿ ಸಾಧನೆಯ ಹಾದಿಯಲ್ಲಿ ಮುನ್ನಡೆದರು


ಅಂತಿಮ ಪಂದ್ಯದಲ್ಲಿ ಫ್ರಾನ್ಸ್‌ನ ಲೂಕಸ್ ಮಝೂರ್ ಅವರನ್ನು ಎದುರಿಸಿದರು. ಕೊನೆಯಲ್ಲಿ ಅವರ ವಿರುದ್ಧ ಸೋಲು ಕಾಣಬೇಕಾಯಿತು. ಆದರೂ ಬೆಳ್ಳಿ ಪದಕ ಗೆದ್ದ ಕೀರ್ತಿಗೆ ಪಾತ್ರರಾದರು


ಪ್ಯಾರಾಲಿಂಪಿಕ್ಸ್‌ನಲ್ಲಿ ಬ್ಯಾಡ್ಮಿಂಟನ್‌ನಲ್ಲಿ ಬೆಳ್ಳಿಯ ಪದಕ ಪಡೆದ ದೇಶದ ಮೊದಲ ಐಎಎಸ್ ಅಧಿಕಾರಿ ಎಂದು ಸುಹಾಸ್ ಅವರ ಹೆಸರು ಇತಿಹಾಸದಲ್ಲಿ ದಾಖಲಾಯಿತು

ಗಣಿತದಲ್ಲಿ ಗರ್ದಿ ಗಮ್ಮತ್ತು

ಸ್ವಾರಸ್ಯಕರ ಸಂಖ್ಯೆ

ದೊಡ್ಡಾಟ

2 4 3 8 1 9 5 7 6 0- ಇದೊಂದು ಸ್ವಾರಸ್ಯಕರ ಸಂಖ್ಯೆ. ಈ ಸಂಖ್ಯೆಯ ಸ್ವಾರಸ್ಯವೇನೆಂದರೆ ಈ ಸಂಖ್ಯೆಯು 0 ಯಿಂದ 9ರವರೆಗಿನ ಎಲ್ಲಾ ಸಂಖ್ಯೆಗಳನ್ನು ಒಮ್ಮೆ ಮಾತ್ರ ಒಳಗೊಂಡಿದ್ದು, ಇದನ್ನು 2 ರಿಂದ 18ರ ವರೆಗಿನ ಯಾವ ಸಂಖ್ಯೆಯಿಂದ ಭಾಗಿಸಿದರೂ ಪೂರ್ಣಭಾಗವಾಗುತ್ತದೆ.

ಸಣ್ಣಾಟ

ಭಾಗಿಸಿ ನೋಡಿ:-

74074
x 9
66,66,66



ಶಬ್ದಗಳೊಡನೆ ಸರಸ

ಅಕ್ಷರ ಆಟ

ಇಲ್ಲಿ ಕೊಟ್ಟಿರುವ ಎರಡು 'ಕ' ಅಕ್ಷರಗಳ ಮಧ್ಯ ಅಕ್ಷರ ಪಟ್ಟಿಯಿಂದ ಎರಡು ಅಕ್ಷರ ಆಯ್ದುಕೊಂಡು ತುಂಬಿ. 4 ಅಕ್ಷರಗಳ 8 ಪದಗಳನ್ನು ರಚಿಸಿ.

1. ಕ ___ ___ ಕ
2. ಕ ___ ___ ಕ
3. ಕ ___ ___ ಕ
4. ಕ ___ ___ ಕ
5. ಕ ___ ___ ಕ
6. ಕ ___ ___ ಕ
7. ಕ ___ ___ ಕ
8. ಕ ___ ___ ಕ

ತ್ಮ	ರ್ನಾ	ಟ	ಡ
ಲಾ	ರ	ಟ	ರ್ಕಾ
ಥಾ	ನ್ನ	ಟ	ಟ
ನ	ರ್ಕೋ	ಡ	ರಂ

ಟ್ವೆಂಟಿ – 20 ಮ್ಯಾಚ್

ಕನ್ನಡದ ಮೊದಲುಗಳಿಗೂ ಅದಕ್ಕೆ ಕಾರಣವಾದ ವ್ಯಕ್ತಿ, ಸ್ಥಳ, ಕೃತಿಗಳಿಗೂ ಹೊಂದಿಸಿ

1.	ಕನ್ನಡದ ಮೊದಲ ಶಾಸನ	A.	ಪಂಪಾಯಾತ್ರೆ
2.	ಕನ್ನಡದ ಮೊದಲ ಕೋಟೆ	B.	ಕುಣಿಗಲ್ ರಾಮಾ ಶಾಸ್ತ್ರಿಗಳ ಚರಿತ್ರೆ
3.	ಕನ್ನಡದ ಮೊದಲ ರಾಷ್ಟ್ರಕವಿ	C.	ಕುವೆಂಪು
4.	ಕನ್ನಡದ ಮೊದಲ ಪತ್ರಿಕೆ	D.	ಸೂಪಶಾಸ್ತ್ರ
5.	ಕನ್ನಡದ ಮೊದಲ ಗದ್ಯಕೃತಿ	E.	ಎಂ.ಗೋವಿಂದ ಪೈ
6.	ಕನ್ನಡದ ಮೊದಲ ಕಾವ್ಯ	F.	ಮಿತ್ರಾವಿಂದ ಗೋವಿಂದಾ
7.	ಕನ್ನಡದ ಮೊದಲ ವರ್ಣಚಿತ್ರ	G.	ವಿಕಟ ಪ್ರತಾಪ
8.	ಕನ್ನಡದ ಮೊದಲ ಸಾಮಾಜಿಕ ಕಾದಂಬರಿ	H.	ವಡ್ಡಾರಾಧನೆ
9.	ಕನ್ನಡದ ಮೊದಲ ನಾಟಕ	I.	ನರಹರಿ ತೀರ್ಥ
10.	ಕನ್ನಡದ ಮೊದಲ ವ್ಯಾಕರಣ ಗ್ರಂಥ	J.	ಶಬ್ದಮಣಿದರ್ಪಣ
11.	ಕನ್ನಡದ ಮೊದಲ ಪಾಕಶಾಸ್ತ್ರ ಕಾವ್ಯ	K.	ಹಲ್ಮಿಡಿ
12.	ಕನ್ನಡದ ಮೊದಲ ಜೀವನ ಚರಿತ್ರೆ	L.	ಟಿ.ಸುನಂದಮ್ಮ
13.	ಕನ್ನಡದ ಮೊದಲ ಪ್ರವಾಸ ಕಥನ	M.	ಇಂದಿರಾಬಾಯಿ
14.	ಕನ್ನಡದ ಮೊದಲ ಪ್ರಾಧ್ಯಾಪಕ	N.	ಆದಿಪುರಾಣ
15.	ಕನ್ನಡದ ಮೊದಲ ವಚನಕಾರ	O.	ಮಂಗಳೂರು ಸಮಾಚಾರ
16.	ಕನ್ನಡದ ಮೊದಲ ಕಾನೂನು ಪತ್ರಿಕೆ	P.	ದೇವರ ದಾಸಿಮಯ್ಯ
17.	ಕನ್ನಡದ ಮೊದಲ ಹಾಸ್ಯ ಲೇಖಕಿ	Q.	ಬಾದಾಮಿ
18.	ಕನ್ನಡದ ಮೊದಲ ಹಾಸ್ಯ ಪತ್ರಿಕೆ	R.	ಟಿ.ಎಸ್.ವೆಂಕಣ್ಣಯ್ಯ
19.	ಕನ್ನಡದ ಮೊದಲ ಪಂಪ ಪ್ರಶಸ್ತಿ ಪುರಸ್ಕೃತ	S.	ಅಮರಶಿಲ್ಪಿ ಜಕಣಾಚಾರಿ
20.	ಕನ್ನಡದ ಮೊದಲ ಕೀರ್ತನಕಾರ	T.	ನ್ಯಾಯ ಸಂಗ್ರಹ

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.

1. ಕರಿ 2. ಕಡ 3. ಕಡು 4. ಕರೆ
5. ಕಣಿ 6. ಕಸ 7. ಕರು 8. ಕಡ

1.		ನ್ನ	
2.		ಳ	
3.		ಟ್ಟ	
4.		ರ	
5.		ಣ್ಮ	
6.		ರಾ	
7.		ಸ್ತೂ	
8.		ಣ್ಣಾ	

ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅದಲು ಬದಲು ಕಂಚಿ ಬದಲು

1. ವರದಿ 2. ಹಳಬ 3. ಹರಗು
4. ಮುಗುಳು 5. ಪ್ರಥಮ 6. ವಸತಿ
7. ಕನಲು 8. ಸಮಾನ 9. ನಮನ
10. ಮರಣ 11. ಗಣಿತ 12. ಕದಡಿ

ಪದಹಿಗ್ಗು

1. ಕವಡೆ 2. ನನಗೆ 3. ವಿಶೇಷ
4. ಹೋಬಳಿ 5. ಗುಟುರು 6. ಸೋಲಿಸು
7. ಕಮ್ಮಾರ 8. ಕಿಲಾಡಿ

ಟ್ವೆಂಟಿ – 20 ಮ್ಯಾಚ್

1-C 2-R 3-T 4-L 5-B
6-D 7-E 8-H 9-N 10-S
11-P 12-Q 13-O 14-M 15-E
16-F 17-I 18-K 19-G 20-A

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಸಮನ್ಯು ಎಚ್. ಎಸ್., ಬೆಂಗಳೂರು

ಪ್ರವೀಣ ವ್ಹಿ.ಚಿಕ್ಕೋಡಿ, ಬಾಗಲಕೋಟೆ

ಸೃಜನಾ ಟಿ.ಆರ್, ಹೊಸಪೇಟೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:

majakoora@prajavani.co.in

ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿ

ಸತ್ಯನ್–ಹರ್ಮೀತ್‌ಗೆ ಪ್ರಶಸ್ತಿ

ಟ್ಯೂನಿಸ್, ಟ್ಯೂನಿಷಿಯಾ (ಪಿಟಿಐ): ಭಾರತದ ಜಿ.ಸತ್ಯನ್ ಹಾಗೂ ಹರ್ಮೀತ್ ದೇಸಾಯಿ ಅವರು ಇಲ್ಲಿ ನಡೆದ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಇಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಭಾರತದ ಜೋಡಿಯು 11-9, 4-11, 11-9, 11-6ರಿಂದ ಫ್ರಾನ್ಸ್‌ನ ಇಮ್ಯಾನ್ಯುಯೆಲ್ ಲೆಬೆಸನ್ ಮತ್ತು ಅಲೆಕ್ಸಾಂಡರ್ ಕ್ಯಾಸಿನ್ ಅವರನ್ನು ಪರಾಭವಗೊಳಿಸಿದರು.

ಅಂತರರಾಷ್ಟ್ರೀಯ ಪ್ರೊ ಟೂರ್‌ನಲ್ಲಿ ಸತ್ಯನ್– ಹರ್ಮೀತ್ ಜೋಡಿಗೆ ಒಲಿದ ಮೊದಲ ಪ್ರಶಸ್ತಿ ಇದು. ಮೊದಲ ಗೇಮ್ ಗೆದ್ದ ಇವರಿಬ್ಬರು ಎರಡನೇ ಗೇಮ್‌ಅನ್ನು ಭಾರೀ ಅಂತರದಿಂದ ಎದುರಾಳಿಗೆ ಒಪ್ಪಿಸಿದರು. ಆದರೆ ಮೂರು ಮತ್ತು ನಾಲ್ಕನೇ ಗೇಮ್‌ಗಳಲ್ಲಿ ಲಯಕ್ಕೆ ಮರಳಿ ಜಯ ತಮ್ಮದಾಗಿಸಿಕೊಂಡರು. ಸೆಮಿಫೈನಲ್ ಪಂದ್ಯದಲ್ಲೂ ಜಿದ್ದಾಜಿದ್ದಿ ಪೈಪೋಟಿ ನಡೆಸಿದ್ದ ಸತ್ಯನ್–ಹರ್ಮೀತ್ 8-11, 12-14, 11-9, 11-8, 11-9ರಿಂದ ಹಂಗರಿಯ ನ್ಯಾಂಡೊರ್ ಎಕ್ಸೆಕಿ ಮತ್ತು ಆ್ಯಡಂ ಜುಡಿ ಅವರನ್ನು ಮಣಿಸಿದ್ದರು.

ಪ್ರಶಸ್ತಿಯೊಂದಿಗೆ ಹರ್ಮೀತ್ ದೇಸಾಯಿ (ಎಡ) ಹಾಗೂ ಜಿ. ಸತ್ಯನ್– ಟ್ವಿಟರ್ ಚಿತ್ರ

ಫೆನೆಸ್ಟಾ ಓಪನ್ ಟೆನಿಸ್: ನಿಕ್ಕಿಗೆ, ಜೀಲ್‌ಗೆ ಕಿರೀಟ

ನವದೆಹಲಿ (ಪಿಟಿಐ): ಅಗ್ರಶ್ರೇಯಾಂಕದ ನಿಕ್ಕಿ ಕೆ. ಪೂಣಚ್ಚ ಹಾಗೂ ಜೀಲ್ ದೇಸಾಯಿ ಅವರು ಫೆನೆಸ್ಟಾ ಓಪನ್ ರಾಷ್ಟ್ರೀಯ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷ ಮತ್ತು ಮಹಿಳಾ ಸಿಂಗಲ್ಸ್ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದರು.

ಶನಿವಾರ ಇಲ್ಲಿ ನಡೆದ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಜೀಲ್ ಅವರು 6-3, 6-0ರಿಂದ ಶರ್ಮದಾ ಬಾಲು ಅವರನ್ನು ಮಣಿಸಿದರು. ಶರ್ಮದಾ ಅವರು ಅರ್ಹತಾ ಸುತ್ತಿನಲ್ಲಿ ಗೆದ್ದು ಬಂದಿದ್ದರು. ಜೀಲ್ ಪ್ರಶಸ್ತಿಯೊಂದಿಗೆ ₹ 3 ಲಕ್ಷ ಜೇಬಿಗಿಳಿಸಿದರು.

ಪುರುಷರ ಸಿಂಗಲ್ಸ್ ಪ್ರಶಸ್ತಿ ಸುತ್ತಿನ ಜಿದ್ದಾಜಿದ್ದಿನ ಪಂದ್ಯದಲ್ಲಿ ನಿಕ್ಕಿ 3-6, 7-6 (8/6), 6-4ರಿಂದ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರಿಗೆ ಸೋಲುಣಿಸಿದರು. ನಿಕಿ ಅವರಿಗೂ ಪ್ರಶಸ್ತಿಯೊಂದಿಗೆ ₹ 3 ಲಕ್ಷ ನಗದು ನೀಡಲಾಯಿತು.

ಹಾಕಿ: ನ. 2ರಂದು ಆಯ್ಕೆ ಟ್ರಯಲ್ಸ್

ಬೆಂಗಳೂರು: ರಾಷ್ಟ್ರೀಯ ಹಾಕಿ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ತಂಡದ ಆಯ್ಕೆಯಾಗಿ ನವೆಂಬರ್ 2ರಂದು ಆಯ್ಕೆ ಟ್ರಯಲ್ಸ್ ಇಲ್ಲಿನ ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಅರೆನಾದಲ್ಲಿ ನಡೆಯಲಿದೆ. ಹಾಕಿ ಕರ್ನಾಟಕ ಈ ಕುರಿತು ಪ್ರಕಟಣೆ ನೀಡಿದೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ ದಿನಾಂಕವನ್ನು ಪ್ರಕಟಿಸಲಾಗಿದ್ದು, ಮಹಾರಾಷ್ಟ್ರದ ಪುಣೆಯಲ್ಲಿ ಡಿಸೆಂಬರ್ 11ರಿಂದ 22ರವರೆಗೆ ನಿಗದಿಯಾಗಿದೆ.



ಸಯಾಕ ಟಕಹಾಶಿ –ಎಎಫ್‌ಪಿ ಚಿತ್ರ

ಟಕಹಾಶಿಗೆ ಮಣಿದ ಸಿಂಧು

ಪ್ಯಾರಿಸ್ (ಪಿಟಿಐ): ಒಲಿಂಪಿಕ್ಸ್‌ನಲ್ಲಿ ಎರಡು ಬಾರಿ ಪದಕ ಗೆದ್ದಿರುವ ಭಾರತದ ಪಿ.ವಿ.ಸಿಂಧು ಅವರು ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶನಿವಾರ ನಿರಾಸೆ ಅನುಭವಿಸಿದರು. ಸೆಮಿಫೈನಲ್ ಹಣಾಹಣಿಯಲ್ಲಿ ಅವರು ಜಪಾನ್‌ನ ಸಯಾಕ ಟಕಹಾಶಿ ಎದುರು 21-18, 16-21, 12-21ರಲ್ಲಿ ಸೋತರು.

ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿರುವ 29 ವರ್ಷದ ಟಕಹಾಶಿ ಎದುರು 26 ವರ್ಷದ ಸಿಂಧು ಈ ಹಿಂದೆ ಏಳು ಬಾರಿ ಸೆಣಸಿದ್ದರು. ಈ ಪೈಕಿ ಮೂರು ಬಾರಿ ಸೋತಿದ್ದರು.

ಶನಿವಾರದ ಪಂದ್ಯದಲ್ಲಿ ಸಿಂಧು ಉತ್ತಮ ಆರಂಭ ಕಂಡಿದ್ದರು. ನಂತರ ಜಪಾನ್ ಆಟಗಾರ್ತಿ ತಿರುಗೇಟು ನೀಡಿದರು. ದೀರ್ಘ ರ‍್ಯಾಲಿಗಳಿಗೆ ಮೊರೆಹೋಗದೆ ಇಬ್ಬರೂ ಪಾಯಿಂಟ್‌ಗಳನ್ನು ಕಲೆ ಹಾಕುತ್ತ ಸಾಗಿದರು. ಹೀಗಾಗಿ 5–5, 9–9ರಲ್ಲಿ ಗೇಮ್ ಸಮಬಲ ಆಗಿತ್ತು. ಈ ಹಂತದಲ್ಲಿ ಪ್ರಬಲ ಸ್ಮ್ಯಾಷ್ ಮೂಲಕ ಟಕಹಾಶಿ ಮುನ್ನಡೆ ಸಾಧಿಸಿದರು. ಆದರೆ ಕ್ರಾಸ್ ಕೋರ್ಟ್ ಸ್ಮ್ಯಾಷ್ ಮೂಲಕ ಸಿಂಧು ಚೇತರಿಸಿಕೊಂಡರು. ಸಿಂಧು ಅವರು ಬ್ಯಾಕ್‌ಹ್ಯಾಂಡ್‌ನಲ್ಲಿ ಪಾಯಿಂಟ್‌ಗಳನ್ನು ಗಳಿಸಲು ವಿಫಲರಾದರು. ಇದರ ಲಾಭ ಪಡೆದ ಟಕಹಾಶಿ ಮೊದಲ ಗೇಮ್ ಗೆದ್ದುಕೊಂಡರು.

ಎರಡನೇ ಗೇಮ್‌ನ ಆರಂಭದಲ್ಲಿ ಸಿಂಧು 5–2ರ ಮುನ್ನಡೆ ಸಾಧಿಸಿದರು. ಚೇತರಿಸಿಕೊಂಡ ಟಕಹಾಶಿ 6–6ರ ಸಮಬಲ ಸಾಧಿಸುವಲ್ಲಿ ಯಶಸ್ವಿಯಾದರು. ಆದರೆ ಅಮೋಘ ಆಟದ ಮೂಲಕ ಸಿಂಧು 9–6ರಲ್ಲಿ ಮುನ್ನಡೆದರು. ನಂತರ ಟಕಹಾಶಿ 13–12ರ ಮುನ್ನಡೆ ಸಾಧಿಸಿದರು. 13–15ರ ಹಿನ್ನಡೆಯಲ್ಲಿದ್ದಾಗ ಸಿಂಧು ಭರ್ಜರಿ ಸ್ಮ್ಯಾಷ್ ಮೂಲಕ ಪಾಯಿಂಟ್ ಗಳಿಸಿದರು. ಆದರೆ ಟಕಹಾಶಿ 18-14ರಲ್ಲಿ ಮುಂದೆ ಸಾಗಿದರು. ಆದರೂ ಗೇಮ್ ಗೆಲ್ಲುವಲ್ಲಿ ಸಿಂಧು ಯಶಸ್ವಿಯಾದರು. ನಿರ್ಣಾಯಕ ಮೂರನೇ ಗೇಮ್‌ನ ಆರಂಭದಲ್ಲಿ ಇಬ್ಬರೂ 6–6ರ ಸಮಬಲ ಸಾಧಿಸಿದರು. ನಂತರ ಟಕಹಾಶಿ 11–6ರ ಮುನ್ನಡೆ ಗಳಿಸಿದರು. ಬಲಶಾಲಿ ಸ್ಮ್ಯಾಷ್‌ಗಳ ಮೂಲಕ ಪಾಯಿಂಟ್‌ಗಳನ್ನು ಗಳಿಸಿದ ಟಕಹಾಶಿ ಅವರು ಗೇಮ್ ಮತ್ತು ಪಂದ್ಯ ಗೆದ್ದು ಪ್ರಶಸ್ತಿ ಸುತ್ತು ಪ್ರವೇಶಿಸಿದರು.

ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಪ್ರೀಕ್ವಾರ್ಟರ್‌ಗೆ ಸುಮಿತ್, ನಿಶಾಂತ್

ಬೆಲ್‌ಗ್ರೇಡ್ (ಪಿಟಿಐ): ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಬಾಕ್ಸರ್‌ಗಳು ಉತ್ತಮ ಲಯ ಮುಂದುವರಿಸಿದ್ದಾರೆ. ಸುಮಿತ್ ಹಾಗೂ ನಿಶಾಂತ್ ದೇವ್ ಪ್ರೀಕ್ವಾರ್ಟರ್‌ಫೈನಲ್‌ಗೆ ತಲುಪಿದ್ದಾರೆ.

ಶನಿವಾರ ನಡೆದ 75 ಕೆಜಿ ವಿಭಾಗದ ಬೌಟ್‌ನಲ್ಲಿ ಸುಮಿತ್ 5–0ಯಿಂದ ತಜಿಕಿಸ್ತಾನದ ಅಬ್ದುಲ್‌ಮಲಿಕ್ ಬೊಲ್ಟಯೆವ್ ಅವರಿಗೆ ಸೋಲಿನ ಪಂಚ್ ನೀಡಿದರು.

ಈ ಬೌಟ್‌ನಲ್ಲಿ ಸುಮಿತ್ ಹಾಗೂ ಬೊಲ್ಟಯೆವ್ ಮಧ್ಯೆ ಜಿದ್ದಾಜಿದ್ದಿ ಪೈಪೋಟಿ ನಡೆಯಿತು. ಒಂದು ಹಂತದಲ್ಲಿ ತಜಿಕಿಸ್ತಾನ ಬಾಕ್ಸರ್ ತಲೆಯ ಹಿಂಭಾಗಕ್ಕೆ ನಿರಂತರವಾಗಿ ಏಟು ಕೊಟ್ಟ ನಿಶಾಂತ್, ರೆಫರಿಯಿಂದ ಎಚ್ಚರಿಕೆಯನ್ನೂ ಪಡೆಯಬೇಕಾಯಿತು. ಆ ಬಳಿಕ ಬೌಟ್ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸಿದ ಭಾರತದ ಬಾಕ್ಸರ್ ಗೆಲುವು ಒಲಿಸಿಕೊಂಡರು.

ಶುಕ್ರವಾರ ತಡರಾತ್ರಿ ನಡೆದ ಇನ್ನೊಂದು ಬೌಟ್‌ನಲ್ಲಿ 71 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ನಿಶಾಂತ್ ದೇವ್ 4–1ರಿಂದ ಮಾರಿಷಸ್‌ನ ಮರ್ವೆನ್ ಕ್ಲೇರ್ ಎದುರು ಜಯಭೇರಿ ಮೊಳಗಿಸಿ 16ರ ಘಟ್ಟಕ್ಕೆ ಕಾಲಿಟ್ಟರು. ಇನ್ನೊಂದು ಬೌಟ್‌ನಲ್ಲಿ ಏಷ್ಯನ್ ಚಾಂಪಿಯನ್ ಸಂಜೀತ್ (92 ಕೆಜಿ ವಿಭಾಗ) ರಷ್ಯಾದ ಆ್ಯಂಡ್ರಿ ಸ್ಟೋಟ್‌ಸ್ಕಿ ಎದುರು ಗೆದ್ದು ಪ್ರೀಕ್ವಾರ್ಟರ್‌ಗೆ ತಲುಪಿದ್ದರು.

ಭಾರತದ ಸುಮಿತ್ (ಬಲ)– ಪಿಟಿಐ ಸಂಗ್ರಹ ಚಿತ್ರ

ಗಾಲ್ಫ್: ಅದಿತಿ ಅಶೋಕ್‌ಗೆ 13ನೇ ಸ್ಥಾನ

ದುಬೈ (ಪಿಟಿಐ): ಭಾರತದ ಗಾಲ್ಫ್ ಪಟು ಅದಿತಿ ಅಶೋಕ್ ಅವರು ದುಬೈ ಮೂನ್‌ಲೈಟ್ ಕ್ಲಾಸಿಕ್ ಟೂರ್ನಿಯಲ್ಲಿ ಅಂತಿಮ 69ನೇ ಸುತ್ತಿನಲ್ಲಿ ಜಂಟಿ 13ನೇ ಸ್ಥಾನ ಗಳಿಸಿದರು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಕರ್ನಾಟಕದ ಅದಿತಿ, ಇಲ್ಲಿ ನಡೆಯುತ್ತಿರುವ ಮಹಿಳೆಯರ ಯೂರೋಪಿಯನ್ ಟೂರ್‌ನ (ಎಲ್‌ಇಟಿ) ಟೂರ್ನಿಯಲ್ಲಿ ಭಾರತ ಆಟಗಾರ್ತಿಯರ ಪೈಕಿ ಮೊದಲ ಸ್ಥಾನ ಪಡೆದರು. ಭಾರತದ ಇನ್ನೋರ್ವ ಆಟಗಾರ್ತಿ ತ್ವೇಷಾ ಮಲಿಕ್ ಜಂಟಿ 19ನೇ ಸ್ಥಾನ ಗಳಿಸಿದರೆ, ದೀಕ್ಷಾ ದಾಗರ್ 24ನೇ ಸ್ಥಾನ ಪಡೆದರು.

ಫುಟ್‌ಬಾಲ್: ಭಾರತಕ್ಕೆ ಕಿರ್ಗಿಸ್ತಾನ ಎದುರಾಳಿ

ದುಬೈ (ಪಿಟಿಐ): ಏಷ್ಯನ್ ಫುಟ್‌ಬಾಲ್ ಕಾನ್ಫೆಡರೇಷನ್ (ಎಎಫ್‌ಸಿ) 23 ವರ್ಷದೊಳಗಿನವರ ಏಷ್ಯಾಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಕನಸಿನೊಂದಿಗೆ ಭಾರತ ತಂಡ ಭಾನುವಾರ ಮಹತ್ವದ ಪಂದ್ಯದಲ್ಲಿ ಕಣಕ್ಕೆ ಇಳಿಯಲಿದೆ. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಭಾರತ ತಂಡ ಕಿರ್ಗಿಸ್ ಗಣರಾಜ್ಯದ ಸವಾಲು ಎದುರಿಸಲಿದೆ.

‘ಇ’ ಗುಂಪಿನ ಮೊದಲ ಪಂದ್ಯದಲ್ಲಿ ಒಮನ್ ವಿರುದ್ಧ 2–1ರ ಜಯ ಸಾಧಿಸಿರುವ ಭಾರತ ನಂತರ ಯುಎಇ ವಿರುದ್ಧ ಸೋತಿತ್ತು. ಭಾರತದ ಬಳಿ ಈಗ ಮೂರು ಪಾಯಿಂಟ್‌ಗಳಿದ್ದು ಟೂರ್ನಿಗೆ ಅರ್ಹತೆ ಗಳಿಸಬೇಕಾದರೆ ಕಿರ್ಗಿಸ್ ಗಣರಾಜ್ಯದ ವಿರುದ್ಧ ಜಯ ಅನಿವಾರ್ಯ. ಕಿರ್ಗಿಸ್ ಗಣರಾಜ್ಯ ಮೊದಲ ಪಂದ್ಯದಲ್ಲಿ ಯುಎಇ ವಿರುದ್ಧ 2–1ರಲ್ಲಿ ಜಯ ಗಳಿಸಿತ್ತು. ಆದರೆ ಒಮನ್ ವಿರುದ್ಧ 0–1ರಿಂದ ಸೋತಿತ್ತು.

ಬೆಂಗಳೂರು ರೇಸ್ ಮುಂದಕ್ಕೆ

ಬೆಂಗಳೂರು: ಇದೇ ಭಾನುವಾರ ನಡೆಯಬೇಕಿದ್ದ ಬೆಂಗಳೂರು ಚಳಿಗಾಲದ ರೇಸ್‌ಅನ್ನು ನಟ ಪುನೀತ್ ರಾಜ್‌ಕುಮಾರ್ ಅವರ ನಿಧನದ ಹಿನ್ನೆಲೆಯಲ್ಲಿ ನವೆಂಬರ್ 2ಕ್ಕೆ ಮುಂದೂಡಲು ಬಿಟಿಸಿಯ ಸ್ಟೀವರ್ಡ್‌ಗಳು ನಿರ್ಧರಿಸಿದ್ದಾರೆ.

ಈ ಕುರಿತು ಪೊಲೀಸ್ ಅಧಿಕಾರಿಗಳಿಂದ ಸೂಚನೆ ಬಂದಿರುವುದಾಗಿ ಸ್ಟೀವರ್ಡ್‌ಗಳು ತಿಳಿಸಿದ್ದಾರೆ.



ಹರಿಕಾ ದ್ರೋಣವಲ್ಲಿ

ಚೆಸ್: ಅಗ್ರಸ್ಥಾನಕ್ಕೆ ಹರಿಕಾ

ರೀಗಾ, ಲಾಟ್ವಿಯಾ (ಪಿಟಿಐ): ಮಾಜಿ ವಿಶ್ವ ಚಾಂಪಿಯನ್, ಬಲ್ಗೇರಿಯಾದ ಆ್ಯಂಟೊನೆಟಾ ಸ್ಟೆಫನೋವ ಅವರನ್ನು ಮಣಿಸಿದ ಭಾರತದ ಹರಿಕಾ ದ್ರೋಣವಲ್ಲಿ ಫಿಡೆ ಗ್ರ್ಯಾಂಡ್ ಚೆಸ್ ಟೂರ್ನಿಯ ಮೂರು ಸುತ್ತುಗಳ ನಂತರ ಶನಿವಾರ ಅಗ್ರ ಸ್ಥಾನ ಹಂಚಿಕೊಂಡಿದ್ದಾರೆ.

2.5 ಪಾಯಿಂಟ್‌ಗಳನ್ನು ಗಳಿಸಿರುವ ಒಂಬತ್ತು ಆಟಗಾರ್ತಿಯರು ಅಗ್ರಸ್ಥಾನದಲ್ಲಿದ್ದು ಜಾರ್ಜಿಯಾದ ಜಗ್ನಿಜೆ ಮುನ್ನಡೆಯಲ್ಲಿದ್ದಾರೆ. ಮುಂದಿನ ಸುತ್ತಿನಲ್ಲಿ ಚೀನಾದ ಜು ಜೈನರ್ ವಿರುದ್ಧ ಹರಿಕಾ ಸೆಣಸುವರು.

ಭಾರತದ ಆಟಗಾರ್ತಿಯರು ಕಣದಲ್ಲಿದ್ದ ಇತರ ಎರಡು ಪಂದ್ಯಗಳಲ್ಲಿ ಪದ್ಮಿನಿ ರಾವುತ್ ಅವರು ಆರ್.ವೈಶಾಲಿ ವಿರುದ್ಧ ಮತ್ತು ವಂತಿಕಾ ಅಗರವಾಲ್ ಅವರು ದಿವ್ಯಾ ದೇಶ್‌ಮುಖ್ ವಿರುದ್ಧ ಜಯ ಗಳಿಸಿದರು. ಪದ್ಮಿನಿ ಮತ್ತು ವಂತಿಕಾ ಮುಂದಿನ ಪಂದ್ಯಗಳಲ್ಲಿ ಕ್ರಮವಾಗಿ ರಷ್ಯಾದ ಅಲಿನಾ ಕಸ್ಲಿಸ್ಕಯ ಮತ್ತು ಅರ್ಮೇನಿಯಾದ ಅನಾ ಸರ್ಗ್‌ಸ್ಯಾನ್ ವಿರುದ್ಧ ಸೆಣಸುವರು.

ಪುರುಷರ ವಿಭಾಗದಲ್ಲಿ ಏಳನೇ ಶ್ರೇಯಾಂಕಿತ ಪಿ.ಹರಿಕೃಷ್ಣ ಅವರು ಚಿಲಿಯ ಇವಾನ್ ಮೊರೊವಿಚ್ ಫೆರ್ನಾಂಡಿಸ್ ಅವರನ್ನು ಮಣಿಸಿದರು. ನಿಹಾಲ್ ಸರೀನ್ ಅವರು ಆಸ್ಟ್ರೇಲಿಯಾದ ತೇಮುರ್ ಕುಯ್ಬಕರೊವ್ ವಿರುದ್ಧ ಗೆದ್ದರು.